ಆರಂಭಘಟ್ಟದ ದಕ್ಷಿಣ ಭಾರತದ ಕಾದಂಬರಿಗಳು

ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದೆ

ಮಹಾ ಪ್ರಬಂಧ

ಸಂಶೋಧಕರು

ಕೆ. ಯಲ್ಲಮ್ಮ

ಮಾರ್ಗದರ್ಶಕರು

ಡಾ|| ಎ. ಸುಬ್ಬಣ್ಣ ರೈ

ಪ್ರಾಧ್ಯಾಪಕರು

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ ಹಂಪಿ

ವಿದ್ಯಾರಣ್ಯ - ೫೮೩ ೨೭೬

೨೦೦೭

ಆರಂಭಘಟ್ಟದ ದಕ್ಷಿಣ ಭಾರತದ ಕಾದಂಬರಿಗಳು

ಡಾಕ್ಟರ್ ಆಫ್ ಫಿಲಾಸಫಿ (ಪಿಎಚ್.ಡಿ) ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ
ಮಹಾ ಪ್ರಬಂಧ

ಸಂಶೋಧಕರು

ಕೆ. ಯಲ್ಲಮ್ಮ

ಮಾರ್ಗದರ್ಶಕರು

ಡಾ. ಎ. ಸುಬ್ಬಣ್ಣ ರೈ

ಪ್ರಾಧ್ಯಾಪಕರು

ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ-೫೮೩೨೭೬

೨೦೦೭

ಘೋಷಣಾ ಪತ್ರ

''ಆರಂಭಘಟ್ಟದ ದಕ್ಷಿಣ ಭಾರತದ ಕಾದಂಬರಿಗಳು'' ಎಂಬ ಶೀರ್ಷಿಕೆಯ ಈ ಮಹಾ ಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ಎ. ಸುಬ್ಬಣ್ಣರೈ ಅವರ ಮಾರ್ಗದರ್ಶನದಲ್ಲಿ ಸಿದ್ಧ ಪಡಿಸಲಾಗಿದೆ. ಪ್ರಸ್ತುತ ಮಹಾ ಪ್ರಬಂಧದ ಯಾವುದೇ ಭಾಗವನ್ನು ಪ್ರಕಟಣೆಗಳಲ್ಲಿ ಬಳಸಿಕೊಂಡಿಲ್ಲವೆಂದು ಘೋಷಿಸುತ್ತೇನೆ.

ಕೆ. ಯಲ್ಲಮ್ಮ

ಕೆ. ಯಲ್ಲಮ್ಮ
ಸಂಶೋಧನಾ ವಿದ್ಯಾರ್ಥಿ
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಸ್ಥಳ : ವಿದ್ಯಾರಣ್ಯ
ದಿನಾಂಕ : ೧೬.೦೨.೨೦೦೮

ದೃಢೀಕರಣ ಪತ್ರ

ಕು. ಕೆ.ಯಲ್ಲಮ್ಮ ಇವರು ''ಆರಂಭಘಟ್ಟದ ದಕ್ಷಿಣ ಭಾರತದ ಕಾದಂಬರಿಗಳು'' ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ, ಹಂಪಿ- ಇಲ್ಲಿಗೆ ಸಾದರ ಪಡಿಸಲು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಇದರಲ್ಲಿನ ಯಾವುದೇ ಭಾಗವನ್ನು ಈ ಮೊದಲು ಪದವಿಗಾಗಲಿ ಪ್ರಕಟಣೆಗಾಗಲಿ ಬಳಸಿಕೊಂಡಿಲ್ಲವೆಂದು ದೃಢಪಡಿಸುತ್ತಿದ್ದೇನೆ.

ಡಾ. ಎ. ಸುಬ್ಬಣ್ಣ ರೈ
ಪ್ರಾಧ್ಯಾಪಕರು
ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಸ್ಥಳ : ವಿದ್ಯಾರಣ್ಯ
ದಿನಾಂಕ: ೧೬-೦೨-೨೦೦೬

ಪರಿವಿಡಿ

ಅಧ್ಯಾಯ-೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಪೂರ್ವಪ್ರಮೇಯ

ಅಧ್ಯಾಯ-೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಪೂರ್ವಪ್ರಮೇಯ

ಹತ್ತೊಂಬತ್ತನೆಯ ಶತಮಾನದ ಕೊನೆ ಮತ್ತು ಇಪ್ಪತ್ತನೆಯ ಶತಮಾನದ ಆರಂಭದ ಕಾಲಘಟ್ಟವು ಭಾರತೀಯ ಸಾಹಿತ್ಯಕ್ಕೆ ಆಧುನಿಕತೆಯನ್ನು ತಂದುಕೊಟ್ಟ ಕಾಲಘಟ್ಟವಾಗಿದೆ. ಹಿಂದೆಂದೂ ಕಾಣಿಸಿಕೊಳ್ಳದಂತಹ ವೈವಿಧ್ಯಮಯವಾದ, ವಿನೂತನವಾದ ಸಾಹಿತ್ಯಕ ಬಗೆಗಳು ಭಾರತೀಯ ಭಾಷೆಗಳಲ್ಲಿ ಹುಟ್ಟಿ ಬೆಳೆದು ಬಂದ ಕಾಲಘಟ್ಟವಿದು. ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ನಾವು 'ಕಾದಂಬರಿ' ಯೆಂದು ಕರೆಯುವ ಬಹುಮುಖ್ಯ ಪ್ರಕಾರ ಕೂಡ ಈ ಕಾಲಘಟ್ಟದ ಕೊಡುಗೆಯಾಗಿದೆ. ವಸಾಹತುಶಾಹಿ ಅನುಭವಗಳಲ್ಲಿ ನೇತ್ಯಾತ್ಮಕ ಅಂಶಗಳಿರುವಂತೆ ಇತ್ಯಾತ್ಮಕ ಅಂಶಗಳು ಬಹಳಷ್ಟಿವೆ. ಇಂಗ್ಲೀಷ್ ಶಿಕ್ಷಣ, ಸಾರ್ವತ್ರಿಕ ಶಿಕ್ಷಣ, ಹೊಸ ಸಾಹಿತ್ಯ ಪ್ರಕಾರಗಳ ಉದಯ ಇವೆಲ್ಲಾ ವಸಾಹತು ಆಡಳಿತದಿಂದಾದ ಇತ್ಯಾತ್ಮಕ ಅಂಶಗಳು ಎನ್ನಬಹುದು. ಅಂತಹ ಆಧುನಿಕ ಸಾಹಿತ್ಯದ ಪ್ರಕಾರಗಳಲ್ಲಿ ಓದು ಬಲ್ಲ ಜನರ ಬದುಕಿಗೆ ಅತಿ ಹತ್ತಿರವಾದುದೆಂದರೆ ಕಾದಂಬರಿ. ಕಾದಂಬರಿ ಪ್ರಕಾರದ ಬೆಳವಣಿಗೆಯ ನಂತರದ ಹಂತಗಳಲ್ಲಿ ಭಾರತೀಯವೆನ್ನಬಹುದಾದ ದೇಸಿಯ ಎನ್ನಬಹುದಾದ ಅಂಶಗಳು ಕಾಣಿಸಿಕೊಂಡರೂ ಅದರ ಹುಟ್ಟಿನ ಹಿಂದೆ ಪ್ರಮುಖ ಪ್ರೇರಣೆಯಾಗಿರುವುದು ವಸಾಹತುಶಾಹಿ ಅನುಭವವೆಂಬುದರಲ್ಲಿ ಎರಡು ಮಾತಿಲ್ಲ. ಕಾದಂಬರಿಯು ಸಮುದಾಯದ ಬದುಕಿಗೆ ಅತಿ ಹತ್ತಿರವಾದ ಸಾಹಿತ್ಯ ಪ್ರಕಾರವೆಂಬುದನ್ನು ಈಗಾಗಲೇ ಗಮನಿಸಲಾಗಿದೆ.

ಮನುಷ್ಯ ಬದುಕಿನ ಎಲ್ಲಾ ಆಯಾಮಗಳನ್ನು ಅಕ್ಷರದ ಮೂಲಕ ಸಶಕ್ತವಾಗಿ ಅಭಿವ್ಯಕ್ತಪಡಿಸಬಹುದಾದ ಏಕೈಕ ಪ್ರಕಾರವೆಂದರೆ ಕಾದಂಬರಿ ಹಾಗಾಗಿ ಮನುಷ್ಯ ಜೀವನದ ಎಲ್ಲಾ ಬಗೆಯ ಅನುಭವಗಳಿಗೆ ಕಾದಂಬರಿ ಪ್ರಕಾರವು ಕಲಾತ್ಮಕವಾದ ಅಭಿವ್ಯಕ್ತಿಯನ್ನು ನೀಡುತ್ತದೆ. ಇಲ್ಲಿ ಆರಂಭ ಘಟ್ಟವೆಂದರೆ ಅದು ಆಧುನಿಕ ಸಾಹಿತ್ಯದ ಆರಂಭ ಘಟ್ಟವೂ ಹೌದು, ನವೋದಯದ ಘಟ್ಟವೂ ಹೌದು. ಕನ್ನಡದ ಮಟ್ಟಿಗೆ ಹೊಸಗನ್ನಡದ ಆರಂಭ ಘಟ್ಟವೂ ಹೌದು ವಿಶೇಷವಾಗಿ ನಮ್ಮಲ್ಲಿ ಅದರಲ್ಲೂ ದಕ್ಷಿಣ ಭಾರತೀಯ ಭಾಷೆಗಳಲ್ಲಿ ಕಾದಂಬರಿ ಪ್ರಕಾರವು ಹುಟ್ಟಿದ ಆರಂಭದ ಕಾಲ ಘಟ್ಟವನ್ನು ಇದು ಸೂಚಿಸುತ್ತದೆ. ಭಾರತೀಯ ಸಂದರ್ಭದಲ್ಲಿ ಹಲವು ವಿಶಿಷ್ಟ ಕಾರಣಗಳಿಗಾಗಿ ಇದೊಂದು ಸಂಕ್ರಮಣ ಕಾಲಘಟ್ಟ. ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ, ಸಾಹಿತ್ಯಕವಾಗಿ ಭಾರತೀಯ ಸಮಾಜವು ಮಹತ್ವದ ಬದಲಾವಣೆಯನ್ನು ಕಂಡ ಸಂದರ್ಭವಿದು ಸಾಹಿತ್ಯ ಅದರಲ್ಲೂ ಕಾದಂಬರಿ ಈ ಎಲ್ಲಾ ಘಟನಾವಳಿಗಳಿಗೂ ವಿದ್ಯಮಾನಗಳಿಗೂ ಅಭಿವ್ಯಕ್ತಿ ಮಾಧ್ಯಮವಾಯಿತೆಂಬುದು ಗಮನಾರ್ಹ ಅಂಶವಾಗಿದೆ. ಹಾಗಾಗಿ ಆ ಕಾಲ ಘಟ್ಟದ ಕಾದಂಬರಿಗಳಿಗೆ ಐತಿಹಾಸಿಕ ಮಹತ್ವವಿದೆ. ಅದೇ ರೀತಿ ಅವುಗಳ ಅಧ್ಯಯನವು ಹಲವು ದೃಷ್ಟಿಕೋನಗಳಿಂದ ಮಹತ್ವ ಪಡೆದು ಕೊಳ್ಳುತ್ತದೆ.

ಹೀಗೆ ಆರಂಭ ಘಟ್ಟದ ಸಾಹಿತ್ಯದ ಕುರಿತು ಈಗಾಗಲೇ ಅಧ್ಯಯನ ನಡೆಸಿರುವ ಹಲವಾರು ವಿದ್ವಾಂಸರು ಈ ಕಾಲಘಟ್ಟದ ಅವಧಿಯನ್ನು ತಂತಮ್ಮ ಅಧ್ಯಯನ ವಿಷಯಗಳಿಗೆ ಅನ್ವಯವಾಗುವಂತೆ ಗುರುತಿಸಿಕೊಂಡಿದ್ದಾರೆ. ಅವುಗಳಲ್ಲಿ ಅಲ್ಪ ಸ್ವಲ್ಪ ವ್ಯತ್ಯಾಸವಿದ್ದರೂ ಹೆಚ್ಚು ಕಡಿಮೆ ಅವುಗಳೆಲ್ಲ ಒಂದೇ ಕಾಲಾವಧಿಯನ್ನು ಸೂಚಿಸುತ್ತವೆ. ಉದಾಹರಣೆಗೆ : ಕನ್ನಡದ ಮೊದಲ ಕಾದಂಬರಿಗಳ ಅಧ್ಯಯನ ನಡೆಸಿದ ಶಿವರಾಮ ಪಡಿಕ್ಕಲ್ ಅವರು ೧೮೭೫ - ೧೯೨೦ ರವರೆಗಿನ ಅವಧಿಯನ್ನು ಕನ್ನಡದ ಕಾದಂಬರಿಗಳಿಗೆ ಸಂಬಂಧಪಟ್ಟಂತೆ 'ಮೊದಲಘಟ್ಟ'ವೆಂದು ಪರಿಗಣಿಸುತ್ತಾರೆ. ನಂತರದಲ್ಲಿ ಕನ್ನಡದ ಮೊದಲ ಕಾದಂಬರಿಗಳ ಸ್ತ್ರೀವಾದಿ ಅಧ್ಯಯನವನ್ನು ನಡೆಸಿದ ಯು.ಮಹೇಶ್ವರಿ ಅವರೂ ಇದೇ ಕಾಲಗಣನೆಯನ್ನು ಅನುಸರಿಸುತ್ತಾರೆ. ದಕ್ಷಿಣ ಭಾರತದ ಮಟ್ಟಿಗೂ ಕಾದಂಬರಿ ಪ್ರಕಾರದ ಉಗಮಕ್ಕೆ ಸಂಬಂಧಪಟ್ಟಂತೆ ಈ ಕಾಲಾವಧಿಯೇ 'ಮೊದಲ ಘಟ್ಟ'ವಾಗಿರುತ್ತದೆ.

ಇತರ ಕೆಲವು ದಕ್ಷಿಣ ಭಾರತೀಯ ಭಾಷೆಗಳಲ್ಲಿ ೧೮೭೫ ಕ್ಕಿಂತಲೂ ಮುಂಚಿತವಾಗಿಯೇ ಕಾದಂಬರಿಗಳು ಹುಟ್ಟಿ ಕೊಂಡಿದ್ದವು. ಎಂಬ ಉಲ್ಲೇಖಗಳಿದ್ದರೂ ಆ ಕುರಿತಾದ ಸ್ಪಷ್ಟ ಮಾಹಿತಿ ಇಲ್ಲ ಹಾಗಾಗಿ ಒಟ್ಟಾರೆ ದಕ್ಷಿಣ ಭಾರತದ ಕಾದಂಬರಿಗಳ ಮೊದಲಘಟ್ಟವನ್ನು ೧೮೭೫ ರಿಂದ ಪ್ರಾರಂಭಿಸಬೇಕಾಗುತ್ತದೆ. ಕನ್ನಡ, ತಮಿಳು, ತೆಲುಗು , ಮಲಯಾಳಂಗಳಂತಹ ಪ್ರಮುಖ ದಕ್ಷಿಣ ಭಾರತೀಯ ಭಾಷೆಗಳಲ್ಲಿ ಮೊದಲ ಘಟ್ಟದ ಶತಮಾನದ ಕೊನೆಯ ದಶಕದ ವೇಳೆಗಾಗಲೇ ಕಾದಂಬರಿಗಳು ಹುಟ್ಟಿಕೊಂಡಿದ್ದರೂ ಪಂಚದ್ರಾವಿಡ ಭಾಷೆಗಳಲ್ಲಿ ಒಂದಾದ ತುಳುವಿನ ಎರಡು ಕಾದಂಬರಿಗಳಾದ 'ಮಿತ್ಯನಾರಾಯಣಕತೆ' ಮತ್ತು 'ಸತೀಕಮಲೆ' ಇವುಗಳು ೧೯೩೫ರಲ್ಲಿ ಬೆಳಕು ಕಂಡವು. ಈ ಹಿನ್ನೆಲೆಯಲ್ಲಿ ಮೊದಲಘಟ್ಟದ 'ದಕ್ಷಿಣ ಭಾರತೀಯ ಕಾದಂಬರಿಗಳು' ಎಂಬ ವಿಷಯದಡಿಯಲ್ಲಿ ನಾವು ಕನ್ನಡ, ತಮಿಳು, ತೆಲುಗು ಮತ್ತು ಮಲಯಾಳಂ ಕಾದಂಬರಿಗಳ ಜೊತೆಗೆ ತುಳುಭಾಷೆಯ ಕಾದಂಬರಿಗಳನ್ನು ಪರಿಗಣಿಸಬೇಕಾಗಿರುವುದರಿಂದ ಈ ಕಾಲಘಟ್ಟದ ಕೊನೆಯ ಅವಧಿಯನ್ನು ೧೯೩೫ರವರೆಗೆ ವಿಸ್ತರಿಸಿಕೊಳ್ಳಲಾಗಿದೆ. ಅದರಂತೆ ಇಲ್ಲಿ ೧೮೭೫ ರಿಂದ ೧೯೩೫ ರ ವರೆಗಿನ ಅರವತ್ತು ವರ್ಷಗಳ ಅವಧಿಯನ್ನು 'ಆರಂಭಘಟ್ಟ' ಎಂದು ಪರಿಗಣಿಸಿ ಅಧ್ಯಯನ ಕೈಗೊಳ್ಳಲಾಗಿದೆ.

ಹೀಗೆ ಆಧುನಿಕ ಕಾಲಘಟ್ಟದ ಬಹುಪಾಲು ಸಾಹಿತ್ಯ ರೂಪಗಳು ಪಶ್ಚಿಮದ ಪ್ರಭಾವದಿಂದ ಹುಟ್ಟಿಬಂದವುಗಳಾದರೂ ಅವೆಲ್ಲವೂ ನಮ್ಮದೇ ಸಾಹಿತ್ಯ ಪ್ರಕಾರಗಳಾಗಿ ಬೆಳೆದು ನಿಂತುವು. ನಮ್ಮ ನಾಡಿನ ಸಂಸ್ಕೃತಿಗೆ ಅಭಿವ್ಯಕ್ತಿ ನೀಡಿದವು ನಮ್ಮ ಜನತೆಯ ನೋವು - ನಲಿವುಗಳಿಗೆ ಕನ್ನಡಿ ಹಿಡಿದುವು. ಭಾವನೆಗಳಿಗೆ ಅಕ್ಷರದ ರೂಪವಿತ್ತವು ಜಾಗತಿಕ ವಿದ್ಯಮಾನಗಳೊಂದಿಗೆ ಸ್ಥಳೀಯ ಆಗು - ಹೋಗುಗಳಿಗೂ ಕಲಾತ್ಮಕ ರೂಪಕೊಟ್ಟವು, ಅವುಗಳಲ್ಲಿ ಕಾದಂಬರಿಯಂತೂ ಇಂತಹ ಸಂಕೀರ್ಣತೆಯ ಅಭಿವ್ಯಕ್ತಿಗೆ ಹೇಳಿಮಾಡಿಸಿದಂತಹ ಒಂದು ಸಾಹಿತ್ಯ ಪ್ರಕಾರ. ಭಾರತದ ಎಲ್ಲಾ ಪ್ರಮುಖ ಪ್ರಾದೇಶಿಕ ಭಾಷೆಗಳಲ್ಲೂ ಹುಟ್ಟಿಬಂದಿರುವ ಕಾದಂಬರಿ ಪ್ರಕಾರವು ಏಕಕಾಲಕ್ಕೆ ಪ್ರಾದೇಶಿಕ ಅನನ್ಯತೆಯನ್ನೂ, ಭಾರತೀಯ ಸಂವೇದನೆಯನ್ನೂ, ಜಾಗತಿಕ ವಿನ್ಯಾಸವನ್ನೂ ಪಡೆದುಕೊಂಡಿರುವಂತಹ ಒಂದು ವಿಶಿಷ್ಟ ಸಾಹಿತ್ಯ ರೂಪವೆನ್ನಬಹುದು.

ಆದುದರಿಂದಲೇ ಈ ಎಲ್ಲಾ ಮಗ್ಗುಲುಗಳಿಂದಲೂ ಕಾದಂಬರಿಯನ್ನು ಅಧ್ಯಯನ ನಡೆಸಬಹುದಾದ ವಿಪುಲ ಅವಕಾಶಗಳಿವೆ. ಆದರೆ ಅಧ್ಯಯನಕ್ಕೊಂದು ಖಚಿತತೆ - ನಿರ್ದಿಷ್ಟತೆ ಪ್ರಾಪ್ತವಾಗಬೇಕಾದರೆ ಕೆಲವು ಪರಿಕಲ್ಪನಾತ್ಮಕವಾದ ಮಿತಿಗಳನ್ನು ಹಾಕಿಕೊಳ್ಳ ಬೇಕಾಗುತ್ತದೆ. ಇಲ್ಲಿ ದಕ್ಷಿಣ ಭಾರತೀಯ ಎಂಬ ಪ್ರದೇಶದ ಮಿತಿಯು ಮೇಲ್ನೋಟಕ್ಕೆ ಅಧ್ಯಯನದ ಅನುಕೂಲಕ್ಕಾಗಿ ಮಾಡಿಕೊಂಡ ಪರಿಕಲ್ಪನೆಯಾಗಿ ಕಂಡರೂ ಅದರ ಉದ್ದೇಶ ಅಷ್ಟಕ್ಕೆ ಸೀಮಿತವಾಗಿಲ್ಲ. ಹಲವು ಕಾರಣಗಳಿಗೋಸ್ಕರ ದಕ್ಷಿಣ ಭಾರತವು ಉತ್ತರ ಭಾರತಕ್ಕಿಂತ ಭಿನ್ನವಾಗಿ ವಿಶಿಷ್ಟವಾಗಿ ಕಂಡು ಬರುವುದುಂಟು. ಸಾಹಿತ್ಯಕವಾಗಿಯೂ ಅನನ್ಯವೆನ್ನಬಹುದಾದ ಅನುಭವ ಪ್ರಜ್ಞೆ ಸಂವೇದನೆಗಳು ದಕ್ಷಿಣ ಭಾರತೀಯ ಸಂದರ್ಭದಲ್ಲಿ ದಾಖಲಾಗಿವೆ. ವಸ್ತು, ರೂಪ, ತಂತ್ರ, ಶೈಲಿಗಳಿಗೆ ಸಂಬಂಧಪಟ್ಟಂತೆ ಆರಂಭಘಟ್ಟದ ದಕ್ಷಿಣ ಭಾರತದ ಕಾದಂಬರಿಗಳ ಹೆಸರುಗಳನ್ನು ಗಮನಿಸಿದರೆ ಒಂದು ರೀತಿಯ ಸಾಮ್ಯವಿರುವುದು ಕಂಡುಬರುತ್ತದೆ. ಪರಸ್ಪರ ತೌಲನಿಕ ಅಧ್ಯಯನದಿಂದ ಇಂತಹ ಸಾಮ್ಯ ವ್ಯತ್ಯಾಸಗಳನ್ನು ಗುರುತಿಸಲು ಸಾಧ್ಯ. ಪ್ರಸ್ತುತ ಅಧ್ಯಯನವು 'ದಕ್ಷಿಣಭಾರತ', ಕ್ಕಷ್ಟೇ ಸೀಮಿತಗೊಂಡಿದೆ. ಆದರಲ್ಲೂ ಆ ಪ್ರದೇಶದ ಮೊದಲ ಘಟ್ಟದ ಕಾದಂಬರಿಗಳಷ್ಟನ್ನೇ ಇಲ್ಲಿ ಅಧ್ಯಯನಕ್ಕೆ ಎತ್ತಿಕೊಳ್ಳಲಾಗಿದೆ. ಹಾಗಾಗಿ 'ದಕ್ಷಿಣ ಭಾರತ' ಮತ್ತು 'ಆರಂಭಘಟ್ಟ' ಎಂಬ ಭೌಗೋಳಿಕ ಮತ್ತು ಕಾಲಕ್ಕೆ ಸಂಬಂಧಪಟ್ಟ ಮಿತಿಗಳು ಅಧ್ಯಯನಕ್ಕೆ ಒಂದು ನಿರ್ದಿಷ್ಟತೆಯನ್ನು ತಂದು ಕೊಡಬಲ್ಲುದೆಂಬ ನಿರೀಕ್ಷೆಯನ್ನು ಇಟ್ಟುಕೊಳ್ಳಲಾಗಿದೆ.

ಕನ್ನಡದ ಸಂದರ್ಭದಲ್ಲಿ ಇಂತಹ ಒಂದೆರಡು ಅಧ್ಯಯನಗಳು ಈಗಾಗಲೇ ನಡೆದಿವೆ. ಈ ಅಧ್ಯಯನಗಳಲ್ಲಿ ಸಾಂದರ್ಭಿಕವಾಗಿಯಷ್ಟೇ ಇತರ ದಕ್ಷಿಣ ಭಾರತೀಯ ಕಾದಂಬರಿಗಳ ಪ್ರಸ್ತಾಪವಾಗಿದೆ. ಕನ್ನಡದ ಈ ಅಧ್ಯಯನಗಳನ್ನು ಗಮನಿಸಿದಾಗ ತತ್‌ಕಾಲೀನ ದಕ್ಷಿಣ ಭಾರತದ ಕಾದಂಬರಿಗಳನ್ನು ತೌಲನಿಕವಾಗಿ ಅಧ್ಯಯನಕ್ಕೊಳಪಡಿಸಬೇಕಾದ ಅನಿವಾರ್ಯತೆ ಎದ್ದು ಕಾಣುತ್ತದೆ. ಆ ಕಾರಣಕ್ಕಾಗಿಯೇ ಪ್ರಸ್ತುತ ಅಧ್ಯಯನ ವಿಷಯವನ್ನು ಇಲ್ಲಿ ಎತ್ತಿಕೊಳ್ಳಲಾಗಿದೆ. ಕನ್ನಡದ ಜೊತೆಗೆ ಇಲ್ಲಿ ತಮಿಳು, ಮಲೆಯಾಳಂ, ತೆಲುಗು ಹಾಗೂ ತುಳು ಕಾದಂಬರಿಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗುವುದು.

ಆರಂಭ ಘಟ್ಟದ ಬಹುತೇಕ ದಕ್ಷಿಣ ಭಾರತದ ಕಾದಂಬರಿಗಳು ಕನ್ನಡಕ್ಕೆ ಅನುವಾದಗೊಂಡಿದ್ದು ಅಂತಹ ಅನುವಾದಿತ ಕಾದಂಬರಿಗಳೇ ಅಧ್ಯಯನದ ಪ್ರಧಾನ ಆಕರಗಳಾಗಿವೆ. ಒಟ್ಟಿನಲ್ಲಿ ಪ್ರಸ್ತುತ ತೌಲನಿಕ ಅಧ್ಯಯನದಿಂದ ನಿರ್ದಿಷ್ಟ ಕಾಲಘಟ್ಟದ ಸಾಹಿತ್ಯಕ ಪ್ರಭಾವಗಳ ಜೊತೆಗೆ ರಾಜಕೀಯ, ಆರ್ಥಿಕ, ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಪ್ರಭಾವಗಳನ್ನು ಗುರುತಿಸಲು ಸಾಧ್ಯವೆಂಬ ಪೂರ್ವ ಪ್ರಮೇಯವನ್ನು ಇರಿಸಿಕೊಳ್ಳಲಾಗಿದೆ.

ಅಧ್ಯಯನದ ಅನುಕೂಲಕ್ಕಾಗಿ ಮಾಡಿಕೊಂಡ ಈ ಮಿತಿಗಳು ಅದಕ್ಕೊಂದು ಪರಿಕಲ್ಪನಾತ್ಮಕ ಚೌಕಟ್ಟನ್ನು ಒದಗಿಸುವಲ್ಲಿ ನೆರವಾಗಬಲ್ಲದು. ಈಗಾಗಲೇ ಗಮನಿಸಿದಂತೆ ಕಾದಂಬರಿ ಪ್ರಕಾರಕ್ಕೆ ಹಲವು ಆಯಾಮಗಳಿವೆ. ಅದರಂತೆ ದಕ್ಷಿಣ ಭಾರತೀಯ ಕಾದಂಬರಿಗಳನ್ನು ಆಯಾ ಪ್ರದೇಶಗಳಿಗೆ ನಿಷ್ಟವಾಗಿಯೂ ಗಮನಿಸಬಹುದು. ದಕ್ಷಿಣ ಭಾರತಕ್ಕೆ ಅನ್ವಯಿಸಿ ತೌಲನಿಕವಾಗಿಯೂ ವಿಶ್ಲೇಷಿಸಬಹುದು. ಅದೇ ರೀತಿ 'ಭಾರತೀಯ' ಸಂದರ್ಭದಲ್ಲೂ ಅಧ್ಯಯನಕ್ಕೊಳಪಡಿಸಬಹುದು. ಬಹುಮಟ್ಟಿಗೆ ಇದೇ ಬಗೆಯ ಉದ್ದೇಶದಿಂದ ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಅದರಲ್ಲೂ ''ದಕ್ಷಿಣ ಭಾರತೀಯತೆ'' ಮತ್ತು ಪ್ರಾದೇಶಿಕತೆಗಳಿಗೆ ಇನ್ನೂ ಹೆಚ್ಚಿನ ಒತ್ತು ನೀಡಲಾಗಿದೆ.

ಪ್ರಾರಂಭದಲ್ಲಿ 'ಆರಂಭಕಾಲಘಟ್ಟ'ವನ್ನು ನಿರ್ವಚಿಸಿಕೊಂಡು, 'ಪ್ರಾರಂಭ ಘಟ್ಟ' ಕಾಲಾವಧಿ ಪರಿಕಲ್ಪನೆಯ ಔಚಿತ್ಯವನ್ನು ಕುರಿತು ಚರ್ಚಿಸಲಾಗುವುದು, ಹಾಗೂ ಆ ಕಾಲಘಟ್ಟದ ರಾಜಕೀಯ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ಸಾಂಸ್ಕೃತಿಕ, ಸ್ಥಿತಿಗತಿಗಳ ಬಗ್ಗೆ ಅವಲೋಕಿಸಲಾಗುವುದು. ಅದೇ ರೀತಿ ಪ್ರಾದೇಶಿಕವಾಗಿ 'ದಕ್ಷಿಣ ಭಾರತೀಯ' ಎಂಬ ಪರಿಕಲ್ಪನೆಯ ಔಚಿತ್ಯವನ್ನು ಕುರಿತು ಚರ್ಚಿಸಲಾಗುವುದು. ನಂತರದಲ್ಲಿ ಕಾದಂಬರಿ ಪ್ರಕಾರದ ಸ್ವರೂಪ ಮತ್ತು ಅದು ಬೆಳೆದು ಬಂದ ಬಗೆಯನ್ನು ವಿವರಿಸಿಕೊಂಡು, ಕಾಲಘಟ್ಟದ ವಿಶಿಷ್ಟ ಸಂವೇದನೆಗಳು

'ದಕ್ಷಿಣ ಭಾರತಕ್ಕೆ'ಲ್ಲಾ ಸಮಾನವೆಂಬಂತೆ ಅಲ್ಲಿನ ಕಾದಂಬರಿಗಳಲ್ಲಿ ಹೇಗೆ ಅಭಿವ್ಯಕ್ತವಾಗಿವೆ ಎನ್ನುವುದನ್ನು ಕನ್ನಡದ ಜೊತೆಗೆ ತಮಿಳು, ತೆಲುಗು, ಮಲಯಾಳಂ ಹಾಗೂ ತುಳು ಭಾಷೆಯಿಂದ ಕನ್ನಡಕ್ಕೆ ಅನುವಾದಗೊಂಡ ಪ್ರಾತಿನಿಧಿಕ ಕಾದಂಬರಿಗಳ ಮೂಲಕ ತೌಲನಿಕವಾಗಿ ವಿಶ್ಲೇಷಿಸಲಾಗಿದೆ. ಇದರಲ್ಲಿ ವಸಾಹತುಶಾಹಿ ಅನುಭವ, ಪಾಶ್ಚಾತ್ಯಪ್ರಭಾವ, ರಾಷ್ಟ್ರೀಯಪ್ರಜ್ಞೆ, ಸಂಪ್ರದಾಯ ಮತ್ತು ಆದರ್ಶಗಳ ಪ್ರತಿಪಾದನೆ ಸುಧಾರಣಾವಾದಿ ನಿಲುವು, ಸ್ತ್ರೀ ಶಿಕ್ಷಣ, ವಿಧವಾ ವಿವಾಹ, ಅವಿಭಕ್ತ ಮತ್ತು ವಿಭಕ್ತ ಕುಟುಂಬ ಪದ್ಧತಿ ಅಂಶಗಳು ಅಭಿವ್ಯಕ್ತಗೊಂಡ ಬಗೆಯನ್ನು ಗುರುತಿಸಲಾಗುವುದು.

ನಂತರದಲ್ಲಿ ಆಯಾ ಪ್ರದೇಶ - ಭಾಷೆಗಳ ಕಾದಂಬರಿಗಳನ್ನು ಬಿಡಿ - ಬಿಡಿಯಾಗಿ ಅವಲೋಕಿಸಿ ಅವುಗಳಲ್ಲಿನ ಪ್ರಾದೇಶಿಕ ಅನನ್ಯತೆಗಳನ್ನು ಗುರುತಿಸಲು ಪ್ರಯತ್ನಿಸಲಾಗುವುದು. ಕನ್ನಡ ಕಾದಂಬರಿಗಳಿಗೆ ಸಂಬಂಧಪಟ್ಟಂತೆ ಈಗಾಗಲೇ ಹಲವು ಅಧ್ಯಯನಗಳು ನಡೆದಿರುವುದರಿಂದ ಅವುಗಳನ್ನು ಹಿನ್ನೆಲೆಯಾಗಿರಿಸಿಕೊಂಡು ತಮಿಳು, ತುಳು, ತೆಲುಗು ಮತ್ತು ಮಲಯಾಳಂ ಭಾಷೆಗಳ ಕಾದಂಬರಿಗಳನ್ನು ಪ್ರಮುಖ ಆಕರಗಳಾಗಿ ಬಳಸಿಕೊಳ್ಳಲಾಗುವುದು. ಸಂಬಂಧಪಟ್ಟ ಕಾದಂಬರಿಗಳನ್ನು ಆಯಾ ಮೂಲ ಭಾಷೆಗಳಲ್ಲಿಯೇ ಓದಿ ಅರ್ಥೈಸಿಕೊಳ್ಳುವ ಸಾಮರ್ಥ್ಯವಿಲ್ಲದಿರುವುದರಿಂದಲೂ ಆರಂಭಘಟ್ಟದ ಬಹುಪಾಲು ದಕ್ಷಿಣ ಭಾರತೀಯ ಕಾದಂಬರಿಗಳು ಕನ್ನಡಕ್ಕೆ ಅನುವಾದಗೊಂಡಿರುವ ಕಾರಣದಿಂದಲೂ ಪ್ರಸ್ತುತ ಅಧ್ಯಯನವು ಅಂತಹ ಅನುವಾದಗಳಿಗೆ ಹೆಚ್ಚು ನಿಷ್ಠವಾಗಿದೆ.

ಕನ್ನಡ ಅನುವಾದಗಳ ಕೊರತೆಯಿದ್ದಾಗ ಕೆಲವೆಡೆ ಇಂಗ್ಲೀಷ್ ಅನುವಾದವನ್ನು ಬಳಸಿಕೊಳ್ಳಲಾಗಿದೆ. ಕೆಲವೊಂದು ಸಂದರ್ಭಗಳಲ್ಲಿ ಮೂಲಭಾಷೆಯನ್ನು ಬಲ್ಲವರಿಂದ ನಿರ್ದಿಷ್ಟ ಕೃತಿಗಳ ಕುರಿತಾದ ವಿವರಗಳನ್ನು ಕೇಳಿ ಪಡೆದುಕೊಳ್ಳಲಾಗಿದೆ. ಇಲ್ಲಿ 'ಆರಂಭಘಟ್ಟ' ವೆಂಬುದು ಆಯಾ ಪ್ರಾದೇಶಿಕ ಭಾಷೆಗಳಲ್ಲಿ ಕೃತಿಗಳು ರಚನೆಗೊಂಡ ಕಾಲಘಟ್ಟಕ್ಕಷ್ಟೇ ಸಂಬಂಧಪಟ್ಟದ್ದಾಗಿದೆ. ಅನುವಾದಕ್ಕೆ ಈ ಕಾಲಮಿತಿಯು ಅನ್ವಯವಾಗುವುದಿಲ್ಲ.

ಒಟ್ಟಿನಲ್ಲಿ 'ದಕ್ಷಿಣಭಾರತ'ದ ಕೆಲವು ಪ್ರಾತಿನಿಧಿಕ ಕಾದಂಬರಿಗಳನ್ನು ನಿರ್ದಿಷ್ಟ ಕಾಲಘಟ್ಟದ ವಿಶಿಷ್ಟ ಸಂವೇದನೆಗಳ ಹಿನ್ನೆಲೆಯಿಂದಲೂ ಆಯಾ ಪ್ರದೇಶಗಳ ಸಾಂಸ್ಕೃತಿಕ ಅನನ್ಯತೆಗಳ ದೃಷ್ಟಿಯಿಂದಲೂ ಇಲ್ಲಿ ಅಧ್ಯಯನಕ್ಕೊಳಪಡಿಸಲಾಗುವುದು. ಉದ್ದೇಶಿತ ಪ್ರಮೇಯಗಳು ಈ ನಿಬಂಧದ ಮೂಲಕ ಬಹುಟ್ಟಿಗೆ ಸಾಧಿತವಾಗಬಹುದೆಂಬ ಆಶಾಭಾವನೆಯನ್ನು ಹೊಂದಲಾಗಿದೆ.

ಕಾದಂಬರಿ ಪ್ರಕಾರಕ್ಕೆ ಈಗ ೧೫೦ ವರ್ಷಗಳು ತುಂಬಿವೆ. ಈ ಅವಧಿಯಲ್ಲಿ ಕಾದಂಬರಿಯ ಪ್ರಕಾರನೂ ಆಯಾ ಭಾಷೆಗಳಲ್ಲಿ ಸಮೃದ್ಧವಾಗಿ ಬೆಳೆದಿದೆ. ಬೇರೆ ಬೇರೆ ಕಾಲಘಟ್ಟಗಳ ಆಲೋಚನೆಗಳು, ವೈಚಾರಿಕ ನಿಲುವುಗಳು ಮತ್ತು ಓದುಗರ ಅಭಿರುಚಿಗೆ ಸ್ಪಂದಿಸುತ್ತ ಕಾದಂಬರಿ ಪ್ರಕಾರ ಬೆಳೆದಿದೆ. ಸಾಮಾಜಿಕ, ಐತಿಹಾಸಿಕ, ಜನಾಂಗಿಕ, ಪ್ರಾದೇಶಿಕ, ಕೌಟುಂಬಿಕ, ಹೀಗೆ ವಿಭಿನ್ನ ಬಗೆಯ ವರ್ಗೀಕರಣಕ್ಕೆ ಕಾದಂಬರಿ ಪ್ರಕಾರ ಒಳಗಾಗಿದೆ. ಇಂತಹ ಕಾದಂಬರಿಗಳನ್ನು ವಿವಿಧ ಬಗೆಯ ಮಾನದಂಡ ಮತ್ತು ವಿವಿಧ ನೆಲೆಗಳನ್ನು ಆಧರಿಸಿ ನಡೆದಿರುವ ಅಧ್ಯಯನ ಪರಂಪರೆಯನ್ನು ಕಾಣಬಹುದು. ಈ ಅಧ್ಯಯನ ಪರಂಪರೆಯ ಕೆಲವು ಮುಖ್ಯ ನೆಲೆಗಳನ್ನು ಪರಿಶೀಲಿಸಬಹುದು.

ಕನ್ನಡದಲ್ಲಿ ಆರಂಭ ಘಟ್ಟದ ವಿವಿಧ ಸಾಹಿತ್ಯ ಪ್ರಕಾರಗಳಿಗೆ ಸಂಬಂಧಪಟ್ಟ ಅಧ್ಯಯನಗಳು ನಡೆದಿವೆ. ಅವುಗಳಲ್ಲಿ ಕಾವ್ಯ ಮತ್ತು ಕಾದಂಬರಿಗಳ ಪ್ರಕಾರಗಳಿಗೆ ಮಹತ್ವದ ಸ್ಥಾನವಿದೆ. ಕಾವ್ಯಕ್ಕೆ ಸಂಬಂಧಪಟ್ಟಂತೆ ಪ್ರಭುಶಂಕರ್ ಅವರ **ಕನ್ನಡದಲ್ಲಿ ಭಾವಗೀತೆ** ಎಸ್.ಅನಂತನಾರಾಯಣ ಅವರ **ಹೊಸಗನ್ನಡ ಕವಿತೆಯ ಮೇಲೆ ಇಂಗ್ಲೀಷ್ ಕಾವ್ಯದ ಪ್ರಭಾವ**, ಹೆಚ್.ಎಸ್. ವೆಂಕಟೇಶ್ ಮೂರ್ತಿಯವರ **'ಕನ್ನಡ ಕಥನ ಕವನಗಳು'** ಅಧ್ಯಯನಗಳು ಇಲ್ಲಿ ಉಲ್ಲೇಖನಿಯ. ಆಧುನಿಕ ಕಾಲಘಟ್ಟದ ಒಟ್ಟಾರೆ ಸಾಹಿತ್ಯಿಕ ಬೆಳವಣಿಗೆಯ ಬಗೆಗೂ ಮುಂತಾದ ಅಧ್ಯಯನಗಳು ನಡೆದಿವೆ. ಅವುಗಳಲ್ಲಿ ಶ್ರೀನಿವಾಸ ಹಾವನೂರ ಅವರ **ಹೊಸಗನ್ನಡದ ಅರುಣೋದಯ**, ರಾ.ಯ.ಧಾರವಾಡಕರ್ ಅವರ **ಹೊಸಗನ್ನಡದ ಉದಯ ಕಾಲ** ಹರಿಕೃಷ್ಣಭರಣ್ಯ ಅವರ **ಹೊಸಗನ್ನಡ ಸಾಹಿತ್ಯದ ಉಗಮ ಮತ್ತು ವಿಕಾಸ** ಮುಂತಾದವುಗಳು ಪ್ರಮುಖವಾಗಿವೆ.

ಆರಂಭಘಟ್ಟದ ಸಣ್ಣ ಕಥೆಗಳ ಬಗೆಗೂ ಅಧ್ಯಯನಗಳಾಗಿವೆ . ಗಿರಿಜಾ ಶಾಸ್ತ್ರಿಯವರ ಆಧುನಿಕ ಸಣ್ಣ ಕತೆಗಳ ಸ್ತ್ರೀವಾದಿ ಅಧ್ಯಯನ (ಕಥಾಮಾನಸಿ) ಎಂಬ ಕೃತಿಯನ್ನು ಇಲ್ಲಿ ಉದಾಹರಿಸಬಹುದಾಗಿದೆ. ಮೇಲೆ ಹೆಸರಿಸಿದ ಹೊಸಗನ್ನಡದ ಅರುಣೋದಯ ಹೊಸಗನ್ನಡದ ಉದಯಕಾಲ, ಹೊಸಗನ್ನಡ ಸಾಹಿತ್ಯದ ಉಗಮ ಮತ್ತು ವಿಕಾಸ ಮುಂತಾದ ಕೃತಿಗಳಲ್ಲಿ ಆಧುನಿಕ ಕಾಲಘಟ್ಟದ ಇತರ ಪ್ರಕಾರಗಳ ಜೊತೆಗೆ ಕಾದಂಬರಿಗಳ ಬಗೆಗೂ ಅಷ್ಟಿಷ್ಟು ವಿಶ್ಲೇಷಣೆಗಳು ನಡೆದಿದೆ. ಇವಲ್ಲದೆ ಆ ಕಾಲಘಟ್ಟದ ಕಾದಂಬರಿ ಪ್ರಕಾರಗಳ ಕುರಿತಾಗಿಯೇ ನಡೆದ ಪ್ರತ್ಯೇಕ ಅಧ್ಯಯನಗಳೂ ಕನ್ನಡದಲ್ಲಿವೆ. ಶಿವರಾಮಪಡಿಕ್ಕಲ್ ಅವರ ಕನ್ನಡದ ಮೊದಲ ಕಾದಂಬರಿಗಳ ಅಧ್ಯಯನ (ನಾಡು-ನುಡಿಯ ರೂಪಕ) ಯು.ಮಹೇಶ್ವರಿ ಅವರ ಕನ್ನಡದ ಮೊದಲ ಕಾದಂಬರಿಗಳ ಸ್ತ್ರೀವಾದಿ ಅಧ್ಯಯನ (ಇದು ಮನುಷಿಯ ಓದು) ಮೊದಲಾದವುಗಳನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ.

ಆರಂಭ ಘಟ್ಟದ ಕಾದಂಬರಿಗಳ ಬಗ್ಗೆ ವಿವರವಾದ ಸಂಶೋಧನಾತ್ಮಕ ಅಧ್ಯಯನ ಮಾಡಿದ್ದಾರೆ. ಶಿವರಾಮ ಪಡಿಕ್ಕಲ್ ಅವರ ನಾಡು - ನುಡಿಯ ರೂಪಕ ಎನ್ನುವ ಸಂಶೋಧನ ಕೃತಿಯಲ್ಲಿ ಸಮಾಜಶಾಸ್ತ್ರೀಯ ನೆಲೆಯಲ್ಲಿ ವಿವೇಚಿಸಿದ್ದಾರೆ. ಕನ್ನಡದಲ್ಲಿ ಕಾದಂಬರಿ ಪ್ರಕಾರವು ಅನುವಾದದ ಮತ್ತು ರೂಪಾಂತರದ ಮುಖಾಂತರ ಬಂದಿದೆ ಎನ್ನುವುದನ್ನು ಗುರುತಿಸುತ್ತಾರೆ. ಹಾಗೆಯೇ ಕನ್ನಡದ ಮೊದಲ ಕಾದಂಬರಿಗಳು ಕನ್ನಡ ಕಾದಂಬರಿಗಳ ಉಗಮದ ಬಗ್ಗೆ ಕನ್ನಡ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂದರ್ಭ ಓದುಗ ವರ್ಗದ ನೀರಿಕ್ಷೆಗಳು ಮತ್ತು ಆಶೋತ್ತರಗಳು. ಕನ್ನಡ ಕಾದಂಬರಿ ಪ್ರಕಾರದ ಉಗಮದ ಕುರಿತ ದೇಶಿಯ ನೆಲೆಗಟ್ಟಿನ ಚರ್ಚೆ ಹೀಗೆ ಹಲವು ತಾತ್ವಿಕ ಸಂಗತಿಗಳ ವಿಶ್ಲೇಷಣೆಯನ್ನು ಈ ಕೃತಿಯಲ್ಲಿ ಮಾಡಲಾಗಿದೆ. ಇದು ಮನುಷಿಯ ಓದು - ಕನ್ನಡದ ಮೊದಲ ಕಾದಂಬರಿಗಳ ಸ್ತ್ರೀವಾದಿ ಅಧ್ಯಯನ : ಎಂಬ ಸಂಶೋಧನಾತ್ಮಕ ಕೃತಿಯಲ್ಲಿ ಭಾರತೀಯ ಭಾಷೆಗಳಲ್ಲಿ ಕಾದಂಬರಿ

ಪ್ರಕಾರವು ರೂಪುಗೊಳ್ಳುವ ಕಾಲಕ್ಕೆ ಭಾರತೀಯ ಸಮಾಜದಲ್ಲಿ ಸ್ತ್ರೀಪರವಾದ ಚಿಂತನೆ ರೂಢ ಮೂಲವಾಗಿತ್ತು ಆದರಿಂದಾಗಿಯೇ ಕಾದಂಬರಿಗಳಲ್ಲಿ ಸ್ತ್ರೀಪರ ಚಿಂತನೆಯ ಸುಧಾರಣೆ ಮನೋಭಾವದ ಕಾರಣ, ಸ್ವರೂಪ, ಪರಿಣಾಮಗಳ ಬಗ್ಗೆ ಕುರಿತು ಕೃತಿಯಲ್ಲಿ ಅಧ್ಯಯನ ನಡೆಸಿದ್ದಾರೆ. ಪಾಶ್ಚಾತ್ಯಾರಲ್ಲಿನ ಕಾಧಂಬರಿಯ ಉಗಮದ ಸಂದರ್ಭವನ್ನು ಅಲ್ಲಿನ ಸ್ತ್ರೀಯರ ಸ್ಥಿತಿಗತಿಗಳ ಹಿನ್ನಲೆಯನ್ನು ವಿವರಿಸುತ್ತಾರೆ. ಆದರ ಜೊತೆಗೆ ಕನ್ನಡದಲ್ಲಿ ಕರ್ನಾಟಕದ ಸಂದರ್ಭದಲ್ಲಿ ಸ್ತ್ರೀ ಪರವಾಗಿ ನಡೆದ ಚಿಂತನೆಗಳನ್ನು ಕುರಿತು ಚರ್ಚಿಸಿದ್ದಾರೆ. ಹಾಗೆಯೇ ಬಂಗಾಳಿ ಮರಾಠಿ ಹಾಗೂ ತೆಲುಗು ಕಾದಂಬರಿಗಳ ಪ್ರತ್ಯೇಕ ವಿಶ್ಲೇಷಣೆಯನ್ನು ಮಾಡಿದ್ದಾರೆ. ಹೀಗೆ ಸಾಹಿತ್ಯ ಕೃತಿಗಳಲ್ಲಿ ಮಹಿಳಾ ಕಾದಂಬರಿಗಳನ್ನು ಪ್ರತ್ಯೇಕವಾಗಿ ಗುರುತಿಸಿ ವಿಶ್ಲೇಷಿಸುವ ಕಾರ್ಯವನ್ನು ಮಾಡಿದ್ದಾರೆ. ಈ ರೀತಿಯಲ್ಲಿ ಕನ್ನಡದಲ್ಲಿ ಬಂದ ಆರಂಭಕಾಲಘಟ್ಟದ ಕಾದಂಬರಿಗಳ ಅಧ್ಯಯನ ಗುರುತಿಸಬಹುದಾಗಿದೆ. ಇಂತಹ ಸಂಶೋಧನಾತ್ಮಕ ಅಧ್ಯಯನಗಳ ಜೊತೆಗೆ ಕೆಲವು ಸಮೀಕ್ಷಾ ಬರಹಗಳು, ವಿಮರ್ಶಾತ್ಮಕ ಲೇಖನಗಳು, ವಿಚಾರ ಸಂಕೀರಣದ ಪ್ರಬಂಧಗಳು ಅಲ್ಲಲ್ಲಿ ಬಿಡಿ ಬಿಡಿಯಾಗಿ ಮತ್ತು ಪುಸ್ತಕ ರೂಪದಲ್ಲಿ ಪ್ರಕಟವಾಗಿವೆ. ಬಿ. ಎ. ವಿವೇಕರೈ ಅವರು ಸಂಪಾದಿಸಿದ 'ಕನ್ನಡ ಕಾದಂಬರಿಗಳ ಮೊದಲ ಹೆಜ್ಜೆ' ಎಂಬ ಕೃತಿಯನ್ನು ಇಲ್ಲಿ ಉದಾಹರಿಸಬಹುದಾಗಿದೆ.

ದಕ್ಷಿಣ ಭಾರತದ ತಮಿಳು, ತೆಲುಗು, ಮಲಯಾಳಂ, ಕನ್ನಡ ಮುಂತಾದ ಭಾಷೆಗಳ ಕಾದಂಬರಿಗಳ ಬಗ್ಗೆ ಆಯಾ ಆಯಾ ಭಾಷೆಗಳಲ್ಲಿ ಅಷ್ಟು ಇಷ್ಟು ಅಧ್ಯಯನಗಳು, ಸಮೀಕ್ಷಾತ್ಮಕ ಲೇಖನಗಳು, ಸಂಶೋಧಾನಾತ್ಮಕ ಪ್ರಬಂಧಗಳು ಬಂದಿವೆ. ಇತರ ದಕ್ಷಿಣ ಭಾರತೀಯ ಭಾಷೆಗಳ ಕಾದಂಬರಿಗಳ ಬಗೆಗೆ ಆಯಾ ಭಾಷೆಗಳಲ್ಲಿ ನಡೆದಿರಬಹುದಾದ ಅಧ್ಯಯನಗಳನ್ನು ಇಲ್ಲಿ ಗಮನಿಸಲಾಗಿಲ್ಲ. ಇಂಗ್ಲೀಷ್ ಮತ್ತು ಕನ್ನಡದಲ್ಲಿ ಆಯಾ ಭಾಷಾ ಕಾದಂಬರಿಗಳ ಕುರಿತಾಗಿ ನಡೆದಿರುವ ಅಷ್ಟಿಷ್ಟು ಅಧ್ಯಯನಗಳನ್ನು ಹಾಗೂ ಲೇಖನಗಳನ್ನು ಗಮನಿಸಲಾಗಿದೆ.

ಅಂಥವುಗಳಲ್ಲಿ ಕಣ್ಣೂರ ವಿಶ್ವವಿದ್ಯಾಲಯಕ್ಕೆ ಎಕ್ರಮ್ ಡಿಸೋಜ ಅವರು. ಎಂ.ಫಿಲ್ ಪದವಿಗಾಗಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಕನ್ನಡ ಮತ್ತು ಮಲಯಾಳಂ ಮೊದಲ ಕಾದಂಬರಿಗಳ ತೌಲನಿಕ ಅಧ್ಯಯನ ಎಂಬ ಅಪ್ರಕಟಿತ ನಿಬಂಧವೂ ಒಂದು ಇದರಲ್ಲಿ ಆಯಾ ಭಾಷೆಗಳಲ್ಲಿ ಕಾದಂಬರಿಗಳ ಉಗಮಕ್ಕೆ ಕಾರಣವಾದ ಸಾಮಾಜಿಕ ಹಿನ್ನೆಲೆ. ಸಮುದಾಯಗಳ ಪರಿಸ್ಥಿತಿಯನ್ನು ಕುರಿತು ಅಧ್ಯಯನ ನಡೆಸಿದ್ದಾರೆ. ಸಮಾನ ಹಾಗೂ ಭಿನ್ನತೆಯ ಅಂಶಗಳನ್ನು ಗುರುತಿಸಿದ್ದಾರೆ. ಇವುಗಳಲ್ಲಿ ಕನ್ನಡದ ಇಂದಿರಾಬಾಯಿ ಮತ್ತು ಮಲಯಾಳಂನ ಇಂದುಲೇಖ ಕಾದಂಬರಿಗಳನ್ನು ಎತ್ತಿಕೊಂಡು ಕಾದಂಬರಿ ಪ್ರಕಾರದ ಬಗ್ಗೆ ಅಧ್ಯಯನ ಮಾಡಿದ್ದಾರೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಕಟಿಸಿದ ಸಾಹಿತ್ಯ ಸಮೀಕ್ಷೆ ಸಂಪುಟದಲ್ಲಿ ದಕ್ಷಿಣ ಭಾರತದ ಕಾದಂಬರಿಗಳ ಬಗೆಗೆ ಪರಿಚಯಾತ್ಮಕ ನಮೂದುಗಳಿವೆ. ''(ತಮಿಳಿನಲ್ಲಿ) ದಂಢಾಯುಧಂ, ಆರ್.... 'ನಾವೆಲ್‌ಗಳಂ' (ತಮಿಳು ಕಾದಂಬರಿಸಾಹಿತ್ಯ) ವಿವಿಧ ದೃಷ್ಟಿಕೋನಗಳನ್ನು ಕುರಿತ ಪ್ರಬಂಧಗಳ ಸಂಕಲನ ಮದ್ರಾಸ್ ೧೯೭೫) ಕೈಲಾಸ ಪತಿ .ಕೆ, 'ತಮಿಳ್ ನಾವೆಲ್ ಇಲಕ್ಕಿಯಂ' (ತಮಿಳು ಕಾದಂಬರಿಸ) ಮದ್ರಾಸ್, ೧೯೬೮, ಪಾಕಿಯಾಮುತ್ತು .ಡಿ (ಸಂ) ತಮಿಳ್ ನಾವೆಲ್‌ಕಳಿಳ್ ಕುಟುಂಬ ಶಕ್ತಿ ಸಮುದಾಯ ಮಾಟ್ರಂ (ತಮಿಳು ಕಾದಂಬರಿಗಳು ಕುಟುಂಬಶಕ್ತಿ ಮತ್ತು ಸಾಮಾಜಿಕ ಬದಲಾವಣೆ ವಿಮರ್ಶಗಳ ಸಂಕಲನ), ತಮಿಳ್ ನಾವೆಲ್‌ಕಳಿಳ್ ವನಿತಾ ವಿಮೋಚನಂ ಪ್ರಬಂಧಗಳ ಸಂಕಲನ ೧೯೨೬, ವೀರಾಸ್ವಾಮಿ .ಟಿ.ವಿ. ತಮಿಳ್ ನಾವೆಲ್ ಮನ್ನೋಟಂ, ಕೋಯ ಮತ್ತೂರು ೧೯೭೨ (ಸಂ.ಜಿ.ಎಸ್.ಶಿವರುದ್ರಪ್ಪ ೧೯೭೬, ಪುಟ-೬೧೪) ಹೀಗೆ ತಮಿಳಿನಲ್ಲಿ ಮಲಯಾಳಂನಲ್ಲಿ ಹಾಗೂ ತೆಲುಗಿನಲ್ಲಿ ನಡೆದಿರಬಹುದಾದ ಅಧ್ಯಯನಗಳಿವೆ. ಆದರೆ ಅವುಗಳ ಬಗ್ಗೆ ಹೆಚ್ಚು ಅಧ್ಯಯನ ಕೈಗೊಂಡಿಲ್ಲ. ಪ್ರಾಸಂಗಿಕವಾಗಿ ದಕ್ಷಿಣಭಾರತದ ಬಗ್ಗೆ ಅಲ್ಲಲ್ಲಿ ಉಲ್ಲೇಖವಿದೆ.

ಇತರ ಪ್ರಕಾರಗಳಲ್ಲಿ ಅಲ್ಲಲ್ಲಿ ಪ್ರಸ್ತಾಪವಾಗಿದೆ. ಮೀನಾಕ್ಷಿ ಮುಖರ್ಜಿಯವರ ಸಂಪಾದಿಸಿದ **'EARLY NOVELS IN INDIA'** ಎಂಬ ಇಂಗ್ಲೀಷ್ ಕೃತಿಯಲ್ಲಿ, ದಕ್ಷಿಣ ಭಾರತವೂ ಸೇರಿದಂತೆ ಭಾರತದ ಎಲ್ಲಾ ಪ್ರಮುಖ ಭಾಷೆಗಳ ಪ್ರಾರಂಭ ಘಟ್ಟದ ಕಾದಂಬರಿಗಳ ಕುರಿತಾದ ಸಮೀಕ್ಷಾತ್ಮಕ ಲೇಖನಗಳಿವೆ. ಗಿರಿ ಪ್ರಕಾಶ್ ಅವರು ಸಂಪಾದಿಸಿದ **NOVEL IN DRAVIDIAN LITERATURE** ಎಂಬ ವಿಚಾರ ಸಂಕೀರ್ಣದ ಪ್ರಬಂಧಗಳ ಸಂಕಲನದಲ್ಲಿ ದಕ್ಷಿಣ ಭಾರತದ ಕನ್ನಡ, ತಮಿಳು, ತೆಲುಗು ಮತ್ತು ಮಲಯಾಳಂ ಭಾಷೆಗಳ ಆರಂಭಘಟ್ಟದ ಕಾದಂಬರಿಗಳ ಬಗೆಗೂ ಸ್ಥೂಲ ವಿವರಗಳಿವೆ. ಇವುಗಳಲ್ಲಿ ಬಹುಪಾಲು ಅಧ್ಯಯನ ಸಮೀಕ್ಷೆ ಲೇಖನಗಳಲ್ಲಿ ದಕ್ಷಿಣ ಭಾರತದ ಆಯಾ ಭಾಷೆಗಳ ಕಾದಂಬರಿಗಳ ಕುರಿತಾದ ಪ್ರತ್ಯೇಕವಾದ ಚರ್ಚೆ ಮಾಹಿತಿಗಳಿವೆ.

ಕೆಲವು ಅಧ್ಯಯನಗಳು ಮಾತ್ರ ಪ್ರಾಸಂಗಿಕವಾಗಿ ದಕ್ಷಿಣ ಭಾರತದ ಪ್ರಮುಖ ಭಾಷಾ ಕಾದಂಬರಿಗಳ ಕುರಿತು ತೌಲನಿಕವಾಗಿ ಪರಿಭಾವಿಸುತ್ತವೆ. ಆದರೆ ಆರಂಭಘಟ್ಟದ ದಕ್ಷಿಣ ಭಾರತದ ಎಲ್ಲಾ ಭಾಷೆಯ ಕಾದಂಬರಿಗಳನ್ನು ತೌಲನಿಕವಾಗಿ, ಪರಿಕಲ್ಪನಾತ್ಮಕವಾಗಿ, ಪರಿಭಾವಿಸಿದ ಸಮಗ್ರ ಅಧ್ಯಯನಗಳು ನಮ್ಮಲ್ಲಿ ನಡೆದಂತಿಲ್ಲ. ಹಾಗಾಗಿ ಮೇಲೆ ಪ್ರಸ್ತಾಪಿಸಿದ ಇದುವರೆಗಿನ ಕೆಲವು ಅಧ್ಯಯನಗಳನ್ನು ಗಮನದಲ್ಲಿಟ್ಟುಕೊಂಡು ಆ ಕಾಲಘಟ್ಟದ ಕನ್ನಡ, ತಮಿಳು, ತೆಲುಗು, ಮಲಯಾಳಂ ಹಾಗೂ ತುಳು ಭಾಷೆಗಳ ಕಾದಂಬರಿಗಳಲ್ಲಿ ಕಂಡು ಬರುವ ಸಮಾನ ಮತ್ತು ಅನನ್ಯ ಅಂಶಗಳನ್ನು ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಅಧ್ಯಾಯ-೧

ಪ್ರಸ್ತಾವನೆ - ವಿಷಯ ಪ್ರವೇಶ

೧.೦) ಪ್ರಾರಂಭಘಟ್ಟ - ಕಾಲಾವಧಿ ಪರಿಕಲ್ಪನೆಯ ಅರ್ಥ ಔಚಿತ್ಯ

೧.೧) 'ದಕ್ಷಿಣ ಭಾರತ' ಪರಿಕಲ್ಪನೆಯ ಔಚಿತ್ಯ ಮತ್ತು ಭೌಗೋಳಿಕ ಹಿನ್ನೆಲೆ

೧.೨) ಆ ಕಾಲಘಟ್ಟದ ರಾಜಕೀಯ, ಶೈಕ್ಷಣಿಕ, ಧಾರ್ಮಿಕ, ಸಾಂಸ್ಕೃತಿಕ ಸ್ಥಿತಿಗತಿಗಳು

ಅಧ್ಯಾಯ-೨

ಪ್ರಸ್ತಾವನೆ - ವಿಷಯ ಪ್ರವೇಶ

೨.೧ ಪ್ರಾರಂಭಘಟ್ಟ - ಕಾಲಾವಧಿ ಪರಿಕಲ್ಪನೆಯ ಅರ್ಥ ಔಚಿತ್ಯ

ಆಧುನಿಕ ಭಾರತದ ಚರಿತ್ರೆಯ ಸಂದರ್ಭದಲ್ಲಿ ಹತ್ತೊಂಬತ್ತನೆಯ ಶತಮಾನದ ಕೊನೆ ಮತ್ತು ಇಪ್ಪತ್ತನೆಯ ಶತಮಾನದ ಆರಂಭದ ದಶಕಗಳು ಮಹತ್ವದ ಕಾಲಘಟ್ಟವಾಗಿ ಕಂಡು ಬರುತ್ತದೆ. ಈ ಕಾಲಘಟ್ಟವನ್ನು ಸಂಘರ್ಷದ ಕಾಲವೆಂದು ಗುರುತಿಸಬಹುದು. ಅಂದರೆ ೧೯ನೇ ಶತಮಾನದ ಉತ್ತರಾರ್ಧದವರೆಗೆ ಭಾರತದಲ್ಲಿ ನಡೆದುಕೊಂಡು ಬಂದಿದ್ದ ಭಾರತದ ರಾಜಕೀಯ, ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಸಂಪ್ರದಾಯದ ಜೀವನ ಮೌಲ್ಯಗಳು, ಮಾದರಿಗಳು ಸಾಮಾನ್ಯ ಮನುಷ್ಯರನ್ನು ಅಮುಖ್ಯಗೊಳಿಸಿದ್ದವು. ಮಧ್ಯಮವರ್ಗಕ್ಕೂ ಪ್ರಾಮುಖ್ಯತೆ ಇರಲಿಲ್ಲ. ಈ ಕಾಲದಲ್ಲಿ ರಾಜನೇ ಸರ್ವಸ್ವವಾಗಿದ್ದ ಆತನ ಸುತ್ತಮುತ್ತ ಬೆಳಗಿದ ಧರ್ಮ ಮತ್ತು ಪ್ರಭುತ್ವವನ್ನು ಕತ್ತಲೆಯ ನೆಲೆಯೆಂದು ಪರಿಭಾವಿಸಿ 'ಸಾಮಾನ್ಯ ಮನುಷ್ಯರ ಬದುಕಿಗೂ ಒಂದು ಅರ್ಥವಿದೆ ಎನ್ನುವುದನ್ನು ಪಾಶ್ಚಾತ್ಯ ಸಂಸ್ಕೃತಿಯು ತೋರಿಸಿಕೊಟ್ಟಿತು. ವಸ್ತು, ಭಾಷೆ, ಶಿಕ್ಷಣ, ಆಡಳಿತ, ಆಧುನಿಕ ತಂತ್ರಜ್ಞಾನ ಮುಂತಾದವು ಭಾರತೀಯ ಬದುಕಿನಲ್ಲಿ ಆಗಮಿಸಿ ವೈಚಾರಿಕ ಪ್ರಜ್ಞೆ ಮತ್ತು ಪ್ರಗತಿಪರ ಆಲೋಚನೆಗಳು ಉಂಟಾಗುವಂತೆ ಮಾಡಿತು. ಇದನ್ನು ಬೆಳಕಿನ ಕಾಲವೆಂದು ಗುರುತಿಸಬಹುದಾಗಿದೆ.

ಅಲ್ಲದೇ ಈ ಕಾಲಘಟ್ಟವನ್ನು ಮತ್ತೊಂದು ರೀತಿಯಲ್ಲಿ ಅರ್ಥೈಸಬಹುದಾಗಿದೆ ಭಾರತೀಯ ಪುನರುಜ್ಜೀವನ ಕಾಲ, ಪ್ರಜ್ಞೆಯಕಾಲ, ಪುನರಾಲೋಚನೆಯ ಕಾಲ, ನವೋದಯದ ಪೂರ್ವಕಾಲ, ಅರುಣೋದಯದ ಕಾಲವೆಂದು, ಪ್ರಾಯೋಗಿಕ ಕಾಲವೆಂದು ಗುರುತಿಸಬಹುದು. ಅಂದರೆ ಭಾರತೀಯ ಬದುಕಿನ ಮೌಲ್ಯ ಸಂಪ್ರದಾಯಗಳಿಗೂ ಆಧುನಿಕ ಪೌರಾತ್ಯ ಮತು ಪಾಶ್ಚಾತ್ಯ ಆಡಳಿತದ ಮೌಲ್ಯಗಳಿಗೂ ನಡೆದ ತಾತ್ವಿಕ ಸಂಘರ್ಷದಲ್ಲಿ ಭಾರತೀಯ ಸಂಸ್ಕೃತಿಯಲ್ಲಿ ಹೊಸ ಬದಲಾವಣೆಗಳು ಕಾಣಿಸಿ ಕೊಳ್ಳಲಾರಂಬಿಸಿತು. ಹಾಗಾಗಿ ಈ ಕಾಲಘಟ್ಟವನ್ನು ಸಂಘರ್ಷದ ಕಾಲವೆಂದು ಗ್ರಹಿಸಬಹುದು. ಭಾರತೀಯ ಸಾಹಿತ್ಯಕ್ಕೆ ಆಧುನಿಕತೆಯನ್ನು ತಂದುಕೊಟ್ಟಕಾಲವಾಗಿದೆ. ರಾಜಕೀಯವಾಗಿ ಸ್ವಾತಂತ್ರ್ಯವನ್ನು ಮರಳಿ ಪಡೆಯಬೇಕೆಂಬ ಫಲದ ಮನೋಭಾವ ಬೆಳೆಯಿತು. ಹೊರಗಿನ ಆಚಾರ ಪದ್ಧತಿ, ಪರಂಪರೆಗಳು, ನವೀನ ವಿಚಾರಧಾರೆಗಳು ಪರಿಚಯವಾದವು. ಕ್ರಾಂತಿಕಾರಕ ಸಂಗತಿಗಳು ರಾಷ್ಟ್ರಜೀವನವನ್ನು ತುಂಬಿಕೊಂಡವು. ಕ್ರಿಯೆ ಪ್ರತಿಕ್ರಿಯೆಗಳು ಈ ಕಾಲದಲ್ಲಿ ತೋರಿಸಿಕೊಂಡವು. ಬದುಕಿನಲ್ಲಿ ಬೇರುಬಿಟ್ಟಿದ್ದ ನಂಬಿಕೆ, ನಡವಳಿಕೆಗಳನ್ನು ಪ್ರಶ್ನಿಸುವ ಧೈರ್ಯ ಉಂಟಾಯಿತು. ಹಳೆಯ ಹೊಸದರ ಘರ್ಷಣೆಯೊಂದು ಕಡೆ, ಅವುಗಳ ಕಸಿಯಿಂದ ಮೂಡಿದ ಚಿಗುರು ಇನ್ನೊಂದು ಕಡೆ ಒಟ್ಟಿನಲ್ಲಿ ರಾಷ್ಟ್ರದ ಸ್ಥಿತಿಗತಿಗಳು ಸಂಕೀರ್ಣವಾದ ರೂಪವನ್ನು ತಾಳಿದ್ದವು. ಪಾಶ್ಚಾತ್ಯರ ಸಂಪರ್ಕದಿಂದ ದೇಶದಲ್ಲಿ ಹೊಸ ಅಲೆಗಳು ಕಾಣಿಸಿಕೊಂಡವು. ಕುಸಿಯುತ್ತಿದ್ದ ಆಡಳಿತ ವ್ಯವಸ್ಥೆಗೆ ಹೊಸ ಚೇತನವನ್ನು, ಮಂಕುಕವಿದ ವಿಚಾರಗಳಿಗೆ ಹೊಸ ಕಾಂತಿಯೂ ಬಂದಿತು. ಇವುಗಳ ಪರಿಣಾಮದಿಂದ ಸಾಹಿತ್ಯಕ ವಲಯದಲ್ಲಿ ಬದಲಾವಣೆ ಕಾಣಿಸಿಕೊಳ್ಳಲು ಪ್ರಾರಂಭಿಸಿತು. ಆಧುನಿಕ ಸಾಹಿತ್ಯ ಎಂದು ಯಾವುದನ್ನು ಗುರುತಿಸುತ್ತೇವೆಯೋ ಅದು ಹತ್ತೊಂಬತ್ತನೆ ಶತಮಾನದಲ್ಲಿ ಉದಯಿಸಿತು. ಈ ಕಾಲದ ಸಾಹಿತ್ಯದಲ್ಲಿ ಹೊಸ ಹೊಸ ಪ್ರಕಾರಗಳು ಕಾಣಿಸಿಕೊಂಡವು. ಸಾಹಿತ್ಯದ ವಸ್ತು ಪುರಾಣ ಇತಿಹಾಸಗಳಿಂದ ಬೇರ್ಪಟ್ಟು ಸಮಾಜದ ಜನ ಜೀವನಗಳಿಗೆ ಹತ್ತಿರವಾಯಿತು. ಗದ್ಯ ತನ್ನ ಅಸ್ತಿತ್ವವನ್ನು ಸ್ಥಾಪಿಸಿತು. ಮುದ್ರಣ ಗ್ರಂಥ ಪ್ರಕಟಣೆ, ನಿಯತಕಾಲಿಕೆಗಳು, ಪತ್ರಿಕೆಗಳು, ಇವುಗಳಿಂದಾಗಿಯೇ ಸಾಹಿತ್ಯವು ಸೀಮಿತ ಗಡಿಯನ್ನು ದಾಟುವಂತಾಯಿತು.

ಈ ಹಿನ್ನೆಲೆಯಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಅಂಶಗಳನ್ನು ಸಾಂಪ್ರದಾಯಿಕ ಮೌಲ್ಯಗಳೊಂದಿಗೆ ಸಂಯೋಜಿಸುವ ವಿಧಾನಗಳನ್ನು ಕಂಡುಕೊಳ್ಳುವುದು ಮತ್ತು ಬ್ರಿಟಿಷರ ರಾಜಕೀಯ ಆಡಳಿತಕ್ಕೆ ಸಂಬಂಧಪಟ್ಟಂತೆ ನಿಶ್ಚಿತವಾದ ಧೋರಣೆಗಳನ್ನು ರೂಪಿಸಿ ಕೊಳ್ಳುವುದು ಹಾಗೆಯೇ ಪಾಶ್ಚಾತ್ಯ ಸಂಸ್ಕೃತಿ ಮತ್ತು ವೈದಿಕ ಸಂಸ್ಕೃತಿಗಳೆರಡ ರಿಂದಲೂ ಭಿನ್ನವಾದ ಭಾರತದ ಬೇರೆ ಬೇರೆ ಜನವರ್ಗಗಳಿಗೆ ವಿಶಿಷ್ಟವಾಗಿದ್ದ ಪ್ರಾದೇಶಿಕ ಸಂಸ್ಕೃತಿಯ ನೆಲೆಗಳನ್ನು ಗುರುತಿಸುವುದು ಆಗಿತ್ತು. ಹಾಗಾಗಿಯೇ ಈ ಎಲ್ಲಾ ಪ್ರಕ್ರಿಯೆಗಳ ಹಿನ್ನೆಲೆಯಲ್ಲಿ ಈ ಕಾಲವನ್ನು ''ಆರಂಭಕಾಲ'' ಎಂದು ಗುರುತಿಸಿಕೊಳ್ಳಲಾಗಿದೆ.

೨.೨ 'ದಕ್ಷಿಣ ಭಾರತ' ಎಂಬ ಪರಿಕಲ್ಪನೆಯ ಔಚಿತ್ಯ ಮತ್ತು ಭೌಗೋಳಿಕ ಹಿನ್ನೆಲೆ

ದಕ್ಷಿಣ ಭಾರತ ಎಂದು ನಾವು ಗುರುತಿಸುವುದು ಮುಖ್ಯವಾಗಿ ಎರಡು ರೀತಿಯಲ್ಲಿ ಒಂದು ಭೌಗೋಳಿಕವಾಗಿ ಮತ್ತು ಭಾಷಿಕವಾಗಿ ವಿಂಗಡಣೆ ಮಾಡಿಕೊಳ್ಳಲಾಗಿದೆ. ಭೌಗೋಳಿಕವಾಗಿ ವಿಂದ್ಯಾ ಪರ್ವತದ ದಕ್ಷಿಣದಿಂದ ಕನ್ಯಾಕುಮಾರಿಯವರೆಗಿನ ಭೂಭಾಗವನ್ನು ದಕ್ಷಿಣದ ಭಾರತವೆಂದು ಪರಿಣಗಣಿಸಲಾಗಿದೆ. ಇದರಂತೆ ಗುಜರಾತ ಮಹಾರಾಷ್ಟ್ರ, ಗೋವಾ ಆಂಧ್ರಪ್ರದೇಶ, ಕರ್ನಾಟಕ, ತಮಿಳುನಾಡು, ಕೇರಳಗಳು ದಕ್ಷಿಣದ ರಾಜ್ಯಗಳೆನಿಸುತ್ತವೆ. ಆದರೆ ಕೆಲವು ನಿರ್ದಿಷ್ಟ ಅಧ್ಯಯನಗಳಲ್ಲಿ ಗುಜರಾತ್, ಮಹಾರಾಷ್ಟ್ರ ಮತ್ತು ಗೋವಾಗಳನ್ನು ಪಶ್ಚಿಮದ ರಾಜ್ಯಗಳೆಂದು ಪರಿಗಣಿಸಿ, ಕರ್ನಾಟದ ಆಂಧ್ರ ತಮಿಳುನಾಡು, ಕೇರಳಗಳನ್ನಷ್ಟೇ ದಕ್ಷಿಣ ಭಾರತದ ವ್ಯಾಪ್ತಿಯ ಒಳಗಡೆ ಸೇರಿಸಲಾಗುತ್ತದೆ.

ಭಾಷಿಕವಾಗಿ 'ದ್ರಾವಿಡ ಭಾಷೆಗಳು' ಎಂಬ ಪರಿಕಲ್ಪನೆಯನ್ನು ದಕ್ಷಿಣ ಭಾರತೀಯ ಭಾಷೆಗಳು ಎಂಬ ಪರಿಕಲ್ಪನೆಗೆ ಸಂವಾದಿಯಾಗಿ ಪರಿಭಾವಿಸಲಾಗುತ್ತದೆ. ಪ್ರಸ್ತುತ ಇಲ್ಲಿ 'ದಕ್ಷಿಣ ಭಾರತ' ಅಥವಾ 'ದ್ರಾವಿಡಕ್ಕೆ' ಸಂಬಂಧಪಟ್ಟ ಭೌಗೋಳಿಕ, ರಾಜಕೀಯ ಭಾಷಿಕ ಪರಿಕಲ್ಪನೆಗಳ ಕುರಿತಾದ ಚರ್ಚೆ ಮುಖ್ಯವೆನಿಸುವುದಿಲ್ಲ. ಆ ಚರ್ಚೆಗಳ ಆಧಾರದಲ್ಲಿ ಈಗಾಗಲೇ ಕಂಡುಕೊಂಡಿರುವಂತೆ ಕರ್ನಾಟಕ, ಆಂಧ್ರ, ತಮಿಳು ನಾಡು, ಕೇರಳ ರಾಜ್ಯಗಳನ್ನು ಇಲ್ಲಿ ದಕ್ಷಿಣ ಭಾರತದ ರಾಜ್ಯಗಳೆಂದು ಪರಿಗಣಿಸಿ, ಅಲ್ಲಿ ಪ್ರಚಲಿತವಿರುವ ಕನ್ನಡ, ತುಳು,ತೆಲುಗು, ತಮಿಳು ಮತ್ತು ಮಲಯಾಳಂ ಭಾಷೆಗಳನ್ನು ದಕ್ಷಿಣ ಭಾರತೀಯ ಭಾಷೆಗಳು, ಎಂದು ತಿಳಿದುಕೊಳ್ಳಲಾಗಿದೆ . ಆ ಭಾಷೆಗಳಲ್ಲಿ ರಚಿತವಾದ ಕಾದಂಬರಿಗಳನ್ನು ದಕ್ಷಿಣಭಾರತೀಯ ಕಾದಂಬರಿಗಳು ಎಂದು ಪರಿಗಣಿಸಲಾಗಿದೆ.

೨.೩ ಆ ಕಾಲಘಟ್ಟದ ರಾಜಕೀಯ, ಶೈಕ್ಷಣಿಕ, ಧಾರ್ಮಿಕ, ಸಾಂಸ್ಕೃತಿಕ ಸ್ಥಿತಿಗತಿಗಳು

ಈ ಅವಧಿಯನ್ನು ಮಹತ್ವದ ಕಾಲಘಟ್ಟವಾಗಿ ಪರಿಗಣಿಸಲು ಆ ಕಾಲದ ರಾಜಕೀಯ, ಸಾಮಾಜಿಕ, ಧಾರ್ಮಿಕ ಮತ್ತು ಸಾಹಿತ್ಯಕ ಸ್ಥಿತಿಗತಿಗಳನ್ನು ಅವಲೋಕಿಸಿದಾಗ ಕಂಡಂತಹ ಬದಲಾವಣೆಗಳಿಂದ ''ಆರಂಭಘಟ್ಟ'' ಎಂದು ಗುರುತಿಸುವುದು ಔಚಿತ್ಯಪೂರ್ಣವಾಗಿದೆ. ಆ ಕಾಲದ ಸ್ಥಿತಿಗತಿಗಳು ಅಂದರೆ ಸಾಂಸ್ಕೃತಿಕ ಸ್ಥಿತ್ಯಂತರಗಳನ್ನು ಅವಲೋಕಿಸುವುದು ಅಗತ್ಯವಾಗಿದೆ. ಭಾರತವನ್ನು ವಸಾಹತುವನ್ನಾಗಿ ಮಾಡಿಕೊಂಡು ಬ್ರಿಟಿಷರು ರಾಜಕೀಯ ಆಡಳಿತ ನಡೆಸಿದರು. ಇದರಿಂದ ಭಾರತೀಯರಿಗೆ ಆಧುನಿಕತೆಯ ಸ್ಪರ್ಷವಾಯಿತು. ರಾಜಕೀಯವಾಗಿ ಕ್ರಿ.ಶ.೧೯೫೭ ರಿಂದಲೇ ಬ್ರಿಟಿಷರು ಭದ್ರಬುನಾದಿ ಹಾಕಿದರು. ವ್ಯಾಪಾರ ಕೇಂದ್ರಗಳಾಗಿದ್ದ ಬಂಗಾಳ, ಮುಂಬಯಿ ಮದ್ರಾಸ್, ಕೇಂದ್ರ ಪ್ರಾಂತ್ಯಗಳನ್ನು ತಮ್ಮ ರಾಜಕೀಯ ಕೇಂದ್ರಗಳನ್ನಾಗಿ ಮಾಡಿಕೊಂಡರು. ಇವರ ಆಡಳಿತದ ಪರಿಣಾಮವಾಗಿ ಭಾರತೀಯರಿಗೆ ಆಧುನಿಕ ಸೌಲಭ್ಯಗಳನ್ನು ಒಂದೊಂದಾಗಿ ಪರಿಚಯಿಸತೊಡಗಿದರು ಬ್ರಿಟಿಷರು ತಂದಂತಹ ಈ ಯಂತ್ರ ಸಂಸ್ಕೃತಿ ಭಾರತೀಯರ ಶ್ರೇಣಿಕೃತ ಸಮಾಜ ವ್ಯವಸ್ಥೆಯಲ್ಲಿ ಮನೆಮಾಡಿ ಕೊಂಡಿದ್ದ ಜಾತಿ, ಮತ, ಮಡಿ - ಮೈಲಿಗೆ ಮುಂತಾದ ಅನಿಷ್ಟ ಪದ್ಧತಿಗಳನ್ನು ಭೇದಿಸಿಕೊಂಡು ಸಾಮಾನ್ಯಜನ ವರ್ಗದಲ್ಲಿ ಜಾಗ್ರತ ಪ್ರಜ್ಞೆ ತಂದಿತು. ಹಾಗೆಯೇ ಮಧ್ಯಮವರ್ಗದ ಸಂಪ್ರದಾಯವಾದಿಗಳಲ್ಲಿ ತಲ್ಲಣ ಉಂಟು ಮಾಡಿತು. ಭಾರತೀಯರಲ್ಲಿದ್ದ ಉತ್ತಮ ಮಧ್ಯಮಗಳೆಂಬ ಭಾವನೆಗಳನ್ನು ಪ್ರಶ್ನಿಸುವಂತೆ ಮಾಡಿದವು.

ಬ್ರಿಟಿಷರು ಕೈಗೊಂಡ ಸುಧಾರಣೆಗಳಲ್ಲಿ ಇಂಗ್ಲಿಷ್ ಶಿಕ್ಷಣ ಮತ್ತು ಮುದ್ರಣ ವ್ಯವಸ್ಥೆಯು ಆಧುನಿಕ ಭಾರತದ ಚರಿತ್ರೆಯಲ್ಲಿ ಕ್ರಾಂತಿಕಾರಕ ಬದಲಾವಣೆಗಳಿಗೆ ಮುಖ್ಯ ಆಕರಗಳಾಗಿ ಬಳಕೆಯಾದವು. ಈ ನಿಟ್ಟಿನಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಕ್ಯಾಥೋಲಿಕ್ ಮಿಷನರಿಗಳು ಮತ್ತು ಪ್ರೊಟೆಸ್ಟಂಟ್ ಮಿಷನರಿಗಳು (ವೆಯನ್ ಮಿಷನ್, ಬಾಷಲ್ ಮಿಷನ್, ಲಂಡನ್ ಮಿಷನ್) ಕೈಗೊಂಡ ಶೈಕ್ಷಣಿಕ, ಸಾಮಾಜಿಕ, ಸಾಹಿತ್ಯಕ ಕಾರ್ಯಚಟುವಟಿಕೆಗಳು ಮುಖ್ಯವಾದವು.

ಸಾವಿರಾರು ವರ್ಷಗಳಿಂದ ಭಾರತೀಯರಲ್ಲಿ ನೆಲಗೊಂಡಿದ್ದ ಅಜ್ಞಾನ, ಮೌಢ್ಯ ಮುಂತಾದ ಅವೈಜ್ಞಾನಿಕ ಚಿಂತನೆಗಳ ಮೇಲೆ ಬೆಳಕು ಚೆಲ್ಲಿ ಮಧ್ಯಮ ವರ್ಗದ ಜನರಲ್ಲಿ ತೀವ್ರ ಶೈಕ್ಷಣಿಕ ಪ್ರಭಾವವನ್ನು ಉಂಟುಮಾಡಿದವು. ಅಲ್ಲದೆ ಭಾರತೀಯ ಪರಂಪರೆಯ ಬಗ್ಗೆ ಅರಿವು, ನಾಡು-ನುಡಿಯ ಬಗ್ಗೆ ಅಭಿಮಾನಗಳನ್ನು ನಿರ್ಮಿಸಿದವು. ಬ್ರಿಟಿಷ್ ಅಧಿಕಾರಿಗಳು ಆಡಳಿತದ ದೃಷ್ಟಿಯಿಂದ ಪ್ರಮುಖ ಕೇಂದ್ರಗಳಲ್ಲಿ ಭಾರತೀಯರಿಗೆ ಇಂಗ್ಲೀಷ್ ಶಿಕ್ಷಣದ ಅರಿವನ್ನು ಮೂಡಿಸತೊಡಗಿದರು ಮತ್ತೊಂದು ಕಡೆ ಕ್ರೈಸ್ತಮಿಷನರಿಗಳು ಮತ ಪ್ರಚಾರದ ದೃಷ್ಟಿಯಿಂದ ಇಂಗ್ಲೀಷ್ ಶಿಕ್ಷಣ ಪ್ರಯೋಗಗಳನ್ನು ಮಾಡತೊಡಗಿದರು. ಇದರಿಂದ ತಮ್ಮ ಮತ ಪ್ರಸಾರದ ಕಾರ್ಯ ಸರಳವಾಗಲೆಂದು ಭಾರತೀಯ ಸ್ಥಳೀಯ ಭಾಷೆ, ಸಾಹಿತ್ಯಗಳಿಂದ ಪ್ರಚಾರ ಮಾಡುವ ವಿಧಾನವನ್ನು ಅಳವಡಿಸಿಕೊಂಡರು ಹಾಗಾಗಿಯೇ ಸ್ಥಳೀಯ ಭಾಷೆಯ ಸಾಹಿತ್ಯಗಳಿಂದ ಪ್ರಚಾರ ಮಾಡುವ ವಿಧಾನವನ್ನು ಅಳವಡಿಸಿಕೊಂಡರು, ಹಾಗಾಗಿಯೇ ಸ್ಥಳೀಯ ಭಾಷೆಯ 'ಶಬ್ದಕೋಶ' 'ವ್ಯಾಕರಣಗ್ರಂಥ : ಪಠ್ಯಪುಸ್ತಕಗಳನ್ನು ಸಂಗ್ರಹಿಸಿಕೊಂಡರು . ಅದಕ್ಕೆ ಮುದ್ರಣಯಂತ್ರಗಳನ್ನು ನಿರ್ಮಿಸಿಕೊಂಡು ಸ್ಥಳೀಯ ಕೃತಿಯ ಪರಿಷ್ಕರಣೆ, ಅನುವಾದ, ಪ್ರಕಟಣೆಗಳ ಕೆಲಸವನ್ನು ಕೈಗೊಂಡರು ಶ್ರೀನಿವಾಸ ಹಾವನೂರರು ಅಭಿಪ್ರಾಯ ಪಡುವಂತೆ ''ಒಂದು ಕೈಯಲ್ಲಿ ಬೈಬಲ್, ಅದರ ಬೆನ್ನಿಗೆ ಮುದ್ರಣ ಸಾಮಾಗ್ರಿಹಿಡಿದು ಬಂದ ಮಿಷನರಿಗಳು ಸ್ವಮತ ಪ್ರಸಾರ ಕಾರ್ಯದಲ್ಲಿ ತೊಡಗಿದರು. ಸಾಹಿತ್ಯ, ಶಿಕ್ಷಣ ಕ್ಷೇತ್ರಗಳಲ್ಲಿ ನೇರವಾಗಿ ಪ್ರವೇಶಿಸಿದರು (ಶ್ರೀನಿವಾಸ ಹಾವನೂರ್ ೧೯೮೨, ಪುಟ-೧೦) ಇಲ್ಲಿ ಮಿಷನರಿಗಳು ಭಾರತೀಯ ಭಾಷೆಗಳಲ್ಲಿ ಪರಿಣತಿ ಹೊಂದು ವಂತಾಯಿತು. ಕಾರಣ ಅವರಲ್ಲಿದ್ದ ಚಾಣಾಕ್ಷತೆ, ಹಿಡಿದ ಕೆಲಸ ಮುಗಿಸಬೇಕೆನ್ನುವ ಛಲ, ಶ್ರದ್ಧೆಗಳು ಮುಖ್ಯವಾಗುತ್ತವೆ.

ಈ ರೀತಿಯಲ್ಲಿ ಮಿಷನರಿಗಳು ಶ್ರಮವಹಿಸಿ ಮಾಡಿದಂತ ಕೆಲಸಗಳು, ಆಧುನಿಕ ಶಿಕ್ಷಣ ಮತ್ತು ಮುದ್ರಣ ವ್ಯವಸ್ಥೆಗಳು ಭಾರತೀಯರಲ್ಲಿ ಆಶ್ಚರ್ಯವನ್ನುಂಟು ಮಾಡಿದವು. ಹೀಗೆ ಮತ ಪ್ರಚಾರದ ಉದ್ದೇಶದಿಂದ ದೇಶದಲ್ಲೆಲ್ಲಾ ಶಾಲೆಗಳನ್ನು ತೆರೆದು ಮಕ್ಕಳ ಬುದ್ದಿ ಶಕ್ತಿಗೆ

ಅನುಗುಣವಾಗಿ ಪಠ್ಯಪುಸ್ತಕ, ನಿಘಂಟು, ತಂತ್ರಜ್ಞಾನ, ಆಧುನಿಕ ವಿಜ್ಞಾನ, ಚರಿತ್ರೆ, ಭೂಗೋಳ ಮುಂತಾದ ವಿಷಯಗಳನ್ನು ಅಳವಡಿಸುವುದರೊಂದಿಗೆ ಪ್ರಪಂಚದ ಜ್ಞಾನದಾಹವನ್ನು ವೃದ್ಧಿಸತೊಡಗಿದರು. ಶ್ರೀನಿವಾಸ ಹಾವನೂರರ ಅಭಿಪ್ರಾಯದಂತೆ : ''ಪ್ರೌಢಶಾಲೆಯ ಎಲ್ಲಾ ವಿದ್ಯಾರ್ಥಿಗಳು ಇಂಗ್ಲೆಂಡಿನ ಚರಿತ್ರೆಯನ್ನು ಅಭ್ಯಾಸ ಮಾಡುತ್ತಿದ್ದರು. ವಿಜ್ಞಾನದ ವಿದ್ಯಾರ್ಥಿಗಳೂ ಕಡ್ಡಾಯ ಇಂಗ್ಲೀಷ್ ಅಭ್ಯಾಸಕ್ಕೆ ಓದುತ್ತಿದ್ದ ಹಲವು ಪಠ್ಯಪುಸ್ತಕಗಳು ಇಂದು ಎಂ.ಎ. ತರಗತಿಯವರು ಅಭ್ಯಾಸ ಮಾಡುವಂತಹವು. ಹದಿನಾಲ್ಕನೇ ಶತಮಾನದ ಛಾಸರ್‌ನ ಕವನಗಳನ್ನು ಓದುತ್ತಿದ್ದರು. ಷೇಕ್ಸ್‌ಪಿಯರ ನಾಟಕಗಳನ್ನು ಅಭ್ಯಾಸ ಮಾಡುತ್ತಿದ್ದರು. ಜೊತೆಗೆ ಕ್ರಿ.ಪೂ ನಾಲ್ಕನೇ ಶತಮಾನದ ಗ್ರೀಕ್ ಬರಹಗಾರ ಕ್ಸಿನೋಫಾನ್‌ನ 'ಅನಾಬೇಸಿಸ್'ನ ಇಂಗ್ಲೀಷ್ ಅನುವಾದ, ಪ್ಲೇಟೋನ ಸಂಭಾಷಣೆಗಳ ಅನುವಾದ, ಜೇಮ್ಸ್‌ಫೂಡನ, 'ಜೂಲಿಯಸ್ ಸೀಸರ್, ಕಾರ್ಲೈಲ್‌ನ 'ಹಿರೋ ಅಂಡ್ ಹಿರೋವರ್ಷಿಪ್' ಮತ್ತು ಮಿಲ್ಟನ್, ವರ್ಡ್ಸ್‌ವರ್ತ್, ಶೆಲ್ಲಿ, ಕೀಟ್ಸ್, ಬ್ರೌನಿಂಗ್, ಟೆನ್ನಿಸನ, ಆರ್ನಾಲ್ಡ್, ಮೊದಲಾದವರ ಕವನಗಳು, ಜೇನ್ ಆಸ್ಟಿನ್, ಸ್ಕಾಟ್‌ನ್ಯಾಕರೆ ಮೊದಲಾದವರ ಕಾದಂಬರಿಗಳು ಪಠ್ಯಪುಸ್ತಕಗಳಾಗಿದ್ದವು'' - ಇಂತಹ ಕವಿಗಳ, ವಿಚಾರಗಳು (ಶ್ರೀನಿವಾಸ ಹಾವನೂರ್;೨೦೦೦ ; ಪುಟ;೫೨) ತಾತ್ತ್ವಿಕ ದರ್ಶನಗಳು, ಶಾಲಾ ಆವರಣ, ತರಗತಿ ಕೊಠಡಿಕಲ್ಪನೆ, ಆಟದ ಮೈದಾನಗಳ, ಕಾನ್ವೆಂಟ್ ಕಲ್ಚರ್ ಮುಂತಾದ ಶೈಕ್ಷಣಿಕ ಚಟುವಟಿಕೆಗಳು ಭಾರತೀಯರನ್ನು ಪ್ರಭಾವಶಾಲಿಯಾಗಿ ಗಮನ ಸೆಳೆಯುವಂತೆ ಮಾಡಿದವು. ಭಾರತೀಯರು ಇಂಗ್ಲೀಷ್ ಕಲಿಯಲು ಮುಂದಾದರು. ಕ್ರೈಸ್ತಮಿಶನರಿಗಳು ಪ್ರಾರಂಭ ಮಾಡಿದ ಸಾಮಾಜಿಕ ಚಟುವಟಿಕೆಗಳು ಮಧ್ಯಮವರ್ಗದ ಬದುಕಿನಲ್ಲಿ ವಿಭಿನ್ನ ಆಲೋಚನೆಗಳು ಮೂಡಲು ದಾರಿತೋರಿಸಿದವು. ಅಲ್ಲಿಯ ತನಕ ಭಾರತೀಯರ ಬದುಕಿನ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಸಂದರ್ಭಗಳಲ್ಲಿ ಇವರ ಇಂತಹ ವ್ಯವಸ್ಥೆಯಲ್ಲಿ ಕ್ರೈಸ್ತಮಿಷನರಿಗಳು ತಮ್ಮ ಮತಧರ್ಮ, ಸಿದ್ಧಾಂತಗಳನ್ನು ಪ್ರಸಾರ ಮಾಡಲು ಬಳಸಿಕೊಂಡರು. ಹಿಂದೂಧರ್ಮದ ತತ್ವಸಿದ್ಧಾಂತಗಳನ್ನು ಟೀಕಿಸುತ್ತಾ ಜಾತಿ ಮತ ಬೇಧಗಳಿಲ್ಲದೇ ಶಾಲೆಗಳಿಗೆ, ಚರ್ಚುಗಳಿಗೆ ಪ್ರವೇಶ ನೀಡಿದರು. ಇದರೊಂದಿಗೆ ಮಿಷನರಿಗಳ ಸೇವಾ ಮನೋಭಾವ, ನಿಷ್ಠೆ ಭಾರತೀಯರಲ್ಲಿ ಜಾಗ್ರತ ಪ್ರಜ್ಞೆ ಮೂಡಿಸಿದವು.

ಬ್ರಿಟಿಷರ ಮತ್ತು ಮಿಷನರಿಗಳು ಕಾರ್ಯಚಟುವಟಿಕೆಗಳು ಅಧಿಕಾರ ಮತ್ತು ಧರ್ಮ ಪ್ರಚಾರದ ಮುಖ್ಯ ವಾಹಕಗಳಾಗಿ ಕೆಲಸ ಮಾಡಿದ್ದವು. ಸಾಂಸ್ಕೃತಿಕ ಲೋಕವನ್ನು ಅನಾವರಣಗೊಳಿಸಿದ ವಸಾಹತುಶಾಹಿ ಕಾಲಘಟ್ಟವು ಭಾರತದ ಇತಿಹಾಸದ ಮತ್ತೊಂದು ಮೈಲಿಗಲ್ಲು. ಈ ಕಾಲಘಟ್ಟದಲ್ಲಿ ಪಾಶ್ಚಾತ್ಯ ಮತ್ತು ಪೌರಾತ್ಯ, ವಿದ್ವಾಂಸರುಗಳ ಸಂಶೋಧನೆಯ ಫಲಗಳು ನಮ್ಮವರಿಗೆ ಲಭಿಸಿದವು. ಬ್ರಿಟಿಷ್ ಅಧಿಕಾರಶಾಹಿಯ ಆಡಳಿತ ತಂತ್ರದ ಫಲವಾಗಿ ನಮ್ಮವರಲ್ಲಿ ಭಾರತೀಯ ಸಂಸ್ಕೃತಿ, ನಾಡು-ನುಡಿ, ಪರಂಪರೆಯ ಬಗ್ಗೆ ಅರಿವು ಮತ್ತು ಜಾಗೃತಿ ಮೂಡಿಸಿತು. ಸರ್ವೇಗಳಾಗಿ, ರೆವಿನ್ಯೂ ಅಧಿಕಾರಿಗಳಾಗಿ, ಪುರಾತತ್ವ ಉತ್ಖನನದ ಕೆಲಸ ಕಾರ್ಯಗಳ ಕಾರಣದಿಂದ ಭಾರತಕ್ಕೆ ಬಂದ ಬ್ರಿಟಿಷ್ ಅಧಿಕಾರಿಗಳು ಆ ಕೆಲಸದೊಂದಿಗೆ ಭಾರತೀಯರ ವೈವಿಧ್ಯಮಯ ಸಾಂಸ್ಕೃತಿಕ ಪರಂಪರೆ ಹಾಗೂ ಐತಿಹಾಸಿಕ ಮಹತ್ವಗಳನ್ನು ಅರಿತು ಅವುಗಳ ಅಧ್ಯಯನದ ಬಗ್ಗೆ ಆಸಕ್ತಿ ತೋರಿಸುತ್ತಾ ಗಂಭೀರ ಸಂಶೋಧನೆಗೆ ತೊಡಗಿದರು. ತಮಗೆ ದೊರೆತ ಹಲವು ಸಾಂಸ್ಕೃತಿಕ ಮೂಲ ಸಾಮಾಗ್ರಿಗಳನ್ನು ಕಲೆಹಾಕಿ, ಅವುಗಳನ್ನು ಪರಿಷ್ಕರಿಸಿ ಸಂಶೋಧನಾ ಪತ್ರಿಕೆಗಳಲ್ಲಿ ಪ್ರಕಟಿಸಿದರು. ಶಾಸನಗಳನ್ನು ಸಂಗ್ರಹಿಸಿದರು. ಅವುಗಳನ್ನು ಪರಿಷ್ಕರಿಸಿ ಭಾರತೀಯ ಪ್ರಾಚೀನ ಜೀವನ ವಿಧಾನವನ್ನು ಬೆಳಕಿಗೆ ತಂದರು. ಇವರ ಸಂಶೋಧನೆ ಫಲವಾಗಿ ಉತ್ತರ ಮತ್ತು ದಕ್ಷಿಣ ಭಾರತದ ರಾಜಮನೆತನಗಳು ಬೆಳಕಿಗೆ ಬಂದವು. ಹಾಗಾಗಿಯೇ ರಾಜಕೀಯ, ಸಾಮಾಜಿಕ, ಧಾರ್ಮಿಕ, ಆಡಳಿತಾತ್ಮಕ ವ್ಯವಸ್ಥೆಗಳು ಪರಿಚಯಿಸಲ್ಪಟ್ಟವು. ಈ ಸಂಶೋಧನೆಗಳ ಮೂಲಕ ಅವರು ಭಾರತೀಯರಲ್ಲಿ ಇತಿಹಾಸ ಪ್ರಜ್ಞೆಯನ್ನು ತೆರೆಸಿದವು. ಸಾಹಿತ್ಯ ಪರಂಪರೆಯ ಮಹತ್ವವನ್ನು ಸಾರಿದರು. ಹಸ್ತಪ್ರತಿ ಸಂಗ್ರಹ, ಪರಿಷ್ಕರಣೆ, ಕೃತಿ ರೂಪದಲ್ಲಿ ಪ್ರಕಟಿಸಿದರು. ಇದರೊಂದಿಗೆ ಮೌಖಿಕ ಪರಂಪರೆಯ ಜನಪದ ಸಾಹಿತ್ಯವನ್ನು ಹೊರತಂದರು. ಹಾಗೆಯೇ ಬ್ರಿಟಿಷ್ ಸಾಮ್ರಾಜ್ಯಶಾಹಿಯ ಆಡಳಿತದ ವಿರುದ್ಧ ಕೆಲವು ಘಟನೆಗಳನ್ನು ಆಧರಿಸಿ ಕಟ್ಟಿದ್ದ. ಬಂಡಾಯವೆದ್ದ ಲಾವಣಿಗಳನ್ನು ಸಂಗ್ರಹಿಸಿ ಪ್ರಕಟಿಸಿ ಸಾಂಸ್ಕೃತಿಕ ಪ್ರಜ್ಞೆಯನ್ನು ಮೆರೆದರು.

ವಸಾಹತುಶಾಹಿ ಸಂದರ್ಭದ ಸಮಾಜವನ್ನು ತಿಳಿಯುವಲ್ಲಿ ಪತ್ರಿಕೆಗಳು ಮಹತ್ವದ ಪಾತ್ರವಹಿಸುತ್ತವೆ. ಸ್ಥಳೀಯ ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿಗಳನ್ನು ಕುರಿತಂತೆ ಲೇಖನಗಳನ್ನು ಪ್ರಕಟಿಸತೊಡಗಿದವು. ಇವುಗಳಿಂದ ಆಧುನಿಕ ಗದ್ಯ ಭಾಷೆಯಲ್ಲಿ ವಿಕಾಸಗೊಂಡು ಜನಗಳಿಗೆ ಉಲ್ಲಾಸ ತಂದುಕೊಟ್ಟವು. ಶ್ರೀನಿವಾಸ ಹಾವನೂರರ ಅಭಿಪ್ರಾಯ ಪಡುವಂತೆ ''ಹತ್ತೊಂಬತ್ತನೆಯ ಶತಮಾನದ ಪತ್ರಿಕೆಗಳನ್ನು ಪರಿಶೀಲಿಸಿದಾಗ ಅವುಗಳ ಪ್ರಕಟಣೆಯಲ್ಲಿ ಶೈಕ್ಷಣಿಕ ರಾಜಕೀಯ, ಧಾರ್ಮಿಕ ಹಾಗೂ ಸಾಹಿತ್ಯಕ ಎಂಬ ನಾಲ್ಕು ಬಗೆಯ ಉದ್ದೇಶಗಳು ಕಂಡು ಬರುತ್ತವೆ. ಪಾಶ್ಚಾತ್ಯ ಸಂಪರ್ಕದಿಂದಾಗಿ ಬೆಳಕಿಗೆ ಬಂದ ಅನೇಕ ವಿಷಯಗಳನ್ನು ಜೊತೆಗೆ ಸ್ವದೇಶದ ವ್ಯಕ್ತ ಸಂಗತಿಗಳ ಪರಿಚಯವನ್ನು ಮಾಡಿಕೊಡುವುದೇ ಶೈಕ್ಷಣಿಕ ಮುಖವೆಂದು ಬಗೆಯ ತಕ್ಕದ್ದು. ಪ್ರಚಲಿತ ಸುದ್ದಿಗಳನ್ನು ಕೊಟ್ಟು ಬ್ರಿಟಿಷ್ ಆಡಳಿತವನ್ನು ವಿಮರ್ಶಿಸುತ್ತಾ ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸಿದ ಪ್ರಯತ್ನವೇ ರಾಜಕೀಯ ಮುಖ, ಧಾರ್ಮಿಕ ಉದ್ದೇಶದಲ್ಲಿ ಕ್ರಿಶ್ಚಿಯನ್ ಮತಪ್ರಸಾರ ಹಾಗೂ ಹಿಂದೂ ಧರ್ಮಾಚರಣೆಯಲ್ಲಿ ಸುಧಾರಣೆ ಇವೆರೆಡೂ ಪ್ರತಿಪಾದನೆಗಳನ್ನು ಈ ಪತ್ರಿಕೆಗಳಲ್ಲಿ ಕಾಣಬಹುದು'' (ಶ್ರೀನಿವಾಸ ಹಾವನೂರ್;೨೦೦೦ ಪುಟ: ೪೯೬) ಹೀಗೆ ಪತ್ರಿಕೆಗಳು ಹಿಂದೂ ಧರ್ಮದ ಆಚರಣೆ, ಸಂಪ್ರದಾಯಗಳನ್ನು ಟೀಕಿಸುತ್ತಾ ಜನಗಲ್ಲಿ ಪತ್ರಿಕಾ ಮನೋಧರ್ಮ ಬೇರೂರುತ್ತಿದ್ದಂತೆ ಜಾಗತಿಕ ಮಟ್ಟದಲ್ಲಿ ಆಗುತ್ತಿದ್ದ ಹಲವು ಬದಲಾವಣೆಗಳನ್ನು ಕುರಿತು ಪ್ರಕಟಿಸುತ್ತಾ ಜಾಗತಿಕ ಮಟ್ಟದಲ್ಲಿನ ವಿಚಾರ ವಿಮರ್ಶೆ, ಕಲೆ, ಸಂಸ್ಕೃತಿ, ವಿಜ್ಞಾನ, ತಂತ್ರಜ್ಞಾನ ಸಿದ್ಧಾಂತಗಳನ್ನು ಭಾರತೀಯರಲ್ಲಿ ಜಾಗತಿಕ ಪ್ರಜ್ಞೆಯನ್ನುಂಟು ಮಾಡಿದವು. ಕೆಲವು ಸಂದರ್ಭಗಳಲ್ಲಿ ಪತ್ರಿಕೆಗಳು ಬ್ರಿಟಿಷ್ ಸರ್ಕಾರದ ಆಡಳಿತವನ್ನು ಆಡಳಿತಾಧಿಕಾರಿಗಳನ್ನು ಟೀಕೆಗಳಿಗೆ ಗುರಿ ಮಾಡುತ್ತಿದ್ದವು. ಈ ಹಿನ್ನೆಲೆಯಲ್ಲಿ ಅಂತಹ ಪತ್ರಿಕೆಗಳನ್ನು ನಿಷೇಧಿಸಿ, ಸಂಪಾದಕರನ್ನು ಸೆರೆಮನೆಗೆ ಕಳುಹಿಸುತ್ತಿದ್ದರು. ಪತ್ರಿಕೆಗಳಲ್ಲಿ ಪ್ರಕಟವಾದ ಚಿಂತನೆಗಳಿಂದ ಸ್ಥಳೀಯರಲ್ಲಿ ಸಂಘಟನೆಗೆ ಮತ್ತು ಪ್ರತಿಭಟನೆಗೆ ಬೇಕಾದ ಮನೋಭಾವನೆಯನ್ನುಂಟು ಮಾಡಿದವು. ಭಾರತೀಯರ ಮನಗಳನ್ನು ಬ್ರಿಟಿಷರ ಸಾಮ್ರಾಜ್ಯಶಾಹಿಯ ವಿರುದ್ಧ ಪ್ರಚೋಧಿಸಿದವು. ಈ ರೀತಿಯಲ್ಲಿ ಪತ್ರಿಕೆಗಳ ಕಾರ್ಯಚಟುವಟಿಕೆಗಳು ನಿರ್ಮಾಣಗೊಂಡಿದ್ದವು.

ಹೀಗೆ ಪಾಶ್ಚಾತ್ಯ ವಿದ್ವಾಂಸರ ಅಧ್ಯಯನ, ಸಂಶೋಧನೆಗಳು, ಪತ್ರಿಕೆಗಳು, ಭಾರತೀಯರಲ್ಲಿ ಐತಿಹಾಸಿಕ ಮತ್ತು ಸಾಂಸ್ಕೃತಿಕ ಪ್ರಜ್ಞೆಯ ಅರಿವನ್ನುಂಟುಮಾಡಿದವು. ಪಾಶ್ಚಾತ್ಯರ ಈ ರೀತಿಯ ಚಿಂತನೆ ಮತ್ತು ಬೆಳವಣಿಗೆಗಳ ಹಿನ್ನೆಲೆಯಲ್ಲಿ ಮೂಡಿಬಂದುದೇ ವಿದ್ಯಾವಂತ ಮೇಲ್ಮಧ್ಯಮವರ್ಗ ಪಾಶ್ಚಾತ್ಯರ ಆಡಳಿತ, ಭಾಷೆ, ಶಿಕ್ಷಣ, ಸಂಸ್ಕೃತಿ, ಮತಧರ್ಮ, ತತ್ವಜ್ಞಾನ, ವಿಜ್ಞಾನ ಪ್ರಪಂಚದ ಜ್ಞಾನ ಮುಂತಾದ ಆಧುನಿಕತೆಯ ತತ್ವಸಿದ್ಧಾಂತಗಳ ಪ್ರಭಾವ ಮತ್ತು ಪ್ರೇರಣೆಗಳಿಗೆ ನೇರವಾಗಿ ಒಳಗಾಗಿ ಹೊಸ ಜೀವನ ಮಾದರಿಗಳನ್ನು ರೂಢಿಸಿಕೊಂಡಿತು. ಈ ವರ್ಗದಲ್ಲಿ ಬಹುಪಾಲು, ವಿದ್ಯಾವಂತರು, ಬ್ರಾಹ್ಮಣ ವರ್ಗದವರೇ ಆಗಿದ್ದರು. ಇತರ ವರ್ಗದ ಬನಿಯಾಗಳು, ಠಾಕೂರರು, ರಜಪೂತರು, ಮಾರವಾಡಿಗಳು, ಪಾರ್ಸಿನಂಬೂದಿರಿ, ನಾಯರ್, ರೆಡ್ಡಿಗಳು ಮುಂತಾದ ಉನ್ನತ ವರ್ಗದ ಜನಗಳೇ ಆಗಿದ್ದರು. ಭಾರತದಲ್ಲಿ ಬಂದ ಆಧುನಿಕತೆಯ ಎಲ್ಲ ಸೌಲಭ್ಯ ಸೌಕರ್ಯಗಳ ಪ್ರಯೋಜನಗಳನ್ನು ಪಡೆದುಕೊಂಡು ಪ್ರಥಮ ಸ್ಥಾನದಲ್ಲಿದ್ದ ವಿದ್ಯಾವಂತ ಜನವರ್ಗ ಇದಾಗಿತ್ತು. ಆಧುನಿಕತೆಯಿಂದ ದ್ವಂದ್ವ ಮನೋಭಾವ ಸ್ಥಿತಿಯನ್ನು ಅನುಭವಿಸಿದರು. ಒಂದು ಕಡೆ ಪಾಶ್ಚಾತ್ಯರಿಂದ ಬೆಳಕಿಗೆ ಬಂದ ಭಾರತೀಯ ಸಂಸ್ಕೃತಿ, ಪರಂಪರೆ ಸಿದ್ಧಾಂತಗಳನ್ನು ಬಿಡಲಾರದ ಪರಿಸ್ಥಿತಿ, ಮತ್ತೊಂದೆಡೆ ಪಾಶ್ಚಾತ್ಯರ ಪ್ರಭಾವ ಮತ್ತು ಪ್ರೇರಣೆಗಳಿಗೆ ಒಳಗಾಗಿ ಆಧುನಿಕತೆಯ ಜೀವನ ಮಾದರಿಗಳನ್ನು ಬಿಟ್ಟು ಕೊಡಲಾರದ ಸ್ಥಿತಿಯಲ್ಲಿದ್ದವು. ಇಂತಹ ಆಲೋಚನೆಗಳ ಪರಿಸ್ಥಿತಿಯಲ್ಲಿ ಭಾರತೀಯ ವಿದ್ಯಾವಂತ ವರ್ಗಗಳು ತಮ್ಮ ವೈಚಾರಿಕತೆ, ವೈಜ್ಞಾನಿಕತೆ, ಪ್ರಗತಿಪರ ಧೋರಣೆಗಳನ್ನು ಕಟ್ಟಿಕೊಂಡಿದ್ದರು.

ಹತ್ತೊಂಬತ್ತನೆಯ ಶಮಾನದಲ್ಲಿ ಭಾರತೀಯರ ಜೀವನ ಮತ್ತು ಆಲೋಚನೆಗಳ ಬದಲಾವಣೆಗೆ ಮತ್ತೊಂದು ಪ್ರಮುಖ ಅಂಶ ಧಾರ್ಮಿಕ ಸುಧಾರಣೆಗಳು. ಇವು ಭಾರತೀಯ ಮಧ್ಯಮವರ್ಗದ ವಿದ್ಯಾವಂತರ ಉದಾರವಾದಿ ಮನೋಭಾವದ ಫಲವಾಗಿದೆಯೆನ್ನಬಹುದು. ಅದೇ ರೀತಿ ಇವು ಹಿಂದೂಧರ್ಮದ ಆತ್ಮಶೋಧನೆಯ ಮುಖ್ಯ ಬೆಳವಣಿಗೆಗಳೆಂದೇ ಹೇಳಬಹುದಾಗಿದೆ.

ಕ್ರೈಸ್ತಮಿಷನರಿಗಳು ತಮ್ಮ ಧರ್ಮಪ್ರಚಾರ ಮಾಡುವ ಸಲುವಾಗಿ ದೇಶದಲ್ಲೆಲ್ಲಾ ಸಂಸ್ಥೆಗಳನ್ನು ಸ್ಥಾಪಿಸಿಕೊಂಡರು. ಅದರಲ್ಲಿ ಹಿಂದೂಧರ್ಮದ ತತ್ತ್ವಗಳಲ್ಲಿನ ಅವೈಚಾರಿಕತೆ, ಅವೈಜ್ಞಾನಿಕ ಗೊಡ್ಡು, ಸಂಪ್ರದಾಯ, ಆಚರಣೆಗಳನ್ನು ಧಾರ್ಮಿಕ ಮತ್ತು ಸಾಮಾಜಿಕ ಅಸಮಾನತೆಗಳನ್ನು ಟೀಕಿಸುತ್ತಾ, ವಿಮರ್ಶಿಸುವುದರೊಂದಿಗೆ ಅವುಗಳ ಸುಧಾರಣಾ ಕ್ರಮದ ಅನಿವಾರ್ಯವೂ ನಡೆದಿತ್ತು. ಸ್ಥಾಪಿಸಿದ ಸಂಘಸಂಸ್ಥೆಗಳ ಮೂಲಕ ಜನರನ್ನು ತಮ್ಮ ಕಡೆ ವಾಲಿಸಿಕೊಳ್ಳುತ್ತಿದ್ದರು. ಈ ಸುಧಾರಣಾ ಮಾದರಿಯಲ್ಲಿಯೇ ರೂಪುಗೊಂಡುದೇ ವಿದ್ಯಾವಂತವರ್ಗ. ಭಾರತೀಯ ಸಾಮಾಜಿಕ ಸುಧಾರಕರಾದ ರಾಜಾರಾಂಮೋಹನರಾಯ್,ಕೇಶವಚಂದ್ರಸೇನ್, ದಯಾನಂದಸರಸ್ವತಿ, ರಾಮಕೃಷ್ಣಪರಮಹಂಸ, ಸ್ವಾಮಿವಿವೇಕಾನಂದ, ಅನಿಬೆಸೆಂಟ್ ಮುಂತಾದ ಸುಧಾರಕರು ಸಂಘಸಂಸ್ಥೆಗಳನ್ನು ಸ್ಥಾಪಿಸಿ ಸಾಮಾಜಿಕ ಸುಧಾರಣೆಗಳನ್ನು ಕೈಗೊಂಡಿದ್ದರು. ಅವರ ಧಾರ್ಮಿಕ ಸುಧಾರಣೆಗಳಲ್ಲಿ ಪ್ರಾಣಿ ಬಲಿಗಳ ಖಂಡನೆ, ಮೇಲು-ಕೀಳುಗಳೆನ್ನದೆ ದೇವ ಮಂದಿರಗಳಿಗೆ ಪ್ರವೇಶ. ಆಧುನಿಕ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಶಾಲಾಕಾಲೇಜುಗಳ ಸ್ಥಾಪನೆ, ಅನಾಥಾಲಯಗಳ ಸ್ಥಾಪನೆ ವಿಶೇಷವಾಗಿ ಸಹಗಮನ ಪದ್ಧತಿ, ಹಾಗೂ ಬಾಲ್ಯವಿವಾಹಗಳ ವಿರೋಧ, ವಿಧವಾ ವಿವಾಹದ ಪ್ರೋತ್ಸಾಹ, ಅಂತರ್ ಜಾತಿಗಳಿಗೆ ಬೆಂಬಲ ಹೀಗೆ ಹಲವಾರು ಸುಧಾರಣೆಗಳನ್ನು ಜಾರಿಗೆ ತಂದರು ಭಾರತದಲ್ಲಿ ಧಾರ್ಮಿಕ, ಸಾಮಾಜಿಕ ಜಾಗೃತಿಯನ್ನುಂಟು ಮಾಡಿದರು. ಈ ಸುಧಾರಣೆಗಳಿಗೆ ಕ್ರೈಸ್ತ ಧರ್ಮವೇ ಪ್ರಮುಖ ಪ್ರೇರಣೆ ಎಂಬುದನ್ನು ಗಮನಿಸಬಹುದಾಗಿದೆ.

ಭಾರತೀಯ ಸುಧಾರಣಾವಾದಿಗಳ ಹಿನ್ನೆಲೆಯಲ್ಲಿ ಬೆಳೆದ ಮತ್ತೊಂದು ಮಹತ್ವದ ಸಂಗತಿ ಎಂದರೆ ಭಾರತೀಯರ ಸ್ವತಂತ್ರ ಸಾಹಿತ್ಯ ಅಭಿವ್ಯಕ್ತಿ ಸ್ವರೂಪದಲ್ಲಾದ ಬದಲಾವಣೆ. ವಿದ್ಯಾವಂತ ಸುಧಾರಣಾವಾದಿಗಳ ತಾತ್ವಿಕ ಪ್ರತಿಭಟನೆಯು ಭಾರತೀಯ ಪರಂಪರೆಯ ಸ್ವದರ್ಮ, ಸ್ವದೇಶಾಭಿಮಾನದ ವಿದ್ಯಾವಂತ ಸುಧಾರಣವಾದಿಗಳ ತಾತ್ವಿಕ ಪ್ರತಿಭಟನೆಯು ಭಾರತೀಯ ಪರಂಪರೆಯ ಸ್ವಧರ್ಮ,ಸ್ವದೇಶಾಭಿಮಾನದ ಪ್ರತಿಫಲವಾಗಿತ್ತು. ಇದೊಂದು ಕ್ರಾಂತಿಕಾರಕ ಬೆಳವಣಿಗೆ ಎಂದು ಭಾವಿಸಬಹುದು. ಅನೇಕರು ಪತ್ರಿಕಾ ಮನೋಧರ್ಮವನ್ನು ಬೆಳೆಸಿಕೊಂಡು ಆ ಪತ್ರಿಕೆಗಳ ಮೂಲಕ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸುಧಾರಣಾ ಪ್ರಕ್ರಿಯೆಗೆ ಚಾಲನೆಯನ್ನು ನೀಡಿದ್ದರು.

ಪತ್ರಿಕೆಗಳಲ್ಲಿನ ಗದ್ಯರೂಪದ ಮೂಲಕ ಅಭಿವ್ಯಕ್ತಿಸಿದ ಸ್ವತಂತ್ರವಿಚಾರ, ಸಾಮಾಜಿಕ, ತುಡಿತ, ಸ್ವತಂತ್ರ ಸೃಜನಾತ್ಮಕ ಪ್ರಕ್ರಿಯೆಯು ಭಾರತೀಯರ ಮೊದಲ ಸಾಹಿತ್ಯದ ಬೆಳವಣಿಗೆಗೆ ಕಾರಣವಾದ ಮಹತ್ವದ ಸಂಗತಿಯಾಗಿದೆ. ಈ ಹಿನ್ನೆಲೆಯಲ್ಲಿ ಭಾರತೀಯರನ್ನು ಸ್ವತಂತ್ರ ಲೇಖಕರನ್ನಾಗಿ, ಸಾಹಿತಿಗಳನ್ನಾಗಿ, ಸೃಜನಾತ್ಮಕ ಚಟುವಟಿಕೆಗಳಿಗೆ ತೊಡಗಿಸಿಕೊಳ್ಳಲು. ಅನುವುಮಾಡಿಕೊಟ್ಟಿತು. ಈ ಸಂದರ್ಭದಲ್ಲಿಯೇ ಭಾರತದಾದ್ಯಂತ ಆಯಾಯ ಭಾಷೆಗಳ ಸಾಹಿತ್ಯದಲ್ಲಿ ಸುಧಾರಣಾ ವಾದದ ಚಟುವಟಿಕೆಗಳು ಬಿರುಸಿನಿಂದ ನಡೆಯತೊಡಗಿದವು. ಈ ಹಂತವೇ ಭಾರತೀಯ ಭಾಷೆಗಳಲ್ಲಿ ಮೊದಲು ಸ್ವತಂತ್ರ ಸಾಹಿತ್ಯ ರಚನೆ ಆರಂಭವಾಯಿತು. ಆದರೆ ಭಾರತೀಯ ಸಾಹಿತ್ಯ ಮೊದಲು ಕಾಣಿಸಿಕೊಳ್ಳತೊಡಗಿದ್ದು ಬಂಗಾಳಿ ಭಾಷೆಯಲ್ಲಿ, ನಂತರ ಮಹರಾಷ್ಟ್ರದ ಮರಾಠಿ ಸಾಹಿತ್ಯ ಮೊದಲಿಗೆ ಭಾರತೀಯ ಸಾಹಿತ್ಯವು ಅನುವಾದ ಅನುಕರಣ ಪರಿಷ್ಕರಣದ ಕಾರ್ಯದಿಂದ ಮೊದಲುಗೊಂಡು ಕಾಲಾನಂತರ ಸ್ವತಂತ್ರ ಸಾಹಿತ್ಯ ನಿರ್ಮಾಣದ ಹಂತವಾಗಿ ಕಾಣಿಸಿಕೊಂಡಿತು.

ಈ ಹಿನ್ನೆಲೆಯಲ್ಲಿ ಭಾರತೀಯ ಭಾಷೆಗಳಲ್ಲಿ ಮೊಟ್ಟಮೊದಲಿಗೆ ಆಧುನಿಕತೆ ಮತ್ತು ಸ್ವತಂತ್ರ ಸಾಹಿತ್ಯ ಚಟುವಟಿಕೆಗಳು ಅಭಿವ್ಯಕ್ತಿ ಸ್ವರೂಪ ಪಡೆದದ್ದು ಬಂಗಾಳ ಸಾಹಿತ್ಯದಲ್ಲಿ. ಬಂಕಿಮ್ ಚಂದ್ರಚಟರ್ಜಿ, ಶರಶ್ಚಂದ್ರ ಚಟರ್ಜಿ, ಪ್ರೇಮ್‌ಚಂದ್ರರ ನಂತರ ರವೀಂದ್ರನಾಥಠಾಗೂರರ ಕೃತಿಗಳಲ್ಲಿ ಈ ಆಧುನಿಕತೆಯು ಕಾಣಿಸಿಕೊಂಡಿತು. ಬಂಕಿಮ್ ಚಂದ್ರಚಟರ್ಜಿಯವರ ''ದುರ್ಗೇಶನಂದಿನಿ'' (೧೮೬೫), ''ಆನಂದಮಠ'' (೧೮೮೨), ''ವಿಷವೃಕ್ಷ'' ಮುಂತಾದ ಕಾದಂಬರಿ ಪ್ರಕಾರಗಳಲ್ಲಿ ಆಧುನಿಕತೆಯ ರೂಪ ಕಾಣಿಸಿಕೊಂಡಿತು. ಅವರ ಕೃತಿಗಳಲ್ಲಿ ಮುಖ್ಯವಾಗಿ ಮಧ್ಯಮವರ್ಗದ ಜನಜೀವನವು ಅನಾವರಣಗೊಂಡಿದೆ. ನಂತರದಲ್ಲಿ ಮರಾಠಿ ಭಾಷೆಯಲ್ಲಿಸಾಹಿತ್ಯ ರಚನೆ ಪ್ರಾರಂಭವಾಯಿತು. ಮುಂಬೈ ಪ್ರಾಂತ್ಯದ ಶಿಕ್ಷಣಾಧಿಕಾರಿಯಾಗಿ ಬಾಳಾಶಾಸ್ತ್ರಿ ಜಾಂಬೇಕರ ಅವರಿಂದ ನವೋದಯ ಸಾಹಿತ್ಯ ಆರಂಭವಾಯಿತು. ವಿಷ್ಣುಶಾಸ್ತ್ರಿ ಚಿಪಳೂಣಕರರ ಸ್ವತಂತ್ರ ಕೃತಿ ''ನಿಬಂಧಮಾಲಾ'' ''ಮೋಚನಗಡ'' ಮುಂತಾದವುಗಳಲ್ಲಿ ಆಧುನಿಕತೆಯ ಲಕ್ಷಣಗಳು ಕಾಣಿಸಿಕೊಂಡಿವೆ.

ಈ ಹಿನ್ನೆಲೆಯಲ್ಲಿ ಮುಂದೆ ಇತರ ದೇಶ ಭಾಷೆಗಳಲ್ಲಿ ಸಾಹಿತ್ಯಕೃತಿಗಳು ರಚನೆಯಾಗತೊಡಗಿದವು. ಎಸ್.ಚಂದ್ರಶೇಖರ ಅವರು ಅಭಿಪ್ರಾಯಪಡುವಂತೆ; ಆ ಕಾಲದ ಸಾಹಿತ್ಯ ಚಟುವಟಿಕೆಗಳಲ್ಲಿ ಕಾಣಿಸಿಕೊಂಡದ್ದು ರಾಷ್ಟ್ರೀಯ ಮನೋಭಾವದ ಸಾಮೂಹಿಕ ಚಟುವಟಿಕೆಗಳು "ಅವರುಗಳ ಅನುಕರಣೆ - ಎಲ್ಲದರಲ್ಲಿಯೂ ಸುಧಾರಣೆಯ ದಟ್ಟವಿವರಗಳಾದ ಸ್ತ್ರೀಯರ ಸ್ಥಾನಮಾನ ಕಾಳಜಿ ಧರ್ಮದ ಪುನರುಜ್ಜೀವನ, ಸ್ವಧರ್ಮ - ಸಂಸ್ಕೃತಿಗಳ ಬಗ್ಗೆ ಆರಾಧಕ ಮನೋಭಾವ ಕಾಣಿಸುತ್ತದೆ. ಹಾಗೆ ನೋಡಿದರೆ ಈ ವಿವರಗಳಲ್ಲಿಯೇ ಭಾರತೀಯತೆ ಉಗಮ - ರಾಷ್ಟ್ರೀಯತೆಯ ಉಗಮವಿದೆ "(ಚಂದ್ರಶೇಖರ : ಪುಟ-೩, ೧೯೯೧) ಅವುಗಳೆಲ್ಲವೂ ಹಿಂದೂಧರ್ಮದ ಪುನರುಜ್ಜೀವನದಲ್ಲಿ ತೊಡಗಿದ್ದವು. ಈ ಹಿನ್ನೆಲೆಯಲ್ಲಿ ದಕ್ಷಿಣ ಭಾರತದ ಭಾಷೆಯಲ್ಲಿ ಸಾಹಿತ್ಯ ಚಟುವಟಿಕೆಗಳ ಆರಂಭವನ್ನು ಗಮನಿಸುವುದು ಅಗತ್ಯವಾಗಿದೆ. ಬ್ರಿಟಿಷರ ಆಳ್ವಿಕೆಯಲ್ಲಿ ಭಾರತೀಯರಿಗೆ ಹಲವು ಮೂಲಗಳಿಂದ ವಿಚಾರಧಾರೆಯು ಹರಿದು ಬಂದಿತು. ಇಂಗ್ಲೀಷ್ ಭಾಷೆಯ ಕಲಿಕೆಯಿಂದ ಯೂರೋಪಿನ ಚಿಂತನೆ ಲಭ್ಯವಾಗತೊಡಗಿತು. ಇದರಿಂದ ಹೊಸ ಸಾಹಿತ್ಯದ ದರ್ಶನವಾಯಿತು. ಭಾರತೀಯರ ಮನೋಧರ್ಮ ಬದಲಾವಣೆಯಾಯಿತು. ಸಾಹಿತ್ಯ ಮತ್ತು ಬದುಕಿನ ಸಂಬಂಧಗಳ ಸ್ವರೂಪದಲ್ಲಿ ಬದಲಾವಣೆ ಕಂಡು ಜೀವನ ಕ್ರಮಕ್ಕೆ ಹೊಸ ಅರ್ಥವೂ ಮೂಡತೊಡಗಿತು. ಈ ಸಂದರ್ಭದಲ್ಲಿ ದೇಶ ವಿದೇಶಗಳ ಚರಿತ್ರೆಗಳು ಭಾರತೀಯರ ಗಮನಕ್ಕೆ ಬಂದವು. ಮಹಾವ್ಯಕ್ತಿಗಳ ಚಿಂತನೆಗಳು ಮೈತುಂಬತೊಡಗಿದವು. ಇದರಿಂದ ಭಾರತೀಯರ ಬದುಕು ಸಂಕೀರ್ಣವಾಗತೊಡಗಿತು. ಏಕಕಾಲದಲ್ಲಿ ಶೇಕ್ಸ್‌ಪಿಯರ್, ಮಿಲ್ಟನ್, ವರ್ಡ್ಸ್‌ವರ್ತ್, ಷೆಲ್ಲಿ, ಕೊಲ್‌ರೀಡ್ಜ್, ಮ್ಯಾಥ್ಯೋ ಆರ್ನಾಲ್ಡ್, ವಾಲ್ಟರ್‌ಸ್ಕಾಟ್, ಡಿಕನ್ಸ್, ಯುರಿಪಿಡಿಸ್, ಟಾಲ್‌ಸ್ಟಾಯ್ ಮುಂತಾದವರ ಸಾಹಿತ್ಯ ಪರಿಚಯವಾಯಿತು. ಅನೇಕ ಧಾರ್ಮಿಕ ವ್ಯಕ್ತಿಗಳ ವಿಚಾರಧಾರೆಯ ಜೊತೆಗೆ ರಾಜಕೀಯ ಪ್ರಜ್ಞೆಮೂಡತೊಡಗಿತು. ಸಾಹಿತ್ಯದಲ್ಲಿ ಅನೇಕ ಪ್ರಕಾರಗಳು ಹುಟ್ಟಿಕೊಂಡವು ಭಾರತೀಯರ ಕನಸುಗಳು, ನೋವು ನಲಿವುಗಳು ಅತಿಸೂಕ್ಷ್ಮ ಭಾವನೆಗಳು ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಅಭಿವ್ಯಕ್ತಗೊಳ್ಳತೊಡಗಿದವು. ಇದರ ಪರಿಣಾಮವಾಗಿ ಭಾರತೀಯ ಭಾಷೆ - ಸಾಹಿತ್ಯಗಳ ನವೋದಯ ಹತ್ತೊಂಬತ್ತನೆಯ ಶತಮಾನದಲ್ಲಿ ಕಾಣಿಸಿಕೊಳ್ಳಲು ಪ್ರಾರಂಭಿಸಿದವು.

ಸಾಹಿತ್ಯದ ವಸ್ತು, ಪುರಾಣ ಇತಿಹಾಸಗಳಿಂದ ದೂರವಾಗಿ ಸಮಾಜದ ಜನ ಜೀವನಗಳಿಗೆ ಹತ್ತಿರವಾಯಿತು. ಗದ್ಯ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿತು. ಮುದ್ರಣ ಗ್ರಂಥ ಪ್ರಕಟಣೆ, ನಿಯತಕಾಲಿಕೆಗಳು. ಪತ್ರಿಕೆಗಳು ಇವುಗಳಿಂದಾಗಿಯೇ ಸಾಹಿತ್ಯವು ಸೀಮಿತ ವಲಯಗಳನ್ನು ದಾಟುವಂತಾಯಿತು. ಈ ಪ್ರಕ್ರಿಯೆಯಲ್ಲಿ ದಕ್ಷಿಣ ಭಾರತವೂ ಒಂದಾಗಿತ್ತು. ಈ ಕಾಲಘಟ್ಟದ ಸಂಶೋಧನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವಂತ ಶ್ರೀನಿವಾಸಹಾವನೂರರು ''ಹೊಸಗನ್ನಡದ ಅರುಣೋದಯ ಕಾಲವೆಂದು'' ಕರೆದಿರುವುದು ಔಚಿತ್ಯಪೂರ್ಣವಾಗಿದೆ.

ರಂ. ಶ್ರೀ ಮುಗಳಿಯವರು ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ''ಕ್ರಿ.ಶ ೧೮೨೦ ರಿಂದ ೧೯೨೦ರ ಅವಧಿಯನ್ನು ಹೊಸ ಸಾಹಿತ್ಯದ ಮೊದಲ ಹಂತ'' ಎಂದು ಗುರುತಿಸುತ್ತಾರೆ. ''೧೮೨೩ರಲ್ಲಿ ಕೆಂಪುನಾರಾಯಣನ ಮುದ್ರಾಮಂಜೂಷ ಮುಗಿಯಿತು. ಇದರಲ್ಲಿ ಹಳೆಯದರೊಡನೆ ಹೊಸನುಡಿಗಟ್ಟು ಸೇರಿದೆ ಎನ್ನುವದಾಗಿದೆ'' ಎನ್ನುವ ಮಾತನ್ನು ಹೇಳುತ್ತಾರೆ. ಆದರೆ ಎಲ್. ಎಸ್. ಶೇಷಗಿರಿರಾಯರು ''ಕ್ರಿ.ಶ ೧೮೭೦ ರಿಂದ ೧೯೨೦ರ ಅವಧಿಯನ್ನು ಆಧುನಿಕ ಸಾಹಿತ್ಯದ 'ಪ್ರಾರಂಭಘಟ್ಟ'' ಎಂದು ಗುರುತಿಸುತ್ತಾರೆ. (ಶೇಷಗಿರಿರಾವ್ .ಎಲ್.ಎಸ್.೨೦೦೩ ಪುಟ೧೨) ಅಂದರೆ ಚುರುಮುರಿ ಶೇಷಗಿರಿರಾಯರು ಬಸವಪ್ಪಶಾಸ್ತ್ರಿಗಳೂ, ಇಬ್ಬರು ಲೇಖಕರು ಕಾಳಿದಾಸನ ಶಾಕುಂತಲಾ ನಾಟಕವನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಕ್ರಿ.ಶ ೧೮೮೫ರಲ್ಲಿ ವೆಂಕಟಾಚಾರ್ಯರು 'ದುರ್ಗೇಶನಂದಿನಿ' ಎಂಬ ಕಾದಂಬರಿಯನ್ನು ಬಂಗಾಳ ಭಾಷೆಯಿಂದ ಕನ್ನಡಕ್ಕೆ ಅನುವಾದಿಸಿದರು. ಕ್ರಿ.ಶ ೧೮೯೬ರಲ್ಲಿ ಮುರುಗಾರಾಧ್ಯರ ಕಾದಂಬರಿ 'ಶೃಂಗಾರಚಾತುರ್ಯೋಲ್ಲಾಸಿನಿ,' ಪ್ರಕಟವಾಯಿತು. ಕ್ರಿ.ಶ ೧೮೮೨ರಲ್ಲಿ 'ಇಗ್ಗಪ್ಪಹೆಗಡೆಯ ವಿವಾಹ ಪ್ರಹಸನ' ಪ್ರಕಟವಾಯಿತು. ೧೮೯೦ರಲ್ಲಿ 'ಕರ್ನಾಟಕ ವಿದ್ಯಾವರ್ಧಕ ಸಂಘ' ಸ್ಥಾಪನೆಯಾಯಿತು. ಈ ಎಲ್ಲಾ ಚಟುವಟಿಕೆಗಳ ಹಿನ್ನೆಲೆಯಲ್ಲಿ ೧೮೭೦ ರಿಂದ ೧೯೨೦ರ ವರೆಗಿನ ಆಧುನಿಕ ಸಾಹಿತ್ಯದ 'ಪ್ರಾರಂಭಘಟ್ಟ' ಎಂದು ಗುರುತಿಸುತ್ತಾರೆ.

ಹೀಗೆ ಸಾಹಿತ್ಯ ಘಟ್ಟಗಳನ್ನು ಗುರುತಿಸುವಲ್ಲಿ ನವೋದಯ ಪೂರ್ವ ಅಥವಾ ನವೋದಯ ಪ್ರಥಮ ಘಟ್ಟ ಎಂದು ಗುರುತಿಸುತ್ತಾರೆ. ಆಗಲೇ ಸಣ್ಣಕಥೆ ಕಾದಂಬರಿ ಪ್ರಕಾರಗಳು ಪ್ರಾರಂಭವಾದವು ಭಾರತಕ್ಕಾಗಲಿ, ಕನ್ನಡಕ್ಕಾಗಲಿ ಈ ತರದ ಕಥೆಗಳು. ಜಾತಕ ಕಥೆಗಳು ಪರಿಚಯವಿದ್ದಿತು. ಆದರೆ ಪಾಶ್ಚಾತ್ಯರಲ್ಲಿ ರೂಪ ತಾಳಿದ್ದ ವಿಶಿಷ್ಟರೂಪದ ಸಾಹಿತ್ಯವು ಭಾರತೀಯ ಸಂಪ್ರದಾಯದಲ್ಲಿರಲಿಲ್ಲ. ಹಾಗಾಗಿ ೧೯೧೮-೧೯ರ ವೇಳೆಗೆ ಅನುವಾದಗಳು, ಸ್ವತಂತ್ರ ರಚನೆಗಳು ಪ್ರಕಟಣೆಗೊಂಡವು. ಹೀಗೆ ಕಾದಂಬರಿ ರೂಪವು ಅನುವಾದಗಳ ಮೂಲಕ ಪರಿಚಯವಾಯಿತು. ಈ ಕಾಲದಲ್ಲಿ ಬಂಗಾಳಿಯಿಂದ, ಮರಾಠಿಯಿಂದ, ಇಂಗ್ಲೀಷ್‌ನಿಂದ, ಕನ್ನಡಕ್ಕೆ ಅನುವಾದಗಳಾದವು. ಬಂಕೀಮರ ''ದುರ್ಗೇಶ ನಂದಿನಿ''ಯನ್ನು ವೆಂಕಟಾಚಾರ್ಯರು ಅನುವಾದಿಸಿದರು. ೧೮೯೬ರಲ್ಲಿ ಗುಬ್ಬಿಮುರುಗಾರಾಧ್ಯರ ಸ್ವತಂತ್ರ ಕೃತಿ ಶೃಂಗಾರಚಾತುರ್ಯೋಲ್ಲಾಸಿನಿ ಪ್ರಕಟವಾಯಿತು. ೧೮೯೯ರಲ್ಲಿ ಗುಲ್ವಾಡಿ ವೆಂಕಟರಾಯರ 'ಇಂದಿರಾ ಬಾಯಿ' ಕಾದಂಬರಿ ಪ್ರಕಟವಾಯಿತು. ಇದು ಕನ್ನಡದಲ್ಲಿ ಮೊದಲನೆಯ ಸ್ವತಂತ್ರ ಸಾಮಾಜಿಕ ಕಾದಂಬರಿ ಇಲ್ಲಿ ಸಾಮಾಜಿಕ ಜೀವನ ಮತ್ತು ಅದರ ನೀತಿಗಳ ವಿಮರ್ಶೆ ಇದೆ. ೧೯೦೫ರಲ್ಲಿ ಬೋಳಾರ ಬಾಬುರಾಯ ಅವರು 'ವಾಗ್ದೇವಿ' ಎಂಬ ಕಾದಂಬರಿಯನ್ನು ಬರೆದರು. ಅದರಲ್ಲಿ ಆಸಕ್ತಿಯನ್ನುಂಟು ಮಾಡುವ ಹೊಸಪಾತ್ರಗಳ ಸೃಷ್ಟಿಯನ್ನು ಕಾಣುತ್ತೇವೆ. ಹಾಸ್ಯ, ಸಾಮಾಜಿಕ ವಿಮರ್ಶೆಯನ್ನು ಒಳಗೊಂಡಿದೆ. ಅದೇ ರೀತಿ ೧೯೧೫ರಲ್ಲಿ ಪ್ರಕಟವಾದ 'ಮಾಡಿದ್ದುಣ್ಣೋಮಹಾರಾಯ' ಕೃತಿಗೆ 'ಕಾದಂಬರಿ' ಎಂಬ ಮೈಲಿಗಲ್ಲನ್ನು ನಿರ್ಮಿಸಿದ ಕೀರ್ತಿಸಲ್ಲುತ್ತದೆ.

ಪುಟ್ಟಣ್ಣನವರ 'ಮಾಡಿದ್ದುಣ್ಣೋ ಮಹಾರಾಯ' ಕಾದಂಬರಿಯಲ್ಲಿ ಪ್ರಮುಖ ಅಂಶವೆಂದರೆ ಕೃತಿ ತನ್ನ ಜೀವನ ಶ್ರದ್ಧೆ' ಮನುಷ್ಯರ ಸ್ವಭಾವದಲ್ಲಿನ ನೈಜವಾದ ಆಸಕ್ತಿ, ಮನಸ್ಸಿನ ವ್ಯಾಪಾರವನ್ನು ಚಿತ್ರಿಸುವ ಪ್ರಯತ್ನ, ಪಾತ್ರ-ಪಾತ್ರಗಳ ಘರ್ಷಣೆಯಿಂದ ಕಥಾವಸ್ತುವನ್ನು ಮುಂದುವರಿಸುವ ತಂತ್ರ ಇವುಗಳಿಂದ ನಿಜವಾದ ಕಾದಂಬರಿಯಾಯಿತು ಎನ್ನುವುದು ಸ್ಪಷ್ಟ ಪಡಿಸುತ್ತದೆ.

ಜೀವನದಲ್ಲಿ ಒಳಿತು-ಕೆಡಕುಗಳ ಘರ್ಷಣೆಯನ್ನು ಗಂಭೀರವಾಗಿ ವಿಶ್ಲೇಷಿಸುವ ಕೃತಿ ಇದು ವೃತ್ತಾಂತ, ವರ್ಣನೆ, ಗಾಂಭೀರ್ಯ, ಹಾಸ್ಯ, ಎಲ್ಲಕ್ಕೂ ಹೊಂದಿ ಕೊಳ್ಳಬಲ್ಲ ಶೈಲಿ, ಮೊನಚಾದ ಖಚಿತ ನಿರೂಪಣೆ ಶೈಲಿ, ಮುಂದೆ ಸ್ವತಂತ್ರ ಕೃತಿಗಳ ರಚನೆಗೆ ನಾಂದಿಯಾಯಿತು. ಹೀಗೆ ಸಾಹಿತ್ಯದಲ್ಲಿ ವಸ್ತು ವಿಭಿನ್ನ ರೀತಿಯ ಆಯಾಮುಗಳಿಂದ ರಚನೆಗೊಂಡಿರುವುದನ್ನು ಗಮನಿಸಿದರೆ ೧೮೭೦-೧೯೨೦ರ ಕಾಲವನ್ನು ಪ್ರಯೋಗಗಳ ಕಾಲವಾಗಿದೆ ಎನ್ನುವುದು ಔಚಿತ್ಯಪೂರ್ಣವಾಗಿದೆ. ಈ ಅಂಶಗಳನ್ನು ಇತರ ಪ್ರಕಾರಗಳಾದ ಭಾವಗೀತೆ, ನಾಟಕಗಳಲ್ಲೂ ಕಾಣಬಹುದು. ಎಸ್.ಜಿ.ನರಸಿಂಹಚಾರ್ಯರು, ಜಯರಾಯಚಾರ್ಯರು, ಹಟ್ಟಿಯಂಗಡಿ ನಾರಾಯಣರಾಯ ಮೊದಲಾದವರ ಕವನಗಳಲ್ಲಿ ಹೊಸ ಹೊಸ ಭಾವನೆಗಳು, ಸರಳವಾದ ಭಾಷೆಯಲ್ಲಿ ಅಭಿವ್ಯಕ್ತಿ ಪಡೆದಿದ್ದವು. ಮೊದಲಿಗೆ ಸಾಹಿತ್ಯ ಪ್ರಕಾರಗಳು ಹೊಸದಾಗಿ ಹುಟ್ಟಿಕೊಂಡವು ಕಾವ್ಯ ಭಾವಗೀತದ ಆಕೃತಿಗಿಳಿಯಿತು. ನಾಟಕ ಹಳೆಯ ತಂತ್ರ ವಸ್ತುಗಳನ್ನು ಬಿಟ್ಟಿತು. ಕಾದಂಬರಿ, ಹರಟೆ, ದಿನಚರಿ, ಸಣ್ಣಕತೆ, ಪ್ರವಾಸ ಸಾಹಿತ್ಯ ಆತ್ಮ ಚರಿತ್ರೆ ಹೀಗೆ ಹೊಸ ಪ್ರಕಾರಗಳು ಉದಯಿಸಿದವು . ಈ ರೀತಿ ಬದಲಾವಣೆ ಆಗಲು ಮುಖ್ಯ ಪ್ರೇರಣೆ ಪಾಶ್ಚಾತ್ಯ ಪದ್ಧತಿಯ ಶಿಕ್ಷಣ ಹಾಗೂ ಇಂಗ್ಲೀಷ್ ಸಾಹಿತ್ಯದ ಅಭ್ಯಾಸಗಳು. ಇವು ನಮ್ಮ ಮನೋಧರ್ಮವನ್ನು ತಿದ್ದಲು. ಅಣಿಯಾದವು ಅಲ್ಲದೆ ವಿಜ್ಞಾನದ ಹೊಸ ಸಂಶೋಧನೆಗಳು, ರಾಜಕೀಯ ಅಸ್ವಸ್ಥತೆ ಇವೆಲ್ಲ ಅನಕ್ಷರಸ್ಥರಿಗೂ ತಿಳಿಯುವಂತೆ ಹೊಸ ಯುಗದ ಸೂಚನೆಯನ್ನು ಕೊಡ ಹತ್ತಿದವು. ಈ ರೀತಿ ಹೊಸತನ ಗಾಳಿ ಬೀಸತೊಡಗಿತು. ಪ್ರಾಚೀನ ಸಾಹಿತ್ಯಕ್ಕೆ ತೀವ್ರವಾದ ಪ್ರತಿಕ್ರಿಯೆಯನ್ನು ತೋರಿಸಿ ಆ ಪರಂಪರೆಯಿಂದ ಸಿಡಿದು ಒಂದು ಹೊಸ ಸಾಹಿತ್ಯ ಜನ್ಮತಾಳಿತು. ಈ ರೀತಿಯಲ್ಲಿ ಆರಂಭಕಾಲದ ಸಾಹಿತ್ಯ ಚಟುವಟಿಕೆಗಳನ್ನು ಗಮನಿಸಿದಾಗ ಆಧುನಿಕ ಸಾಹಿತ್ಯದ ಆರಂಭದ ಹೆಜ್ಜೆಗಳು ಮೂಡಿ ಬಂದಿರುವ ಸಂಗತಿ ಗೋಚರವಾಗುತ್ತದೆ. ಅದೇ ರೀತಿ ದಕ್ಷಿಣ ಭಾರತದ ಇತರ ಭಾಷೆಗಳಾದ ತಮಿಳು, ತೆಲುಗು, ಮಲಯಾಳಂ, ತುಳು ಸಾಹಿತ್ಯವನ್ನು ಗಮನಿಸಬಹುದಾಗಿದೆ. ತಮಿಳು ಸಾಹಿತ್ಯದಲ್ಲಿ ಆಧುನಿಕ ಸಾಹಿತ್ಯವನ್ನು ಆರಂಭಯುಗ, ಭಾರತೀಯುಗ ಮತ್ತು ಗಾಂಧಿಯುಗ ಎಂದು ಮೂರು ವಿಭಾಗಗಳನ್ನಾಗಿ ಗುರುತಿಸಿದ್ದಾರೆ.(ತಮಿಳು ಸಾಹಿತ್ಯ ಚರಿತ್ರೆ)

ಈ ಮೂರು ಕಾಲಗಳಲ್ಲಿಯೂ ರಾಜಕೀಯ ವಿಶೇಷ ಪ್ರಭಾವಯುತವಾದ ಶಕ್ತಿಯಾಗಿದೆ. ಆರಂಭಕಾಲ ಸಾಹಿತ್ಯದಲ್ಲಿ ಹಿಂದಿನ ಸಂಪ್ರದಾಯವನ್ನು ಉಳಿಸಿಕೊಂಡು ಬರಲಾಗಿದೆ. ನಂತರ ಮದ್ರಾಸ್ ವಿಶ್ವವಿದ್ಯಾನಿಲಯವು ಸ್ಥಾಪಿತವಾದಂದಿನಿಂದ ತಿಲಕರು ರಾಜಕೀಯ ಕ್ಷೇತ್ರಕ್ಕೆ ಕಾಲಿಡುವವರೆಗೆ ೧೯೧೬ ರವರೆಗೆ 'ಆರಂಭಯುಗ' ಎಂದು ಗುರುತಿಸಿದ್ದಾರೆ. ಈ ಕಾಲವನ್ನು 'ತಾಮಸಯುಗ' ಎಂದು ಕರೆದಿದ್ದಾರೆ. (ತಮಿಳು ಸಾಹಿತ್ಯ ಚರಿತ್ರೆಕಾರರು) (ಜಿ. ಎಸ್, ಶಿವರುದ್ರಪ್ಪ ಪುಟ-೨, ಸಾ. ಸಮೀಕ್ಷೆ). ಅಂದರೆ ಆ ಕಾಲದಲ್ಲಿ ಹೆಚ್ಚು ಸಾಹಿತ್ಯ ಸೃಷ್ಟಿಯಾಗಲಿಲ್ಲ. ರಚನೆಯಾದರೂ ಧರ್ಮ, ಮತದ ಪ್ರೇರಣೆ ಇರುವುದನ್ನು ಗುರುತಿಸಬಹುದು. ಈ ಕಾಲದಲ್ಲಿ ಜಾಪ್ನದ ಆರ್ ಮೋಗಂನಾವೆಲ್‌ರರ ರಾಮಾಯಣ, ಭಾರತ, ಪೆರಿಯಪುರಾಣಗಳನ್ನು ಸಂಕಲನ ಮಾಡಿದರು. ಇವರ ಸಮಕಾಲೀನರಾದ ಮಹಾವಿದ್ವಾನ್ ಶ್ರೀಮೀನಾಕ್ಷಿ ಸುಂದರಂ ಪಿಳ್ಳೆಯವರು, ಇವರು ಸರಳ ಶೈಲಿಯಲ್ಲಿ ಗ್ರಂಥಗಳನ್ನು ರಚಿಸಿದ್ದಾರೆ. ಆದರೆ ಅವುಗಳು ಪುರಾಣ, ಇತಿಹಾಸಗಳ ವಸ್ತುವನ್ನು ಒಳಗೊಂಡಿವೆ. ಆಧುನಿಕತೆಯ ಅಂಶಗಳು ಸಿಗುವುದಿಲ್ಲ. ತಮಿಳರಿಗೆ ಇಂಗ್ಲೀಷ್ ಶಿಕ್ಷಣದ ಪ್ರಭಾವ ಬೀರಿದ ಸಾಹಿತ್ಯದಲ್ಲಿ ಹೊಸತನ ಮೂಡಲು ಶುರುವಾಯಿತು. ೧೯ನೇ ಶತಮಾನದ ಕೊನೆಯಲ್ಲಿ ಕ್ರಿ.ಶ ೧೮೭೬ರಲ್ಲಿ ವೇದನಾಯಗಂ ಪಿಳ್ಳೆ ಎಂಬ ವಿದ್ವಾಂಸರು ಮೊದಲು ತಮಿಳರಿಗೆ 'ನಾವಲ್' ಸಾಹಿತ್ಯವನ್ನು ನೀಡಿದರು. ವೃತ್ತಿಯಲ್ಲಿ ನ್ಯಾಯಾಧಿಪತಿಯಾಗಿದ್ದವರು ಇಂಗ್ಲೀಷನ್ನು ಅರಿತವರು, ಪಾಶ್ಚಾತ್ಯ ಸಂಪರ್ಕವಿದ್ದವರು ಪಾಶ್ಚಾತ್ಯ ಸಾಹಿತ್ಯವನ್ನು ಅಭ್ಯಾಸಿಸಿದಾಗ ಅವರ ಅರಿವಿಗೆ ಬಂದದ್ದು ಆ ಭಾಷೆಯಲ್ಲಿ ಕಾದಂಬರಿ ಸಾಹಿತ್ಯ ಬೆಳೆದಿರುವುದು, ಅಲ್ಲಿನ ಓದುಗರು ಅದನ್ನು ಸಮಯ ಕಳೆಯುವುದಕ್ಕಾಗಿ ಹಲವರು ಓದಿ ಪ್ರಯೋಜನ ಹೊಂದುತ್ತಿರುವುದನ್ನು ಅರಿತರು. ಅದೇ ರೀತಿ ತಮ್ಮ ಭಾಷೆಯಲ್ಲಿನ ಜನರಿಗೆ ಓದುವ ಅವಕಾಶ ಪಡೆಯವಂತಾಗಬೇಕು ಎಂದು ಮನಗಂಡರು. ಹಾಗಾಗಿ ಪದ್ಯಗ್ರಂಥಗಳನ್ನು ಬರೆಯುತ್ತಿದ್ದವರು ಗದ್ಯ ಬರೆಯಲು ಪ್ರಾರಂಭಿಸಿದರು. ಪದ್ಯವನ್ನು ಎಲ್ಲರೂ ಓದುವುದಕ್ಕಾಗುವುದಿಲ್ಲ ಹಾಗೆಯೇ ಅನುಭವದ ಎಲ್ಲಾ ವಿಷಯಗಳನ್ನು ಅಭಿವ್ಯಕ್ತಿಸಲಾಗುವುದಿಲ್ಲವೆಂದು ಗದ್ಯದ ಮೂಲಕ ಅಭಿಪ್ರಾಯಗಳನ್ನು ತಿಳಿಯ ಪಡಿಸಬಹುದೆಂದು ಆಸೆಪಟ್ಟರು. ಕಥೆ ಹೇಳುವ - ಕೇಳುವ ಆಸೆ ಜನರಿಗೆ ಸಹಜವಾಗಿಯೇ ಇರುವುದರಿಂದ ಕಾದಂಬರಿಗಳ ಮೂಲಕ ತಿಳಿಯಪಡಿಸಲು ಪ್ರಯತ್ನ ಮಾಡಿದರು. ಪ್ರಯೋಗಕ್ಕೆ ಮುಂದಾದರು.

ಇದರ ಪರಿಣಾಮವಾಗಿ ''ಪ್ರತಾಪ ಮುದಲಿಯಾರ್ ಚರಿತ್ತಿರಮ್'' (೧೮೭೬) 'ಸುಗುಣಸುಂದರಿ' (೧೮೮೭) ಎಂಬ ಕಾದಂಬರಿಗಳನ್ನು ರಚಿಸಿದರು. ಅವುಗಳಲ್ಲಿ ಹಲವು ಬಗೆಯ ಮನುಷ್ಯ ಪಾತ್ರಗಳನ್ನು ಸೃಷ್ಟಿಸಿದರು. ಹಲವು ರೀತಿಯ ನೀತಿಗಳ ಪ್ರಚಾರ ಬೋಧನೆಗೆ ಅವಕಾಶವಾಯಿತು. ತಾವು ಪಡೆದ ಅನುಭವಗಳನ್ನು ಉಪಯೋಗಿಸಿಕೊಂಡು ಕುಟುಂಬ ಮತ್ತು ಸಮುದಾಯ ಜೀವನ ನೆಲೆಗಳಲ್ಲಿ ನುಡಿಚಿತ್ರ ರೂಪವಾಗಿ ಮಾಡಿತೋರಿಸಿದರು.

ತಮಿಳುನಾಡಿಗೆ ಹದಿನಾರನೇ ಶತಮಾನದಲ್ಲಿಯೇ ಅಚ್ಚುಯಂತ್ರಗಳ ಆಗಮನವಾಯಿತು. (ಗುಂಡಪ್ಪ ಎಲ್. ೧೯೮೦;ಪು.ಸ ೨೩೩) ಆದರೆ ಪಾದ್ರಿಗಳು ಮತ್ತು ಈಸ್ಟ್ ಇಂಡಿಯಾ ಕಂಪನಿಯವರು ಮಾತ್ರ ತಮ್ಮ ಮತಪ್ರಸಾರ ಆಡಳಿತಕ್ಕಾಗಿ ಉಪಯೋಗಿಸಿಕೊಳ್ಳುತ್ತಿದ್ದರು. ಆದರೆ ಸ್ಥಳೀಯರು ಅಚ್ಚು ಯಂತ್ರಗಳ ಉಪಯೋಗವನ್ನು ಪಡೆದಿದ್ದು ಹತ್ತೊಂಬತ್ತನೆ ಶತಮಾನದಲ್ಲಿ. ಆದುವರೆಗೆ ತಾಳೆಗರಿ ಮತ್ತು ಓಲೆಗಳಲ್ಲಿ ಇದ್ದಂತ ಗ್ರಂಥಗಳನ್ನು ಅಚ್ಚು ಮಾಡತೊಡಗಿದರು. ಹೊಸ ಗದ್ಯಶೈಲಿಯ ಗ್ರಂಥಗಳನ್ನು ಬರೆದು ಪ್ರಕಟಗೊಳಿಸಲು ಪ್ರಯತ್ನಿಸಿದರು. ಕ್ರೈಸ್ತರು, ಮುಸ್ಲಿಮರ ಮತಗ್ರಂಥಗಳನ್ನು ತಮಿಳು ಭಾಷೆಯಲ್ಲಿ ಬರೆದು ಪ್ರಚಾರ ಮಾಡುತ್ತಿದ್ದರು. ಸಹಜವಾಗಿಯೇ ಹಿಂದುಗಳು ತಮ್ಮ ಮತ ಕಾಪಾಡಿಕೊಳ್ಳುವುದಕ್ಕಾಗಿ ಗ್ರಂಥಗಳನ್ನು ಬರೆಯುವುದು ಅವಶ್ಯಕವಾಯಿತು. ಹೀಗೆ ಮತ ಪ್ರಸಾರಕ್ಕೆ ಅನುಕೂಲವಾದ ಅಚ್ಚುಯಂತ್ರಗಳ ಸಾಹಿತ್ಯ ಗ್ರಂಥಗಳನ್ನು ಪ್ರಕಟಪಡಿಸುವುದಕ್ಕೂ ಸಹಾಯವಾಯಿತು. ಪಾಶ್ಚಾತ್ಯ ವಿದ್ಯಾಭ್ಯಾಸ ಪದ್ಧತಿಯನ್ನನುಸರಿಸಿ ಈ ದೇಶದಲ್ಲಿ ವಿದ್ಯಾಶಾಲೆಗಳನ್ನು ತೆರೆಯಲಾಯಿತು. ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಪಾಠ ಪುಸ್ತಕಗಳ ಮೂಲಕ ತಮಿಳಿನಲ್ಲಿ ಗದ್ಯಶೈಲಿ ಬೆಳೆಯಿತು. ಪುಸ್ತಕಗಳನ್ನು ಪ್ರಕಟಿಸಲು ಸಾಧ್ಯವಾದುದರಿಂದ ಕಡಿಮೆ ಬೆಲೆಗೆ ಪುಸ್ತಕಗಳು ಸಿಗುವಂತಾದುವು ಇದರ ಪರಿಣಾಮವಾಗಿಓದುವವರ ಸಂಖ್ಯೆ ಹೆಚ್ಚುತ್ತಾ ಹೋಯಿತು. ಸಹಜವಾಗಿಯೇ ಗದ್ಯಕ್ಕೆ ಪ್ರಾಧಾನ್ಯತೆ ದೊರೆಯುವಂತಾಯಿತು. ಎಲ್ಲಾ ಕಾರಣಗಳಿಂದ ೧೯ನೇ ಶತಮಾನದ ಕೊನೆ ಮತ್ತು ೨೦ನೇ ಶತಮಾನದ ಆರಂಭ ಕಾಲದಲ್ಲಿ ಸಾಹಿತ್ಯ ಗ್ರಂಥಗಳು ರಚನೆಯಾದವು. ಇದರ ಪರಿಣಾಮವೆಂಬಂತೆ ಸಾಹಿತ್ಯ ಕ್ಷೇತ್ರದ ಏಳಿಗೆಗೆ ಪ್ರೋತ್ಸಾಹಕಾರಿಯಾದವು.

ತಮಿಳು ಭಾಷೆಯಲ್ಲಿ ಮೊದಲಿಗೆ ಆಧುನಿಕ ಸಾಹಿತ್ಯ ಚಟುವಟಿಕೆಗಳು ಭಾಷಾಂತರ ಮೂಲಕವಾಗಿಯೇ ರೂಪುತಳೆದಿರುವುದನ್ನು ಗುರುತಿಸಬಹುದು. ತಾಂಡವರಾಯ ಮೊದಲಿಯಾರ್ ಎನ್ನುವರು ೧೮೨೪ರಲ್ಲಿ 'ಪಂಚತಂತ್ರ' ಕಥೆಯನ್ನು ಮಹಾರಾಷ್ಟ್ರ ಭಾಷೆಯಿಂದ ತಮಿಳಿಗೆ ಭಾಷಾಂತರ ಮಾಡಿದ್ದಾರೆ. ತಮಿಳುನಾಡಿನಲ್ಲಿ ಬಳಕೆಯಲ್ಲಿದ್ದ ಕೆಲವು ಕಥೆಗಳನ್ನು ಒಂದುಗೂಡಿಸಿ 'ಕಥಾಮಂಜರಿ' ಎಂಬ ಹೆಸರಿನಿಂದ (೧೮೨೬) ಒಂದು ಗ್ರಂಥವನ್ನು ಬರೆದು ಪ್ರಕಟಿಸಿದರು. ಈ ಕಾಲಘಟ್ಟದಲ್ಲಿ ರಚನೆಯಾಗಿದ್ದ ವಿದ್ಯಾಸಂಘವು (ಕಲ್ವಿಚ್ಚಜಾಮ್) ತಮಿಳು ಸಾಹಿತ್ಯದ ಎಲ್ಲಾ ಪ್ರಕ್ರಿಯೆಗಳಿಗೆ ಪ್ರಮುಖ ಕಾರಣವಾಯಿತು.

ಈ ರೀತಿ ಆಧುನಿಕ ತಮಿಳು ಸಾಹಿತ್ಯವು ಪರಿಪುಷ್ಟಿಗೊಳ್ಳಲು ಜೀವನ ಚರಿತ್ರೆ, ನಾಟಕ, ಕಥೆ, ಕಾದಂಬರಿ ಮೊದಲಾದ ಪ್ರಕಾರಗಳ ಭಾಷಾಂತರಗಳು ಕಾರಣವಾದವು. ವಿವಿಧ ಭಾಷೆಗಳ ಅನೇಕ ಗ್ರಂಥಗಳನ್ನು ತಮಿಳಿಗೆ ಭಾಷಾಂತರ ಮಾಡಿಕೊಳ್ಳಲಾಗಿದೆ. ''ಚತುರ್ವೇದಗಳು, ರಾಮಾಯಣ, ಭಾರತ, ಖುರಾನ್, ಬೈಬಲ್, ಸತ್ಯಾರ್ಥಪ್ರಕಾಶ, ರಾಮಕೃಷ್ಣಾಮೃತ ಪ್ಲೆಟೋವಿನ 'ರಿಪಬ್ಲಿಕ್' ರೂಸೋವಿನ 'ಸೋಷಿಯಲ್ ಕಾಂಟ್ರಾಕ್ಟ್' ಮಿಕ್ಸರ ಹಾಗೂ ಅಲೆಕ್ಸಾಂಡರ್ ಡ್ಯೂಮಾಸ್, ಮೌಪಾಸಂಟ್ ಮೊದಲಾದವರ ಕಾದಂಬರಿಗಳು, ಬಂಕಿಮ್‌ಚಂದ್ರಚಟರ್ಜಿ, ಶರತ್‌ಚ್ಛಂದ್ರ, ರಮೇಶಚಂದ್ರದತ್ತ ಮೊದಲಾದವರ ಬಂಗಾಳ ಕಾದಂಬರಿಗಳು, ರವೀಂದ್ರನಾಥರ ಕಾದಂಬರಿ ಸಣ್ಣಕತೆ ಆತ್ಮ ಚರಿತ್ರೆಗಳು, ಮಹಾತ್ಮಗಾಂಧಿ, ಆತ್ಮಕತೆ, ಪ್ರೇಮಚಂದ್ರರ ಹಿಂದಿ ಕತೆಗಳು, ಖಂಡೇಕರ್ ಅವರ ಕೆಲವು ಮರಾಠಿ ಕಾದಂಬರಿಗಳು, ತಿಲಕರ ಗೀತರಹಸ್ಯದ ಭಾಗಗಳು, ಮನ್ಷಿಯವರ ಗುಜರಾತಿ ಕಾದಂಬರಿಗಳು ತಮಿಳಿಗೆ ಭಾಷಾಂತರವಾಗಿವೆ ''(ಶಿವರುದ್ರಪ್ಪ ಜಿ. ಎಸ್.(ಸಂ) ಪುಟ-೩೦೫, ೧೯೭೦). ಈ ರೀತಿ ಇತರ ಭಾಷೆಗಳ ಅನುವಾದಗಳ ಮೂಲಕ ತಮಿಳಿನಲ್ಲಿ ಆಧುನಿಕ ಗದ್ಯ ಪ್ರಕಾರ ಬೆಳೆಯಲು ಸಹಾಯವಾಯಿತು. ಕಾದಂಬರಿ ಪ್ರಕಾರ ಅನುವಾದಗಳ ಮೂಲಕ ಪರಿಚಯವಾಗುವುದರೊಂದಿಗೆ ಸ್ವತಂತ್ರ ಕೃತಿ ನಿರ್ಮಾಣಮಾಡಲು ಸಹಾಯಕವಾಯಿತು. ಆದ್ದರಿಂದ ಈ ಕಾಲಘಟ್ಟವನ್ನು 'ಆರಂಭಘಟ್ಟ' ಎಂದು ಗುರುತಿಸಕೊಳ್ಳಲಾಗಿದೆ.

ದಕ್ಷಿಣ ಭಾರತದ ಭಾಷೆಗಳಲ್ಲಿ ಆರಂಭಕಾಲದ ಸಾಹಿತ್ಯ ಚಟುವಟಿಕೆಗಳನ್ನು ತಿಳಿಯುವುದು. ಮೊದಲಿಗೆ ಮಲಯಾಳಂ ಸಾಹಿತ್ಯ ಕೃತಿಗಳಿಗೆ ಸಂಬಂಧಿಸಿದಂತೆ ಗಮನಹರಿಸಿದಾಗ ನಮಗೆ ಹದಿಮೂರನೇ ಶತಮಾನದ ಕೃತಿಗಳು ಲಭಿಸುತ್ತವೆ. ಇದರಿಂದ ಮಲಯಾಳಂ ಭಾಷೆಯಲ್ಲಿ ಸಾಹಿತ್ಯ ರೂಪಗಳು ಇತರ ಭಾಷೆಗಳಂತೆ ಪದ್ಯರೂಪದಲ್ಲಿದ್ದವು ಎನ್ನುವುದು ತಿಳಿದು ಬರುತ್ತದೆ. ಅವು ಹೆಚ್ಚಾಗಿ ತಮಿಳು ಮಾದರಿಯನ್ನು ಅನುಸರಿಸಿಕೊಂಡು ಬಂದಿದ್ದುವು ನೀಲಿ ಸಂದೇಶಂ, ಕೃಷ್ಣಗಾಥೆ, ತುಂಜನ್ ಅವರ ಕಿಳಿಪಾಟ್ಟುಗಳ್ ಕುಂಞ, ನಂಬಿಯಾರ್‍ರ ತುಳ್ಳಲ್ ಪಾಟ್ಟುಗಳ ಮುಂತಾದವು. ಇವುಗಳಲ್ಲೆಲ್ಲಾ ಶೃಂಗಾರ ರಸವೇ ಪ್ರಧಾನವಾಗಿರುವಂತದ್ದು, ಸಾಮಾಜಿಕ ಕಾಳಜಿ, ಚಿಂತನೆಗಳು ಕಂಡು ಬರುವುದಿಲ್ಲ. ಕಾವ್ಯದಲ್ಲಿ ಸಾಮಾಜಿಕ ಕಾಳಜಿಯ ವಿಚಾರ ಅಭಿವ್ಯಕ್ತಗೊಳಿಸಲು ಸಾಧ್ಯವಾಗದೇ ಇದ್ದಾಗ ಗದ್ಯರೂಪದ ಉಗಮ ಹಾಗೂ ಬೆಳವಣಿಗೆ ಅನಿವಾರ್ಯವಾಯಿತು. ಆದರೆ ಪ್ರಪಂಚದ ಇತರ ಕಡೆಗಳಂತೆ ಇಲ್ಲಿಯೂ ಕಥಾರೂಪ ಆರಂಭಕಾಲದಲ್ಲೇ ಪ್ರಚಲಿತವಿತ್ತು. ಕನ್ನಡದಲ್ಲಿ ಪಂಚತಂತ್ರಕಥೆಗಳು ಇದ್ದಂತೆ ಮಲಯಾಳಂನಲ್ಲಿ ಬೇತಾಳ ಕತೆಗಳು, ನೀತಿಕಥೆಗಳು, ಯಕ್ಷಕತೆಗಳು, ಪ್ರಚಲಿತವಾಗಿದ್ದವು. ಇಂತಹ ಸಂದರ್ಭದಲ್ಲಿ ಪಾಶ್ಚಾತ್ಯರ ಸಂಪರ್ಕದಿಂದ ಅರೆಬಿಯನ್ ಕತೆಗಳು ಕೂಡ ಪರಿಚಿತವಾದವು. ಸಾಹಿತ್ಯ ಪ್ರಪಂಚದಲ್ಲಿ ಕೇಳುಗ ಸಂಸ್ಕೃತಿ ಪ್ರಚಲಿತವಿರುವುದನ್ನು ಕಾಣುತ್ತೇವೆ. ಹಾಗಾಗಿ ಗದ್ಯರೂಪದ ಸಾಹಿತ್ಯ ಪ್ರಕಾರಗಳು ಮತ್ತಷ್ಟು ಉತ್ತೇಜನ ನೀಡಿದವು. ಇದರಿಂದಾಗಿ ಕಾದಂಬರಿ, ನಾಟಕ, ಸಣ್ಣಕಥೆಗಳಿಗೆ ಉತ್ತಮ ಪ್ರೋತ್ಸಾಹ ಲಭಿಸಿತು. ಇದರ ಫಲವಾಗಿ ಲೇಖಕರು ಸಾಮಾಜಿಕ ಸುಧಾರಣೆಯ ಚುಕ್ಕಾಣಿಯನ್ನು ಕೈಗೆತ್ತಿಕೊಳ್ಳಬೇಕಾಯಿತು. ಆ ಸಂದರ್ಭದಲ್ಲಿ ಇತರ ಭಾಗಗಳಲ್ಲಿ ನಡೆದ ಸಮಾಜಸುಧಾರಣೆಯ ಪ್ರಕ್ರಿಯೆಗಳು ಕೇರಳಿಯರ ಮೇಲೆ ಪ್ರಭಾವ ಬೀರಿದವು. ಸಾಮಾಜಿಕ ಅಸಮಾನತೆಯ ವಿರುದ್ಧ ಹೋರಾಟ ನಡೆದ ಇತರ ಭಾಗಗಳಿಗಿಂತ ಕೇರಳದಲ್ಲಿ ವಿಶಿಷ್ಟರೂಪ ಪಡೆದಿತ್ತು. ಕ್ರೈಸ್ತಮಿಷನರಿಗಳ ಆಗಮನ, ಮುದ್ರಣಾಲಯಗಳ ಸ್ಥಾಪನೆ ಮೊದಲಾದವು ಸಾಹಿತ್ಯ ರಚನೆಗೆ ಹೆಚ್ಚಿನ ಪ್ರೋತ್ಸಾಹ ಒದಗಿಸಿದವು. ಅದಕ್ಕೂ ಮಿಗಿಲಾಗಿ ಜಾತಿಯ ಹೆಸರಿನಲ್ಲಿ ಆಚರಿಸಲಾಗುತ್ತಿದ್ದ ಸಾಮಾಜಿಕ ಅಸಮಾನತೆ ಇದಕ್ಕೆ ವಸ್ತುವಾಯಿತು. ಮತ ಪ್ರಚಾರಕ್ಕೆಂದು ಬಂದ ಮಿಷನರಿಗಳು ಇಲ್ಲಿಯ ಸ್ಥಳೀಯ ಭಾಷೆಗಳ ನಿಘಂಟುಗಳನ್ನು, ವ್ಯಾಕರಣ ಗ್ರಂಥಗಳನ್ನು ಬರೆದರು. ಶಾಲೆಗಳನ್ನು ತೆರೆದು, ಮುದ್ರಣಾಲಯಗಳನ್ನು ಸ್ಥಾಪನೆ ಮಾಡಿದರು.

''ಕಾದಂಬರಿ ಪ್ರಕಾರದ ಬೆಳವಣಿಗೆಗೆ ಸಿ. ಎಂ. ಎಸ್. ಮುದ್ರಣಾಲಯ ಪ್ರಮುಖ ಮೈಲಿಗಲ್ಲು. ಮುಂದಿನ ವರ್ಷಗಳಲ್ಲಿ ಕಾದಂಬರಿಯ ಪ್ರಕಟಣೆಗೆ ಈ ಕೇಂದ್ರವು ಸ್ಥಳವಾಯಿತು. (ಡಿಸೋಜಾ ಪುಟ-೪೫, ೨೦೦೧) ಇಲ್ಲಿಂದ ಹಲವಾರು ಕಾದಂಬರಿಗಳು ಪ್ರಕಟಗೊಂಡವು ಎಂಬುದು ಗಮನಾರ್ಹ''. ಬ್ರಿಟಷರ ಆಗಮನವು ಭಾರತಕ್ಕೆ ಮಹತ್ವವಾದ ಪರಿಣಾಮವನ್ನು ಉಂಟುಮಾಡಿದೆ. ಕೇರಳದಲ್ಲಿಯೂ. ಅದು ಪರಿಣಾಮಕಾರಿಯಾಗಿ ನಡೆದಿದೆ. ಇಂಗ್ಲೀಷ್ ಶಿಕ್ಷಣ ಹಾಗೂ ಅವರ ಭಾಷೆಯ ಮೇಲಿನ ಹಿಡಿತದಿಂದ ಆಂಗ್ಲ ಸಾಹಿತ್ಯವನ್ನು ಕೇರಳಿಯರಿಗೆ ಪರಿಚಯಿಸಲು ಅನುಕೂಲವಾಯಿತು. ಇದರಿಂದ ಕೇರಳಿಯರಲ್ಲಿ ಹೊಸ ವಿಚಾರಗಳು ಪ್ರಕಾರಗಳು ಪರಿಚಯವಾದವು. ಆಂಗ್ಲಸಾಹಿತ್ಯವು ಅತಿಯಾದ ಜನ ಮನ್ನಣೆ ಪಡೆಯಿತು. ಇದರ ಪ್ರಭಾವದಿಂದ ಆರಂಭಕಾಲದ ಕಾದಂಬರಿಗಳಲ್ಲಿ ನೇರ ಅನುವಾದ,ರೂಪಾಂತರಗಳನ್ನು ಮಾಡಿಕೊಂಡರು. ಹೀಗೆ ಮಲಯಾಳಂ ಸಾಹಿತ್ಯದಲ್ಲಿ ಕಾದಂಬರಿ ಪ್ರಕಾರದ ಬೆಳವಣಿಗೆಗೆ ಆಂಗ್ಲಸಾಹಿತ್ಯದ ಪ್ರಭಾವ ಬೀರಿರುವುದನ್ನು ಗಮನಿಸಬಹುದು ಹೀಗೆ ಬೆಳೆದು ಬಂದ ''ಕಾದಂಬರಿಯನ್ನು ಅಂದಿನಿಂದ ಇಂದಿನವರೆಗಿನ, ಸಾಹಿತ್ಯವನ್ನು ಅವುಗಳ ಗುಣಲಕ್ಷಣಗಳ ಆಧಾರದಲ್ಲಿ, ಕಾಲಘಟ್ಟಕ್ಕೆ ಹೊಂದಿಕೊಂಡು ಮೂರು ವಿಭಾಗಗಳಾಗಿ ವಿಂಗಡಿಸಬಹುದಾಗಿದೆ. ೧೮೫೪ ರಿಂದ ೧೯೪೦ರ ತನಕದ ಕಾಲದ ಕಾದಂಬರಿಗಳು ಮೊದಲಘಟ್ಟದಲ್ಲಿಯೂ, ೧೯೪೦ರಿಂದ ೧೯೬೩ರ ತನಕದ ಕಾದಂಬರಿಗಳು ಎರಡನೆ ಘಟ್ಟದಲ್ಲೂ ಅನಂತರದ ಕಾದಂಬರಿಗಳು ಮೂರನೇ ಘಟ್ಟದಲ್ಲೂ ಸೇರುತ್ತವೆ''. (ಡಿಸೋಜ ಪು-೪೭, ೨೦೦೧) ಹಾಗಾಗಿ ಅಧ್ಯಯನದ ಅನುಕೂಲಕ್ಕಾಗಿ ೧೮೪೦ ರಿಂದ ೧೯೨೦ರ ತನಕವೆಂದು ಬದಲಿಸಿ ಈ ಕಾಲಘಟ್ಟದ ಕಾದಂಬರಿಗಳನ್ನು ಅಧ್ಯಯನ ಮಾಡಲಾಗಿದೆ. ಮಲಯಾಳಂ ಸಾಹಿತ್ಯ ಚರಿತ್ರೆಯಲ್ಲಿ ಮೊದಲಘಟ್ಟವನ್ನು ಅನುವಾದ ಅಥವಾ ರೂಪಾಂತರ ಕಾಲಘಟ್ಟವೆಂದು ಗುರುತಿಸುತ್ತಾರೆ. ಅಂದರೆ ''ಇಂಗ್ಲೆಂಡ್ ಮತ್ತು ಯುರೋಪ್ ದೇಶದ ಅನೇಕ ಕಾದಂಬರಿಕಾರರ ಗ್ರಂಥಗಳು ಬಂಗಾಳಿಯಿಂದ ಟಾಗೊರ್, ಶರಶ್ಚಂದ್ರಚಟರ್ಜಿ, ಬಂಕಿಮ್‌ಚಂದ್ರ, ಆರ್.ಸಿ. ದತ್ತ ಮೊದಲಾದವರ ಕಾದಂಬರಿಗಳು ಮಲೆಯಾಳಕ್ಕೆ ಅನುವಾದಗೊಂಡಿವೆ'' ಕನ್ನಡದಲ್ಲಿ ಗಮನಿಸಿದಂತೆ ಮಲ್ಳಯಾಳಂ ಸಾಹಿತ್ಯದಲ್ಲೂ ಸ್ವತಂತ್ರ ಕಾದಂಬರಿ ರಚನೆಗಳಿಗಿಂತ ಮುಂಚಿತವಾಗಿ ಅನುವಾದಗಳಿಂದಲೇ ಹೊಸಪ್ರಕಾರಗಳು ಉದಯಿಸಿರುವುದು ಕಂಡುಬರುತ್ತದೆ.

ಅಲ್ಲಿನ ವಿದ್ವಾಂಸರು ಮೊದಲ ಕಾದಂಬರಿಯನ್ನು ಗುರುತಿಸುವಲ್ಲಿ ಚರ್ಚೆಗಳು ನಡೆದಿವೆ. ಕೆಲವರು ಅಪ್ಪುನೆಡುಂಗಾಡಿಯವರ 'ಕುಂದಲತಾ'ವೇ ಮಲೆಯಾಳಂನ ಮೊದಲ ಕಾದಂಬರಿ ಎಂದಿದ್ದಾರೆ. ಇದರ ಕಾಲ (೧೮೮೭) 'ಆಳ್‌ಮಾರಾಟಂ ೧೮೮೦ ಇದು 'ಕಾಮಡಿ ಆಫ್ ಎರರ್ಸ್' ನಾಟಕದ ಅನುವಾದವಾಗಿದೆ ಎಂದು ಇದನ್ನು ಮೊದಲ ಕಾದಂಬರಿ ಎಂದು ಗುರುತಿಸುತ್ತಾರೆ. ಅದೇ ರೀತಿ ಕನ್ನಡದಲ್ಲಿ ಅನುವಾದಗೊಂಡ ಜಾನ್ ಬನಿಯನ್‌ನ Pilgrims progress ಮಲಯಾಳಕ್ಕೂ ೧೮೪೦ ರಲ್ಲಿ ಅನುವಾದಗೊಂಡಿದೆ. ಆದರೆ ಕಾದಂಬರಿಯಲ್ಲಿನ ಪ್ರಸ್ತುತ ಪ್ರಕಾರದ ಲಕ್ಷಣಗಳು ಇವುಗಳಲ್ಲಿ ಕಂಡು ಬರದೆ ಇದ್ದುದರಿಂದ ಇದು ಒಂದು ಪ್ರಯತ್ನವೆಂದು ಹೇಳಲಾಗಿದೆ. ಆದರೆ ಈ ಕಾಲಘಟ್ಟದಲ್ಲಿ ಮಲಯಾಳಂ ಕಾದಂಬರಿ ಕ್ಷೇತ್ರಕ್ಕೆ ಪ್ರವೇಶ ಗೈದ ವ್ಯಕ್ತಿ ''ಓ ಚಂದುಮೆನೋನ್ ಅವರ ಎರಡು ಕಾದಂಬರಿಗಳು ಇಂದುಲೇಖಾ ಮತ್ತು ಶಾರದ (ಅಪೂರ್ಣ) ಇವೆ ಮೊತ್ತ ಮೊದಲನೆಯ ಕಾದಂಬರಿಗಳು. ಆದರೆ ಈ ಭಾಷೆಯಲ್ಲಿ ಆ ಕಾಲಘಟ್ಟದಲ್ಲಿ ಐತಿಹಾಸಿಕ ಕಾದಂಬರಿಗಳು ರಚನೆಯಾಗಿಲ್ಲ'' (ಡಿಸೋಜ ;೨೦೦೦; ಪುಟ-೫೧೮). ಮುಂದೆ ಚರಿತ್ರೆಗೆ ಸಂಬಂಧಪಟ್ಟ ಕಾದಂಬರಿಗಳು ರಚನೆಯಾಗಿವೆ. ಮೊದಲಘಟ್ಟದ ಕಾದಂಬರಿಗಳಲ್ಲಿ ವಿಶಿಷ್ಟವಾದುದು ೧೮೯೭ರಲ್ಲಿ ಜೊಸೆಫ್ ಮುಳಿಯಿಲ್ ಎಂಬುವರು ಬರೆದ 'ಸುಕುಮಾರಿ', ಬಾಷಲ್ ಮಿಶನ್‌ನ ಚಟುವಟಿಕೆ ಇವರ ಹಾಗೂ ತತ್ಫಲವಾಗಿ ಕ್ರೈಸ್ತ ಧರ್ಮ ಸ್ವೀಕರಿಸಿದ ವ್ಯಕ್ತಿಗಳ ಬಗೆಗಿನ ನಿರೂಪಣೆಯೇ ಕಾದಂಬರಿಯ ವಸ್ತು. ಹೀಗೆ ಕೇರಳದ ಭಾಷೆಯಾದ ಮಲಯಾಳಂ ಸಾಹಿತ್ಯದಲ್ಲಿ ಆಧುನಿಕತೆ ಮೈಗೂಡಿಸಿಕೊಳ್ಳುವಲ್ಲಿ ಮಾಡದ ಪ್ರಯತ್ನಗಳು, ಪ್ರಭಾವಗಳು, ಸಾಹಿತ್ಯ ಕೃತಿಗಳ ನಿರ್ಮಾಣವನ್ನು ತಿಳಿದುಕೊಳ್ಳಬಹುದಾಗಿದೆ.

ತೆಲುಗು ಸಾಹಿತ್ಯದಲ್ಲಿ ಆರಂಭಘಟ್ಟದಲ್ಲಿ ನಡೆದ ಸಾಹಿತ್ಯ ಚಟುವಟಿಕೆಗಳನ್ನು ಗಮನಿಸುವುದು ಅಗತ್ಯ. ಹೆಚ್ಚಾಗಿ ತೆಲುಗು ವಿದ್ವಾಂಸರಿಗೆ ಸಂಪ್ರದಾಯ ಶೈಲಿಯನ್ನು ಕಾವ್ಯಗಳ ಬಗೆಗೆ ಹೆಚ್ಚು ಒಲವು ಇದ್ದಿತು. ಆ ಕಾಲಘಟ್ಟದ ಕಾವ್ಯಭಾಷೆ ಸಂಸ್ಕೃತ ಸಮಾಸಗಳಿಂದ ಕೂಡಿರುತ್ತಿದ್ದವು.

೧೯ನೇ ಶತಮಾನದಲ್ಲಿ ಇಂಗ್ಲೀಷ್ ಶಿಕ್ಷಣ ಪ್ರಭಾವದಿಂದಾಗಿ ವಿದೇಶಿ ವಿದ್ವಾಂಸರು ಆಗ ದೇಶಿ ಭಾಷೆ ಸಾಹಿತ್ಯಗಳಿಗೆ ಹೊಸ ರೂಪ ನೀಡ ತೊಡಗಿದರು. ಅವರಲ್ಲಿ ಸಿ.ಪಿ.ಬ್ರೌನ್ . ಎ.ಡಿ. ಕ್ಯಾಂಪ್‌ಬೆಲ್ ಮುಂತಾದ ವಿದ್ವಾಂಸರು. ಇವರು ವೇಮನನ ಪದ್ಯಗಳನ್ನು ಸಂಗ್ರಹಿಸಿ ಪ್ರಕಟಿಸಿದರು. ಪಾಶ್ಚಾತ್ಯರಿಗೆ ವೇಮನನನ್ನು ಪರಿಚಯಿಸಿದರು. ಹಾಗೆಯೇ ಜನಪದ ಗೀತೆಗಳು ಹಾಗೂ ಲಾವಣಿಗಳನ್ನು ಸಂಗ್ರಹಿಸಿ. ಜನಪದ ಸಾಹಿತ್ಯಕ್ಕೂ ಸೇವೆಸಲ್ಲಿಸಿದರು. ೧೯ನೇಯ ಶತಮಾನದ ಮಧ್ಯದಲ್ಲಿ ಚಿನ್ನಯ ಸೂರಿ ಎಂಬವನು ವ್ಯಾಕರಣವನ್ನು ಬರೆದನು. ತೆಲುಗಿನಲ್ಲಿ ವ್ಯಾಕರಣಗ್ರಂಥವಿಲ್ಲದ ಕೊರತೆಯನ್ನು ನೀಗಿಸಿದರು. ಮುಂದೆ ಇತರ ಅನೇಕ ಲೇಖಕರು ಪ್ರಾಚೀನ ಸಾಹಿತ್ಯಕ್ಕೆ ವಿವಿಧ ರೀತಿಯ ಆಯಾಮವನ್ನು ನೀಡುತ್ತಾ ಹೊಸ ಸಾಹಿತ್ಯ ಪ್ರಕಾರಕ್ಕೆ ನಾಂದಿ ಹಾಕಿದರು. ಹತ್ತೊಂಬತ್ತನೇ ಶತಮಾನದ ಉತ್ತರಾರ್ಧದಲ್ಲಿ ಕಂದಕೂರಿ ವೀರೇಶಲಿಂಗಮ್ ಪಂತುಲು ಅವರು ತೆಲುಗಿನಲ್ಲಿ ಆಧುನಿಕ ಸಾಹಿತ್ಯ ಕ್ರಾಂತಿ ನಡೆಸಿದ್ದರು. ೧೮೫೦ರಲ್ಲಿ ಪಾಶ್ಚಾತ್ಯ ಮಿಷನರಿಗಳು ತೆಲುಗು ಭಾಷೆಯ ಪದಕೋಶ, ವ್ಯಾಕರಣಗಳ ರಚನೆಯಲ್ಲಿ ಹೊಸ ರೀತಿಯ ಸರಳ ಮಾರ್ಗಗಳನ್ನು ರೂಪಿಸಿದುದು ಇವರ ಸೇವೆಯು ಮುಖ್ಯವಾದುದು. ಪದ್ಯಗಳನ್ನು ಕಾವ್ಯಗಳನ್ನು ಬರೆಯುತ್ತಿದ್ದರೂ ಅವುಗಳಿಂದಾಗುವ ಪ್ರಯೋಜನವನ್ನು ಅರಿತು ಇವರು ಗದ್ಯದಲ್ಲಿ ಬರೆಯಲು ಪ್ರಾರಂಬಿಸಿದರು. ಸಾಹಿತ್ಯ ಸಾಮಾನ್ಯ ಜನರಿಗೂ ತಲುಪಬೇಕೆಂಬ ಸತ್ಯವನ್ನು ಅರಿತು. ತಮ್ಮ ಶೈಲಿಯನ್ನು ಬದಲಾಯಿಸಿದರು. ಆ ನಿಟ್ಟಿನಲ್ಲಿ ಸಮಾಜಸೇವೆ ಹಾಗೂ ಸಾಹಿತ್ಯ ಸೇವೆಗಳನ್ನುಕೈಗೊಂಡರು. ಸ್ತ್ರೀ ಪುನರ್ವಿವಾಹ, ಮುಂತಾದ ಸಮಸ್ಯೆಗಳಿಗೆ ಸಾಹಿತ್ಯವನ್ನು ಸಾಧನವನ್ನಾಗಿ ಬಳಸಿದರು. ಈ ನಿಟ್ಟಿನವರು ರಚಿಸಿದ ಗ್ರಂಥಗಳು ಸತ್ಯವತೀ ಚರಿತ್ರೆ, ಚಂದ್ರಮತಿ, ಸತ್ಯಸಂಜೀವಿ ಕಾದಂಬರಿಗಳು.

ದುರಾಚಾರ ತೊಲಗಬೇಕಾದರೆ ವಿಜ್ಞಾನದ ಪರಿಚಯ ಅವಶ್ಯಕವೆಂಬ ದೃಷ್ಟಿಯಿಂದ ಪಂತುಲು ಅನೇಕ ಗ್ರಂಥಗಳನ್ನು ಬರೆದು ಅನುವಾದಗಳು, ಸ್ವತಂತ್ರ ನಾಟಕಗಳು, ಸ್ವತಂತ್ರ ಕಾದಂಬರಿಗಳು, ಪ್ರಹಸನಗಳು , ಆತ್ಮಕಥೆಗಳು, ಜೀವನಚರಿತ್ರೆಗಳು, ವೈವಿಧ್ಯಪೂರ್ಣ ರಚನೆಯನ್ನು ಮಾಡಿದರು.

ತೆಲುಗಿನಲ್ಲಿ ಸಾಹಿತ್ಯ ಚಟುವಟಿಕೆಗಳು ಕೈಗೊಳ್ಳಲು ಅನೇಕ ಸಂಸ್ಥೆಗಳು ಸ್ಥಾಪನೆ ಯಾದವು, 'ವಿಜ್ಞಾನ ಚಂದ್ರಿಕಾ ಮಂಡಳಿ', ಆಂದ್ರ ಪ್ರಚಾರಣೆ ಗ್ರಂಥಮಾಲಾ, 'ಆಂದ್ರಸಾಹಿತ್ಯ ಪರಿಷತ್' ಸಾಹಿತ್ಯ ಸಮಿತಿ, 'ನವ್ಯಸಾಹಿತ್ಯ ಪರಿಷತ್' ಹೈದರಾಬಾಡಿನ 'ಆಂದ್ರ ಸಾಹಿತ್ಯ ಪರಿಷತ್' ಈ ಎಲ್ಲಾ ಸಂಸ್ಥೆಯ ಮೂಲಕ ಆಂದ್ರದಲ್ಲಿ ಸಾಹಿತ್ಯ ಚಟುವಟಿಕೆಯನ್ನು ಕೈಗೊಂಡರು. ಎಲ್ಲಾ ಕ್ಷೇತ್ರದ ಗ್ರಂಥಗಳು ಭಾಷಿಕವಾಗಿ, ಕಾವ್ಯಗಳ ಸಂಗ್ರಹರೂಪದಲ್ಲಿ, ಭಾರತೀಯ ಭಾಷೆಗಳಿಂದ ಕೃತಿಗಳ ಅನುವಾದ ಮಾಡುವ ಚಟುವಟಿಕೆನ್ನು ಕೈಗೊಂಡವು. ಪತ್ರಿಕೆಗಳು ತೆಲುಗಿನಲ್ಲಿ ಆಧುನಿಕ ಸಾಹಿತ್ಯವು ಮಾಡಿ ಬರುವುದಕ್ಕೆ ಕಾರಣವಾಯಿತು. ಆ ಕಾಲದಲ್ಲಿ ಪತ್ರಿಕೆಗಳ ಮೂಲಕ ಏರ್ಪಡಿಸುತ್ತಿದ್ದ ಸ್ಪರ್ಧಾತ್ಮಕ ಶೈಲಿಯು ಕಾದಂಬರಿ ಪ್ರಕಾರಕ್ಕೆ ಪ್ರಮುಖ ಕಾರಣವಾಯಿತು ಎನ್ನು ಬಹುದು. ಹಾಗಾಗಿ ಬಹುಬೇಗ ತೆಲುಗಿನಲ್ಲಿ ಕಾದಂಬರಿ ರೂಪ ಜನಪ್ರಿಯತೆಯನ್ನು ಪಡೆಯಲು ಸಾಧ್ಯವಾಯಿತು. ಮೊದಲು ಅನುವಾದಗಳ ಮೂಲಕ ತೆಲುಗಿನಲ್ಲಿ ಕಾದಂಬರಿ ಪ್ರವೇಶಿಸಿತು. ೧೭ನೆ ಶತಮಾನದ ಸಂಧರ್ಭದಲ್ಲಿ ಭಾರತೀಯ ಕಥಾ ಸಾಹಿತ್ಯವು ಪೌರಾಣಿಕ ಕಥೆಗಳನ್ನು ಒಳಗೊಂಡಿತ್ತು. ಆದರೆ ಆಧುನಿಕ ಪ್ರಕಾರದ ಕಾದಂಬರಿಯು ಪಾಶ್ಚಾತ್ಯರ ಪ್ರಭಾವವಾದ ಮೇಲೆ ಪ್ರಾರಂಭವಾಯಿತು. ಇಂಗ್ಲೀಷ್ ಮತ್ತು ಬಂಗಾಳಿಯಿಂದ ಅನುವಾದಗೊಂಡವು. ಬಂಗಾಳದ ಬಂಕಿಮ್ ಚಂದ್ರರ ಕಾದಂಬರಿಗಳು, ಆನಂದಮಠ, ಕಪಾಲಕುಂಡಲ, 'ಪ್ರಪುಲ್ಲೆ' ಮುಂತಾದವು ಅನುವಾದಗೊಂಡವು. ಚಿಂತಾಮಣಿ ಸಂಸ್ಥೆಯವರ ಬಹುಮಾನ ಪ್ರೋತ್ಸಾಹದಿಂದ ಅನೇಕ ಸ್ವತಂತ್ರ ಕಾದಂಬರಿಗಳು ಉದಯಿಸಲು ಕಾರಣವಾಯಿತು. ನರಹರಿ ಗೋಪಾಲಕೃಷ್ಣಮ ಶೆಟ್ಟಿ ಅವರು ಬರೆದಶ ಶ್ರೀರಂಗರಾಜಚರಿತ್ರೆ ಪಂತುಲು ಅವರ ರಾಜಶೇಖರಚರಿತ್ರಮು, ಲಕ್ಷ್ಮೀನರಸಿಂಹ ಅವರ ರಾಮಚಂದ್ರ ವಿಜಯಂ, ಅಹಲ್ಯಬಾಯಿ, ಹೇಮಲತಾ, ಕರ್ಪೂರ ಮಂಜರಿ ಖಂಡವಳ್ಳಿ ಮುಂತಾದವು ಬೆಳಕಿಗೆ ಬಂದುವು, ನಂತರ ಪತ್ತೇದಾರಿ ಕಾದಂಬರಿಗಳು ತೆಲುಗಿನಲ್ಲಿ ಹೇರಳವಾಗಿ ಬಂದವು. ಹೀಗೆ ಒಟ್ಟಾರೆಯಾಗಿ ತೆಲುಗಿನ ಆಧುನಿಕ ಕಾಲಘಟ್ಟವು ಒಂದು ಪರಿವರ್ತನೆಯ ಕಾಲ ಎಂದು ಕರೆಯಬಹುದು.

ಅಧ್ಯಾಯ-೩

ಕಾದಂಬರಿ ಪ್ರಕಾರದ ಹುಟ್ಟು ಮತ್ತು ಬೆಳವಣಿಗೆ

೩.೧) ವಿದೇಶಿ ಸಂದರ್ಭದಲ್ಲಿ ಕಾದಂಬರಿ

೩.೨) ಭಾರತೀಯ ಸಂದರ್ಭದಲ್ಲಿ ಕಾದಂಬರಿ

೩.೩) ದಕ್ಷಿಣ ಭಾರತದ ಸಂದರ್ಭದಲ್ಲಿ ಕಾದಂಬರಿ

ಅಧ್ಯಾಯ-೨

ಕಾದಂಬರಿ ಪ್ರಕಾರದ ಹುಟ್ಟು ಮತ್ತು ಬೆಳವಣಿಗೆ

ಮನುಷ್ಯ ತನ್ನ ಭಾವನೆಗಳನ್ನು ಅಭಿವ್ಯಕ್ತಿಸಲು ಭಾಷೆಯನ್ನು ಕಂಡುಕೊಂಡ, ಅದನ್ನು ಕಲಾತ್ಮಕವಾಗಿ ಬಳಸಿಕೊಂಡು ಸಾಹಿತ್ಯ ಸೃಷ್ಟಿಸಿದ ಆರಂಭದಲ್ಲಿ ಅನಕ್ಷರಸ್ಥ ಮಾನವರ ಅಭಿವ್ಯಕ್ತಿ ಹಾಡಿನ ರೂಪದಲ್ಲಿತ್ತು. ತಮ್ಮ ಬದುಕನ್ನೇ ಆ ಹಾಡಿನಲ್ಲಿ ವ್ಯಕ್ತಗೊಳಿಸುತ್ತಿದ್ದರು. ಅದರಲ್ಲಿ ಕಲ್ಪನೆಗಳಿಗೆ, ಕತೆಗಳ ರೂಪ ಕೊಟ್ಟರು. ಇವುಗಳಲ್ಲಿ ಜನಪದರ ಬದುಕಿನ ಚಿತ್ರಣವನ್ನು ಮೂಡಿಸಿರುವುದನ್ನು ಕಾಣಬಹುದು. ಹೀಗೆ ಮಾನವ ತನ್ನ ಬದುಕಿನ ಅನುಭವಗಳನ್ನು ಅಭಿವ್ಯಕ್ತಿಸಲು ಸಾಹಿತ್ಯವನ್ನು. ಸೃಷ್ಟಿ ಮಾಡಿಕೊಂಡಿರುವುದನ್ನು ಕಾಣಬಹುದು. ಹೀಗೆ ಅನುಭವಗಳನ್ನು ಅಭಿವ್ಯಕ್ತಿಸುವಲ್ಲಿ ಭಾಷೆ, ಲಿಪಿಯ ಆವಿಷ್ಕಾರ ನಡೆಯುತ್ತಾ ಬಂದಿದೆ. ಇದರಿಂದ ಮಾನವನ ಇತಿಹಾಸ, ಚರಿತ್ರೆ ದಾಖಲಾಯಿತು. ಆಯಾ ಕಾಲಧರ್ಮಕ್ಕನುಗುಣವಾಗಿ ಸಾಹಿತ್ಯ ರೂಪಾಂತರಗಳನ್ನು ಪಡೆಯುತ್ತಾ ಬಂದಿರುವುದನ್ನು ಗುರುತಿಸಬಹುದು. ಈ ರೀತಿಯ ಆವಿಷ್ಕಾರದೊಂದಿಗೆ ಹೊಸ ಪ್ರಕಾರಗಳಲ್ಲಿ ಸಾಹಿತ್ಯವನ್ನು ಶ್ರೀಮಂತಗೊಳಿಸಿದವು. ಅಂತಹ ಪ್ರಕಾರಗಳಲ್ಲಿ ಕಾದಂಬರಿಯೂ ಒಂದು ಸಾಹಿತ್ಯ ಚರಿತ್ರೆಯಲ್ಲಿ ಹೊಸದಾಗಿ ಕಾಣಿಸಿಕೊಂಡ 'ಕಾದಂಬರಿ' ಪ್ರಕಾರವು ವೈಶಿಷ್ಟ್ಯತೆಯಿಂದ ಕೂಡಿರುವಂತಾದ್ದಾಗಿದೆ. ಕಾಲದ ಅನುಗುಣಕ್ಕೆ ತಕ್ಕಂತೆ ರೂಪುಗೊಂಡ ಕಾದಂಬರಿ ಪ್ರಕಾರ ಇಂದು ಅತ್ಯಂತ ಜನಪ್ರಿಯತೆಯನ್ನು ಪಡೆದುಕೊಂಡಿದೆ. ಅತ್ಯಂತ ಪ್ರಮುಖ ಮಾಧ್ಯಮವಾಗಿ ಬೆಳೆದು ಬಂದ ಪ್ರಕಾರಕ್ಕೆ ಆದರದೇ ಆದ ಇತಿಹಾಸವನ್ನು ಒಳಗೊಂಡಿದೆ.

ಇಂಗ್ಲೀಷ್ ಭಾಷೆಯಲ್ಲಿ 'ನಾವಲ್' ಎಂಬುದು 'ನೋವಸ್' ಎಂಬ ಲ್ಯಾಟಿನ್ ಪದದಿಂದ ಬಂದಿದೆ. 'ನೋವಸ್' ಎಂದರೆ 'ಹೊಸದು' ಎಂದರ್ಥ. ಬ್ರಿಟಾನಿಕಾ ವಿಶ್ವಕೋಶದಲ್ಲಿ ನಾವೆಲ್ಲಾ ಎನ್ನುವ ಪದದ ಬಗ್ಗೆ ಈ ರೀತಿ ಉಲ್ಲೇಖವಿದೆ.

"The word novel it self is ultimately derevid from the latin 'Novels' meaning newvia, the Italion word for short story which trended to mean not only an original as opposed to a traditional story but also one that was pretendly atleast of recent occurance" When the word was adopted in english it kept some of its quality : Novel could mean new as well as a short prose fiction" until the 18^{th} century when its present meaning finally established"ಎಂದು ತಿಳಿಸುತ್ತದೆ (Ekrom Desoja 2001ಪುಟ-5)

'Fiction' ಎಂಬುದು ಇಂಗ್ಲೀಷಿನ 'ನಾವೆಲ್' ಎಂಬ ಪದಕ್ಕಿರುವ ಅದೇ ಅರ್ಥದ ಮತ್ತೊಂದು ಪರ್ಯಾಯ ಪದ. ಭಾರತೀಯ ಭಾಷೆಗಳಲ್ಲಿ 'Novel' ಎಂಬುದಕ್ಕೆ ಅನೇಕ ಸಂವಾದಿ ಪದಗಳಿವೆ. ಹಿಂದಿಯಲ್ಲಿ 'ಉಪನ್ಯಾಸ' ಎಂದು, 'ನಾವೆಲ್' ಎಂದು ತಮಿಳು ಭಾಷೆಯಲ್ಲಿ ಕರೆಯುತ್ತಾರೆ. ಆದರೆ ಮರಾಠಿ, ಗುಜರಾತಿ, ಕನ್ನಡ ಭಾಷೆಗಳಲ್ಲಿ 'ಕಾದಂಬರಿ' ಎಂದೇ ಕರೆಯುತ್ತಾರೆ. ಕನ್ನಡದಲ್ಲಿ 'Novel' ಎಂಬಪದಕ್ಕೆ ಸಮಾನಾರ್ಥದಲ್ಲಿ 'ಕಾದಂಬರಿ' ಎಂಬ ಪದ ಬಳಸುತ್ತೇವೆ. ತೆಲುಗು ಭಾಷೆಯಲ್ಲಿ 'ನವಲ' ಎಂದು ಮಲಯಾಳಂ ಭಾಷೆಯಲ್ಲಿ 'ನಾವೆಲ್' ಎಂದು ಕರೆಯುತ್ತಾರೆ. ಆದರೆ ನಾವೆಲ್‌ನ್ನು ಒಳಗೊಂಡ ಇಂಗ್ಲಿಷ್‌ನ 'Fiction' ಪದಕ್ಕೆ ತತ್ಸಮ ವಾಗಿ ಕನ್ನಡದಲ್ಲಿ 'ಕಲ್ಪನೆ' ಕಲ್ಪಿತಕಥೆ ಎನ್ನುವ ಅರ್ಥವಿದೆ.

ಕನ್ನಡದಲ್ಲಿ 'ಕಾದಂಬರಿ' ಎಂಬ ಹೆಸರು ಬಂದಿದ್ದು ಬಾಣನ ಸಂಸ್ಕೃತ ಕೃತಿ 'ಕಾದಂಬರಿ'ಯಿಂದಲೇ ಎನ್ನುವುದು ಅನೇಕರ ಅಭಿಪ್ರಾಯ.

ಕಾದಂಬರಿಯಲ್ಲಿ ನಾವೆಲ್ ಲಕ್ಷಣಗಳಿರುವುದರಿಂದ ಇದೇ ಹೆಸರಿನಿಂದ 'ನಾವೆಲ್' ಪ್ರಕಾರಕ್ಕೆ ಕನ್ನಡದಲ್ಲಿ ಸಂವಾದಿ ಪದ 'ಕಾದಂಬರಿ' ಎಂದು ಕರೆದಿರಬಹುದಾಗಿದೆ. ಕನ್ನಡಕ್ಕಿಂತ ಪೂರ್ವದಲ್ಲಿ ಮರಾಠಿ ಭಾಷೆಯಲ್ಲಿ ಕಾದಂಬರಿ ಸಾಹಿತ್ಯ ಪ್ರಕಾರಕ್ಕೆ 'ಕಾದಂಬರಿ' ಎಂದು ಕರೆದದ್ದುಂಟು. ಕ್ರಿ.ಶ ೧೮೨೭ರಲ್ಲಿ ಮುಂಬಯಿ ಸರಕಾರ ಪ್ರಕಟಿಸಿದ 'ಮರಾಠಿ ಭಾಷೆ ಜಾಕೋಶ' ಎಂಬ ಮರಾಠಿ ಭಾಷೆಯಕೋಶದಲ್ಲಿ ಕಾದಂಬರಿಗೆ 'ಕಲ್ಪಿತಕಥೆ' ಎಂಬಂರ್ಥವನ್ನು ಕೊಡಲಾಗಿದೆ. ಮುಂದೆ ಕ್ರಿ.ಶ ೧೮೫೪ರ ಅಕ್ಟೋಬರ ಸಂಚಿಕೆಯಲ್ಲಿ 'ಚಂದ್ರಿಕಾ' ಎಂಬ ಪತ್ರಿಕೆಯು 'ನೀತಿಪರ ಕಾದಂಬರಿ' ಎಂಬ ಶಿರೋನಾಮೆಯಿಂದ ಒಂದು ಧಾರವಾಹಿಯಾಗಿ ಪ್ರಕಟಗೊಂಡಿತ್ತು. ಕನ್ನಡದಲ್ಲಿ ತಮ್ಮ ಕಲ್ಪಿತ ಕೃತಿಗೆ 'ಕಾದಂಬರಿ' ಎಂದು ಪ್ರಪ್ರಥಮಬಾರಿಗೆ ಕರೆದವರೆಂದರೆ ಲಕ್ಷ್ಮಣಭೀಮರಾವ ಗದಗಕರ. ಕ್ರಿ.ಶ ೧೮೯೨ ರಲ್ಲಿ ರಚಿಸಿದ 'ಸೂರ್ಯಕಾಂತ' ಕೃತಿಗೆ ಇವರು 'ಕನ್ನಡ ಹೊಸ ಕಾದಂಬರಿ' ಎಂದು ಕರೆದುಕೊಂಡಿದ್ದಾರೆ. ಅವರೇ ಪೀಠಿಕಾಭಾಗದಲ್ಲಿ ''ಜನಗಲ್ಲಿ ಓದುವ ಅಭಿರುಚಿ ಹುಟ್ಟದ ಹೊರತು ಯಾವ ಭಾಷೆಯೂ ಉತ್ತಮ ಸ್ಥಿತಿಯಲ್ಲಿ ಬರಲಾರದು. ಇಂಥ ಅಭಿರುಚಿಯು ಹುಟ್ಟಬೇಕಾದರೆ. ಕಾದಂಬರಿಗೆ ಇತಿಹಾಸ, ನಾಟಕ ಮೊದಲಾದ ಸಾಮಾಗ್ರಿಗಳು ಅವಶ್ಯಕವಾಗಿ ಬೇಕಾಗುತ್ತವೆ. ಈ ಕೊರತೆಯನ್ನು ನೀಗಿಸಲೆಂದೇ ಈ ಚಿಕ್ಕ ಕಾದಂಬರಿಯನ್ನು ಬರೆದಿದ್ದೇನೆ'' ಎಂದು ಹೇಳುತ್ತಾರೆ (ಬೆಳಗಲಿ ದು. ನಿಂ, ೨೦೦೦; ಪುಟ-೭)

ಕಾದಂಬರಿಯ ರಚನೆಯ ಉದ್ದೇಶವು ಭಾರತೀಯ ಸಂಸ್ಕೃತಿಯು ಕಳೆದುಕೊಂಡಿದ್ದ ಪ್ರತಿಷ್ಠೆಯನ್ನು ಪುನಃ ಸಂಪಾದಿಸಬೇಕಾಗಿತ್ತು. ಭಾರತೀಯ ಚಾರಿತ್ರಿಕ ಕಾದಂಬರಿಕಾರರು ಭಾರತೀಯರ ರಾಷ್ಟ್ರಭಾವನೆಯನ್ನು ಪುನರುಜ್ಜೀವನಗೊಳಿಸುವ ಸಲುವಾಗಿ ತನ್ನ ಕಾದಂಬರಿಗಳನ್ನು ಉಪಯೋಗಿಸಲು ಇಚ್ಛಿಸಿದರೆಂದು ತಿಳಿಯಲಾಗುತ್ತದೆ. ಬಂಕಿಮ್‌ಚಂದ್ರ ಚಟ್ಟೋಪಾಧ್ಯಾಯರು, ಲಾಖಲ್‌ದಾಸ್‌ಬ್ಯಾನರ್ಜಿ, ಹರಿನಾರಾಯಣ ಆಪ್ಟೆ , ಮುಂತಾದ ಲೇಖಕರನ್ನು ಉದಾಹರಿಸಬಹುದು. ಬಿ.ವೆಂಕಟಾಚಾರ್ಯರು, ಕೆರೂರು ವಾಸುದೇವಾಚಾರ್ಯರು, ಗಳಗನಾಥರು, ಪಂತುಲು, ''ಭಾರತದ ಗತವೈಭವ'' ಚಿತ್ರಿಸಲು ತಮ್ಮ ಕಾದಂಬರಿಗಳನ್ನು ಉದ್ದೇಶಪೂರ್ವಕವಾಗಿಯೇ ಉಪಯೋಗಿಸಿದರು. ಸ್ಥಳೀಯ ಚರಿತ್ರೆಯ ಘಟನಾವಳಿಗಳನ್ನು ಕಾದಂಬರಿಕರಿಸಲಾಯಿತು.

ಈ ರೀತಿ ರಚಿತವಾದಂತ ಕಾದಂಬರಿಗಳು ಜೀವನದ ಬಗೆಗಿನ ಧಾರ್ಮಿಕತೆಯ ದೃಷ್ಟಿಯ ಸಮಗ್ರ ದೃಷ್ಟಿಯಾಗಿದ್ದವು. ಪ್ರಭಾವಗಳಲ್ಲಿ ಅವು ಯಾವುದೇ ವಿಶಿಷ್ಟವರ್ಗಕ್ಕೆ ಮೀಸಲಾಗಿಲ್ಲ. ಭಾರತೀಯ ಧಾರ್ಮಿಕ ಆಚಾರ ಪದ್ಧತಿಗಳು ಮೂಲತಃ ''ಹಿಂದೂ'' ಆಗಿದ್ದವು. ''ಹತ್ತೊಂಬತ್ತನೇ ಶತಮಾನದ ಕೊನೆಯ ಮತ್ತು ಇಪ್ಪತ್ತನೇ ಶತಮಾನದ ಪ್ರಾರಂಭ ದಶಕಗಳ ಚಾರಿತ್ರಿಕ ಕಾದಂಬರಿಗಳು ಆ ಬಗೆಯ ಪೂರ್ಣದೃಷ್ಟಿ ನೀಡುತ್ತವೆ '' (ಕೃಷ್ಣಮೂರ್ತಿ ಎಂ.ಜಿ.೨೦೦೦; ಪುಟ-೧೯) ಹೀಗೆ ಚಾರಿತ್ರಿಕ ಕಾದಂಬರಿಗಳಲ್ಲದೆ ಸಾಮಾಜಿಕ ಕಾದಂಬರಿಕಾರರು ಸಹ ಸಮಾಜದ ಕೆಲವು ದೋಷಗಳ ಬಗ್ಗೆ ಅಸಮಾಧಾನವನ್ನು ವ್ಯಕ್ತಪಡಿಸಲು ತಮ್ಮ ಕಾದಂಬರಿಗಳನ್ನು ಉಪಯೋಗಿಸಿಕೊಂಡರು ಅದರಲ್ಲಿ ಹಿಂದೂ ಸಮಾಜಕ್ಕೆ ವಿಧವೆಯರ ಸ್ಥಾನ ಮಾನದ ಬಗ್ಗೆ ಬರೆದರು. ಸ್ತ್ರೀಯರ ಜೀವನ, ನಂಬಿಕೆ, ಆದರ್ಶ ಮತ್ತು ಅವರನ್ನು ಸುಧಾರಣೆಯ ನೆಲೆಗೆ ತರುವಲ್ಲಿ ಪ್ರಯತ್ನಿಸುವಂತ ಕಾದಂಬರಿಗಳು ರಚಿತವಾದವು. ಎಂ. ಎಸ್. ಪುಟ್ಟಣ್ಣನವರು ಮಾಡಿದ್ದುಣ್ಣೊ ಮಹಾರಾಯ, ವೀರೇಶಲಿಂಗಂ ಪಂತುಲು ಅವರ 'ಚಂದ್ರಮತಿ' 'ಸತ್ಯವತೀ ಚಾರಿತ್ರೆ', ತಮಿಳು ಭಾಷೆಯಲ್ಲಿಯ 'ಕಮಲಮ್ಮಾಳ್' ಮಲಯಾಳಂ ಭಾಷೆಯಲ್ಲಿನ -'ಇಂದುಲೇಖಾ' ಇಂತಹ ಕಾದಂಬರಿಗಳು ಸಮಾಜದ ಕಳಕಳಿಯ ಭಾಗವಾಗಿ ರಚನೆಯಾದಂತವುಗಳಾಗಿವೆ.

ಕಾದಂಬರಿ ಎಂದರೇನು? ಎನ್ನುವುದನ್ನು ತಿಳಿಯುವುದು ತುಂಬಾ ಕಷ್ಟಕರವಾದ ವಿಷಯ. ಕಾದಂಬರಿ ಅತ್ಯಂತ ಸ್ವತಂತ್ರವಾದ, ಸ್ವಚ್ಛಂದವಾದ ನಿರ್ಮಾಣದಿಂದ ಕೂಡಿದ ಸಾಹಿತ್ಯ ಪ್ರಕಾರ. ಕುವೆಂಪು ಅವರು ಕಾದಂಬರಿಯನ್ನು 'ಕರತಲರಂಗಭೂಮಿ' ಎಂದು ಕರೆದಿರುವುದು ಔಚಿತ್ಯ ಪೂರ್ಣವಾಗಿದೆ. ಕಾದಂಬರಿ ಎಂದರೆ ಘಟನೆಗಳು ಮತ್ತು ಕ್ರಿಯೆಗಳೊಡನೆ ಅನುಭವಿಸಿದ, ಕೈಗೊಂಡ ಕಾರ್ಯಗಳು, ಸಂಗತಿಗಳು, ಇವುಗಳು ಜನರ ಜೀವನದಲ್ಲಿ ನಡೆಯುತ್ತವೆ. ಇವು ಕಾದಂಬರಿಯ ಪಾತ್ರಗಳಾಗುತ್ತವೆ.

ಅವುಗಳ ಮೂಲಕ ಸಂಭಾಷಣೆ, ಶೈಲಿ, ಜೀವನದ ಬಗೆಗಿನ ಒಂದು ನಿಶ್ಚಿತ ದೃಷ್ಟಿ, ಬದುಕಿನ ಕೆಲವು ಸಮಸ್ಯೆಗಳು ಅವಶ್ಯಕವಾಗಿ ನಿರೂಪಿಸಲ್ಪಟ್ಟಿರುತ್ತದೆ. ಒಂದು ರೀತಿಯಿಂದ ಜಾನಪದ ಸಾಹಿತ್ಯದಂತೆ, ಸಾಮಾನ್ಯ ಜನರ ಆಶೋತ್ತರಗಳನ್ನು ಅಭಿರುಚಿಗಳನ್ನು ಸಂಸ್ಕೃತಿಯ ಮಟ್ಟವನ್ನು ವಿವರವಾಗಿ ಪ್ರತಿಬಿಂಬಿಸುವ ಮಾಧ್ಯಮವಾಗಿದೆ. ಕಾದಂಬರಿಗೆ ವಿಶಿಷ್ಟ ನಿಯಮಗಳಿರುವುದಿಲ್ಲ. ಇನ್ನೂ ಪರಿಪೂರ್ಣತೆಯನ್ನು, ಬೆಳವಣಿಗೆಯನ್ನು ಪಡೆಯುತ್ತಲಿದೆ. ಏಕೆಂದರೆ ಒಬ್ಬ ಲೇಖಕನದೇ ಕೃತಿಯಾಗಿರುತ್ತದೆ. ಹಾಗಾಗಿ ಶೈಲಿ ಹಾಗೂ ಅವಿಷ್ಕಾರಗಳ ವೈಶಿಷ್ಟ್ಯತೆ ನಡೆಯುತ್ತಲಿರುತ್ತದೆ. ಕಾದಂಬರಿ ಸಮಕಾಲಿನ ಜೀವನಕ್ಕೆ ತೀರ ಯೋಗ್ಯವಾದ ರೂಪವಾಗಿದೆ ಎಂದು ಗುರುತಿಸಲಾಗಿದೆ. ಆದರೆ ನಾವು ತಿಳಿದಿರುವ ಇಂದಿನ ಕಾದಂಬರಿ ಸ್ವರೂಪ. ಇಂಗ್ಲೀಷ್ ಭಾಷೆಯಲ್ಲಿ ೧೮ನೇಯ ಶತಮಾನದಲ್ಲಿ ತಲೆದೋರಿತು. ಆದರೆ ಆ ಅವಧಿಯಲ್ಲಿ ಸಂಸ್ಕೃತ ಸಾಹಿತ್ಯದಲ್ಲಿ ಕಥಾನಕಗಳು ಕಾಣಿಸಿಕೊಂಡಿವೆ. ಸಮಗ್ರವಾದ ಕಥಾವಸ್ತು, ಕವಿ ಸಮಯ, ಅಲಂಕಾರಗಳು, ವರ್ಣನೆಗಳು, ವೀರ, ರಸ, ಶೃಂಗಾರಗಳ ಪ್ರಾಧಾನ್ಯ, ದೇವ, ದಾನವರನ್ನು ಒಳಗೊಂಡ ಅಲೌಕಿಕ ಪಾತ್ರಸೃಷ್ಟಿ, ವಾಸ್ತವತೆಗಿಂತ ಅದ್ಭುತಗಳನ್ನು ಚಿತ್ರಿಸುವ ಸನ್ನಿವೇಶಗಳು ಇವುಗಳೇ ಗದ್ಯ, ರೂಪದ ಪ್ರಧಾನವಾದ ಲಕ್ಷಣಗಳಾಗಿದ್ದವು. ಆದರೆ ಪಾಶ್ಚಾತ್ಯರ ಪ್ರಭಾವದಿಂದ ಸಾಹಿತ್ಯಕ್ಷೇತ್ರದಲ್ಲಿ ನವೀನ ಪ್ರಕಾರಗಳ ಉಗಮವಾಯಿತು. ಅವುಗಳಲ್ಲಿ ಕಾದಂಬರಿಯೂ ಒಂದು. ಈ ಪ್ರಕಾರದ ಉಗಮಕ್ಕೆ ಆ ಕಾಲದ ಸಾಮಾಜಿಕ, ರಾಜಕೀಯ, ಹಿನ್ನೆಲೆಗಳು ಮುಖ್ಯವಾಗುತ್ತವೆ. ೧೮ ಮತ್ತು ೧೯ನೇ ಶತಮಾನದಲ್ಲಿ ಕೈಗಾರಿಕಾ ಕ್ಷೇತ್ರದ ಬೆಳವಣಿಗೆಯಿಂದ ಆ ಕಾಲದಲ್ಲಿ ಮದ್ಯಮವರ್ಗ ಸೃಷ್ಟಿಯಾಗಿತ್ತು. ಹಾಗಾಗಿಯೇ ಓದಬಹುದಾದ ನೌಕರಿಯಲ್ಲಿರುವ ಜನರು ಬಿಡುವಿನ ವೇಳೆಯಲ್ಲಿ ಮನರಂಜನೆಗಾಗಿ ಕಾದಂಬರಿಗಳನ್ನು ಓದಲು ಪ್ರಾರಂಭಿಸಿದರು. ಇದರಿಂದಾಗಿ ಕಾದಂಬರಿಯ ಕಥಾನಕಗಳು ಮನರಂಜನೆಯ ಮಾಧ್ಯಮವಾಗಿ ಬಳಕೆಗೆ ಬಂದವು. ಇಂತಹ ಕಥೆಗಳು ಅಲ್ಲದಿದ್ದರೂ ಆಯಾ ಪ್ರಾದೇಶಿಕ ಸಾಹಿತ್ಯಗಳಲ್ಲಿ ಕಥೆಗಳನ್ನು ಗದ್ಯರೂಪದಲ್ಲಿ ಕೊಡಬಹುದೆಂದು ತೋಚಿತು. ನಮ್ಮಲ್ಲಿಯ ಕಥೆಗಳನ್ನು ಕಾದಂಬರಿ ರೂಪದಲ್ಲಿ ಕೊಟ್ಟರೆ, ಇಂಗ್ಲೀಷ್ ಕಲಿತವರೇ ಅಲ್ಲದೆ, ಆಯಾ ಸ್ಥಳೀಯ ಭಾಷೆಗಳನ್ನು ಬಲ್ಲವರು, ಅದ್ಭುತ, ರಮ್ಯ ಘಟನೆಗಳಿಗೆ ಗತಕಾಲದ ಐತಿಹಾಸಿಕ ಚಿತ್ರಣಗಳನ್ನೇ ಮರುಸೃಷ್ಟಿಸುವುದು.

ಅವುಗಳೊಂದಿಗೆ ಅಲೌಕಿಕ ಸನ್ನಿವೇಶಗಳನ್ನು ತರುವುದಾಗಿತ್ತು. ಕಾರಣ ಆ ಕಾಲದಲ್ಲಿ ಅದ್ಭುತ, ರಮ್ಯ ಶೃಂಗಾರ ಪೂರ್ಣವಾದ ರಂಜನೆಗೆ ಓದುಗರು ಆಸಕ್ತಿ ಹೊಂದಿರುವ ಪರಂಪರೆಯೇ ಇತ್ತು. ಈ ಹಿನ್ನೆಲೆಯಲ್ಲಿ ನೋಡಿದಾಗ ಕನ್ನಡದಲ್ಲಿ ಗಳಗನಾಥರ ಕಾದಂಬರಿಗಳು, ವೆಂಕಟಾಚಾರ್ಯರು, ಮುರುಗಾರಾಧ್ಯರು, ಕಾದಂಬರಿಗಳು, ಗದಗಕರ ಸೂರ್ಯನಾರಾಯಣರ 'ಸೂರ್ಯಕಾಂತ', ಕೆಂಪುನಾರಾಯಣನ ಮುದ್ರಾಮಂಜೂಷ, ತಮಿಳಿನಲ್ಲಿ ವೇದನಾಯಗಂ ಪಿಳ್ಳೆಯವರ ಪ್ರತಾಪಮುದಲಿಯಾರ್, ಹೀಗೆ ತೆಲುಗು, ಮಲಯಾಳಂ ಸಾಹಿತ್ಯದಲ್ಲಿ ಮೊದಲಿಗೆ ಅದ್ಭುತ ರಮ್ಯ ಕಥಾನಕಗಳ ಮೂಲಕ ಗದ್ಯರೂಪ ಕಾದಂಬರಿಗೆ ಪಾದಾರ್ಪಣೆ ಮಾಡಿದೆ.

ಇದಕ್ಕೆ ಹೊಂದಿಕೊಳ್ಳುವಂತೆ ಪ್ರಯೋಗಾವಸ್ಥೆ ಎನ್ನಬಹುದಾದ ವಿವಿಧ ರೂಪದ ಕಾದಂಬರಿಗಳು ೧೯ನೇ ಶತಮಾನದಲ್ಲಿ ರೂಪುಗೊಂಡವು. ಒಂದು ಕಡೆ ಇಂಗ್ಲೀಷ್‌ನಿಂದ ಅನುವಾದಗೊಂಡ ಕಾದಂಬರಿಗಳು, ಮತ್ತೊಂದು ಕಡೆ ರಮ್ಯಲೋಕದ ಸ್ವಕಲ್ಪಿತ ಕಥೆಗಳು, ಹಾಗೆಯೇ ಐತಿಹಾಸಿಕ ಹಿನ್ನೆಲೆಯಲ್ಲಿ ವರ್ತಮಾನ ಘಟನೆಗಳನ್ನು ಚಿತ್ರಿಸುವ ಕಾದಂಬರಿಗಳು ಕಾಣಿಸಿಕೊಂಡವು. ಪಾಶ್ಚಾತ್ಯರಲ್ಲಿ ನವೋದಯದ 'ಮಾನವತಾಪಂಥ'ವೇ ಕೇಂದ್ರದಲ್ಲಿದೆ ಈ ಎಲ್ಲ ಚಿಂತನೆಗೆ ತೀರ್ಮಾನಕ್ಕೆ ಮಾನವನೇ ಕೇಂದ್ರವಾಗಿದ್ದಾನೆ. ಆದಕ್ಕಾಗಿ ಮಾನವನ ಇಹದ ಬದುಕು, ವಾಸ್ತವ ಮುಖ್ಯ, ಅದರಾಚೆ ಇರುವ ಲೋಕ ಮುಖ್ಯವಲ್ಲ. ಇರುವ ಜೀವನವನ್ನು ಸುಂದರಗೋಳಿಸುವುದು, ನೆಮ್ಮದಿಯ ಜೀವನ ಮುಖ್ಯವಾಗಿದೆ. ಮನುಷ್ಯನ ಒಳಿತನ್ನೇ ಮಾನದಂಡವಾಗಿರಿಸಿದ ಸಾಹಿತ್ಯದಲ್ಲಿ ಬೇರೆ ಮನೋಧರ್ಮ ಇರುವುದು ಸಾಧ್ಯವಿಲ್ಲ. ಆದ್ದರಿಂದಲೇ ಈ ಸಾಹಿತ್ಯದಲ್ಲಿ ರಾಜರು, ವೀರರು, ಸಂತರನ್ನು ಮಾತ್ರ ಕುರಿತ ಸಾಹಿತ್ಯವಾಗಿರದೇ ಮನುಷ್ಯನ ಸುಖ-ದುಃಖ, ಕನಸು-ನಿರಾಶೆ, ಕಲ್ಪನೆ-ದರ್ಶನ, ಇವುಗಳಿಗೆ ಅಭಿವ್ಯಕ್ತಿ ನೀಡುತ್ತದೆ. ಆದುದರಿಂದಲೇ ಒಬ್ಬ ರೈತ, ಒಂದು ಹುಡುಗಿ, ಅನಾಥ ಮುದುಕಿ ಪ್ರಥಮ ಪ್ರಣಯದ ಖುಷಿಯಲ್ಲಿರುವ ಹೆಣ್ಣುಗಂಡು, ಜೈಲಿಗೆ ಹೋಗಿ ಬಂದ ಖೈದಿ, ಬಡ ಮುದುಕ ಎಲ್ಲರೂ ಈ ಸಾಹಿತ್ಯದ ಕೇಂದ್ರಗಳಾಗಬಲ್ಲರು. ಇದು ಪ್ರತ್ಯೇಕ ವ್ಯಕ್ತಿತ್ವದಲ್ಲಿ ಆಸಕ್ತಿ ಇರುವ ಸಾಹಿತ್ಯ ಕಾದಂಬರಿ ಪ್ರಕಾರದ ಹುಟ್ಟಿಗೆ ಅಗತ್ಯವಾದ ಅಂಶಗಳಲ್ಲಿ ಒಂದು.

ಕಾದಂಬರಿಯನ್ನು ಸುಲಭ ವ್ಯಾಖ್ಯೆಗಳಲ್ಲಿ ಹಿಡಿದಿಡುವುದು ಕಷ್ಟಸಾಧ್ಯವಾದ ಕೆಲಸ. ಈ ಪ್ರಯತ್ನದಲ್ಲಿ ಈಗಾಗಲೇ ಚರ್ಚಿತವಾಗಿರುವ ವ್ಯಾಖ್ಯೆಗಳನ್ನು ಕ್ರೋಢಿಕರಿಸಬಹುದಾಗಿದೆ. ''ಕಾದಂಬರಿಯೆಂದರೇನೆಂಬುದನ್ನು ವಿವರಿಸಬಹುದೇ ಹೊರತು ಕಾದಂಬರಿಗೊಂದು ವ್ಯಾಖ್ಯೆ ಕೊಡುವುದು ಅಸಾಧ್ಯ ಕೊಟ್ಟರೆ ಅದು ಅಸಮರ್ಪಕ ''(ಶಾಸ್ತ್ರಿ ಪಿ. ವ್ಹಿ. ೧೯೯೧ ಪುಟ-೩೦,) ಎಂದು ಹೇಳುವ ಮಾತು ಕಾದಂಬರಿಯ ಸಹಜ ಸಂಕೀರ್ಣತೆಯನ್ನು ಪ್ರತಿಬಿಂಬಿಸುತ್ತದೆ. ''ಕಾದಂಬರಿ ಜೀವನದ ಏಕೈಕ ಉಜ್ವಲ ಪುಸ್ತಕ'' (ಸಿ.ಪಿ.ಕೆ (ಅನು);೧೯೯೮; ಪುಟ-೧೪೪) ಎಂದು ಹೇಳಿದ್ದು ಕಾದಂಬರಿಯೆಂಬುದು ಜೀವನ ಪ್ರತಿಬಿಂಬವೆಂಬುದಕ್ಕೆ ಸಾಕ್ಷಿ. ಕುವೆಂಪು ಅವರು ''ಕಾದಂಬರಿ ಕರತಲ ರಂಗಭೂಮಿ'' (ಹಾಮಾನಾ ೧೯೯೨ ಪುಟ-೧೪೪) ಎಂದು ಒಂದು ವ್ಯಾಖ್ಯಾನವನ್ನು ನೀಡಿದ್ದಾರೆ (ಹಾಮಾನಾ.೧೯೯೨; ಪುಟ-೧೪೪) ಎಂದು ಒಂದು ವ್ಯಾಖ್ಯಾನವನ್ನು ನೀಡಿದ್ದಾರೆ. "It is a new art form it did not exist in very rudimentary form, before that morden civilization which began with the renaissance" (ಶಾಸ್ತ್ರಿ ಪಿ.ವ್ಹಿ.೧೯೯೧; ಪುಟ ೩೫) ಎಂದು ರಾಲ ಫಾಕ್ಸರವರು ಹೇಳಿದರೆ, ಟ್ರೈಲಿಂಗ್ ಅಭಿಪ್ರಾಯದಲ್ಲಿ ಕಾದಂಬರಿಯೆಂಬದು ''ನೈತಿಕ ಕಲ್ಪಕತೆಯ ನಮ್ಮ ಕಾಲದ ಅತ್ಯಂತ ಪ್ರಭಾವಿ ಮಾಧ್ಯಮವಾಗಿದೆ'' ಕಾದಂಬರಿಯ ಗಾತ್ರಕ್ಕೆ ಹೆಚ್ಚು ಗಮನಹರಿಸಿದ ಎಂ.ಅಬೆಲ್ ಕೇವಲ್ಲಿಯವರು ಅಭಿಪ್ರಾಯ ಪಡುವಂತೆ ''ಒಂದಷ್ಟು ಉದ್ದವಾದ ಗದ್ಯಾತ್ಮಕ ಲಘುಸಾಹಿತ್ಯ (ಶಾಸ್ತ್ರಿಪಿ.ವ್ಹಿ.೧೯೯೧; ಪುಟ-೨೨) ಎಂದು ವ್ಯಾಖ್ಯೆ ನೀಡುತ್ತ ಕಾದಂಬರಿಯ ಸ್ವರೂಪ ಮತ್ತು ಲಕ್ಷಣ, ವಸ್ತು ವೈವಿಧ್ಯಗಳ ಬಗ್ಗೆ ಏನನ್ನು ಹೇಳಿಲ್ಲ. ''೫೦,೦೦೦- ಶಬ್ಧಗಳಿಗಿಂತ ಕಡಿಮೆಯಿಲ್ಲದ ಯಾವುದೇ ಗದ್ಯಾತ್ಮಕ ಲಘು ಸಾಹಿತ್ಯವನ್ನು ಕಾದಂಬರಿಯೆಂದು ಕರೆಯುತ್ತೇವೆ'' (ಶಾಸ್ತ್ರಿ ಪಿ.ವ್ಹಿ.೧೯೯೧ - ಪುಟ ೩೮) ಎಂದು ಹೇಳುತ್ತಾರೆ.

ಒಟ್ಟಾರೆ ಕಾದಂಬರಿಯನ್ನು ಅತಿವ್ಯಾಪ್ತಿ - ಅವ್ಯಾಪ್ತಿಗೆ ಒಳಪಡದಂತೆ ಒಂದು ವ್ಯಾಖ್ಯೆಯಲ್ಲಿ ಹಿಡಿದಿಡುವುದು ಕಷ್ಟಕರ ಸಂಗತಿ. ''ಬಂಡವಾಳಶಾಹಿ ನಾಗರಿಕತೆಯ ಉಗಮದೊಂದಿಗೆ ಕಾದಂಬರಿಯ ಉಗಮವೂ ಹಾಗೆಯೇಆಗುತ್ತದೆ. ಹೊಸ ಮಾಧ್ಯಮವೊಂದು ಹುಟ್ಟುತ್ತದೆ. ಆ ಮಧ್ಯಮ ವರ್ಗದ ಮಹಾಕಾವ್ಯವೇ ಕಾದಂಬರಿ''. ಎಂದು ಹೆಗಲ್‌ರವರು ಅಭಿಪ್ರಾಯಪಡುತ್ತಾರೆ. ಬಂಡವಾಳಶಾಹಿ ನಾಗರಿಕತೆಗೂ ಕಾದಂಬರಿ ಪ್ರಕಾರಕ್ಕೂ ನೇರವಾದ ಸಂಬಂಧವಿದೆ. ಬಂಡವಾಳಶಾಹಿ ವ್ಯವಸ್ಥೆಯಿಂದ ತಲೆ ಎತ್ತಿದ ಮಧ್ಯಮವರ್ಗ, ಕೈಗಾರಿಕೀಕರಣದಿಂದ ದೊರೆತ ವಿರಾಮದ ಸಮಯ, ಹಲವು ಜನರ ಸಂಪರ್ಕ, ವೈಜ್ಞಾನಿಕ ಬೆಳವಣಿಗೆಯಿಂದಾದ ಹೊಸ ವಿಚಾರ ಕ್ರಾಂತಿ, ಹಳೆಯ ನಂಬಿಕೆಗಳ ಪುನರ್‌ವಿಮರ್ಶೆ, ಇವೇ ಮೊದಲಾದ ಸಂದರ್ಭಗಳ ಅಭಿವ್ಯಕ್ತಿಗೆ ಕಾದಂಬರಿ ಭೂಮಿಕೆಯನ್ನು ಒದಗಿಸಿತು. ''ಯುರೋಪಿನ ಮೊದಲ ಕಾದಂಬರಿಯೆಂದು ಗುರುತಿಸಲಾಗುವ ಸರ್ವಾಂಟೀಸನ 'Don Quixote' ಯುರೋಪಿನ ಮಧ್ಯಕಾಲೀನ ಸಾಂಸ್ಕೃತಿಕ ಮಾದರಿಗಳನ್ನು ಗೇಲಿ ಮಾಡುವುದಕ್ಕೆಂದೇ ಹುಟ್ಟಿಕೊಂಡಿತು. ಎಂದು ಜಿ. ಎಸ್.ಆಮೂರರು ಗುರುತಿಸುತ್ತಾರೆ. ಒಂದು ರೀತಿಯಲ್ಲಿ ಸಮಾಜದ ಜೊತೆಗಿನ ವ್ಯಕ್ತಿಯ ಸಂಘರ್ಷ ಮತ್ತು ಭಿನ್ನಾಭಿಪ್ರಾಯಗಳ ಕಾರಣವಾಗಿ ಕಾದಂಬರಿಯು ಜನ್ಮತಳೆಯುತ್ತದೆ. ರಾಲಂಡ್ ಬಾರ್ತ್ ಹೇಳುವಂತೆ ''ಕಾದಂಬರಿ ಹುಟ್ಟುವುದೇ ಲೇಖಕ ಮತ್ತು ಸಮಾಜ ಇವರ ನಡುವಿನ ಒಪ್ಪಂದದ ಪರಿಣಾಮವಾಗಿ'' (The sense of an Ending; studies in the Theory of fiction 1967 ಜಿ. ಎಸ್. ಆಮೂರ,ಪು.೫) ಎನ್ನುವ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಆದರೆ ಕಾದಂಬರಿ ಒಂದು ಒಪ್ಪಂದಿಂದ ಸೃಷ್ಟಿಯಾದರೆ ಅದರಲ್ಲಿ ಪ್ರತಿಭಟನೆಯನ್ನು ವಿಡಂಬನೆಯನ್ನು ವ್ಯಕ್ತಪಡಿಸಲಾಗುವುದಿಲ್ಲ. ಅದಕ್ಕಾಗಿ ಲೇಖಕ ಆ ಸಮುದಾಯದಿಂದ, ಜನಾಂಗಕ್ಕಿಂತ ಒಂದು ಹೆಜ್ಜೆ ಮುಂದಿರಬೇಕಾಗುತ್ತದೆ. ಆಗ ಕೃತಿಗಳಲ್ಲಿ ಸಮಾಜ ದೊಂದಿಗಿನ ಸಂಘರ್ಷ ಮೈದಾಳುತ್ತದೆ.

ಕಾದಂಬರಿಯ ಪ್ರಮುಖ ಲಕ್ಷಣ ಗದ್ಯ ರೂಪದಲ್ಲಿ ಕತೆ ಹೇಳುವುದು. ಕೇವಲ ಕಥೆಯ ಸ್ವರೂಪ ಇದ್ದುದನ್ನೆಲ್ಲ ಕಾದಂಬರಿ ಎಂದು ಕರೆಯಲಾಗುವುದಿಲ್ಲ. ಕಾದಂಬರಿಯಲ್ಲಿ ಕತೆಯಿರುತ್ತದೆ. ಡಿ. ಆರ್. ನಾಗರಾಜರು ಹೇಳುವಂತೆ ''ಬರೀ ಕತೆ ಕಾದಂಬರಿಯಲ್ಲ ಒಂದು ದೀರ್ಘವಾದ ಕತೆ ಕೂಡ ಕಾದಂಬರಿಯಲ್ಲ'' (ನಾಗರಾಜ್ ಡಿ. ಆರ್. ಪುಟ-೨೯೬, ೧೯೯೬) ಕಾದಂಬರಿ ತನ್ನೊಳಗೆ ಇನ್ನೇನನ್ನೋ ಒಳಗೊಂಡಿರುತ್ತದೆ. ಪ್ರತಿ ಘಟನೆಗೂ ಸಾವಯುವ ಸಂಬಂಧವೊಂದನ್ನು ಲೇಖಕ ಏರ್ಪಡಿಸಬೇಕಾಗುತ್ತದೆ. ಕತೆಯನ್ನು ಕಥನವನ್ನಾಗಿ ಮಾಡಬೇಕಾಗುತ್ತದೆ. ಹಾಗೆಯೇ ಘಟನೆಗಳಿಗೆ ಕಾರ್ಯಕಾರಣ ಸಂಬಂಧವನ್ನೇರ್ಪಡಿಸ ಬೇಕಾಗುತ್ತದೆ. ಹೀಗೆ ಕತೆಯನ್ನು ಬೆಳೆಸುವಾಗ ಸಾಮಾಜಿಕ ಜೀವನ ಲೇಖಕನ ಮೇಲೆ ಪ್ರಭಾವ ಬೀರುತ್ತದೆ. ತನ್ನ ಸುತ್ತಲಿನ ಪರಿಸರವನ್ನು ಚಿತ್ರಿಸುವಾಗ ಅದು ಸಮಾಜದ ಯಥಾವತ್ ಅನುಕರಣೆಯಾಗದೇ ಅದರ ನಕಲಷ್ಟೇ ಆಗುತ್ತದೆ. ಹೀಗೆ ಸಮಾಜದ ಘಟನೆಗಳಿಗೆ ಅವಶ್ಯಕವೆನಿಸಿದಲ್ಲಿ ಕಲ್ಪನೆಯನ್ನು ಸೇರಿಸಿ ಲೇಖಕ ಕಾದಂಬರಿಯನ್ನು ಕಲಾತ್ಮಕವಾಗಿಸುತ್ತಾನೆ.

ಆಂಗ್ಲ ಭಾಷೆಯಲ್ಲಿ ಗದ್ಯಕ್ಕೆ ಸಂವಾದಿಯಾಗಿ ಬಳಸಲಾಗುವ 'Fiction' ಮೂಲತಃ ಕಲ್ಪನೆಯ ಅರ್ಥವನ್ನೆ ಹೊಂದಿದೆ. ಕಲ್ಪನೆಯಿಲ್ಲದೇ ಕಾದಂಬರಿಯಿಲ್ಲ. ಸ್ಕೋಲ್ಸ್ ಎನ್ನುವ ಲೇಖಕನು ಕಲ್ಪನೆಯನ್ನು ಕುರಿತಂತೆ ಹೀಗೆನ್ನುತ್ತಾನೆ. ''ಕಲ್ಪನೆಗಳ ವ್ಯಾಪಾರ ಎರಡು ರೀತಿಯದು ಒಂದು ಪರಿಷ್ಕಾರ (Sublimation) ಎಂದರೆ ನಮ್ಮ ಆಸ್ಥೆಗಳಸ್ನು ತೃಪ್ತಿಕರವಾದ ಆಕಾರಗಳಲ್ಲಿ ಪರಿವರ್ತಿಸಿ, ಆತಂಕಗಳಿಂದ ನಮಗೆ ಬಿಡುಗಡೆ ದೊರಕಿಸುವುದು. ಇನ್ನೊಂದು ಸಂಜ್ಞಾನ (Cognition) ಎಂದರೆ ನಮ್ಮನ್ನು ಮತ್ತು ಬದುಕನ್ನು ತಿಳಿದುಕೊಳ್ಳಲು ಸಹಾಯ ಮಾಡುವುದು ವಾಸ್ತವದಿಂದ ಭಿನ್ನವಾದುದು ಆಕಾರಗಳನ್ನು ಸೃಷ್ಟಿಸುವುದರ ಮೂಲಕ ಕಲ್ಪನೆಗಳು ಈ ಕಾರ್ಯವನ್ನು ನೆರವೇರಿಸುತ್ತವೆ''. (ಜಿ. ಎಸ್. ಆಮೂರ ಪುಟ-೬, ೧೯೯೪) ಈ ಪರಿಕಲ್ಪನೆ ಅರಿಸ್ಟಾಟಲ್‌ನ ಕೆಥಾರ್ಸಿಸ್ ಪರಿಕಲ್ಪನೆಯೊಂದಿಗೆ ಸ್ವಲ್ಪಮಟ್ಟಿನ ಹೋಲಿಕೆಯನ್ನು ಪಡೆಯುತ್ತದೆ. ಕಾವ್ಯ, ನಾಟಕ, ಮುಂತಾದ ಸಾಹಿತ್ಯ ಪ್ರಕಾರಗಳು ಭಾವನೆಯನ್ನು ಪ್ರಚೋದಿಸುತ್ತವೆ. ಆದರೆ ಕಾದಂಬರಿ ನೀಡುವಂತ ಪರಿಣಾಮಗಳನ್ನು ನೀಡುವುದಿಲ್ಲ.

ಕ್ಷೋಭೆಯಿಂದ ಕ್ಷೋಭೆ ಉಪಶಮನವಾಗುವುದು ಎಂಬ ತತ್ವದ ಆಧಾರದ ಮೇಲೆ ಬೆಳೆದಿದ್ದ 'ಕೆಥಾರ್ಸಿಸ್' ಕಾವ್ಯನುಭವದಿಂದಾದ ಭಾವರೇಚನವನ್ನು ಕುರಿತು ಹೇಳಿದರೆ, 'ಸ್ಕ್ಯಾಲ್ಸ್‌ನ ಅಭಿಪ್ರಾಯ ಕಾವ್ಯ ನಿರ್ಮಿತಿಯ ಹಿಂದಿರುವ ಭಾವರೇಚನವನ್ನು ಕುರಿತು ಹೇಳುತ್ತದೆ. ಹೀಗೆ ಕಾದಂಬರಿಯ ರಚನೆಯಲ್ಲಿ ಕಲ್ಪನೆಯ ಪಾತ್ರದೊಡ್ಡದು. ಕಾದಂಬರಿಕಾರನ ಜೀವನದ ಅನುಭವದೊಂದಿಗೆ ಕಲ್ಪನೆಯನ್ನು ಸೇರಿಸಿದಾಗ ಸೊಗಸಾದ ಚಿತ್ರಮೂಡುತ್ತದೆ. ಈ ಕಲ್ಪನೆಯು ಒಂದು ಮಿತಿಯಲ್ಲಿರುತ್ತದೆ. ವಾಸ್ತವದ ಜೊತೆಯಲ್ಲಿಯೇ ಕಲ್ಪನೆಯನ್ನು ಕಟ್ಟಬೇಕು. ಜನಪದ ಮತ್ತು ಶಿಷ್ಟ ಸಾಹಿತ್ಯಗಳ ಆರಂಭ ಕೃತಿಗಳು ಕಲ್ಪನೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿರುವುದು ಕಾಣುತ್ತದೆ. ಜನಪದ ಕತೆಗಳಲ್ಲಿ ಏಳು ಸಮುದ್ರದಾಚೆಯ, ಮಲ್ಲಿಗೆ ಹೂವಿನ ತೂಕದ ರಾಜಕುಮಾರಿ, ಕೀಲುಕುದುರೆಯಲ್ಲಿ ಅಂತಸ್ತುಗಳನ್ನೇರಿ ಬರುವ ರಾಜಕುಮಾರ, ಪುಷ್ಪಕ ವಿಮಾನ ಹೀಗೆ ಕಲ್ಪನೆ, ಕಾವ್ಯಗಳಲ್ಲಿ ಮನರಂಜನೀಯ ನೀಡುವಂತಾಗಿದೆ. ಆದರೆ ೧೯ನೇ ಶತಮಾನದ ಉತ್ತರಾರ್ಧದಲ್ಲಿ ಜನಪ್ರಿಯಗೊಂಡ ವಾಸ್ತವವಾದವು 'ಕಲ್ಪನೆಯೇ ಕಾವ್ಯದ' ಕೃತಿಗಳ ಜೀವಾಳವಾಗಿರುವುದರ ಬದಲಿಗೆ ಸಹಜತೆಯ ಕಡೆ ಮುಖ ಮಾಡುವಂತೆ ಮಾಡಿತು. ''ಆದರ್ಶ ಕಲ್ಪನೆ ಆಧ್ಯಾತ್ಮ ಇವೆಲ್ಲಾ ಸದ್ಯ ಗ್ರಹಿಕೆಯಲ್ಲಿರುವ ತೊಡಕುಗಳೆಂದೂ ಇವೆಲ್ಲವನ್ನು ಕೈಬಿಟ್ಟು ಸುತ್ತಲಿನ ಬದುಕನ್ನು ಅದರ ಎಲ್ಲ ವಿಕೃತಿ, ಕೊಳಕುಗಳೊಂದಿಗೆ ವಸ್ತು ನಿಷ್ಠವಾಗಿ ವೀಕ್ಷಿಸುವ ಮೂಲಕನೇ ವಾಸ್ತವ ಗ್ರಹಿಕೆ ಸಾಧ್ಯವೆಂದು ಈ ಹೊಸ ವಾಸ್ತವವಾದ ಸೂಚಿಸಿತು. (ಕೆ.ವಿ.ಅಕ್ಷರ-ಪುಟ-೨೮, ೧೯೯೪) ಇದರ ಪರಿಣಾಮವಾಗಿ ಕಲೆಗಳಲ್ಲಿ ವಾಸ್ತವತೆಯ ನೆರಳು ಕಂಡುಬಂದಿತು. ಆದರೆ ''ಕಾದಂಬರಿ, ಸಣ್ಣಕತೆಗಳು ಒಂದು ಅರ್ಥದಲ್ಲಿ ವಾಸ್ತವಿಕತೆಗೆ ತೀರ ಹತ್ತಿರವಾದ ಪ್ರಕಾರಗಳು ಏಕೆಂದರೆ ಇವುಗಳ ಸ್ವರೂಪವೇ ವಾಸ್ತವಿಕತೆಗೆ ತೀರಾ ಹತ್ತಿರವಾದುದು. ವಸ್ತುವನ್ನು ವಿವರವಾಗಿ ಚರ್ಚಿಸುವ ಕಾದಂಬರಿ ಸಹಜವಾಗಿಯೇ ವಾಸ್ತವವಾದಿಯಾಗಬೇಕಾಗುತ್ತದೆ. ಆದರೆ ''ಯಾವ ಮನುಷ್ಯನೂ ಹೊರಗಿನ ಜಗತ್ತನ್ನು ಅದು ಇರುವಂತೆ ವರ್ಣಿಸಲಾರ. ಕಾರಣ ಅದು ವಾಸ್ತವವಾಗಿ ಹೇಗಿದೆ ಎನ್ನುವುದು ತಿಳಿಯುವಲ್ಲಿ ವ್ಯಕ್ತಿಯ ಗ್ರಹಿಕೆಯಿಂದ ಗ್ರಹಿಕೆಗೆ ಭಿನ್ನವಾಗಿರುತ್ತದೆ. ಹಾಗಾಗಿ ವಾಸ್ತವ ತಿಳಿಯಲು ಸಾಧ್ಯವಿಲ್ಲ. ಇರುವಂತೆ ವರ್ಣಿಸುವುದು ಎಂದಾಗಲೇ ಮತ್ತೆ ಗೊಂದಲಗಳು ಸೃಷ್ಟಿಯಾಗುತ್ತವೆ.

ಬಾಹ್ಯ ವಿವರಗಳ ಗ್ರಹಿಕೆ ಮಾತ್ರ ವಾಸ್ತವದ ಹೆಸರಿನಲ್ಲಿ ನಡೆದರೆ ಅದು ಕಲೆಯಾಗುವುದಿಲ್ಲ. ''ವಾಸ್ತವರೂಪದ ಅತ್ಯುತ್ತಮ ಉದಾಹರಣೆಗಳು ಈ ಮಿತಿಯನ್ನು ಮೀರುತ್ತವೆಯಾದರೂ ಇಲ್ಲಿ ಅಂತಿಮವಾಗಿ ಈ ಜಗತ್ತು ಹೀಗೆ ಇರುವಂತದ್ದು ಇದನ್ನು ಬದಲಿಸಲು ಸಾಧ್ಯವಿಲ್ಲ ಎಂಬ ತಾತ್ವಿಕ ತಾತ್ಪರ್ಯ ಉಳಿದು ಬಿಡುತ್ತದೆ. ಆದ್ದರಿಂದ ಈ ವಾದಗಳು ಸೃಷ್ಟಿಸುವ ಜೀವನದರ್ಶನ ಉದ್ದೇಶರಹಿತವಾದದ್ದು. ಮನುಷ್ಯನ ಆಂತರಿಕ ಚೈತನ್ಯಗಳ ಸಾಕ್ಷಾತ್ಕಾರಕ್ಕೆ ಇಲ್ಲಿ ಅವಕಾಶವಿಲ್ಲ. ಅರ್ಥಾತ್ ವಾಸ್ತವವಾದ ಒಂದು ಪ್ರತಿಗಾಮಿ ಕಲಾಮಾರ್ಗ ಎಂಬ ವಾಸ್ತವವಾದ ನಿರಾಕರಣೆಯ ವಾದವನ್ನು ಸ್ವಲ್ಪಮಟ್ಟಿಗೆ ಒಪ್ಪಬಹುದು. ಕಾದಂಬರಿಯೂ ವರ್ತಮಾನವನ್ನು ಕುರಿತು ಹೇಳುತ್ತದೆ. ಆದುದರಿಂದ ಪುರಾಣಕ್ಕಿಂತ ಭಿನ್ನವಾಗಿದೆ. ಕಾದಂಬರಿ ಪ್ರಕಾರದ ಸೃಷ್ಟಿಯಾದದ್ದೇ ವರ್ತಮಾನದ ತವಕ - ತಲ್ಲಣಗಳನ್ನು ವಿವರವಾಗಿ ಬಿಂಬಿಸಲು, ಕೇವಲ ವರ್ತಮಾನದ ಯಥಾವತ್ ಚಿತ್ರಣ ದಾಖಲೆಯಾಗುವುದರಿಂದ ಕಲ್ಪನೆ ಕಾದಂಬರಿಗೆ ಸಾಹಿತ್ಯಕ ರೂಪವನ್ನು ನೀಡಿತು. ಆದರೆ ''19ನೇ ಶತಮಾನದ ಯುರೋಪಿನ ಸಾಹಿತ್ಯದಲ್ಲಿ ವಾಸ್ತವಮಾರ್ಗ ಪ್ರಬಲವಾಗಿ ಬಿಟ್ಟು ಕಾದಂಬರಿ ಕಲ್ಪನೆಯ ಒಂದು ಅವತಾರ ಎಂಬ ಮುಖ್ಯ ಸಂಗತಿ ಲಕ್ಷ್ಯಕ್ಕೆ ಬರದೇ ಹೋಯಿತು. ಇದರಿಂದಾಗಿ ಕಾದಂಬರಿಯ ವಿಮರ್ಶೆಯಲ್ಲಿ ಅದರ ವಾಸ್ತವಿಕ ಅಂಶಗಳಿಗೆ ಕೊಟ್ಟಷ್ಟು ಮಹತ್ವವನ್ನು ಕಲ್ಪಿತ ಅಂಶಗಳಿಗೆ ನಾವು ಕೊಡುವುದಿಲ್ಲ'' ಎನ್ನುತ್ತಾರೆ. (ಆಮೂರ.ಜಿ. ಎಸ್.೧೯೯೧;ಪುಟ-೩೪) ಆಮೂರರವರು ಅದನ್ನು ತಪ್ಪು ತಿಳುವಳಿಕೆ ಎನ್ನುತ್ತಾರೆ. ಬಹುಶಃ ಇವರ ದೃಷ್ಟಿಯಲ್ಲಿ ಕಲ್ಪನೆಯೇ ಮಹತ್ವದ್ದು. ವಾಸ್ತವವಾದ ಕಲ್ಪನೆಯ ಮಹತ್ವವನ್ನು ಕಡಿಮೆ ಮಾಡಿ ಅದರ ನೆರಳು ಸಾಹಿತ್ಯ ವಿಮರ್ಶೆಯಲ್ಲಿಯೂ ಕಂಡು ಬರುವಂತೆ ಮಾಡಿತು ಹೊಸ ಹೊಸ ವಾದಗಳ ಪ್ರತಿಪಾದನೆಯಿಂದ ವಿಮರ್ಶೆಯಲ್ಲಾಗುವ ಸೈದ್ಧಾಂತಿಕ ಬದಲಾವಣೆಗಳು ಸಾಹಿತ್ಯ ಸೃಷ್ಟಿಯ ಹಿಂದಿನ ಸೃಜನಶೀಲತೆಗೆ ತಮಗರಿವಿಲ್ಲದಂತೆ ನಿರ್ದೇಶನ ನೀಡುತ್ತವೆ. ಆ ಕಾರಣದಿಂದಾಗಿಯೇ ಜಗತ್ತಿನ ಬೌದ್ಧಿಕ ವಲಯದಲ್ಲಿ ಹೊಸ ಸಿದ್ಧಾಂತಗಳು, ವಾದಗಳು ಪ್ರತಿಪಾದನೆಯಾದಂತೆಲ್ಲ ಸಾಹಿತ್ಯ ತನ್ನ ಮಾರ್ಗವನ್ನು ವಿಸ್ತರಿಸಿಕೊಂಡಿದೆ. ಪರಿಣಾಮವಾಗಿ ನವೋದಯ, ನವ್ಯ, ದಲಿತ, ಬಂಡಾಯ ಮುಂತಾದ ಹೊಸ ಪ್ರಯೋಗಗಳು ಫಲಿತವಾಗಿವೆ. ಇದೇ ಪ್ರತಿಕ್ರಿಯೆಯನ್ನು ಇತರ ಕಲಾ ಪ್ರಕಾರಗಳಲ್ಲೂ ಕಾಣಬಹುದು. ಈ ಎಲ್ಲ ಪ್ರಕ್ರಿಯೆಗಳು ಸಮಾಜದಲ್ಲೇ ಘಟಿಸಬೇಕು. ಹಾಗಾಗಿಯೇ ಸಮಾಜಕ್ಕೂ ಕಲೆಗೂ ಅವಿನಾಭಾವ ಸಂಬಂಧ.

ಸಮಾಜವನ್ನು ಬಿಂಬಿಸುವ ಮಾಧ್ಯಮಗಳಲ್ಲಿ ಕಾದಂಬರಿ ಮಹತ್ವದ್ದು. ಇದಕ್ಕೆ ಕಾರಣ ಬಹುಶಃ ಇದು ಸಾಮಾನ್ಯ ಜನರ ಮನೋಭಿಲಾಷೆಯನ್ನು ಬಿಂಬಿಸುವ ಮಾಧ್ಯಮವಾಗಿರುವುದು. ಸಮಾಜದೊಳಗಿನ ಯಾವುದೇ ಪ್ರಕ್ರಿಯೆ ಸಾರ್ಥಕವಾಗುವುದು. ಜನಸಾಮಾನ್ಯರನ್ನು ತಲುಪಿದಾಗ ಯಾವುದೇ ಒಂದು ಗುಂಪನ್ನು ತಲುಪುವುದಾದರೆ ಅಥವಾ ಕರ್ತೃವಿನ ವೈಯಕ್ತಿಕ ಹಂಬಲಗಳನ್ನು ಮಾತ್ರ ತಿಳಿಸುವಂತಿದ್ದರೆ, ಅದರಿಂದ ಸಮಾಜಕ್ಕೆ ಯಾವುದೇ ತೆರನಾದ ಪ್ರಯೋಜನವಾಗಲಾರದು. ಆದರೆ ಕಾದಂಬರಿ ಜನಮುಖೀ ಸಾಹಿತ್ಯ ಪ್ರಕಾರ. ಇದಕ್ಕೆ ಕಾರಣ ಬಹುಶಃ ಇದು ಸಮಾಜದೊಂದಿಗೆ ಹೊಂದಿರುವ ನಿಕಟ ಸಂಬಂಧ ; ''ವಸ್ತುತ'' ಕಾದಂಬರಿ ಎಂದು ಕರೆಸಿಕೊಂಡ ಕಥಾ ರೂಪವೇನಿಸಿದೆ ಅದು ಜಾಗೃತ ಮಧ್ಯಮವರ್ಗದ ಸಾಹಿತ್ಯಕ ಅಭಿವ್ಯಕ್ತಿಯಾಗಿರುವ ಕಾರಣ ಮೊದಲಿನಿಂದಲೂ ವ್ಯಕ್ತಿ ಮತ್ತು ಸಮಾಜಗಳ ಪರಸ್ಪರ ಸ್ಥಿತಿಗತಿಗಳು, ಅವುಗಳ ನಡುವಿನ ದ್ವಂದ್ವಗಳು, ಸಮಸ್ಯೆಗಳು ಮುಂತಾದವುಗಳ ಕಡೆ ಗಮನಹರಿಸಿದೆ' (ದೇವೀಶಂಕರ;೨೦೦೧; ಪುಟ-೭)(ಅಪ್ರಕಟಿತ ಪ್ರಬಂಧ ವಸಾಹತು ಸಂಧರ್ಭ ಮತ್ತು ಕನ್ನಡಸಾಹಿತ್ಯ). ಎಂದು ಅಭಿಪ್ರಾಯ ಪಡುತ್ತಾರೆ. ಸಮಾಜದ ಸಾಹಚರ್ಯದಿಂದಾದ ಸಮಗ್ರ ಅನುಭವನ್ನು ತನ್ನಲ್ಲಿ ಬಿಂಬಿಸುವ ತವಕ ಕಾದಂಬರಿಗಿದೆ. ಈ ಕಾರಣದಿಂದಲೇ ಜನಪ್ರಿಯವಾಗಿರುವುದು. ಕಾದಂಬರಿ ತನ್ನೊಡಲಲ್ಲಿ ಸಮಾಜವನ್ನೇ ತುಂಬಿಕೊಂಡಿರುತ್ತದೆ. ಕಾದಂಬರಿಕಾರನಿಗೆ ವಸ್ತು ದೊರಕುವುದೇ ಸಮಾಜದಿಂದ. ಸಾಮಾಜಿಕ ಜಗತ್ತಿನ ಅನುಭವಗಳನ್ನು ಕ್ರೋಢೀಕರಿಸಿಕೊಂಡು ಕಾದಂಬರಿಕಾರ ಅದರಲ್ಲಿ ಕೆಲವನ್ನು ಆರಿಸಿ, ತ್ಯಜಿಸಿ, ಮಾರ್ಪಡಿಸಿ, ಅಗತ್ಯವಿದ್ದಲ್ಲಿ ಅದಕ್ಕೊಂದಷ್ಟು ಕಲ್ಪನೆಯನ್ನು ಸೇರಿಸಿ ಕೊನೆಯಲ್ಲಿ ಸಾಹಿತ್ಯಿಕರೂಪ ಕೊಡುತ್ತಾನೆ. ಈ ಆಯ್ಕೆಯ ಕಾರಣದಿಂದಲೇ ಪ್ರತಿ ಕಾದಂಬರಿಕಾರನೂ ಭಿನ್ನವಾಗುವುದು. ಘಟನೆಗಳ ರಚನೆ ಮತ್ತು ನಿರೂಪಣಾಕ್ರಮವು ಕಾದಂಬರಿಕಾರನ ದೃಷ್ಟಿ ಮತ್ತು ಸಾಮರ್ಥ್ಯಕ್ಕನುಗುಣವಾಗಿರುತ್ತದೆ. ಈ ದೃಷ್ಟಿ ಮತ್ತು ಸಾಮರ್ಥ್ಯವು ಕೂಡ ಸಮಾಜದಿಂದ ಬಂದಿರುವಂತದ್ದು. ಕಾದಂಬರಿಕಾರನ ಜೀವನಾನುಭವ ಮತ್ತು ನಿರೂಪಣಾಕ್ರಮ ಕಾದಂಬರಿಯ ಮಹತ್ವವನ್ನು ನಿರ್ಧರಿಸುತ್ತದೆ. ತನ್ನ ಜೀವನದ ಅನುಭವವನ್ನೇ ಚಿತ್ರಿಸುವಾಗಲೂ ಕಾದಂಬರಿಕಾರ ತನ್ನದೇ ಆದ ಹೊಸ ಜಗತ್ತನ್ನೇ ಸೃಷ್ಟಿಸಲು ಪ್ರಯತ್ನಿಸುತ್ತಾನೆ.

ಸಮಾಜದಲ್ಲಿನ ಪಾತ್ರಗಳೇ ಸ್ಥಾನ ಪಡೆಯುತ್ತವೆ. ಪಾತ್ರಗಳ ವರ್ತನೆಯಿಂದ ಘಟನೆಗಳು ಜರುಗುತ್ತವೆ. ಈ ಕ್ರಿಯೆಯ ಕಾರ್ಯ ಕಾರಣ ಸಂಬಂಧವನ್ನು ವಿಶ್ಲೇಷಿಸುವ ಪ್ರಯತ್ನದಲ್ಲಿ ಕಾದಂಬರಿ ಮುಂದುವರಿಯುತ್ತದೆ. ''ವರ್ತನೆಯ ಸಾಮಾಜಿಕ ಕಾರಣವನ್ನು ಹುಡಕುವುದೇ ಕಾದಂಬರಿಯ ಲಕ್ಷಣ'' ಎನ್ನುತ್ತಾರೆ. ಡಿ.ಆರ್.ನಾಗರಾಜ್. ಹೀಗೆ ಸಾಮಾಜಿಕ ಕಾರಣವನ್ನು ಹುಡುಕುವಾಗ ಕಾದಂಬರಿಕಾರನಿಗೆ ಸಾಮಾಜಿಕ ಜೀವನದ ನಿಕಟ ಪರಿಚಯ ಬೇಕಾಗುತ್ತದೆ. ಹಾಗಿದ್ದಾಗ ಮಾತ್ರ ಪಾತ್ರಕ್ಕೆ ಕೃತಿಗೆ ಗಟ್ಟಿತನ ಬರುತ್ತದೆ. ಪಾತ್ರಗಳ ವರ್ತನೆಯ ಹಿಂದಿನ ಕಾರಣ ಹುಡುಕುವಾಗ ಸಮಾಜದ ಸರಳ ತೀರ್ಮಾನಗಳಂತೆ ಕಾದಂಬರಿಕಾರನ ತೀರ್ಮಾನಗಳೂ ಇದ್ದರೆ ಮತ್ತೆ ಕೃತಿ ಯಥಾ ಸ್ಥಿತಿವಾದಿಯಾಗುತ್ತದೆ. ''ಪಾಶ್ಚಿಮಾತ್ಯ ವಿಮರ್ಶೆಯಲ್ಲಿ ಜಾರ್ಜ್ ಲುಕಾಕ್ಸ್, ಸಾತ್ರೆ, ಗೋಲ್ಡ್‌ಮನ್, ಹೆಗಲ್ ಇವರ-ತಾತ್ವಿಕ ಚರ್ಚೆಯಲ್ಲಿ ಒಂದು ಸಾಮಾನ್ಯ ಅಂಶವಿದೆ. ಅದನ್ನು ಈ ರೀತಿ ಸಂಗ್ರಹಿಸಬಹುದು. 'ಸಾಂಪ್ರಾದಾಯಿಕ ಕಥೆಯಲ್ಲಿ ಸಮಾಜದ ಜೊತೆಗೆ ಸಾವಯವ ಬಿರುಕಿನ ಮೂಲ ನೆಲೆಯಲ್ಲಿ ಕಾದಂಬರಿ ಪ್ರಕಾರದ ಒಳಗೇ ನಿರೂಪಣಾ ಪ್ರಜ್ಞೆ ಸಮಾಜದ ಸಮಷ್ಟಿ ಸ್ಥಿತಿಯಿಂದ ಸಿಡಿದು ದೂರ ನಿಂತಿರುತ್ತದೆ'' (ನಾಗರಾಜ್ ಡಿ. ಆರ್.೨000; ಪುಟ-೨೯೬).

ಈ ಮೊದಲು ಉಲ್ಲೇಖಿಸಿದ ರಾಲಂಡ್‌ಬಾರ್ತ್‌ನ ಹೇಳಿಕೆಗೂ ಈ ಮಾತಿಗೂ ಮೂಲಭೂತ ವ್ಯತ್ಯಾಸವಿದೆ. ಸಮಾಜದೊಂದಿಗಿನ ಬಿರುಕಿನಿಂದ ವ್ಯಕ್ತಿಯೊಬ್ಬ ಸಾಹಿತಿಯಾಗುತ್ತಾನೆ. ಇ. ಎಂ. ಫಾಸ್ಟರ್‌ನ ಮಾತಿನಲ್ಲಿ ಹೇಳುವುದಾದರೆ ''ಅಂತಹ ಪಾತ್ರ ಇಲ್ಲಿ ಇರಲು ಸಾಧ್ಯವಿಲ್ಲ. ಏಕೆಂದರೆ ಪಾತ್ರವು ಆಂತರಿಕ ಜೀವನ ಕಾಣುವಂತಹ ನಮ್ಮದಲ್ಲದ, ನಮ್ಮದಾಗಲಾರದ ನಿರೂಪಣೆಕಾರನೂ, ಸೃಷ್ಟಿಕರ್ತನೂ ಒಬ್ಬನೇ ಆಗಿರುವ ಜಗತ್ತಿಗೆ ಸೇರಿರುತ್ತದೆ'' ಹಾಗಾಗಿ ಆ ಪಾತ್ರದ ಮೇಲೆ ನಿಜ ಜೀವನಕ್ಕಿಂತ ಭಿನ್ನವಾದ ಹಿಡಿತ, ಮಾಹಿತಿ ಇರುತ್ತದೆ. ಮತ್ತು ಅದರ ಒಳ ಹೊರಗನ್ನು ಅರಿತಿರುವುದರಿಂದ ಅದಕ್ಕೊಂದು ನಿರ್ದಿಷ್ಟವಾದ ಕ್ರಮಬದ್ಧ ಬೆಳವಣಿಗೆ ಇರುತ್ತದೆ. ಹೀಗೆ ಬೆಳೆಸುವಾಗ ಕಾದಂಬರಿಕಾರ ಹಂಬಲಿಸುತ್ತಿರುತ್ತಾನೆ. ಕಾದಂಬರಿ ರಚನೆಯಾಗುವಾಗ ಲೇಖಕನ ಕೈಮೀರಿ ಪಾತ್ರಗಳು ವರ್ತಿಸುತ್ತಿರುತ್ತವೆ.

ಒಂದು ಹಂತದ ನಂತರ ಅವು ತಮ್ಮ ಬೆಳವಣಿಗೆಯನ್ನು ತಾವೇ ನಿರ್ಧರಿಸಿಕೊಳ್ಳುತ್ತವೆ. ಕತೆಯ ದಿಕ್ಕು ಮತ್ತು ಮುಕ್ತಾಯ ಸಹ ಕಾದಂಬರಿಕಾರನ ಯೋಚನೆಗಿಂತ ಭಿನ್ನವಾಗುತ್ತದೆ. ಥ್ಯಾಕರೆ ಎನ್ನುವ ಕಾದಂಬರಿಕಾರ ''ನಾನು ನನ್ನ ಪಾತ್ರಗಳನ್ನು ಅಂಕೆಯಲ್ಲಿಡುವುದಿಲ್ಲ. ಅವರು ನನ್ನನ್ನು ತಮಗೆ ಬೇಕಾದಲ್ಲಿಗೆ ಕೊಂಡೊಯ್ಯುತ್ತಾರೆ'' ಎನ್ನುತ್ತಾನೆ. ಈ ಅಭಿಪ್ರಾಯಗಳೆಲ್ಲಾ ರೊಮ್ಯಾಂಟಿಕ್ ಯುಗಕ್ಕೆ ಸಂಬಂಧಿಸಿದವು. ಪಾತ್ರಗಳ ವರ್ತನೆಯ ಮೂಲಕ ವಸ್ತುವಿನ ಅರ್ಥವನ್ನು ತಿಳಿಸುವ ಕೆಲಸವನ್ನು ಕಾದಂಬರಿ ಮಾಡುತ್ತದೆ. ಕೇವಲ ಪಾತ್ರಗಳ ವರ್ತನೆಯೇ ಕಾದಂಬರಿಯಾಗಲಾರದು ಅವುಗಳ ಸಂಯೋಜನೆಯಿಂದ ತನ್ನೊಳಗೆ ಸಿದ್ಧಗೊಂಡಿರುವ ಪ್ರಮೇಯವೊಂದನ್ನು ಅರ್ಥವತ್ತಾಗಿ ಬಿಂಬಿಸುವ ಜವಾಬ್ದಾರಿ ಕಾದಂಬರಿಗಿದೆ. ಪ್ರತಿ ಕಾದಂಬರಿಯೂ ಒಂದೊಂದು ವಿಷಯ - ವಸ್ತುವನ್ನು ಕುರಿತು ಚಿಂತಿಸುತ್ತದೆ. ಮತ್ತು ತನ್ನೊಳಗೊಂದು ಆದರ್ಶವನ್ನು ಹೊಂದಿರುತ್ತದೆ. ಈ ಆದರ್ಶದ ಪ್ರತಿಪಾದನೆಗಾಗಿಯೇ ತಕ್ಕ ಪಾತ್ರಗಳು ಸೃಷ್ಟಿಯಾಗುತ್ತವೆ. ಬದುಕಿನೊಳಗೇ ಇರುವ ಸಂಗತಿಯನ್ನು ಹೊಸದಾಗಿ ಅರ್ಥೈಸುವಾಗ ಕೇವಲ ಪರಕೀಯವಾದ ತೀರ್ಮಾನ ಕೊಡಲು ಸಾಧ್ಯವಿಲ್ಲ. ಇಡೀ ಘಟನೆಯೇ ತಾನಾಗಿ ವರ್ತಿಸುವಾಗ ಸ್ವಂತದ ಅಭಿಪ್ರಾಯಗಳನ್ನು ಕೊಡಬೇಕಾಗುವುದರಿಂದ ಕಾದಂಬರಿ ಪರಕೀಯವಾಗುವುದಿಲ್ಲ. ಇದೇ ಕಾದಂಬರಿಯ ಆಕರ್ಷಕ ಅಂಶ. ಮತ್ತೊಂದು ಮುಖ್ಯ ಅಂಶವೆಂದರೆ ಇಂದು ಕಾದಂಬರಿ ಆಧುನಿಕ ಜಗತ್ತಿನ ಪ್ರಭಾವಿ ಮಾಧ್ಯಮವಾಗಿ ನಿಂತಿದೆ. ಕಾದಂಬರಿಯ ಪ್ರಕಾರದಲ್ಲಿ ಶಾಬ್ದಿಕ ಭಾಷೆಯಲ್ಲಿ ನಿರೂಪಿಸಲ್ಪಟ್ಟ ಸಂಸ್ಕೃತಿಯೂ ಹೌದು. ಜೀವನದ ಸಮಗ್ರ ಅನುಭವವನ್ನು ಬಿಂಬಿಸುವ ಸಮರ್ಥಮಾಧ್ಯಮವಾಗಿದೆ. ಅದರ ವಿಶಾಲ ವ್ಯಾಪ್ತಿಯಲ್ಲಿ ಎಲ್ಲವನ್ನೂ ಒಳಗೊಳ್ಳುವ ಗಟ್ಟಿತನವಿದೆ. ಆದರೆ ಪದ್ಯ (ಕವನ) ಕತೆ, ನಾಟಕ ಇವುಗಳ ಮೂಲಕ ಅನುಭವದ ಹಿನ್ನೆಲೆಯಲ್ಲಿ ಬದುಕಿನ ಸಮಗ್ರ ವಿಶ್ಲೇಷಣೆ ಸಾಧ್ಯವಿಲ್ಲ. ಆದರೆ ಕಾದಂಬರಿಗೆ ಬದುಕಿನ ಸಮಗ್ರ ಅನುಭವಗಳನ್ನು ಒಳಗೊಳ್ಳುವ ಸಾಧ್ಯತೆ ಇದೆ. ಕಾದಂಬರಿ ಮೂಲತ ದೀರ್ಘವಾದುದು, ತನ್ನೊಳಗೊಂದು ನಿರಂತರತೆಯನ್ನು, ಕಥನಾತ್ಮಕತೆಯನ್ನು ಹೊಂದಿರುತ್ತದೆ.

ಕಥನ ಕಲೆಯ ಇತರ ಪ್ರಕಾರಗಳಿಗಿಲ್ಲದ ಅನೇಕ ಅನುಕೂಲತೆಗಳು ಕಾದಂಬರಿಗಿದೆ. ವಸ್ತುವನ್ನು ವಿವರವಾಗಿ ಚರ್ಚಿಸುವುದೇ ಇದರ ಪ್ರಧಾನ ಲಕ್ಷಣ. ಒಂದು ವಸ್ತುವನ್ನು ಸಾಧ್ಯವಿರುವ ಎಲ್ಲಾ ದೃಷ್ಟಿಕೋನಗಳಿಂದಲೂ ಚರ್ಚಿಸುವ ಅವಕಾಶ ಇಲ್ಲಿದೆ. ಹೀಗೆ ಚರ್ಚಿಸುವಾಗ ಸಮಕಾಲೀನ ಸಾಂಸ್ಕೃತಿಕ ಅಂಶಗಳು ಅದರಲ್ಲಿ ಕೂಡಿದಾಗ ಮಾತ್ರ ಕಾದಂಬರಿಗೆ ಮಹತ್ವ ಬರುತ್ತದೆ. ಅದು ಸಂಸ್ಕೃತಿಯ ದಾಖಲೆಯಾಗುತ್ತದೆ. ಸಂಸ್ಕೃತಿಯೊಳಗಿನ ಸೌಂದರ್ಯ, ಸಂಘರ್ಷಗಳು, ಸಮಸ್ಯೆಗಳು ಅದರಲ್ಲಿ ಬಿಂಬಿಸಿದಾಗ ಕಾದಂಬರಿ ಜನಮುಖಿಯಾಗುತ್ತದೆ. ಹೀಗೆ ಕಾದಂಬರಿ ಸಮಸ್ಯೆ ಮತ್ತು ಸಂಘರ್ಷವನ್ನು ಚಿತ್ರಿಸುವಾಗ ಒಂದಷ್ಟು ಘಟನೆಗಳನ್ನು ಹೆಣೆಯುತ್ತದೆ. ಘಟನೆಯ ಕಾರಣ, ಪರಿಣಾಮಗಳನ್ನು ಸಮಾಜ ಮತ್ತು ಮನುಷ್ಯ ಸ್ವಭಾವಗಳ ಎದುರಿಗಿಟ್ಟು ವಿಶ್ಲೇಷಿಸುತ್ತದೆ. ಆದರೆ ಬಹಳಷ್ಟು ಕಡೆ ಪರಿಹಾರ ಕೊಡುವುದಿಲ್ಲ. ಹಾಗೆ ಪರಿಹಾರವನ್ನು ನೀರಿಕ್ಷಿಸುವುದು ಸಾಧ್ಯವಿಲ್ಲ. ಸಿದ್ಧ ತೀರ್ಮಾನವೊಂದನ್ನು ಹೇಳುವ, ಸಮಸ್ಯೆಯನ್ನು ಸರಳೀಕರಿಸಿ ಸುಲಭ ಪರಿಹಾರ ನೀಡುವ ಕಾದಂಬರಿಗಳು ಜನಪ್ರಿಯವಾಗಿರುವುದು ಉಂಟು. ಹೀಗೆ ಕಾದಂಬರಿಯ ಓದುಗರಲ್ಲಿ ಹೊಸ ಚರ್ಚೆ ಜಿಜ್ಞಾಸೆಯಿಂದ ಸಂವಾದಗಳನ್ನು ಹಾಕುವುದರ ಮೂಲಕ ಆಯಾ ಭಾಷೆಯ ಸಾಂಸ್ಕೃತಿಕ ವಲಯವನ್ನು ಜೀವಂತವಾಗಿಡಲು ಸಾಧ್ಯವಾಗುತ್ತದೆ.

ಹೀಗೆ ಪ್ರತಿ ಕಾದಂಬರಿಯೂ ಒಂದಲ್ಲ ಒಂದು ಸಮಸ್ಯೆಯನ್ನು ಇಟ್ಟುಕೊಂಡೇ ಆರಂಭವಾಗಿರುತ್ತದೆ. ಈ ಸಮಸ್ಯೆಯನ್ನು ನಿರ್ವಹಿಸಲು ಸಮಕಾಲೀನ ಸಂದರ್ಭದ ಪರಿಸರವನ್ನು ಆಶ್ರಯಿಸಬಹುದು. ಹಾಗೆಯೇ ಪುರಾಣದ ಆವರಣಕ್ಕೆ ಹೋಗಿ ಅಲ್ಲಿಯ ಕತೆಗಳಿಗೆ ಮರುಹುಟ್ಟು ಕೊಡಬಹುದು ಪುರಾಣದ ವಸ್ತುವನ್ನು ಸಮಕಾಲೀನವಾಗಿಸುತ್ತ ಕಾಲಿಕ ಸಮಸ್ಯೆಯನ್ನು ಎದುರಿಸಬಹುದು. ಇದು ಕಾದಂಬರಿಕಾರನ ಕುಶಲತೆಯನ್ನು ತೋರಿಸುತ್ತದೆ. ಹೇಳುವ ವಸ್ತುವನ್ನು ಹೇಳುವ ವಿಧಾನದಿಂದ ಬೇರ್ಪಡಿಸಲು ಸಾಧ್ಯವಿಲ್ಲ. ಕೊನೆಗೂ ಕಾದಂಬರಿಯ ಯಶಸ್ಸು ಅದರ ನಿರೂಪಣೆಯಲ್ಲಿರುತ್ತದೆ.

೩.೧ ವಿದೇಶಿಯ ಸಂದರ್ಭದಲ್ಲಿ ಕಾದಂಬರಿ

ಹದಿನೆಂಟನೆಯ ಶತಮಾನದಲ್ಲಿ ನಡೆದ ಕೈಗಾರಿಕಾ ಕ್ರಾಂತಿಯ ಪರಿಣಾಮವಾಗಿ ರೂಪುಗೊಂಡ ಕಾದಂಬರಿ ತನ್ನ ಕಾಲದ ಎಲ್ಲ ಬಿಕ್ಕಟ್ಟುಗಳನ್ನು ತನ್ನೊಳಗೆ ಚರ್ಚಿಸಲು ಅವಕಾಶಮಾಡಿಕೊಟ್ಟಿತು. ಮಹಾಕಾವ್ಯಗಳ ಪರಂಪರೆ ಮುಗಿಯಿತು. ಎನ್ನುವ ಸಮಯದಲ್ಲಿ ಕಾದಂಬರಿ ಆ ಸ್ಥಾನವನ್ನು ಆಕ್ರಮಿಸಿಕೊಳ್ಳುತ್ತಾ ಜನಪ್ರಿಯತೆಯನ್ನು ಪಡೆಯುತ್ತಾ ಬಂದಿತು. ಕಾದಂಬರಿಯ ಮೂಲಕ ಜನಸಾಮಾನ್ಯರ ಆಶೋತ್ತರಗಳಿಗೆ ಸ್ಪಂದಿಸಿತು. ಬಂಧದೊಳಗೆ ಬದಲಾವಣೆಗಳನ್ನು ಕಾಣುತ್ತಾ ಲಿಪಿಯಿರುವ ಹೆಚ್ಚಿನ ಎಲ್ಲ ಭಾಷೆಗಳಲ್ಲಿ ಕಾದಂಬರಿ ಪ್ರಕಾರ ಅಸ್ತಿತ್ವವನ್ನು ಪಡೆದುಕೊಂಡಿತು. ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿರುವ ಕಾದಂಬರಿಯು ಭಾರತೀಯ ಸಾಹಿತ್ಯದಲ್ಲಿ ಮಹತ್ವದ ಪ್ರಕಾರವಾಗಿದೆ. ಹಾಗೆಯೇ ದೇಶ ಭಾಷೆಗಳಲ್ಲಿ ಕಾದಂಬರಿ ಪ್ರಕಾರ ತುಂಬ ಪ್ರಸಿದ್ಧ ಮಾಧ್ಯಮವಾಗಿದೆ. ಸಾಹಿತ್ಯ ಪ್ರಪಂಚದಲ್ಲಿ ಕಾದಂಬರಿ ಪ್ರಕಾರಕ್ಕೆ ಮಹತ್ವದ ಸ್ಥಾನವಿದೆ. ರಚನೆಯ, ವಸ್ತುವಿಶ್ಲೇಷಣೆಯ , ಸ್ವರೂಪ, ಸಮಾಜಕ್ಕೆ ನೀಡುವ ಸಂದೇಶ ಮೊದಲಾದವುಗಳಿಂದ ಕಾದಂಬರಿ ಪ್ರಕಾರವು ಇತರ ಸಾಹಿತ್ಯ ಪ್ರಕಾರಗಳಿಗಿಂತ ಮುಂದೆ ನಿಂತಿದೆ. ಆದುದರಿಂದಲೇ ಒಂದು ಭಾಷೆಯ ಸಾಹಿತ್ಯಿಕ ಮೌಲ್ಯ ಮತ್ತು ಮೊತ್ತವನ್ನು ಅಳೆಯುವಾಗ ಮೊತ್ತಮೊದಲು ಅಲ್ಲಿರುವ ಕಾದಂಬರಿ ಪ್ರಕಾರವನ್ನು ಪರಿಗಣಿಸಲಾಗುವುದು. ಪದ್ಯ ಸಾಹಿತ್ಯಕ್ಕಿಂತ ಗದ್ಯಸಾಹಿತ್ಯವು ಅರ್ಥಗ್ರಹಿಕೆಗೆ ಸುಲಭ ಸಾಧ್ಯವಾಗಿದೆ. ಇದೂ ಕಾದಂಬರಿಯ ಜನಪ್ರಿಯತೆಗೆ ಕಾರಣವಾಗಿರಬಹುದು. ಸರಳ ನಿರೂಪಣಾ ವಿಧಾನ ಹಾಗೂ ಓದಿಸಿಕೊಂಡು ಹೋಗುವ ಸ್ವಭಾವ ಕಾದಂಬರಿಯನ್ನು ಸುಲಭವಾಗಿ ಅರ್ಥೈಸಿಕೊಳ್ಳಲು ಸಾಧ್ಯತೆ ಒದಗಿಸುತ್ತದೆ. ಈ ಪ್ರಕಾರದ ಕಡೆಗೆ ಸಾಮಾನ್ಯ ಜನರು ಹೆಚ್ಚಿನ ಒಲವು ತೋರಿಸಲು ಇದು ಕೂಡ ಒಂದು ಕಾರಣ ಓದಿನ ಸಂದರ್ಭದಲ್ಲಿ ತಾನು ಅಂತರ್ಲೀನವಾಗಿಸಿಕೊಂಡಿರುವ ಜೀವನ ದೃಷ್ಟಿ ಮತ್ತು ಮೌಲ್ಯಗಳನ್ನು ಓದುಗನಿಗೆ ಪರೋಕ್ಷವಾಗಿ ತಿಳಿಯಪಡಿಸುವುದು ಕಾದಂಬರಿ ಪ್ರಕಾರದ ಮಹತ್ವದ ಸಾಮರ್ಥ್ಯಗಳ ಪೈಕಿ ಒಂದು. ಈ ಎಲ್ಲ ಅಂಶಗಳು ಕಾದಂಬರಿ ಪ್ರಕಾರದ ಬಗ್ಗೆ ಆಸಕ್ತಿ ಮೂಡಲು ಕಾರಣವಾಗುತ್ತದೆ.

ಆಧುನಿಕಯುಗದ ಮಹಾಕಾವ್ಯವೆಂದು ಕರೆಯಲಾಗುವ ಈ ಸಾಹಿತ್ಯ ಪ್ರಕಾರವು ಮೊತ್ತಮೊದಲಾಗಿ ಕಾಣಿಸಿಕೊಂಡಿದ್ದು ಕ್ರಿ.ಶ ಸುಮಾರು ೧೫೩೬ ರಷ್ಟು ಹಿಂದೆ ಫ್ರೆಂಚ್ ಭಾಷೆಯಲ್ಲಿ ರಾಬೆಲ್ಲಾ ರಚಿಸಿದ 'ಗಾರ್ಗನ್‌ವಾಯ್' ಹಾಗೂ 'ವಾಂಟುಗ್ರೂವ್' ಎಂಬ ಕಾದಂಬರಿಗಳನ್ನು ಪ್ರಪ್ರಥಮ ಕಾದಂಬರಿಗಳೆಂದು ತಿಳಿಯಲಾಗಿದೆ. ಜೀವನವನ್ನು ವಿಡಂಬನೆಯ ಮೂಲಕ ಚಿತ್ರಿಸುವ ಈ ಕಾದಂಬರಿಗಳು ಮೊದಲ ಕಾದಂಬರಿಗಳೆಂದು ಗುರುತಿಸಲಾಗಿದೆ. ಆದರೂ ಇವುಗಳ ತಿರುಳು ಗಟ್ಟಿಯಾಗಿಲ್ಲದ್ದರಿಂದ ಕಾದಂಬರಿ ಕ್ಷೇತ್ರದಲ್ಲಿ ಕ್ರಾಂತಿಯನ್ನು ಮಾಡಲಿಲ್ಲ. ಹಾಗೆಯೇ ಸ್ಪಾನಿಶ್ ಕಾದಂಬರಿಕಾರ ಸರ್ವಾಂಟೀಸನು ರಚಿಸಿದ 'ಡಾನ್ ಕಿಯೋಟೆ' ಎಂಬ ಹೆಸರಿನ ಕಾದಂಬರಿ ಹೆಚ್ಚು ಹೆಸರನ್ನುಗಳಿಸಿದೆ. ನಂತರ ಕ್ರಿ.ಶ. ೧೬೭೮ ರಲ್ಲಿ 'ಮಹಾಂದಲ ಪಾಯಟ್' ಫ್ರೆಂಚ್ ಭಾಷೆಯಲ್ಲಿ ರಚಿಸಿದ 'ಕ್ಲೆವಿಯರಾಜಕುಮಾರಿ'ಯ ಕತೆ ಪ್ರಕಟವಾಯಿತು. ಇದು ರಾಜಕುಮಾರಿಯ ಜೀವನ ಚರಿತ್ರೆಯಂತೆ ಕಂಡು ಬರುವುದಾದರೂ ದೀರ್ಘವಾದ ಕತೆಯಾಗಿರುವುದರಿಂದ ಮತ್ತು ಕಾದಂಬರಿಯ ಮಾದರಿಯಲ್ಲಿ ಸಾಗುವುದರಿಂದ ಇದನ್ನು ಮೊದಲ ಕಾದಂಬರಿಗಳ ಸಾಲಿನಲ್ಲಿ ಸೇರಿಸಲಾಗಿದೆ. ಆರಂಭಕಾಲದ ಪ್ರಥಮ ಪ್ರಯತ್ನವಾಗಿರುವುದರಿಂದ ಇದನ್ನು ಕಾದಂಬರಿಯ ಸ್ಥಾನದಲ್ಲಿರಿಸಬೇಕಾಯಿತು. ಕಾದಂಬರಿ ಪ್ರಕಾರದಲ್ಲಿ ಇಂಗ್ಲೀಷ್ ತನ್ನದೇ ಆದ ಪ್ರಾಧಾನ್ಯವನ್ನು ಪಡೆದಿರುವುದರಿಂದ ಆ ಭಾಷೆಯ ಮೊದಲ ಕಾದಂಬರಿಗಳ ಬಗ್ಗೆ ತಿಳಿಯಬೇಕಾದುದು ಅಗತ್ಯ ಕೆ.ಎಂ.ತರಗನ್ ಅವರು ಇಂಗ್ಲೀಷನ ಮೊದಲ ಕಾದಂಬರಿಗಳ ಕುರಿತು ಹೇಳುತ್ತ ಬನ್ಯನ ಪಿಲ್ಗ್ರಿಂಸ್ ಪ್ರೋಗ್ರೇಸ್ (Pilgrims Progress-1768) ಆಗಲಿ, ಡೇನಿಯಲ್ ಡಿಫೋನ ರಾಬಿನ್‌ಸನ್ ಕ್ರೂಸೋ (Robinson Cr0so-1719) ಆಗಲಿ, ಇಂಗ್ಲಿಷಿನ ಮೊದಲ ಕಾದಂಬರಿಯಲ್ಲವೆನ್ನುತ್ತಾರೆ. ಕೊಲಂಬಿಯಾ ಎನ್‌ಸೈಕ್ಲೋಪೀಡಿಯಾವು ಇಂಗ್ಲಿಷಿನ ಮೊದಲ ಕಾದಂಬರಿ 'ಪಮೆಲಾ' (೧೭೪೦) ಎಂದು ತಿಳಿಸುವ ಅಭಿಪ್ರಾಯವನ್ನು ತರಗನ್(ತಮಿಳು ಸಾಹಿತ್ಯ ಚಿಂತಕ) ಅವರು ಒಪ್ಪಿಕೊಳ್ಳುತ್ತಿಲ್ಲ. ಕಾರಣ ಪತ್ರರೂಪದಲ್ಲಿ ಸಾಗುವ ಈ ಕೃತಿ ಅಷ್ಟೇನೂ ಚೆನ್ನಾಗಿಲ್ಲವೆನ್ನುವ ತರಗನ್ ಅವರು ಇಂಗ್ಲೀಷ್‌ನ ಮೊದಲ ಕಾದಂಬರಿ ಟಾಮ್‌ಜಾನ್ಸ್ (Tom Johans)ನ Jain Austin Pride and prejudice (1749) ಎನ್ನುತ್ತಾರೆ.

Colaumbia Encyclopaedea ವು ಇಂಗ್ಲೀಷಿನ ಮೊದಲ ಕಾದಂಬರಿಯ ಕುರಿತು ತಿಳಿಸುತ್ತಾ, "The modern novel as we know it today, has its raise in the 18th century. But all the climents which went into the creation of the novel as a literary type were in existence. Long before Reichardson published pamela (1740) generally thought of the first modern novel"(ಜಿ. ಎಸ್. ಆಮೂರ, ಪುಟ. ೪, ೧೯೮೩). ಎನ್ನುತ್ತದೆ. ಇಲ್ಲಿ ರಿಚರ್ಡ್ಸನ್‌ನದ್ದು ಮೊದಲ ಆಧುನಿಕ ಕಾದಂಬರಿ ಎಂದು ಹೇಳಲಾಗಿದೆ. ಮಾತ್ರವಲ್ಲ ಸಾಹಿತ್ಯಕ ಗುಣವುಳ್ಳ ಕಾದಂಬರಿಗಳ ಉದಯ ಇದಕ್ಕಿಂತ ಮೊದಲೇ ಆಗಿದೆಯೆಂದು ತಿಳಿಸಲಾಗಿದೆ. ತರಗನ್ ಅವರು ಈ ವಿಚಾರದ ಬಗ್ಗೆ ಹೆಚ್ಚಿನ ವಿಚಾರ ಮಾಡಲಿಲ್ಲ. ಹಾಗಿದ್ದರೆ ಪಾಶ್ಚಾತ್ಯರ ಮೊದಲ ಕಾದಂಬರಿ ಫ್ರೆಂಚ್ ಭಾಷೆಯಲ್ಲಿ ಉಗಮಗೊಳ್ಳುತ್ತಿರುವಾಗಲೆ ಸಾಹಿತ್ಯ ಗುಣವುಳ್ಳ ಇಂಗ್ಲಿಷಿನ ಮೊದಲ ಕಾದಂಬರಿಗಳು ಹುಟ್ಟಿರಬೇಕೆಂದು ಊಹಿಸಿಬಹುದು (ಎಕ್ರಮ್ ಡಿಸೋಜ - ಪುಟ-೫, ೨೦೦೧) ೧೭೪೦ರಲ್ಲಿ ಪ್ರಕಟಗೊಂಡ ರಿಚರ್ಡ್ಸನ ''ಪಮೇಲಾ''ದ ಅನಂತರದ ಮಹತ್ವದ ಕಾದಂಬರಿಗಳಲ್ಲಿ ವಾಲ್ಟರ್‌ನ ಸ್ಕಾಟನ ಇವಾನೋ (Ivano), ಥಾಕ್ರಿಯ ವ್ಯಾನಿಟಿಫೇರ್ (Vanity far) ಡಿಕನ್ಸ್‌ನ 'ಡೇವಿಡ್ ಕೋಪರ್ ಫೀಲ್ಡ್' (David copper Field), ಜಾರ್ಜ್ ಇಲಿಯೆಟನ' ಮಿಲ್ ಆನ್‌ದ ಫ್ಲೋಸ್' (Mill on the flows), ಥಾಮಸ್ ಲಾರ್ಡಿಯ 'ರಿಟರ್ನ್ ಆಫ್‌ದ ನೇಟಿವ್' (Return of the native) ಮುಂತಾದವುಗಳು ಸೇರುತ್ತವೆ.

ಕಾದಂಬರಿಯ ಉಗಮಕ್ಕೆ ನಿರ್ದಿಷ್ಟ ಕಾರಣ ಒದಗಿಸುವುದು ಕಷ್ಟ ಸಾಧ್ಯ ಕೆಲವೊಂದು ಕಾರಣಗಳನ್ನು ಅಧ್ಯಯನ ಹಾಗೂ ಊಹೆಯಿಂದ ಈ ತನಕ ಹೇಳಲಾಗಿದ್ದರೂ ಜಗತ್ತಿನ ಮೊತ್ತ ಮೊದಲ ಕಾದಂಬರಿಯನ್ನು ರಚಿಸಿದ ವ್ಯಕ್ತಿ ಅದನ್ನು ಹೇಗೆ ಮತ್ತು ಯಾವ ಕಾರಣದಿಂದ ಬರೆದನೆಂದು ನಿರ್ದಿಷ್ಟವಾಗಿ ಹೇಳಲಾಗದು. ಆದರೆ ಕಾದಂಬರಿಯೆಂಬ ಪ್ರಕಾರವು ಸಮಾಜದ ಜತೆಯಲ್ಲೇ ಅದಕ್ಕೆ ಹೊಂದಿಕೊಂಡು, ಅದರ ಒಳಿತು ಕೆಡುಕುಗಳನ್ನು ವಿಮರ್ಶಿಸುತ್ತ ಹುಟ್ಟಿಕೊಂಡಿತು, ಮುಂದುವರಿಯುತ್ತಾ ಬಂದಿದೆ. ಸಮಾಜದ ಸಂಬಂಧ ಅಥವಾ ಬಂಧನದಿಂದ ದೂರ ಉಳಿದ ಕಾದಂಬರಿಗಳು ಇಲ್ಲ.

ಇದ್ದರೂ ಇವು ಕಾದಂಬರಿಗಳೆಂಬ ಹೆಸರಿನಿಂದ ಕರೆಸಿಕೊಳ್ಳಲು ಅನರ್ಹವಾಗುತ್ತವೆ. ಕಾವ್ಯಗಳಲ್ಲೂ ಮಹಾಕಾವ್ಯಗಳಲ್ಲೂ ರಸಾಸ್ವಾದನೆಯನ್ನು ಗಳಿಸುತ್ತಿದ್ದ ಜನರು ಒಮ್ಮಿಂದೊಮ್ಮೆ ಹೊಸತೊಂದು ಸಾಹಿತ್ಯ ಪ್ರಕಾರಕ್ಕೆ ಅಂಟಿಕೊಂಡದ್ದು ಆಕಸ್ಮಿಕವಾದರೂ ವಿಚಿತ್ರವೇನೂ ಅಲ್ಲ.

ಕಾದಂಬರಿಯು ಒಂದು ಕಾಲಘಟ್ಟದ ಸಮಾಜದ ಪರಿವರ್ತನೆಯ ಫಲವಾಗಿದೆ. ಹಳೆಯ ಜಾಡಿನ ಸಾಹಿತ್ಯ ಕೃತಿಗಳನ್ನು ಓದಿ ಬೇಸತ್ತ ಜನರು ಹೊಸ ಮಾರ್ಗವೊಂದರ ಹುಡುಕಾಟದಲ್ಲಿದ್ದರು. ಯುದ್ಧಗಳೂ ಅಧಿಕಾರಿ ವರ್ಗದ ದೌರ್ಜನ್ಯವೂ ಜನರನ್ನು ಕಂಗೆಡಿಸಿದ್ದವು. ಈ ಸಂದರ್ಭದಲ್ಲಿ ಮನಸ್ಸನ್ನು ಬೇರೆಡೆಗೆ ಕೇಂದ್ರೀಕರಿಸಲು ಅಥವಾ ನಿಶ್ಚಿತ ಕಾಲದ ತನಕ ನಿರಾಳವಾಗಿರಲು ಕಾದಂಬರಿಯಂಥ ಓದುವ ಮಾಧ್ಯಮವೊಂದರ ನಿರೀಕ್ಷೆಯಲ್ಲಿದ್ದ ಸಮಾಜ ಈ ಪ್ರಕಾರವನ್ನು ಆದರದಿಂದ ಬರಮಾಡಿಕೊಂಡಿತು. ''ಯುರೋಪಿನಲ್ಲಿ ಕಾದಂಬರಿಯ ಉಗಮಕ್ಕೂ ಬಂಡವಾಳ ಶಾಹಿಯ ಪ್ರಭುತ್ವಕ್ಕೂ ನಿಕಟ ಸಂಬಂಧವಿದೆ. ಔದ್ಯೋಗಿಕ ಕ್ರಾಂತಿಯ ಅನಂತರ ಫ್ಯೂಡಲ್ ಆರ್ಥಿಕ ಹಾಗೂ ಸಾಮಾಜಿಕ ವ್ಯವಸ್ಥೆಯು ಕುಸಿಯ ತೊಡಗಿತು. ಕೆಳವರ್ಗ ಮೇಲ್ಮೈ ಸಾಧಿಸಿದ ಅನಂತರ ಕಾದಂಬರಿ ಅದರ ಆಶೋತ್ತರಗಳಿಗೆ ಪ್ರತಿಸ್ಪಂದಿಸತೊಡಗಿತು. ಅದಕ್ಕೂ ಮೊದಲು ಯುರೋಪದ ಪ್ರಪ್ರಥಮ ಕಾದಂಬರಿಯೆಂದು ಗುರುತಿಸಲಾದ ಸರ್ವಾಂಟೀಸನ ಡಾನ್ ಕ್ವಿಕ್ಸೊಟೆಯುರೋಪಿನ ಮಧ್ಯಕಾಲೀನ ಸಾಂಸ್ಕೃತಿಕ ಮಾದರಿಯನ್ನು ಗೇಲಿ ಮಾಡುವುಗಕ್ಕೆಂದೇ ಹುಟ್ಟಿಕೊಂಡಿತು. ಈ ಶ್ರೇಷ್ಠಕೃತಿಯೊಂದಿಗೆ ರೋಮನ್ ಕಾಲ ಮುಗಿದು ಕಾದಂಬರಿಯ ಯುಗ ಪ್ರಾರಂಭವಾಯಿತು'' (ಆಮೂರ ಜಿ. ಎಸ್.೨೦೦೧ ಪುಟ-೩) ಗಾರ್ಗನ್‌ವಾಯ್ ಹಾಗೂ ವಾಂಟುಗ್ರೊವಲ್ ಮುಂತಾದ ಕಾದಂಬರಿಗಳು ಕೂಡ ಮೇಲಿನ ಮಾತಿನಂತೆ ರೊಮ್ಯಾಂಟಿಕ್ ಕಾಲಕ್ಕೆ ಸೇರುತ್ತವೆ. ಮಹೇಶ್ವರಿ ಅವರು ಕಾದಂಬರಿಗಳ ಉಗಮದ ಬಗ್ಗೆ ಚರ್ಚಿಸುತ್ತಾ ಕೈಗಾರಿಕಾ ಕ್ರಾಂತಿಯ ಫಲವಾಗಿ ,ಬಂಡವಾಳಶಾಹಿ ಪರಿಣಾಮ, ಕ್ಷಿಪ್ರ ಬದಲಾವಣೆಗಳಿಂದ, ಹೊಸ ಮಧ್ಯಮ ವರ್ಗದ ಅವಶ್ಯಕತೆಗಳಿಗನುಗುಣವಾಗಿ ಕಾದಂಬರಿ ಪ್ರಕಾರ ಹುಟ್ಟು ಪಡೆದಿದ್ದು ಐತಿಹಾಸಿಕ ಸತ್ಯ.

ಉತ್ಪಾದನೆ, ಸಾಮಾಜಿಕ ಬದುಕಿನಿಂದ ಹೆಣ್ಣು ಹೊರಗೆ ಉಳಿಯಬೇಕಾದುದು ಸಹಜವಾಯಿತು. ಅದು ಹೆಂಗಸರಿಗೆ ವಿರಾಮ ಕಾಲವಾಯಿತು. ಬೇಟೆಯೇ ಮುಂತಾದ ಪುರುಷರ ಹವ್ಯಾಸಗಳಲ್ಲಿ ಪಾಲ್ಗೊಳ್ಳಲು ಸಾಧ್ಯವಾಗದ ಕಾರಣ ಅವರಿಗೆ ಓದು ವ್ಯಸನವಾಯಿತು. ಅವರ ಅಗತ್ಯವನ್ನು ಪೂರೈಸಲು ಕಾದಂಬರಿ ಪ್ರಕಾರದ ಉಗಮವಾಯಿತು. (ಯು. ಮಹೇಶ್ವರಿ - ೧೦, ೨೦೦೧). ಇದು ಒಂದು ಲಿಂಗಕ್ಕೆ ಸಂಬಂಧಪಟ್ಟ ವಿಚಾರವಾದರೂ ಇದೇ ಸ್ಥಿತಿಯ ಬೆಳವಣಿಗೆ ಮುಂದೆ ಪುರುಷರನ್ನೂ ಕಾದಂಬರಿ ತನ್ನ ಬಗಲಿಗೆ ಸೆಳೆದುಕೊಂಡು ಬೆಳೆಯಲು ಸಾಧ್ಯವಾಯಿತು ಎಂಬ ಊಹೆಗೆ ಅಡ್ಡಿಯಿಲ್ಲ. ಹೀಗೆ ಜನಪ್ರಿಯತೆಯನ್ನು, ಅಭಿಮಾನವನ್ನು ಗಳಿಸಿದ ಕಾದಂಬರಿ ಪ್ರಕಾರ ಅನಂತರ ಸಾಕಷ್ಟು ಏಳು ಬೀಳುಗಳನ್ನು ಕಂಡುಕೊಂಡು ಮುಂದುವರಿದಿದೆ ಮುಂದುವರಿಯುತ್ತಿದೆ.

೩.೨ ಭಾರತೀಯ ಸಂದರ್ಭದಲ್ಲಿ ಕಾದಂಬರಿ

ಭಾರತೀಯ ಸಾಹಿತ್ಯಕ್ಕೆ ಕಾದಂಬರಿ ಪ್ರಕಾರ ಹೊಸದಾದ್ದು, ಸಂಸ್ಕೃತ ಮತ್ತು ಇತರ ಪ್ರಾದೇಶಿಕ ಭಾಷೆಗಳಲ್ಲಿ ಅದುವರೆಗೂ ಕಾದಂಬರಿ ಸ್ವರೂಪದ ಕೃತಿ ರಚನೆಯಾಗಿರಲಿಲ್ಲ. ಸಂಸ್ಕೃತದಲ್ಲಿ ಬಾಣರಚಿತ 'ಕಾದಂಬರಿ ಗದ್ಯದಲ್ಲಿದ್ದುದು ಒಂದು ವಿಶೇಷ. ಜೊತೆಗೆ ಈ ಕಾದಂಬರಿ ಸ್ವತಂತ್ರವಾದ ಒಂದು ಪ್ರೇಮಕತೆಯಾಗಿದ್ದು ಈಗ ಕಾದಂಬರಿ ಎಂದು ಗುರುತಿಸುವ ಪ್ರಕಾರದ ಹಲವು ಲಕ್ಷಣಗಳನ್ನು ಹೊಂದಿತ್ತು. ಆದರೆ ಈ ಪರಂಪರೆ ಹೆಚ್ಚಾಗಿ ಬೆಳೆಯದಿದ್ದುದು ದುರ್ದೈವ. ಬಹುಶಃ ಆ ಕಾಲದ ಪಂಡಿತರಲ್ಲಿ ಗದ್ಯದ ಬಗೆಗೆ ಆಸಕ್ತಿ ಕಡಿಮೆ ಇದ್ದಂತೆ ತೋರಿಬರುತ್ತದೆ. ಕಾರಣವೇನೇ ಇದ್ದರೂ ಗದ್ಯ ಪ್ರಬಲ ಮಾಧ್ಯಮವಾಗಿ ಪ್ರಚಲಿತದಲ್ಲಿರಲಿಲ್ಲ ಎನ್ನುವುದು ವಾಸ್ತವ.

ಭಾರತದಲ್ಲಿ ಹತ್ತೊಂಬತ್ತನೇ ಶತಮಾನದ ಮಧ್ಯಭಾಗಕ್ಕೆ ಕಾದಂಬರಿ ತನ್ನ ಮೊದಲ ಹೆಜ್ಜೆಗಳನ್ನು ಇಡತೊಡಗಿತು. ಈ ಬದಲಾವಣೆಯನ್ನು ಹಲವು ಅಂಶಗಳು ಪ್ರಭಾವಿಸಿವೆ. ಆಂಗ್ಲ ವಿದ್ಯಾಭ್ಯಾಸವೇ ಮಹತ್ವದ ಬದಲಾವಣೆಗಳಿಗೆ ಮುಖ್ಯಕಾರಣ. ಭಾರತಕ್ಕೆ ಆಂಗ್ಲರು ಬಂದ ನಂತರವೇ ಭಾರತೀಯರಲ್ಲಿ ಹೊಸ ಎಚ್ಚರ ಮೂಡಿತೆನ್ನಬಹುದು. ಅವರ ವಿದ್ಯಾಭ್ಯಾಸ ಪದ್ಧತಿ, ಸಾಹಿತ್ಯ ಇತಿಹಾಸ, ರಾಜಕೀಯ ಚಿಂತನೆಗಳು ಮತ್ತು ಅವರ ಕ್ರಾಂತಿಗಳು ತೀವ್ರವಾಗಿ ಪ್ರಭಾವಿಸಿದವು. ''ಭಾರತೀಯ ಕಾದಂಬರಿ ಭಾರತೀಯ ಅಭಿಜಾತ ಪರಂಪರೆಗಿಂತ ಪಾಶ್ಚಾತ್ಯ ಮಾದರಿ ಮತ್ತು ಪ್ರಭಾವಗಳಿಗೆ ಹೆಚ್ಚು ಋಣಿಯಾಗಿದೆ''. (ಶಿವರುದ್ರಪ್ಪ ಜಿ. ಎಸ್. (ಸಂ) ೧೯೭೭, ಪುಟ ೬೧೪) ಆದರೆ ಈ ಅಭಿಪ್ರಾಯವನ್ನು ಇಡಿಯಾಗಿ ಒಪ್ಪಲಾಗುವುದಿಲ್ಲ. ಭಾರತೀಯ ಕಾದಂಬರಿಗೆ ರೂಪದಲ್ಲಷ್ಟೇ ಪಾಶ್ಚಾತ್ಯರ ಪ್ರಭಾವ ಚಿಂತನೆಗಳು ಪ್ರಭಾವ ಬೀರಿರುವುದನ್ನು ಗಮನಿಸಬಹುದು. ಅದರ ಹೊರತಾಗಿ ಭಾರತೀಯ ಅಭಿಜಾತ ಪರಂಪರೆಯ ವಸ್ತುವಿನಲ್ಲಿ, ಪಾತ್ರಪೋಷಣೆಯಲ್ಲಿ ಕೊನೆಗೆ ತೀರ್ಮಾನದ ಸಮಯದಲ್ಲಿ ತನ್ನತನ ಕಾಯ್ದುಕೊಂಡಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು.

ಇತ್ತೀಚಿನ ಕಾದಂಬರಿಗಳಲ್ಲಿ ಪಾಶ್ಚಾತ್ಯ ಚಿಂತನೆಯ ಪ್ರಭಾವವಿರುವುದನ್ನು ಗುರುತಿಸಬಹುದು. ಆದರೆ ಜಾಗತೀಕರಣದಿಂದಾಗಿ ಮೂಡುತ್ತಿರುವ ಚಿಂತನೆಗಳು ಜಗತ್ತಿನಾದ್ಯಂತ ಸಮಾನ ರೀತಿಯಲ್ಲಿ ರೂಪುಗೊಳ್ಳುತ್ತಿವೆ, ಇಂತಹ ಸಂದರ್ಭ ಪಾಶ್ಚಾತ್ಯ - ಪೌರಾತ್ಯ ಪ್ರಭಾವ ಯಾವುದು ಎಂದು ಸ್ಪಷ್ಟವಾಗಿ ಗುರುತಿಸಲಾಗುವುದಿಲ್ಲ.

ಪ್ರಾರಂಭ ಘಟ್ಟದಲ್ಲಿ ಆಂಗ್ಲರ ಪ್ರಭಾವವನ್ನು ಸ್ಪಷ್ಟವಾಗಿ ಗುರುತಿಸಿಕೊಳ್ಳಲಾಗಿದೆ. ಸಕಾರಾತ್ಮಕವಾಗಿ ಇಲ್ಲವೇ ನಕಾರಾತ್ಮಕವಾಗಿ ಪ್ರಭಾವ ಬೀರಿರುವುದನ್ನು ಗುರುತಿಸಬಹುದು. ''ಭಾರತೀಯರು ತಮ್ಮ ಸಂಸ್ಕೃತಿಯನ್ನು ಅನ್ಯ ಸಂಸ್ಕೃತಿಗಳ ಮೌಲ್ಯಗಳ ಬೆಳಕಿನಲ್ಲಿ ಪರೀಕ್ಷಿಸಿದ್ದು ಅನ್ಯ ವಿಮರ್ಶೆಯ ಸ್ವೀಕೃತಿಯಿಂದಾಗಿ ಸ್ವ-ಸಂಸ್ಕೃತಿಯ ನಾಶದ ಭಯವೂ ಭಾರತೀಯರನ್ನು ಆವರಿಸಿಕೊಂಡಿತು'' ಎಂದು ಜಿ. ಎಸ್. ಆಮೂರರು ಗುರುತಿಸುತ್ತಾರೆ (ನಾಗರಾಜ್ ಜಿ. ಆರ್. ೧೯೯೭;ಪುಟ ೧೮) ಹೀಗೆ ಅನ್ಯ ಸಂಸ್ಕೃತಿಯೊಂದಿಗೆ ತುಲನೆ ಮಾಡಿಕೊಂಡು ಪರೀಕ್ಷಿಸಿಕೊಳ್ಳುವಾಗ ಭಾರತೀಯರಲ್ಲಿದ್ದ ಹಲವು ದೋಷಯುಕ್ತ ಸಂಪ್ರದಾಯಗಳು, ನಂಬಿಕೆ ಆಚರಣೆಗಳು ಪುನರ್ ಮೌಲ್ಯೀಕರಣಕ್ಕೆ ಒಳಗಾದವು. ಇವುಗಳನ್ನು ಪಾಶ್ಚಾತ್ಯ ಚಿಂತನೆಯ ಬೆಳಕಿನಲ್ಲಿ ಪರೀಕ್ಷಿಸುವಾಗಲೂ ಭಾರತೀಯ ಕಾದಂಬರಿಯ ಸಂದರ್ಭ ತನ್ನೊಳಗೊಂದು ವಿರೋಧವನ್ನು ಇಟ್ಟುಕೊಂಡಿದೆ. ''ಮಲಯಾಳೀ ಭಾಷೆಯಿಂದ ತುರ್ಜುಮೆಯಾದ ಸುಕುಮಾರಿಯ ಮುನ್ನುಡಿಯಲ್ಲಿ ಈ ಕಾಲಕ್ಕೆ ಇಂಗ್ಲೀಷ್ ಕಲಿತವರಿಗೆ 'ನೋವೆಲ್ಸ್' ಎಂಬ ಕಾದಂಬರಿಗಳನ್ನು ಓದುವ ಅಭಿರುಚಿ ಶಾನೆ ಹತ್ತಿದೆ. ಯಾವ ಭಾಷೆಯಲ್ಲಾಗಲೀ ಕಾದಂಬರಿಗಳು ಓದುವರೆಲ್ಲರ ಮುಖ್ಯತಾ ಯೌವನ ಪ್ರಾಯದವರ ಮನಸ್ಸನ್ನು ಕೆಡಿಸುವ ವಿಷ ಬೆರೆಸಿದ್ದಾಗಿರುತ್ತದೆ. ಇದನ್ನು ತಡೆಯುವ ಉದ್ದೇಶದಿಂದ ಈ ಸುಕುಮಾರಿ ಎಂಬ ಪದ್ಯವನ್ನು ರಚಿಸಿದ್ದಾರೆ. ಎಂದು ಉಲ್ಲೇಖಿಸಿರುವುದನ್ನು ಗಮನಿಸಿದಾಗ ಕಾದಂಬರಿಯ ಬಗೆಗಿದ್ದ ತಿರಸ್ಕಾರ ಮತ್ತು ಅನುಮಾನದ ಮನೋಭಾವವನ್ನು ಕಾಣಬಹುದು. ಕನ್ನಡದ ಮೊದಲ ಸಾಮಾಜಿಕ ಕಾದಂಬರಿ 'ಇಂದಿರಾಬಾಯಿ ಕಾದಂಬರಿಯು 'ಸದ್ಧರ್ಮವಿಜಯ' ಎಂಬ ಹೆಸರು ಹೊತ್ತಿರುವುದನ್ನು ಗಮನಿಸುವಾಗ ವಿರೋಧದ ನೆಲೆ ಸ್ಪಷ್ಟವಾಗುತ್ತದೆ.

ಹಲವು ಸಾಂಸ್ಕೃತಿಕ ವೈವಿಧ್ಯತೆಗಳ ನಡುವೆಯೂ ಭಾರತ ಸಮಗ್ರತೆಯ ನೆಲೆಯಲ್ಲಿ ತನ್ನತನವನ್ನು ಕಾಯ್ದುಕೊಂಡಿದೆ. ಅದು ಸಾಹಿತ್ಯದಲ್ಲೂ ಬಿಂಬಿತವಾಗಿದೆ. ಅಂದರೆ ಸಂಸ್ಕೃತಿಗಳು ಮುಖಾಮುಖಿಯಾದಾಗ ಕೊಡುಕೊಳ್ಳುವಿಕೆಯ ಜೊತೆಗೆ ಸಂಘರ್ಷ ಇರುತ್ತದೆ. ಆ ಸಂಘರ್ಷದ ಅಭಿವ್ಯಕ್ತಿಗೆ ಸಮರ್ಥವಾದ ಮಾಧ್ಯಮ ಒಂದು ಅಗತ್ಯವಾಗಿರುತ್ತದೆ. ಏಕೆಂದರೆ ಆ ಮಾಧ್ಯಮ ಆ ಸಂಘರ್ಷಗಳನ್ನೆಲ್ಲ ತನ್ನೊಳಗೆ ಚರ್ಚಿಸಲು ಅವಕಾಶ ಮಾಡಿಕೊಂಡಿರಬೇಕು. ''ಮೂರನೇ ಜಗತ್ತಿನಲ್ಲಿ ಕಾದಂಬರಿಯ ಉಗಮ ಇರುವುದು ವಸಾಹತೀಕರಣದ ಜೊತೆಗೆ ಅಥವಾ ಇನ್ನೂ ನಿರ್ದಿಷ್ಟವಾಗಿ ಹೇಳುವುದಾದರೆ ಪರಕೀಯ ಯಜಮಾನ ಸಂಸ್ಕೃತಿ ದೇಸಿ ಸಂಸ್ಕೃತಿಗಳ ನಡುವಿನ ಮುಖಾಮುಖಿಯಲ್ಲಿ ಕಾದಂಬರಿ ಪ್ರಕಾರ ಹುಟ್ಟುತ್ತದೆ''. (ಶ್ರೀನಿವಾಸ ಹಾವನೂರ್;೨೦೦೦;೨೧೪) ವಸಾಹತೀಕರಣದ ಕಾರಣವಾಗಿಯೇ ಭಾರತದಂತಹ ಮೂರನೇ ಜಗತ್ತಿನಲ್ಲಿ ಕಾದಂಬರಿ ಜನ್ಮತಳೆಯಿತು. ಭಾರತ ಎಲ್ಲ ಸಂಸ್ಕೃತಿಗಳ, ಧರ್ಮಗಳ ಸಾರವನ್ನು ತನ್ನೊಳಗೆ ಸೇರಿಸಿಕೊಂಡು ಬಂದಿದೆ. ಹಾಗೆಯೇ ಪಾಶ್ಚಾತ್ಯ ಸಂಸ್ಕೃತಿ ಮತ್ತು ಕ್ರಿಶ್ಚಿಯನ್ ಧರ್ಮಕ್ಕೆ ತೋರಿದ ಪ್ರತಿಕ್ರಿಯೆ ಹೊಸಗನ್ನಡದ ಆರಂಭದ ಸಾಹಿತ್ಯದಲ್ಲಿ ಸ್ಪಷ್ಟವಾಗಿ ನಿರೂಪಿಸಲ್ಪಟ್ಟಿದೆ. ಪಾಶ್ಚಾತ್ಯ ಸೇವಾ ಮನೋಭಾವನೆಯನ್ನು ಭಾರತೀಯ ಲೇಖಕರು ಪಾಶ್ಚಾತ್ಯರ ಮನೋಭಾವನೆಯನ್ನು ಸ್ವಾಗತಿಸುತ್ತಾ ಅವರ ಧರ್ಮ ಪ್ರಚಾರ ಹಾಗೂ ಸಂಸ್ಕೃತಿಯ ಹೇರಿಕೆಯನ್ನು ಪರೋಕ್ಷವಾಗಿ ವಿರೋಧಿಸಿದರು. ಈ ಸಂಘರ್ಷಗಳೆಲ್ಲವನ್ನು ಅಭಿವ್ಯಕ್ತಪಡಿಸಲು ಕಾದಂಬರಿ ಪ್ರಕಾರವು ಸಮರ್ಥ ವೇದಿಕೆಯನ್ನು ಒದಗಿಸಿತು. ಒಂದು ಸಮುದಾಯದ, ಜನಾಂಗದ ಸಾಂಸ್ಕೃತಿಕ ಅನುಭವದ ಅಭಿವ್ಯಕ್ತಿಗೆ ಕಾದಂಬರಿಯೆಂಬ ವಿಶಾಲ ವ್ಯಾಪ್ತಿಯಲ್ಲಿ ನಿರೂಪಿಸಲು ಸಹಾಯವಾಯಿತು.

ಬಂಗಾಳದಲ್ಲಿ ಮೊದಲು ಕಾದಂಬರಿ ರಚನೆಯಾದದ್ದು ಬ್ರಿಟಿಷರು ಭಾರತವನ್ನು ಆಳಲು ಪ್ರಾರಂಭಿಸಿದ ಅನಂತರವೇ. ಬ್ರಿಟಿಷರ ಆಳ್ವಿಕೆ ಪ್ರಾರಂಭವಾದ ಅನಂತರ ಬಂಗಾಳಿ ಸಮಾಜದಲ್ಲಿ ಮಹತ್ತರವಾದ ಬದಲಾವಣೆಗಳಾದವು. ಈ ಬದಲಾವಣೆಗಳು ಗ್ರಾಮೀಣ ಜೀವನ ಹಾಗೂ ನಗರ ಕೇಂದ್ರಗಳ ಹುಟ್ಟು ಇವುಗಳೊಡನೆ ಒಂದಾದವು. ಮೂಲದಲ್ಲಿ ಸಾಹಿತ್ಯವು ಮೌಖಿಕವಾಗಿದ್ದಿತು.

೧೮ನೇಯ ಶತಮಾನದ ಕೊನೆಭಾಗದಲ್ಲಿ ಮುದ್ರಣಾಲಯ ಮತ್ತು ಬಿಡಿ ಬಿಡಿಯಾದ ಅಚ್ಚಿನ ಮೊಳೆಗಳು ಭಾರತಕ್ಕೆ ಪರಿಚಯವಾದವು. ಆಗಿನಿಂದ ಭಾರತದಲ್ಲಿ ಸಾಹಿತ್ಯ ಸ್ವರೂಪ ಬದಲಾವಣೆ ಕಾಣಲು ಪ್ರಾರಂಬಿಸಿತು. ಸಾಹಿತ್ಯವು ಲಿಖಿತವಾಯಿತು. ಹೀಗೆ ಸಾಹಿತ್ಯವು ಮೌಖಿಕದಿಂದ ವೈಯಕ್ತಿಕ ಅನುಭವಕ್ಕೆ ಪರಿವರ್ತನೆಹೊಂದಿತು. ಈ ರೀತಿಯಾಗಿ ಸಾಹಿತ್ಯವನ್ನು ಸೃಷ್ಟಿಸುತ್ತಾ ಅದನ್ನು ಉಪಯೋಗಿಸುತ್ತ ಇದ್ದ ವರ್ಗವು ನಗಿರೀಕರಣದ ಫಲವಾಗಿತ್ತು. ಭಾರತದಲ್ಲಿ ವರ್ಗಭೇದಗಳು ವರ್ಣಭೇದಗಳೊಡನೆ ನಿಕಟ ಸಂಬಂಧ ಪಡೆದಿದ್ದುವು. ಪ್ರಾರಂಭದಿಂದಲೂ ಶಿಕ್ಷಣ ಪಡೆದವರು ಮೇಲ್ಜಾತಿಯವರು. ಬಂಗಾಳದಲ್ಲಿ ಮೊದಲು ಬರೆದವರು ಮೇಲ್ಜಾತಿ ಲೇಖಕರು. ೧೯ನೇ ಶತಮಾನದಲ್ಲಿ ಬಂಗಾಳದಲ್ಲಿ ಶಾಲಾ ಕಾಲೇಜುಗಳ ಸ್ಥಾಪನೆಗೊಂಡವು. ಇದರಿಂದ ಬಂಗಾಳದ ಸಾಹಿತ್ಯದಲ್ಲಿ ಬದಲಾವಣೆ ಬಹುಬೇಗ ಕಾಣಿಸಿಕೊಂಡಿತು. ತೇಕ್‌ಚೆಂದ್ ಟಾಕುರರು ರಚಿಸಿದರು. ಪ್ರಥಮ ಬಂಗಾಳಿ ಕಾದಂಬರಿ 'ಆಲಾಲೆರ್ ಘರೆರ್ ದುಲಾಲ್' (ಮುದ್ದಿನಿಂದ ಕೆಡೆಸಿದ ಮಗು ೧೮೫೬) ರಲ್ಲಿ ಪ್ರಕಟವಾಯಿತು. ಕ್ರಿ.ಶ ೧೮೯೫ ರಲ್ಲಿ 'ದುರ್ಗೇಶನಂದಿನಿ' ಎಂಬ ಹೆಸರಿನ ಕಾದಂಬರಿಯೊಂದು ಪ್ರಕಟವಾಯಿತು. ಈ ಅವಧಿಯಲ್ಲಿ ಮರಾಠಿ ಭಾಷೆಯಲ್ಲಿ ೧೮೫೦-೭೭ರಲ್ಲಿ ಕಾದಂಬರಿ ಪ್ರಕಾರ ಉದಯವಾಯಿತು. ಕಾದಂಬರಿ ರೂಪ ಬರುವುದಕ್ಕಿಂತ ಮುಂಚೆ ಹಳೆಯ ಪುರಾಣ ಕಥೆಗಳನ್ನು ಹೇಳುವುದು, ಕೇಳುವುದು ಮನುಷ್ಯರ ಸ್ವಾಭಾವಿಕ ಗುಣ. ಕಾಲಕ್ರಮೇಣ ಆಧುನಿಕತೆಯು ಭಾರತೀಯರಲ್ಲಿ ಪ್ರವೇಶಿಸಿದ ನಂತರ ಮೊದಲು ಬಂಗಾಳದಲ್ಲಿ ನಂತರ ಮರಾಠಿ ಸಾಹಿತ್ಯದಲ್ಲಿ ಗದ್ಯ ಪ್ರಕಾರ ಕಾಣಿಸಿ ಕೊಂಡಿತು. ಭಾರತೀಯರ ಮೇಲೆ ಬ್ರಿಟಿಷರ ಆಡಳಿತ ಎರಡು ರೀತಿಯಲ್ಲಿ ಪ್ರಭಾವ ಬೀರಿದೆ. ಒಂದು ಕ್ರೈಸ್ತ ಪಾದ್ರಿಗಳ ಧರ್ಮಭೋಧೆ ಮತ್ತು ಪ್ರಕಟಣೆಗಳು, ಇನ್ನೊಂದು ಉದಾರ ವಿಚಾರವಾದಿಗಳಾದ ಮಿಲ್ ಹಾಗೂ ಸ್ಪೆನ್ಸರ್ ಅವರ ಕೃತಿಗಳು ಮರಾಠಿ ಸಾಮಾಜಿಕ ಕಾದಂಬರಿಗಳು. ಮರಾಠಿ ಭಾಷೆಯಲ್ಲಿ ಈ ಸಾಹಿತ್ಯ ರೂಪಕ್ಕೆ 'ಕಾದಂಬರಿ' ಎನ್ನುತ್ತಾರೆ. ಕ್ರಿ.ಶ. ೧೮೫೭ರಲ್ಲಿ ಬಾಬಾ ಪದಮುಂಜಿ ಬರೆದ 'ಯಮುನಾ ಪರ್ಯಟನ' ಎಂಬ ಕೃತಿಯೇ ಮೊತ್ತಮೊದಲ ಮರಾಠಿ ಕಾದಂಬರಿಯೆಂದು ಗ್ರಹಿಸಲಾಗಿದೆ. ಹರಿಕೇಶವಟೆ, ಬಾಬಾಪದಮುಂಜಿ ಲಕ್ಷ್ಮಣಶಾಸ್ತ್ರೀ ಹಳಬೆ, ಆರ್.ಬಿ.ಗುಂಜೀಕರ ಮತ್ತು ಎಂ.ಕೆ.ವಿಜಯಕರ ಮೊದಲಾದ ಲೇಖಕರು ಮರಾಠಿ ಕಾದಂಬರಿ ಸಾಹಿತ್ಯಕ್ಕೆ ವಿಶಿಷ್ಟ ಅಸ್ತಿಭಾರವನ್ನು ಹಾಕಿದರು.

ಅನಂತರ ಬಂದ ಹರಿನಾರಾಯಣ ಆಪ್ಟೆ(೧೮೯೪-೧೯೧೯) ಯವರ ಅಸಾಧಾರಣ ಕಥಾನಾತ್ಮಕ ಪ್ರತಿಭೆಯಿಂದ, ಅದು ಪ್ರಬುದ್ಧವಾಯಿತು. ಹರಿನಾರಾಯಣ ಆಪ್ಟೆ ಪ್ರತಿಭಾ ಸಂಪನ್ನರಾದರೂ ಮೊದಮೊದಲು, ರೇನಾಲ್ವರ ಕಾದಂಬರಿ 'ಮಿಸ್ಟರೀಸ್ ಆಫ್ ಓಲ್ಡ್ ಲಂಡನ್'ದ ಶೈಲಿಯಲ್ಲಿ ಹೆಜ್ಜೆ ಹಾಕಿ ಅನಂತರ ಆ ಹಾದಿಯನ್ನು ಬಿಟ್ಟು ಮರಾಠಿಯ ಮೊದಲು ಸಾಮಾಜಿಕ ಕಾದಂಬರಿ 'ಮಧಲಿ ಸ್ಥಿತಿ' ಯನ್ನು ಬರೆದರು. ೧೮೬೧ ರಲ್ಲಿ ಲಕ್ಷ್ಮಣಶಾಸ್ತ್ರಿ ಹಳಬೆ ಬರೆದ ಕಾಲ್ಪನಿಕ ಕಾದಂಬರಿ 'ಮುಕ್ತಮಾಲಾ' ಕಾದಂಬರಿ ಪ್ರಕಾರದ ಹಲವು ಮುಖಗಳನ್ನು ಒಳಗೊಂಡಿರುವುದರಿಂದ ಇದನ್ನು ಮೊದಲ ಮರಾಠಿ ಕಾದಂಬರಿಯೆಂದು ಗುರುತಿಸಲಾಗುತ್ತದೆ. ೧೮೭೧ರಲ್ಲಿ ಆರ್.ಬಿ. ಗುಂಜೀಕರ (೧೮೪೩-೧೯೦೧) ಬರೆದ 'ಮೊಚನಗಡ' (ಒಂದು ಕೋಟೆಯ ಹೆಸರು ೧೮೭೧) ಮೊದಲ ಐತಿಹಾಸಿಕ ಕಾದಂಬರಿಯೆಂದು ನಂಬಲಾಗಿದೆ. ಈ ಮೇಲಿನ ಬರಪಗಳಿಗೆ ಮೊದಲು ಹರಿ ಕೇಶವಜಿ (೧೮೦೪-೧೮೫೮) 'ಯಾತ್ರಿಕ ರಮಣ' ಎಂಬ ಕಥಾ ಸಂಕಲನವನ್ನು ಹೊರತಂದಿದ್ದರು. ಅದು ಇಂಗ್ಲೀಷ್ ಬರಹಗಾರ ಬನಿಯನ್‌ನ 'ಪಿಲ್‌ಗ್ರಿಮ್ಸ್ ಪ್ರೋಗ್ರೇಸ್' ಎಂಬ ಪುಸ್ತಕದ ಅನುವಾದವಾಗಿತ್ತು. ೧೮೫೭ರಲ್ಲಿ ಪ್ರಟಕಗೊಂಡ 'ಯಮುನಾ ಪರ್ಯಟನ' ಕಾದಂಬರಿಯ ಬರಹಗಾರ ಮತಾಂತರ ಹೊಂದಿದ ಕ್ರೈಸ್ತನಾದುದರಿಂದ ಯೋಗ್ಯ ಪುರಸ್ಕಾರ ದೊರೆಯಲಿಲ್ಲ ಎನ್ನುವುದು ಸಾಧ್ಯ. ಇದು ಆಗಿನ ಸಮಕಾಲೀನ ಸಾಮಾಜಿಕ ಸ್ಥಿತಿಯನ್ನು ನಿರೂಪಿಸುತ್ತದೆ. ವಿನಾಯಕರಾವ್ ಮತ್ತು ಯಮುನಾ, ಹಿಂದೂ ದಂಪತಿಗಳು ಕ್ರೈಸ್ತ ಮತದ ತತ್ವಗಳಿಂದ ಆಕರ್ಷಿತರಾಗಿ ಕ್ರೈಸ್ತರಾಗುತ್ತಾರೆ. ಅಪಘಾತಕ್ಕೆ ಸಿಕ್ಕ ವಿನಾಯಕರಾವ್ ಸತ್ತ ಮೇಲೆ ಯಮುನಾ ವಿಧವೆಯಾಗಿ ಏಸುವಿನ ಸೇವಕಳಾಗಿ ಉಳಿಯುತ್ತಾಳೆ. ಹಿಂದೂ ಮತದಲ್ಲಿ ಅನುಭವಿಸುವ ಅಪಮಾನ ಹಾಗೂ ಅವರ ಉದ್ಧಾರಕ್ಕಾಗಿ ಪುನರ್ ವಿವಾಹ ಸೂಚಿಸುವುದು, ಈ ಕಾದಂಬರಿಯ ಕಥಾವಸ್ತು. 'ಹಿಂದೂ ಸ್ತಾನಾತಿತಾ ವಿಧವಾಂಚ ಸ್ಥಿತಿಚೆ' ನಿರೂಪಣಾ' (ಭಾರತದಲ್ಲಿಯ ಹಿಂದೂ ವಿಧವೆಯರ ಸ್ಥಿತಿಗತಿ) ಎಂಬುದು ಅದರ ಉಪಶೀರ್ಷಿಕೆಯು ನಮಗೆ ಅಂದಿನ ಸಮಾಜದ ಕನ್ನಡಿಯಾಗಿದೆ.

ಯಮುನಾ ಎರಡು ಬಗೆಯ ಪರ್ಯಟನ ಮಾಡುತ್ತಾಳೆ. ಒಂದು : ಅನೇಕ ತೀರ್ಥಕ್ಷೇತ್ರಗಳಿಗೆ ಭೇಟಿ ಇನ್ನೊಂದು ಹಿಂದೂ ಮತದಿಂದ ಕೈಸ್ತ ಮತಕ್ಕೆ ಮತಾಂತರ. ಇದು ಸ್ವತಂತ್ರ ಕಾಲ್ಪನಿಕ ಕಥೆ, ಅನಾವಶ್ಯಕ ಪಾತ್ರಗಳು ಮತ್ತು ಅಸ್ವಾಭಾವಿಕ ಶೈಲಿ ಇವು ಈ ಕಥೆಯ ಮುಖ್ಯ ಲಕ್ಷಣಗಳು. ಆ ಸಮಯದಲ್ಲಿ ಓದುಗರಿಗೆ ಈ ಬಗೆಯ ಸಾಹಿತ್ಯ ಬೇಕಾಗಿತ್ತು. ಸಮಾಜದ ಒಂದು ಗುಂಪಿನ ಜನರ ಕಷ್ಟ ನಷ್ಟಗಳ ಬಗ್ಗೆ ಜನರನ್ನು ಎಚ್ಚರಿಸುವ ಕೆಲಸ ಈ ಕಾದಂಬರಿ ಮಾಡಿದೆ. ಇದು ಕೇವಲ ಕೈಸ್ತ ಮತಾನುಯಾಯಿಗಳ ಸಮಸ್ಯೆಯಾಗಿರಲಿಲ್ಲ. ಬೇರೆಯರದು ಆಗಿತ್ತು. ಜೊತೆಗೆ ಇದು ಮಹಾರಾಷ್ಟ್ರದಲ್ಲಿ ಉಂಟಾಗಿದ್ದ ಸಾಮಾಜಿಕ ಗೊಂದಲವನ್ನು ಸೂಚಿಸುತ್ತದೆ. ಈ ಗೊಂದಲವೇ ಮುಂದೆ ಪ್ರಬಲವಾಗಿ ಆಧುನಿಕ ಸಾಹಿತ್ಯಕ್ಕೆ ಪ್ರೇರೇಪಣೆ ನೀಡಿತ್ತು. ಎಂ.ಜಿ.ರಾನಡೆಯವರು (೧೮೪೮-೧೯೦೧) ಮರಾಠಿ ಸಾಹಿತ್ಯವಲೋಕನ ೧೮೯೮ರಲ್ಲಿ ಪ್ರಕಟವಾಯಿತು. ತಮ್ಮ ಲೇಖನದಲ್ಲಿ ಈ ರೀತಿ ಅವರು ಹೇಳುತ್ತಾರೆ. ''ಮರಾಠಿ ಕಾಂಬರಿಗಳು ಎರಡು ವಿಧ ಒಂದು ಕಾಲ ದೇಶ ಹಾಗೂ ಪರಿಸರದ ತೊಡಕುಗಳಿಲ್ಲದ ವಿರುದ್ದ ಕಾದಂಬರಿ 'ಮಂಜುಘೋಷ' ಮುಕ್ತ ಮಾಲಾ 'ನಾರಾಯಣರಾವ್ ಆಣಿ ಗೋದಾವರಿ' ಇವು ಈ ವರ್ಗಕ್ಕೆ ಸೇರಿದವು. ಎರಡನೆಯದು ಐತಿಹಾಸಿಕ ಕಾದಂಬರಿಗಳು ಈ ವರ್ಗಕ್ಕೆ ನಾಗೇಶರಾವ್ ಬಾಪಟ್ ಮತ್ತು ಹರಿನಾರಾಯಣ ಆಪ್ಟೆಯವರ ಬರಹಗಳು ಉತ್ತಮ ಮಾದರಿಗಳು. ರಾನಡೆಯವರು 'ಐತಿಹಾಸಿಕ' ಎಂಬ ಶಬ್ದವನ್ನು 'ಸಾಮಾಜಿಕ' ಎಂಬ ಅರ್ಥದಲ್ಲಿ ಪ್ರಯೋಗಿಸಿದ್ದಾರೆ''.(ಶಿವರುದ್ರಪ್ಪ ಜಿ. ಎಸ್. (ಸಂ) ೧೯೭೦ ಪು.೬೭೦)

ಮರಾಠಿ ಕಾದಂಬರಿಗಳು ತಮ್ಮ ಮೊದಲಿನ ಮೂವತ್ತು ವರ್ಷಗಳಲ್ಲಿ ಸಂಸ್ಕೃತ, ಇಂಗ್ಲೀಷ್ ಮತ್ತು ಪರ್ಷಿಯನ್ ಈ ಮೂರು ಭಾಷೆಗಳಲ್ಲಿನ ಕಥಾನಕ ಶೈಲಿಯ ಪ್ರಭಾವಕ್ಕೆ ಒಳಗಾದವು ಅವುಗಳ ಒಂದು ಪ್ರವೃತ್ತಿ ಸಾಮಾಜಿಕ ಆದರ್ಶ ಸ್ಥಾಪಿಸುವುದಾಗಿದೆ. ಬಾಬಾ ಪದಮುಂಜಿ ಮತ್ತು ಹಳಬೆ ಶಾಸ್ತ್ರಿಗಳು ಇಂಗ್ಲೀಷ್ ಭಾಷೆಯಲ್ಲಿನ ಕಥಾನಕಗಳ ಪರೋಕ್ಷ ಅನುಕರಣವಾಗಿದ್ದ ಒಂದು ರೂಪವನ್ನು ಮರಾಠಿಯಲ್ಲಿ ರೂಪಿಸಿದಂತೆ ಕಾಣುತ್ತದೆ. ಈ ರೂಪಕ್ಕೆ ಹಲವೊಮ್ಮೆ ಸಂಸ್ಕೃತ ಮತ್ತು ಪರ್ಷಿಯನ್ ಕಥಾನಕ ಮಾದರಿಗಳ ಸಂಪ್ರದಾಯಗಳ ಸಂಪರ್ಕ ಉಳಿದಿತ್ತು.

ಈ ಮೊದಲೇ ತಿಳಿಸಿದಂತೆ ಆರ್.ಬಿ. ಗೂಂಜೀಕರ ಅವರ 'ಮೊಚನಗಡ' ಕಾದಂಬರಿ ಮರಾಠಿಯ ಮೊದಲ ಐತಿಹಾಸಿಕ ಕಾದಂಬರಿ. ಈ ಕೃತಿಗೆ ಸರ್ ವಾಲ್ಟರ್‌ಸ್ಕಾಟ್ ಹಾಗೂ ಅಲೆಕ್ಸಾಂಡರ್ ಡೂಮಾಸರ ಕೃತಿಗಳೇ ಪ್ರೇರಣೆ. ಇಲ್ಲಿಯ ಕಥಾವಸ್ತು ಕಾಲ್ಪನಿಕ ಹಾಗೂ ಐತಿಹಾಸಿಕ. ಅದು ಪ್ರೇಮವನ್ನು ಜಾಗೃತಗೊಳಿಸುವುದಿಲ್ಲ. ಆದರೆ ಇದರಲ್ಲಿನ ಅನೇಕ ಅಂಶಗಳು ಮುಂದೆ ಆಪ್ಟೇಯವರ ಐತಿಹಾಸಿಕ ಕಾದಂಬರಿಗಳಿಗೆ ನಾಂದಿ ಆಯಿತು. ಇತರ ಭಾಷೆಗಳಿಂದ ಮರಾಠಿಗೆ ಕಾದಂಬರಿಗಳು ಅನುವಾದವಾದವು ಉದಾಹರಣೆಗೆ 'ಠಗಾಬೇಜಬಾಬಾನೀ (೧೮೮೮), 'ಶಿಲಾದಿತ್ಯ' (೧೮೭೯), 'ಅನಂತ ಪಾಂಡುರಂಗ' ಮತ್ತು 'ಮಥವಾ' ಶ್ರೀ ಶಿವಛತ್ರಪತಿ (೧೮೯೩) ಹಾಗೂ 'ದುರ್ಗೇಶನಂದಿನಿ' ಭಾಷಾಂತರಗೊಂಡವು. ಹೀಗೆ ಮರಾಠಿಯಲ್ಲಿ ಕಾದಂಬರಿ ಪ್ರಕಾರದ ಉಗಮಕ್ಕೆ ಬಂಗಾಳದ ಪ್ರಭಾವ ಹೆಚ್ಚಿನದಾಗಿದೆ.

ಬಂಗಾಲಿ ಸಾಹಿತ್ಯದ ಪ್ರೇರಣೆಯಿಂದ ಆಧುನಿಕ ಅಸ್ಸಾಮಿ ಸಾಹಿತ್ಯವು ಉದಯವಾಯಿತು. ಅಸ್ಸಾಮದಲ್ಲಿ ಆಧುನಿಕತೆಯ ಹೆಜ್ಜೆ ಮೂಡಿಸಿದವರು ಚಂದ್ರಕುಮಾರಅಗರವಾಸ (೧೮೫೮-೧೯೩೫), ಲಕ್ಷ್ಮೀನಾಥ ಬೇಜ ಬರುವ (೧೮೫೮-೧೯೩೮), ಹೇಮಚಂದ್ರ ಗೋಸ್ವಾಮಿ (೧೮೭೨-೧೯೪೮) ಪದ್ಮನಾಥ ಗೊಹಾಂಮಿ (೧೮೭೧-೧೯೪೦) ಇವರು ಕಲ್ಕತ್ತಾ ಕಾಲೇಜಿನಲ್ಲಿ ಆಂಗ್ಲ ವಿದ್ಯಾಭ್ಯಾಸ ಪಡೆದವರು ಇದರ ಪರಿಣಾಮವಾಗಿ ೧೮೮೯ ರಲ್ಲಿ 'ಜೋನಾರೇ' ಎಂಬ ಮಾಸಿಕ ಪತ್ರಿಕೆ ಪ್ರಾರಂಭಿಸಿ ಸಾಹಿತ್ಯದಲ್ಲಿ ಹೊಸ ಧಾರೆಯನ್ನು ಹರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಇವರಿಗೆ ಆಂಗ್ಲ ಸಾಹಿತ್ಯ ಮತ್ತು ಬಂಗಾಲಿ ಸಾಹಿತ್ಯ ಪ್ರೇರಣೆ ದೊರೆಯಿತು . ಹೀಗೆ ಕಾವ್ಯ, ನಾಟಕ, ಕತೆ ಕಾದಂಬರಿಗಳು ಪ್ರಾರಂಭವಾದುವು. ಅಸ್ಸಾಮಿ ಭಾಷೆಯಲ್ಲಿ ಕತೆ ಮತ್ತು ಕಾದಂಬರಿ ಸಾಹಿತ್ಯವು ೧೯೨೦ರ ನಂತರ ಬೆಳಕಿಗೆ ಬಂದಿದೆ . ಹಲವಾರು ಬಂಗಾಳಿ ಕಾದಂಬರಿಗಳು ಹಾಗೂ ಸರ್‌ವಾಲ್ಟರ್‌ನ ಕಾದಂಬರಿಗಳು ಅನುವಾದಗೊಂಡಿವೆ . ಇವುಗಳ ಪ್ರಭಾವದಿಂದ ಕಾದಂಬರಿ ರಚನೆಯಾಗಲು ಸಹಾಯವಾಯಿತು.

ಉರ್ದು ಭಾಷೆಯಲ್ಲಿಯೂ ಆಧುನಿಕತೆಯು ೧೮೫೦ರ ನಂತರ ಹೊಸ ಕ್ರಾಂತಿಯನ್ನು ತಂದಿತು. ಆದರೆ ಕಾದಂಬರಿ ಪ್ರಕಾರ ರೂಪುತಳೆದದ್ದು ತಡವಾಗಿ. ಒಟ್ಟಾರೆ ಸಾಹಿತ್ಯವು ಎಲ್ಲ ಕ್ಷೇತ್ರಗಳಲ್ಲಿ ಪ್ರಾಮುಖ್ಯತೆ ಪಡೆಯಲು ದೀರ್ಘಕಾಲಾವಕಾಶ ಬೇಕಾಯಿತು. ಕಾದಂಬರಿ ಕತೆಗಳಿಗೆ ಜನ್ಮವಿತ್ತವರು ಮುಂಶಿ ಪ್ರೇಮಚಂದರು.

ಈ ರೀತಿಯಾಗಿ ಆಧುನಿಕ ಸಾಹಿತ್ಯದ ಪ್ರಕಾರವಾದ 'ಕಾದಂಬರಿ'ಯು ಭಾರತದ ಸಂದರ್ಭದಲ್ಲಿ ಉದಯವಾಯಿತು. ಈ ಕಾಲದಲ್ಲಿ ಜನರು ಅನುಭವಿಸುತ್ತಿದ್ದ ನೋವು ನಲಿವುಗಳಿಗೆ ಅಭಿವ್ಯಕ್ತಿ ಮಾಧ್ಯಮವಾಗಿ ಸಹಾಯವಾಯಿತು. ಸಮಕಾಲಿನ ದೇಶಪ್ರೇಮ, ಭಾಷಾಪ್ರೇಮ, ಮಾನವತಾವಾದ ಮುಂತಾದ ಭಾವನೆಗಳು ಸಾಹಿತ್ಯದಲ್ಲಿ ಅತ್ಯಂತ ಪ್ರಬಲವಾಗಿ ಮೂಡಿದವು. ಸಮಕಾಲಿನ ಜೀವನದ ಆಶೆ-ಆಕಾಂಕ್ಷೆಗಳಿಗೆ ಕಾದಂಬರಿ ಪ್ರಕಾರ ಕನ್ನಡಿ ಹಿಡಿಯುವಂತಾಯಿತು.

೩.೩ ದಕ್ಷಿಣ ಭಾರತೀಯ ಸಂದರ್ಭದಲ್ಲಿ ಕಾದಂಬರಿ

ಕಾದಂಬರಿ, ಸಣ್ಣಕಥೆ, ಪಾಶ್ಚಾತ್ಯ, ಸಾಹಿತ್ಯದಿಂದ ಭಾರತಕ್ಕ ಬಂದವು ಎಂದು ಹೇಳುವಷ್ಟರ ಮಟ್ಟಿಗೆ ಇಂಗ್ಲೀಷಿನಿಂದ ಪ್ರಭಾವಿತಗೊಂಡಿವೆ. ಈಗಾಗಲೇ ಗಮನಿಸಿದಂತೆ ಭಾರತದಲ್ಲಿ ಮೊದಲು ಹೊಸತನ ಕಾಣಿಸಿಕೊಂಡಿದ್ದು ಬಂಗಾಳದ ಸಾಹಿತ್ಯದಲ್ಲಿ. ಕಾದಂಬರಿ ಪ್ರಕಾರವು ಜನಪ್ರಿಯ ಮಾಧ್ಯಮವಾಯಿತು. ಅಲ್ಲಿಂದ ಇತರ ಭಾರತೀಯ ಭಾಷೆಗಳಲ್ಲಿ ಬಂಗಾಳದ ಸಾಹಿತ್ಯದ ಪ್ರಭಾವ ಬೀರತೊಡಗಿತು. ಹೀಗೆ ಭಾರತದ ಲಿಪಿ ಇರುವ ಎಲ್ಲ ಭಾಗಗಳಲ್ಲಿಯ ಭಾಷೆಗಳ ಮೇಲೆ ಕಾದಂಬರಿ ಪ್ರಕಾರ ಪ್ರಭಾವ ಬೀರತೊಡಗಿತು. ದಕ್ಷಿಣ ಭಾರತೀಯ ಭಾಷೆಗಳಾದ ತಮಿಳು, ಮಲಯಾಳಂ, ತೆಲುಗು, ಕನ್ನಡ ಮಲಯಾಳಂ, ತುಳು ಭಾಷೆಗಳಲ್ಲಿ ಅತ್ಯಂತ ಜನಪ್ರಿಯವಾದ ಸಾಹಿತ್ಯ ಪ್ರಕಾರ ಕಾದಂಬರಿ. ಕನ್ನಡದಲ್ಲಿ Novel ಎನ್ನುವ ಇಂಗ್ಲೀಷ್ ಪದಕ್ಕೆ ಸಂವಾದಿಯಾಗಿ ಕಾದಂಬರಿ ಎಂಬ ರೂಪವಿದೆ. ದಕ್ಷಿಣ ಭಾರತೀಯ ಭಾಷೆಗಳಾದ ತೆಲುಗಿನಲ್ಲಿ ಮಾತ್ರ 'ನವಲ' ಎಂದು ಕರೆಯುತ್ತಾರೆ. ತಮಿಳು ಮತ್ತು ಮಲೆಯಾಳಂಗಳಲ್ಲಿ 'ನಾವೆಲ್' ಎಂದು ಬಳಕೆಯಾಗಿದೆ. ಆಧುನಿಕ ಜೀವನದ ಸಂಕೀರ್ಣತೆಯನ್ನು ಬಿಂಬಿಸಬಲ್ಲ ಕಾದಂಬರಿ ದಕ್ಷಿಣ ಭಾರತದ ಭಾಷೆಗಳಲ್ಲಿ ವಿಪುಲವಾಗಿ, ವೈವಿಧ್ಯಮಯವಾಗಿ ಬೆಳೆದು ಬಂದಿವೆ. ಇಂಗ್ಲೀಷ್, ಪ್ರೆಂಚ್, ರಷ್ಯನ್, ಅಲ್ಲದೇ ಯುರೋಪಿನ ಸಾಹಿತ್ಯದ ಪ್ರೇರಣೆ ಪಡೆದ ಈ ಭಾಷೆಗಳ ಕಾದಂಬರಿಗಳು ಇತರ ಭಾರತೀಯ ಭಾಷೆಗಳಂತೆ ಅನುವಾದಗಳಿಂದ ಅನುಕರಣೆಗಳಿಂದಲೇ ಪ್ರಾರಂಭವಾಗಿದೆ. ಸಾಮಾಜಿಕ ಜೀವನದ ಸಮಸ್ಯೆಗಳು, ಘರ್ಷಣೆಗಳು ಕಾದಂಬರಿ ಪ್ರಕಾರದ ಸಾರವಾಗಿದೆ. ದಕ್ಷಿಣ ಭಾರತೀಯ ಕಾದಂಬರಿಗಳು ತಂತ್ರ, ರೀತಿಗಳಲ್ಲಿ ವೈವಿಧ್ಯವನ್ನು ತೋರಿವೆ. ಸ್ವತಂತ್ರವಾಗಿ ಮೂಡಿದ ಕೃತಿಗಳಲ್ಲಿಯೂ ಕೆಲವು ಸಮಾನ ಗುಣಗಳು, ಅಂಶಗಳು ಇರುವುದು ಕಂಡುಬರುತ್ತವೆ. ದಿನ ಬಳಕೆಯ ಭಾಷೆ, ಜನಸಾಮಾನ್ಯರ ಜೀವನದ ಘಟನಾವಳಿಗಳು, ಕೆಳವರ್ಗದ ಮಧ್ಯಮ ವರ್ಗದ ಜೀವನ, ನೂತನ ಉತ್ಪಾದನದ ಹಂಬಲ ಈ ಕಾದಂಬರಿಗಳಲ್ಲಿ ಸಮಾನ ಲಕ್ಷಣಗಳು. ಸಾಮಾಜಿಕ ಸುಧಾರಣೆ, ವಸಾಹತುಶಾಹಿ ಪ್ರತಿರೋಧ ಗಳನ್ನು ಈ ಕಾದಂಬರಿಗಳಲ್ಲಿ ಗುರುತಿಸಬಹುದು.

ತಮಿಳಿನ ಪ್ರಥಮ ಕಾದಂಬರಿಯು ರಚನೆಯಾದದ್ದು ಆಕಸ್ಮಿಕವಲ್ಲ. ಬ್ರಿಟಿಷ್ ಇಂಡಿಯಾ ಸರ್ಕಾರದ ನ್ಯಾಯಾಂಗ ಇಲಾಖೆಯಲ್ಲಿ ಅಧಿಕಾರಿಯಾಗಿದ್ದ ಇಂಗ್ಲೀಷ್ ಶಿಕ್ಷಣ ಪಡೆದಿದ್ದ ತಮಿಳು ಕ್ರಿಶ್ಚಿಯನ್ ವ್ಯಕ್ತಿಯೊಬ್ಬರ ಪ್ರಯತ್ನದ ಫಲವಾಗಿದೆ. ವೇದನಾಯಗಂ ಪಿಳ್ಳೈ ಅವರ ಪ್ರಯತ್ನವು ಮಹತ್ವವಾಗಿದೆ. ಏಕೆಂದರೆ ಅವರು ತಮ್ಮ ಕಾದಂಬರಿಗಳಲ್ಲಿ, ವಸ್ತು ಮತ್ತು ಶೈಲಿ ಹಾಗೂ ಕಥಾರಚನೆ ಮತ್ತು ನಿರೂಪಣೆಗಳಲ್ಲಿ ಹಿಂದಿನ ಬರಹಗಾರರ ಗದ್ಯ ನಿರೂಪಣೆಯ ಮಾರ್ಗವನ್ನು ಬಿಟ್ಟಿದ್ದಾರೆ. ಸರಳ ಮನುಷ್ಯನ ಸ್ವಭಾವ, ನಡವಳಿಕೆಗಳನ್ನು ಚಿತ್ರಿಸಿದ್ದಾರೆ. ಆ ಕಾಲದ ಸಮಾಜದಲ್ಲಿನ ಕುಟುಂಬ ಕಲಹಗಳನ್ನು ಕುರಿತ ವಿವರಣೆ, ವರ್ಣನೆಗಳು, ತೀಕ್ಷ್ಣವಾದ ಅವಲೋಕವನ್ನು ಮಾಡಿದ್ದಾರೆ. ಹಾಗಾಗಿಯೇ 'ಪ್ರತಾಪ ಮೊದಲಿಯಾರ್ ಚರಿತ್ರಂ' ಗದ್ಯದ ಆರಂಭ ಕಾಲವನ್ನು ಗುರುತಿಸಲು ಸಹಾಯಕವಾಗಿದೆ.

ಈ ರೀತಿಯ ಕಾದಂಬರಿ ಪ್ರಕಾರ ರೂಪು ತಳೆಯುವುದಕ್ಕಿಂತ ಮುಂಚೆ ಪಾಶ್ಚಾತ್ಯಾರ ಗದ್ಯ ಕೃತಿಗಳ ಅನುವಾದದ ಪ್ರಕ್ರಿಯೆ ನಡೆದಿರುವುದನ್ನು ಗುರುತಿಸಬಹುದು. 'ಈ ಸೋಪ್ಸ್ ಕಟ್ಟು ಕಥೈಗಳ್' (ಈ ಸೋಪನ ಕಥೆಗಳು, ೧೮೫೩), 'ಮದನ ಕಾಮರಾಜನ ಕಥೈ' (ದೊರೆ ವಿಕ್ರಮಾದಿತ್ಯನ ಕಥೆಗಳಲ್ಲಿ ಒಂದಾದ ದೊರೆ ಮದನಕಾಮನ ಕಥೆ, ೧೮೫೫) ಇದರ ಜೊತೆಯಲ್ಲಿಯೇ ಸ್ವತಂತ್ರ ಕತೆಗಳು ರೂಪುಗೊಂಡಿರುವುದನ್ನು ಗುರುತಿಸಬಹುದು. 'ತಮಿಳಾಣಿಯುಂ ಪೆರುಮಾಳ್ ಕಥೈ' (ತಮಿಳಿನಲ್ಲಿ ಪ್ರಕಾಂಡ ಪಾಂಡಿತ್ಯ ಹೊಂದಿದ್ದ ಮಹಾಸಾಧ್ವಿಯೊಬ್ಬಳ ಕಥೆ, ೧೮೬೯). ಇಂತಹ ಗದ್ಯ ಸಾಹಿತ್ಯದ ಪ್ರಯೋಗಗಳೇ ತಮಿಳಿನಲ್ಲಿ ಕಾದಂಬರಿ ಪ್ರಕಾರ ಬರುವಂತೆ ಮಾಡಿತು. ಹತ್ತೊಂಬತ್ತನೆ ಶತಮಾನದ ಕೊನೆಯಲ್ಲಿ ರಚಿತಗೊಂಡ ಕಾದಂಬರಿಗಳು ಬಿ. ಆರ್. ರಾಜಂ ಅಯ್ಯರ್ ಅವರ 'ಕಮಲಂಬಾಳ್‌ಚರಿತ್ರೆ' ೧೮೯೩ರಲ್ಲಿ ವಿವೇಕ ಚಿಂತಾಮಣಿ ಪತ್ರಿಕೆಯಲ್ಲಿ ಧಾರವಾಹಿಯಾಗಿ ಪ್ರಕಟಗೊಂಡಿತು. ಇದು ದಕ್ಷಿಣ ಭಾರತದ ಬ್ರಾಹ್ಮಣರ ಜೀವನ ವಿಧಾನವನ್ನು ನಿರೂಪಿಸುತ್ತದೆ. ಆ ಕಾಲದಲ್ಲಿ ಬಂದಂತ ಕಾದಂಬರಿ ಮಾಧವಯ್ಯ ಅವರ 'ಪದ್ಮಾವತಿ ಚರಿತ್ರಂ' ಇದು ಬ್ರಾಹ್ಮಣ ಕುಟುಂಬ ಒಂದರ ಬದುಕಿನ ವಿವರಗಳನ್ನು ತಿಳಿಸುತ್ತದೆ.

ಸಾಂಪ್ರಾದಾಯಿಕ ಮೌಲ್ಯಗಳ ಮೇಲೆ ಆಧುನಿಕತೆ ಶಿಕ್ಷಣದ ಪರಿಣಾಮ, ಕುಟುಂಬದ ಮರ್ಯಾದೆ - ಪ್ರತಿಷ್ಠೆ ಕುರಿತ ಕಲ್ಪನೆಗಳು, ವಿಧವೆಯರ ಗೋಳಿನ ಹಣೆ ಬರಹ - ಇವೆಲ್ಲವನ್ನೂ ಇದರಲ್ಲಿ ಚಿತ್ರಿಸಲಾಗಿದೆ. ಈ ರೀತಿ ಕಾದಂಬರಿಕಾರರು ಮೊದಲ ಘಟ್ಟದಲ್ಲಿ ವಸಾಹತುಶಾಹಿ ಅನುಭವ ಮತ್ತು ಪಾಶ್ಚಾತ್ಯ ಶಿಕ್ಷಣದಿಂದ ಸಮಾಜದಲ್ಲಿದ್ದ ಬದಲಾವಣೆಗಳನ್ನು ಕಾದಂಬರಿಗಳ ಮೂಲಕ ವ್ಯಕ್ತಪಡಿಸಿದ್ದಾರೆ. ಅದೇ ಕಾಲಘಟ್ಟದಲ್ಲಿ 'ನಟೇಶಶಾಸ್ತ್ರಿ' ಗಳು ಬರೆದ ಕಾದಂಬರಿ 'ಕೋಮಲಂ ಕುಮಾರಿಯಾನದು' - ಕಾದಂಬರಿ ಶಾಸ್ತ್ರಿಯವರು ವಿಭಿನ್ನವಾಗಿ ವಸ್ತುವನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಇದರಲ್ಲಿ ಇಬ್ಬರು ಸೋದರಿಯರ ಕಥೆಯನ್ನೇ ಚಿತ್ರಿಸಿದ್ದಾರೆ. ಇವರು ಕಾದಂಬರಿಯನ್ನು ಬರೆಯಲು ಮುಂದಾಗಿರುವುದು ವಿಶಿಷ್ಟವಾಗಿದೆ. ಇಂತಹ ರೂಪ ತಮಿಳು ಸಾಹಿತ್ಯದಲ್ಲಿ ಕೊರತೆಯಿರುವ ಕಾರಣದಿಂದ ಇಂತಹ ಪ್ರಯತ್ನವನ್ನು ಮಾಡಿದ್ದಾರೆ. ಆತನಕ 'ಪದ್ಯ'ವೊಂದೆ ಸಾಹಿತ್ಯದ ಅಭಿವ್ಯಕ್ತಿಯ ಮಾಧ್ಯಮವಾಗಿತ್ತು. ತಮಿಳಿನ ಪ್ರಾಚೀನ ವ್ಯಾಕರಣಗ್ರಂಥ 'ತೊಲ್‌ಕಾಪಿಯಂ'ನಲ್ಲಿ ಗದ್ಯದ ಪ್ರಸ್ತಾಪವಿದ್ದರೂ ಸಾಹಿತ್ಯದಲ್ಲಿ ಅನುಭವಗಳ ಅಭಿವ್ಯಕ್ತಿಗೆ, ಸಂವಹನಕ್ಕೆ ಅನುಕೂಲಕರವಾಗಿರಲಿಲ್ಲ. ಹಾಗಾಗಿ ಗದ್ಯ ಸಾಹಿತ್ಯದ ಅಭಿವ್ಯಕ್ತಿಯಾಗಿ ಬಳಕೆಗೆ ಬಂದದ್ದು ಮುದ್ರಣಯಂತ್ರದ ಆಗಮನದಿಂದ. ಈ ರೀತಿಯಾಗಿ ಗದ್ಯವು ಪ್ರಚಲಿತಕ್ಕೆ ಬಂದದ್ದರಿಂದ ಕ್ರಿ.ಶ ೧೮೭೬ರಲ್ಲಿ, ಆಧುನಿಕ ತಮಿಳು ಕಾದಂಬರಿಯ ಪಿತಾಮಹ ಸ್ಯಾಮ್ಯುಯೆಲ್ ವೇದನಾಯಗಂ ಪಿಳ್ಳೈ (೧೮೨೬ - ೮೯) ಇವರು 'ಪ್ರತಾಪ ಮುದಲಿಯಾರ್ ಚರಿತ್ರಂ' ಎಂಬ ಕಾದಂಬರಿಯನ್ನು ರಚಿಸಿದರು. ಇವರು ಈ ಕಾದಂಬರಿ ಉದ್ದೇಶವನ್ನು ಹೇಳಿದ್ದಾರೆ. ''ನನ್ನ ಕಥಾ ಸಾಹಿತ್ಯದ ಬರವಣಿಗೆಯ ಉದ್ದೇಶವೆಂದರೆ, ತಮಿಳಿನಲ್ಲಿ ಕೊರತೆಯಿರುವ ಗದ್ಯಕೃತಿಗಳನ್ನು ರಚಿಸುವುದು. ಹಾಗೆಯೇ ನನ್ನ ಹಿಂದಿನ ಕೃತಿಗಳಲ್ಲಿರುವ ನೈತಿಕ ನಡವಳಿಕೆಯ ಸೂತ್ರಗಳನ್ನು ದೃಷ್ಟಾಂತ ಸಹಿತವಾಗಿ ಚಿತ್ರಿಸುವುದು'' ಎಂದು ವೇದನಾಯಗಂ ಪಿಳ್ಳೈಯವರು ತಮ್ಮ ಕಾದಂಬರಿಯ ಮೊದಲ ಆವೃತ್ತಿಗೆ ಬರೆದ ಇಂಗ್ಲೀಷ್ ಮುನ್ನುಡಿಯಲ್ಲಿ ತಿಳಿಸಿದ್ದಾರೆ'' (ಶಿವರುದ್ರಪ್ಪ ಜಿ. ಎಸ್.(ಸಂ) ೧೯೭೦,ಪು ೯೯೩) 'ಪ್ರತಾಪ ಮುದಲಿಯಾರ್ ಚರಿತ್ರ' ಮುಖ್ಯಪಾತ್ರ ಉತ್ತಮ ಪುರುಷದಲ್ಲಿ ನಿರೂಪಿಸುವ ಒಂದು ಸುಧೀರ್ಘವಾದ ಎತ್ತೆತ್ತಲೋ ಸಾಗುವ ಕಥೆ. ಇದು ವಾಸ್ತವಿಕತೆಗಿಂತ ಅಸಂಭವನೀಯವಾದ ಹಾಗೂ ಅಸಹಜತೆಯಿಂದ ಕೂಡಿದಂತದ್ದಾಗಿದೆ.

ಕಾದಂಬರಿಯ ನಾಯಕಿ ಜ್ಞಾನಂಬಾಳ್ ಪುರುಷವೇಷ ಧರಿಸಿದ್ದಾಗ ಆನೆಯೊಂದರ ಕಯಾಲಿಯಿಂದಾಗಿ ದೊರೆಯಾಗಿ ಆರಿಸಲ್ಪಡುತ್ತಾಳೆ. ಹಾಗೂ .ಾಂಭೀರ್ಯದಿಂದ ರಾಜ್ಯವನ್ನು ಆಳುತ್ತಾಳೆ''. ಈ ರೀತಿಯಲ್ಲಿ ಐತಿಹಾಸಿಕ ಕಾದಂಬರಿಗಳ ಮುಖಾಂತರ ವಾಸ್ತವಿಕತೆಯನ್ನು ಅಲ್ಲಲ್ಲಿ ನಿರೂಪಿಸುವ ಮುಖಾಂತರ ಕಾದಂಬರಿಯ ಕ್ಷೇತ್ರಕ್ಕೆ ಪ್ರಯೋಗದ ಹಾದಿ ತೆರೆಯಲು ಸಾಧ್ಯವಾಗಿದೆ ಎಂದು ಗುರುತಿಸಬಹುದು. ಏಕೆಂದರೆ ಒಬ್ಬ ಸ್ತ್ರೀಯು ರಾಜ್ಯವನ್ನು ಸಮರ್ಥವಾಗಿ ಆಳುವಂತ ಸಾಮರ್ಥ್ಯವನ್ನು ಪಡೆದಿದ್ದಾಳೆ ಎನ್ನುವುದನ್ನು ಅಭಿವ್ಯಕ್ತಪಡಿಸುತ್ತದೆ.

ಹೀಗೆ ಮೊದಲ ಘಟ್ಟದಲ್ಲಿ ರಚನೆಯಾಗಿರುವಂತ ಸಾಮಾಜಿಕ ಕಾದಂಬರಿಗಳು ಸ್ತ್ರೀ ಶೀರ್ಷಿಕೆಯನ್ನು ಮುಖ್ಯವಾಗಿ ಹೊಂದಿರುವುದನ್ನು ಗುರುತಿಸಬಹುದು. ಮತ್ತೊಂದು ವೈಶಿಷ್ಟ್ಯವೆಂದರೆ ೧೮೯೪ ರಲ್ಲಿ ರಚಿತವಾದ ಪತ್ತೇದಾರಿ ಕಾದಂಬರಿ. ಇದನ್ನು ತಮಿಳಿನ ಪ್ರಥಮ ಕಾದಂಬರಿ ಎಂದು ಗುರುತಿಸಲಾಗಿದೆ. ಸರ್ಕಾರಿ ಅಧಿಕಾರಿಯಾಗಿದ್ದ 'ತನವಾನ್' ಪೊನ್ನಸ್ವಾಮಿಪಿಳ್ಳೈ (೧೮೫೫-೧೯೧೫) 'ಕಮಾಲಾಕ್ಷ' ಎಂಬ ಕಾದಂಬರಿಯನ್ನು ರಚನೆ ಮಾಡಿದ್ದಾರೆ. ಇದು ಪ್ರಕಟಗೊಂಡಿದ್ದು ೧೯೦೩ ರಲ್ಲಿ. ಇಂತಹ ಚಟುವಟಿಕೆಗಳನ್ನು ಗಮನಿಸಿದಾಗ ತಮಿಳಿನಲ್ಲಿ ಕಾದಂಬರಿ ರಚನೆಯು ಭರದಿಂದ ಸಾಗಿಬಂದಿರುವುದನ್ನು ಗುರುತಿಸಬಹುದು. ಮುಖ್ಯವಾಗಿ ಗಮನಿಸುವ ಅಂಶವೆಂದರೆ ಕಾದಂಬರಿಗಳನ್ನು ಬರೆದವರೆಲ್ಲ ಸರ್ಕಾರಿ ಅಧಿಕಾರಿಗಳಾಗಿರುವುದು ಗಮನಾರ್ಹ ಅಂಶವಾಗಿದೆ. ಹಾಗೆಯೇ ರಚಿಸಿದ ಕಾದಂಬರಿಗಳ ಶೀರ್ಷಿಕೆಯೂ ಮಹಿಳೆಯರ ಹೆಸರನ್ನೇ ಹೊಂದಿವೆ. ಇದರಿಂದ ಪ್ರತಿಪಾದಿತವಾಗುವ ಅಂಶವೆಂದರೆ ಅಂದಿನ ಸರ್ಕಾರಿ ಅಧಿಕಾರಿಗಳಾಗಿ ಕಾರ್ಯನಿರ್ವಹಿಸುವ ಸಂದರ್ಭದಲ್ಲಿ ಸ್ತ್ರೀಯರ ಜೀವನ ಪರಿಸ್ಥಿತಿಯಲ್ಲಿ ಸುಧಾರಣೆಯಾಗಬೇಕು ಎನ್ನುವ ಕಾಳಜಿ ವ್ಯಕ್ತವಾಗುತ್ತದೆ. ಅದರ ಜೊತೆಯಲ್ಲಿ ಸಮಾಜದಲ್ಲಿದ್ದ ಸಂಪ್ರದಾಯಗಳು ಜೀವನದ ಸ್ಥಿತಿಯನ್ನು ಯಥಾವತ್ತಾಗಿ ಚಿತ್ರಿಸುವ ಮೂಲಕ ಅವುಗಳ ಸುಧಾರಣೆ, ಜನರು ಬದುಕುತ್ತಿರುವ ಜೀವನದ ಪದ್ಧತಿ, ಬದಲಾಗುತ್ತಿರುವ ಸಮಾಜವನ್ನು ಗದ್ಯದ ಮೂಲಕ ವ್ಯಕ್ತ ಪಡಿಸಲು ಸಾಧ್ಯವಾಯಿತು. ಅದಕ್ಕಿಂತ ಹೆಚ್ಚಾಗಿ ಕಾದಂಬರಿ ಪ್ರಕಾರ ಒಂದು ಸೂಕ್ತ ಮಾಧ್ಯವಾಗಿದೆ ಎಂದು ಗುರುತಿಸಬಹುದು .

ತೆಲುಗಿನಲ್ಲಿ 'ನವಲ' ಎಂಬ ಸಾಹಿತ್ಯ ಪ್ರಕಾರ ಇತರ ಪ್ರಕಾರಗಳೊಂದಿಗೆ ಹೋಲಿಸಿದರೆ, ತೀರ ಇತ್ತೀಚಿನದೆಂದೇ ಹೇಳಬೇಕು. ಭಾರತೀಯ ಲೇಖರು ಹತ್ತೊಂಬತ್ತನೆ ಶತಮಾನದ ಉತ್ತರಾರ್ಧದಲ್ಲಿ ಪಾಶ್ಚಾತ್ಯ ಕಾದಂಬರಿಕಾರದಿಂದ ಸ್ಫೂರ್ತಿಪಡೆದರು. ಪ್ರಪ್ರಥಮ ತೆಲುಗು ಕಾದಂಬರಿ 'ಶ್ರೀರಂಗರಾಜ ಚರಿತ್ರೆ' (೧೮೭೨) ಎಂಬುದು. ಇದರಲ್ಲಿ ಕಾದಂಬರಿಯ ಲಕ್ಷಣಗಳನ್ನು ಹೇಳುತ್ತಾರೆ. ಕಥೆ ಕಲ್ಪಿತವಾಗಿರಬೇಕು, ಅದು ಸಾಹಸ ಹಾಗೂ ಪ್ರಣಯ ಇವುಗಳ ಮಿಶ್ರಣವಾಗಿರಬೇಕು, ಅದು ಮಾನವನ ಕೃತಿಗಳಲ್ಲಿ ಹುದುಗಿರುವ ಆಶಾವಾದಕ್ಕೆ ಆದ್ಯತೆ ನೀಡುವಂಥದ್ದಾಗಿರಬೇಕು, ಅಲ್ಲದೆ ಅದು ಒಬ್ಬ ವ್ಯಕ್ತಿಯ ಜೀವನದ ಬಗೆಗೆ ಬರೆದುದಾಗಿರಬೇಕು. ಎಂದು ಇವರು ತಮ್ಮ ಕೃತಿಗಳಲ್ಲಿ ಪ್ರಚಲಿತ ಕುರುಡುನಂಬಿಕೆಗಳನ್ನೂ, ಭ್ರಮಾತ್ಮಕ ಕಲ್ಪನೆಗಳನ್ನೂ ತೊಡೆದು ಹಾಕುವ ಸಲುವಾಗಿ ಬರೆಯಲ್ಪಟ್ಟುವು ಎಂದು ಹೇಳಿಕೊಳ್ಳುವ ಮೂಲಕ ಕಾದಂಬರಿ ಪ್ರಕಾರಕ್ಕೆ ಹೊಸದೊಂದು ಆಯಾಮವನ್ನು ಕಲ್ಪಿಸಿಕೊಟ್ಟರು. ಕಾದಂಬರಿಯ ಉಗಮವನ್ನು ೧೯ನೇ ಶತಮಾನದ ಪಿಂಗಳ ಸೂರ ಎಂಬುವನ ಗೀತರೂಪಕ ನೀಳ್ಗತೆಯ 'ಕಲಾಪೂರ್ಣೋದಯಮು' ಎಂಬ ಪ್ರಬಂಧದಲ್ಲಿ ಕಾಣುತ್ತಾರೆ. ಐತಿಹಾಸಿಕ ದೃಷ್ಟಿಯುಳ್ಳ ಕಾದಂಬರಿ 'ಶ್ರೀರಂಗರಾಜಚರಿತ್ರೆ'ವು ಮೊದಲ ತೆಲುಗು ಕಾದಂಬರಿ. ''ಗೋಪಾಲ ಕೃಷ್ಣಮನರಹರಿ ಶೆಟ್ಟಿಯವರು ತಮ್ಮ 'ಶ್ರೀ ರಂಗರಾಜ ಚರಿತ್ರೆ'ದ ಮುನ್ನುಡಿಯಲ್ಲಿ ತೆಲುಗಿನಲ್ಲಿ ಅಲ್ಲಿಯವರಗೆ ಗದ್ಯಮಹಾಕಾವ್ಯವಿಲ್ಲದ ಕಾರಣ ವಿದ್ಯಾರ್ಥಿಗಳಿಗೆ ಉಪಯೋಗವಾಗಲೆಂದು ತಾವು ಅದನ್ನು ಬರೆದುದಾಗಿ ಹೇಳುತ್ತಾರೆ''. ವೀರೇಶಲಿಂಗಂ ಪಂತುಲು ಅವರು ಇಂಗ್ಲಿಷ್ ಸಾಹಿತ್ಯದಿಂದ ಪ್ರಭಾವಿತರಾಗಿ ವಿಶೇಷವಾಗಿ ಆಲಿವರ್ ಗೋಲ್ಡ್‌ಸ್ಮಿತ್‌ನ 'ದಿ ವಿಕಾರ್ ಆಫ್ ವೇಕ್‌ಫೀಲ್ಡ್' ಎಂಬ ಕೃತಿಯಿಂದ ಸ್ಫೂರ್ತಿ ಪಡೆದು ರಚಿಸಿದ 'ರಾಜಶೇಖರ ಚರಿತ್ರೆ'ವು ತನ್ನ ಸಾಹಿತ್ಯ ಪ್ರಕಾರದ ರಂಗದಲ್ಲಿ ಇಟ್ಟ ಮೊದಲ ಹೆಜ್ಜೆಯೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. (ಶಿವರುದ್ರಪ್ಪ .ಜಿ.ಎಸ್. ೧೯೩೫, ಪು ೬೩೩) ಇಲ್ಲಿ ತೆಲುಗು ಸಾಹಿತ್ಯದಲ್ಲಿ ಕಾದಂಬರಿ ಪ್ರಕಾರವು ಉಗಮಗೊಳ್ಳಲು ಇರುವಂತ ಸಾಮಾಜಿಕ ಸಂದರ್ಭವನ್ನು ವ್ಯಕ್ತಪಡಿಸುತ್ತದೆ. ಕಾದಂಬರಿಯ ಮೂಲಕ ಹಿಂದೂ ಸಮಾಜದ ಕಂದಾಚಾರಗಳನ್ನು, ಜಾತಿ ಭೇದ ಪರಂಪರೆ ಜಡತ್ವವನ್ನು ಟೀಕಿಸುತ್ತಾರೆ. ನಂತರ ೧೮೯೧ರಲ್ಲಿ ವೀರೇಶಲಿಂಗಂ ಪಂತುಲು ಅವರು 'ಸತ್ಯರಾಜ ಪೂರ್ವದೇಶ ಯಾತ್ರಾಲು' ಎಂಬ ಎರಡು ಕಾದಂಬರಿಗಳನ್ನು ರಚಿಸಿದ್ದಾರೆ.

ಈ ಕಾದಂಬರಿಗಳಲ್ಲಿ ಕೇರಳ ಪ್ರಾಂತಕ್ಕೆ ಸತ್ಯರಾಜನು ಭೇಟಿ ನೀಡಿದಾಗ ಅಲ್ಲಿನ ಹೆಣ್ಣುಮಕ್ಕಳು ಅನೇಕ ಹಕ್ಕುಗಳನ್ನು ಹೊಂದಿರುವುದು ಹಾಗೂ ಕಾರಣಾವರರನ್ನು ಬಿಟ್ಟರೆ. ಉಳಿದೆಲ್ಲ ಸಮಾಜದಲ್ಲಿಯ ಗಂಡಸರು ದ್ವಿತೀಯ ಸ್ಥಾನದಲ್ಲಿರುವುದನ್ನು ಕಾಣುತ್ತಾನೆ. ಈ ರೀತಿ ಕೇರಳದ ಮಹಿಳೆಯರ ಸ್ವಾತಂತ್ರ್ಯವನ್ನು ತಿಳಿಸುತ್ತಾ ತೆಲುಗಿನಲ್ಲಿ ಸ್ತ್ರೀಯರ ಸ್ಥಿತಿಯನ್ನು ಸುಧಾರಿಸಬೇಕೆನ್ನುವ ಮರುಕವನ್ನು ವ್ಯಕ್ತಪಡಿಸಿದ್ದಾರೆ. ೧೮೯೨ರಲ್ಲಿ ಪನಪ್ಪಾಕಂ ಅನಂತಾಚಾರ್ಯಲು (೧೮೬೦-೧೯೨೧) ಅವರು 'ಮಂಜುವಾಣಿ ವಿಜಯಮು' ಎಂಬ ಕಾದಂಬರಿಯನ್ನು ಪ್ರಕಟಿಸಿದರು. ಇಲ್ಲಿ ಅವಳ ಪ್ರೇಮ ವಿವಾಹದ ಚಿತ್ರಣವಿದೆ. ತಲ್ಲಪ್ರಗಡ ಸೂರ್ಯನಾರಾಯಣದ 'ಸಂಜೀಮಾಯ ಚರಿತ್ರಮು' (೧೮೯೩) ಎಂಬ ಕೃತಿ ನಂತರ 'ಸುಬ್ಬರಾವ್' (೧೮೯೪) ಎನ್ನುವ ಕೃತಿ ರಚಿಸಿದರು. ನಂತರದಲ್ಲಿ ೧೮೯೩ ರಲ್ಲಿ ಧರ್ಮಾವತಿ ವಿಲಾಸಂ, ಹಾಗೂ 'ಲಕ್ಷ್ಮೀ ಸುಂದರ ವಿಜಯಂ' ಎಂಬ ಕಾದಂಬರಿಗಳನ್ನು ಬರೆದರು. ಇವುಗಳು 'ಚಿಂತಾಮಣಿ' ಪುರಸ್ಕಾರ ಪಡೆದವು. ಹಾಗೆಯೇ ಷೇಕ್ಸ್‌ಪಿಯರನ 'ದಿ ಮರ್ಚೆಂಟ್ ಆಫ್ ವೆನಿಸ್'ನ್ನು ಆಧರಿಸಿ ಮಾಲಲೀ ರಾಘವಮು' ಎಂಬ ಪ್ರಣಯ ಕಥೆ ರಚಿಸಿದರು, ಹೀಗೆ ರಮ್ಯ ಶೈಲಿಯ ಕೃತಿಗಳು ರಚನೆಯಾದವು.

ವೀರೇಶಲಿಂಗಪಂತುಲು ಅವರ ಪ್ರಭಾವದಿಂದ ತೆಲುಗಿನಲ್ಲಿ ಕಾದಂಬರಿಗಳು ರಚನೆಯಾದವು. ಚಿಲಕಮರ್ತಿ ಅವರು 'ರಾಮಚಂದ್ರವಿಜಯಂ' ಹೇಮಲತಾ ಅಹಲ್ಯಾಬಾಯಿ 'ಕರ್ಪೂರ ಮಂಜರಿ' ಇವುಗಳನ್ನು ರಚಿಸಿದರು. ಅಲ್ಲದೆ ಐತಿಹಾಸಿಕ ಕೃತಿಗಳನ್ನು ರಚಿಸಿದರು. ಇದು ಒಬ್ಬ ಅನಾಥ ಬಾಲಕನ ಕಥೆಯಾಗಿದೆ. ಆತ ಶಿಕ್ಷಣ ಪಡೆಯಲು ಎಷ್ಟೊಂದು ಹಂಬಲಿಸುತ್ತಾನೆ, ಮರ್ಯಾದೆಯ ಜೀವನವನ್ನು ನಡೆಸಲು ಸಾಧ್ಯವಾದಷ್ಟು ಹೋರಾಡುತ್ತಾನೆ ಹಾಗೂ ಅವಮಾನಗಳನ್ನು ಸಹಿಸಿಕೊಳ್ಳುತ್ತಾನೆ. ಕೊನೆಗೂ ಎಲ್ಲವನ್ನು ಜಯಿಸುತ್ತಾನೆ. ಈ ರೀತಿಯಾದ ಅಂಶಗಳನ್ನಿಟ್ಟುಕೊಂಡು ಅಂದಿನ ಜನರ ಜೀವನವನ್ನು ಬಣ್ಣಿಸಲು ಕಾದಂಬರಿ ಪ್ರಕಾರ ಹೇಗೆ ಸಹಾಯಕವಾಯಿತು ಎಂಬುದನ್ನು ತಿಳಿಯಬಹುದು.

ಕ್ರಿ.ಶ ೧೮೯೪ ಹಾಗೂ ೧೯೧೦ರ ಅವಧಿಯಲ್ಲಿ ರಚಿಸಲಾದ ಅನೇಕ ಕಾದಂಬರಿಗಳು ಜಾತೀಯತೆ, ಧರ್ಮಾಂಧತೆ ಹಾಗೂ ವರ್ಣವೈಷಮ್ಯ ಇವುಗಳನ್ನು ಖಂಡಿಸುವಂತ ಕೃತಿಗಳಾಗಿವೆ. 'ಗಣಪತಿ', ಅಮೃತಮಂದಿರಮು', ಸುಬ್ರಮ್ಮಣ್ಯಶಾಸ್ತ್ರಿಯವರ 'ವಿಷಭುಜಂಗಂ' ತಲ್ಲಪ್ರಗಡ ಅವರ 'ಹೇಮಾವತಿ' ಮುಂತಾದವು ಸಾಮಾಜಿಕ ಸುಧಾರಣೆಯಿಂದ ಕೂಡಿದ ಕಾದಂಬರಿಗಳು ರಚನೆಯಾದವು.

ಹೀಗೆ ಕ್ರಿ.ಶ. ೧೯೦೦ ರಿಂದ ಪ್ರಾರಂಭವಾದ ಯುಗವನ್ನು ಅನುವಾದ ಹಾಗೂ ಅನುಕರಣ ಯುಗ ಎಂದು ಕರೆಯಲಾಗಿದೆ. ಹಾಗೆಯೇ ೨೦ನೇ ಶತಮಾನದ ಪ್ರಾರಂಭದಲ್ಲಿ ದೇಶವು ಸ್ವಾತಂತ್ರ ಹೋರಾಟದಲ್ಲಿ ನಿರತವಾಗಿತ್ತು.ಅಂತಹ ಸಂದರ್ಭದಲ್ಲಿ ಇಂಗ್ಲೀಷ್ ಶಿಕ್ಷಣ ಪಡೆದ ಯುವ ಪೀಳಿಗೆ ಪಾಶ್ಚಾತ್ಯ ಮೌಲ್ಯಗಳನ್ನು ಒಪ್ಪಿಕೊಂಡಿದ್ದರೂ ವಸಾಹತು ವಿರೋಧದ ಭಾವನೆಯನ್ನು ಬೆಳೆಸಿಕೊಂಡಿದ್ದರು. ವಸಾಹತು ವಿರೋಧವನ್ನು ಐತಿಹಾಸಿಕ ಕಾದಂಬರಿಗಳ ಮೂಲಕ ರಾಷ್ಟ್ರೀಯ ಭಾವನೆಯನ್ನು ಪ್ರತಿಬಿಂಬಿಸಲು ಪ್ರಯತ್ನಿಸಿದರು. ಗತಕಾಲದ ಭೌತಿಕ ಹಾಗೂ ಬೌದ್ಧಿಕ ಸಂಪನ್ನತೆಯನ್ನು ಕೊಂಡಾಡುವುದರ ಮೂಲಕ ಆಧುನಿಕರಲ್ಲಿ ಜವಾಬ್ದಾರಿ ಹಾಗೂ ಹಕ್ಕು ಬಾಧ್ಯತೆಗಳ ಅರಿವನ್ನು ಮೂಡಿಸುವುದಕ್ಕೆ ಕಾದಂಬರಿಯೇ ಸರಿಯಾದ ಮಾಧ್ಯಮ ಎಂದು ಗುರುತಿಸಿದರು. ಬಂಗಾಳದ ತ್ರಿಮೂರ್ತಿಗಳೆಂದು ಹೆಸರಾದ ಬಿಪಿನ್ ಚಂದ್ರಪಾಲ್, ಬಂಕಿಮ್‌ಚಂದ್ರ ಚಟರ್ಜಿ, ಟಾಗೋರ್ ಅವರ ಪ್ರಭಾವವು ಆಂಧ್ರ ಸಾಹಿತ್ಯದಲ್ಲಿ ನವೋದಯ ಕಾಣಿಸಿಕೊಳ್ಳಲು ಕಾರಣರಾದರು. ಅವರ ಸಾಹಿತ್ಯ ಕೃತಿಗಳಿಂದ ಆಕರ್ಷಿತರಾಗಿ ಕಾದಂಬರಿಗಳನ್ನು ಭಾಷಾಂತರ, ರೂಪಾಂತರಿಸಿರುವುದನ್ನು ಗುರುತಿಸಬಹುದು. ಹೀಗೆ ಅನುವಾದ ಮತ್ತು ಭಾಷಾಂತರಗಳ ಮೂಲಕ ಕಾದಂಬರಿ ರಚನೆ ನಡೆಯುತ್ತಾ ನಂತರ ಸ್ವತಂತ್ರ ಕಾದಂಬರಿಗಳು ಪ್ರಕಟವಾದವು. ಉನ್ನವ ಲಕ್ಷ್ಮೀನಾರಾಯಣ ಎನ್ನುವವರು 'ಮಾಪಲ್ಲಿ' ಕಾದಂಬರಿಯನ್ನು ರಚಿಸಿದರು. ಇಲ್ಲಿ ಗಾಂಧೀಜಿಯ ಪ್ರಭಾವವನ್ನು ಗುರುತಿಸಬಹುದಾಗಿದೆ. ವಿವಿಧ ರೀತಿಯ ವಸ್ತುಗಳಿಂದ ಕಾದಂಬರಿಯು ಸಮೃದ್ಧವಾಗಿ ಬೆಳವಣಿಗೆ ಹೊಂದಿದೆ.

ಮಲಯಾಳಂ ಭಾಷೆಯಲ್ಲಿ ಕಥನ ಕವನಗಳಿಂದ ಕಾದಂಬರಿ ಪ್ರಕಾರವು ಅಸ್ತಿತ್ವಕ್ಕೆ ಬಂದಿದೆ. ಕಾದಂಬರಿಯ ಅನೇಕ ಮಾರ್ಗಗಳನ್ನು ಅನುಸರಿಸಿದೆವು. 'ರೊಮ್ಯಾಂಟಿಕ್' ಮಾರ್ಗ, ರಿಯಲಿಸಂ, ಆಧುನಿಕ ಹಾಗೂ ಆಧುನಿಕೋತ್ತರ ಮಾರ್ಗ ಎಂದು ಕಾದಂಬರಿ ರಚನೆಯಾದವು. ಕಾದಂಬರಿ ಪ್ರಕಾರವು ಸಮಾಜದಲ್ಲಿರುವ ವ್ಯಕ್ತಿಯ ಸಂಬಂಧವನ್ನು ಕುರಿತಂತೆ ಅಂತಹ ಮೌಲ್ಯಗಳನ್ನು ಪ್ರಶ್ನಿಸುವುದು ಆಧುನಿಕ ಜಗತ್ತಿನಲ್ಲಿ ಬಹುಮುಖ್ಯವಾಗಿದೆ. ಆಗಿನ ಆಧುನಿಕ ಜಗತ್ತಿನಲ್ಲಿ ಗುಲಾಮಗಿರಿ ಮತ್ತು ಪುರೋಹಿತ ವರ್ಗದ ಕಟ್ಟುಕಟ್ಟಳೆಗಳಿಂದ ವಿಮೋಚನೆ ಪಡೆದಿರುವ ಜನತೆ ಮಧ್ಯಮ ವರ್ಗವಾಗಿ ಹೊರಹೊಮ್ಮಿದೆ. ಹಾಗಾಗಿ ಕಾದಂಬರಿಯೂ ಮೂಲಭೂತವಾಗಿ ಮಧ್ಯಮ ವರ್ಗದ ಸಾಹಿತ್ಯ ಪ್ರಕಾರವಾಗಿದೆ. ಇಂಗ್ಲಿಷ್ ಧರ್ಮ ಪ್ರಚಾರಕರಾದ ರೆವರೆಂಡ್ ಜೊಸೆಫ್ ವಿಲನ್ ಅವರು ಜಾನ್‌ಬನ್ಯನ್‌ನ ಕೃತಿ 'ಪಿಲ್‌ಗ್ರಿಮ್ಸ್ ಪ್ರೊಗ್ರೆಸ್' ಅನ್ನು ಇಂಗ್ಲಿಷ್‌ನಿಂದ ಮಲಯಾಳಂಗೆ ಭಾಷಾಂತರಿಸಿ ೧೮೪೦ರಲ್ಲಿ ಪ್ರಕಟಿಸಿದ್ದರು. ಇದೇ ಮಲಯಾಳಂನ ಮೊತ್ತ ನೊದಲ ಗದ್ಯ ಕೃತಿ. ನಂತರದ ಭಾಷಾಂತರ ಕೃತಿ 'ಘಾತಕ ವಧಂ' ಮಲಯಾಳಂನ ಮೊದಲ ಕಾದಂಬರಿ ಎಂದು ಗುರುತಿಸುತ್ತಾರೆ. ಇದು ಕೇರಳದ ವಿಶಿಷ್ಟ ಸಮಾಜವೊಂದರ ಮೌಲ್ಯ ವ್ಯವಸ್ಥೆಯನ್ನು ಪ್ರಶ್ನೆಮಾಡುತ್ತದೆ. ಇದು ಸಮಾಜ ಸುಧಾರಣೆಯ ಗುರಿಯನ್ನಿಟ್ಟುಕೊಂಡಿತ್ತು. ಹೀಗೆ ಅನುವಾದಗಳು ಅನುಕರಣೆಗಳ ಮೂಲಕ ಮಲಯಾಳಂನಲ್ಲಿ ಕಾದಂಬರಿ ಸಾಹಿತ್ಯ ರೂಪುಗೊಂಡಿತ್ತು. ಕೆಲವು ವಿಮರ್ಶಕರ ಅಭಿಪ್ರಾಯದಲ್ಲಿ ಅಪ್ಪು ನೆಡುಂಗಾಡಿ ಅವರ 'ಕುಂದಲತ' (೧೮೮೭) ಮಲಯಾಳಂನ ಮೊದಲ ಕಾದಂಬರಿಯಾಗಿದೆ. ನೆದುಂಗಡಿ ಅವರು ಷೇಕ್ಸ್‌ಪಿಯರ್‌ನ 'ಸಿಂಬೈಲೈನ್' ಮತ್ತು ವಾಲ್ಟರ್ ಸ್ಕಾಟ್ಸ್ 'ಐವಾನ್‌ಪೋ' ಕೃತಿಗಳಿಂದ ಗಮನಾರ್ಹವಾಗಿ ಪ್ರಭಾವಿತರಾಗಿದ್ದಾರೆ. ಕೇರಳದ ಜನಜೀವನದೊಂದಿಗೆ ಸಂಬಂಧ ಹೊಂದಿದ 'ಕುಂದಲತ' ಸಾಹಸ ಹಾಗೂ ಭಾವವೇಶದಿಂದ ತುಂಬಿಕೊಂಡ ಸಾಹಸ ರಮ್ಯಕಥೆ ಆಗಿದೆ. ಈ ಕಾದಂಬರಿ ಮನೋರಂಜನೆಯ ಕಥೆಯೊಂದನ್ನು ಹೇಳುತ್ತದೆ. ನ್ಯಾಯಾಧೀಶರಾಗಿದ್ದ ಚಂದುಮೆನನ್ ಅವರು 'ಇಂದುಲೇಖಾ' ಮತ್ತು 'ಶಾರದ' ಎಂಬ ಎರಡು ಕಾದಂಬರಿಗಳನ್ನು ಬರೆದರು.

ಇಂದುಲೇಖಾ ಕಾದಂಬರಿಯು ಮಲಯಾಳಂ ಸಮಾಜದಲ್ಲಿನ ಸಾಮಾಜಿಕ ಜೀವನವನ್ನು ವ್ಯಕ್ತಪಡಿಸುತ್ತದೆ. 'ಶಾರದಾ' ವಾಸ್ತವ ಜೀವನದಿಂದ ತೆಗೆದುಕೊಳ್ಳಲಾದ ವಿವಿಧ ಪಾತ್ರಗಳಿಂದ ತುಂಬಿಕೊಂಡಿದೆ. ತಾನು ಮದುವೆಯಾಗಿದ್ದ ಗಂಡನನ್ನು ಬಿಟ್ಟು, ತನಗಿಷ್ಟ ಬಂದ ಪುರುಷನನ್ನು ಮದುವೆಯಾಗುವ ಸಂಪ್ರದಾಯ ನಿಷ್ಟ ನಾಯರ್ ಮಹಿಳೆಯೊಬ್ಬಳ ನ್ಯಾಯಸಮ್ಮತ ಹಕ್ಕನ್ನು ಪ್ರತಿಪಾದಿಸುವುದೆ ಕಾದಂಬರಿಯ ವಸ್ತುವಾಗಿದೆ. ನೀಚನಾಗಿರುವ ವೈಲೆ ಪಟ್ಟರ್‌ನಿಂದ ಹಿಡಿದು ಪ್ರಾಮಾಣಿಕನಾದ ಶಂಕರನ್ ನಾಯರ್‌ವರೆಗೆ ಅನೇಕ ಸ್ವಾರಸ್ಯಪೂರ್ಣ ಪಾತ್ರಗಳು, ಈ ಕೃತಿಯಲ್ಲಿ ಚಿತ್ರಿತವಾಗಿವೆ. ಇಲ್ಲಿ ಕಾದಂಬರಿಕಾರರು ಕೇರಳದ ಉಚ್ಚಜಾತಿಗಳು ಅನುಸರಿಸುತ್ತಿದ್ದ ಪದ್ಧತಿಗಳಲ್ಲಿದ್ದ ಟೊಳ್ಳುತನವನ್ನೂ, ಅಸಂಬದ್ಧತೆಯನ್ನ ಬಹಿರಂಗಗೊಳಿಸಿದ್ದರು. ಆ ಕಾಲಘಟ್ಟದಲ್ಲಿ ರಚನೆಯಾದ ಇಂದುಲೇಖ, ಶಾರದಾ, ಸರಸ್ವತಿವಿಜಯಂ ಮುಂತಾದ ಕಾದಂಬರಿಗಳಲ್ಲಿ ಸಾಮಾಜಿಕ ಮೌಲ್ಯಗಳ ಪುನರ್ ಮೌಲ್ಯೀಕರಣಕ್ಕೆ ಒಳಪಡಿಸಿರುವಂತ ಕೃತಿಗಳಾಗಿವೆ. ನಂತರದಲ್ಲಿ ಸಿ.ವಿ. ರಾಮನ್ ಪಿಳ್ಳೆಯವರು ಚಾರಿತ್ರಿಕ ಕಾದಂಬರಿಯನ್ನು ರಚಿಸಿದರು. ಇವರು ವೀರನಾಯಕರುಗಳ ಸ್ಮಾರಕಗಳನ್ನು ರಚಿಸುವುದರಲ್ಲಿ ಆಸಕ್ತಿವಹಿಸಿದ್ದರು. ಚಂದು ಮೆನನ್ ಹಾಗೂ ರಾಮನ್‌ಪಿಳ್ಳೆ ಅವರು ತಮ್ಮ ಶ್ರೇಷ್ಠ ಕೃತಿಗಳನ್ನು ನೀಡುವುದರ ಮೂಲಕ ಮಲಯಾಳಂ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಕಲ್ಪಿತ ಕಥೆಗಳ ವೈವಿಧ್ಯಗಳಿಂದ ಕೂಡಿದ ಕಾದಂಬರಿಗಳು ರಚನೆಯಾಗಿವೆ. ಕೀಳಿಪ್ಪಾಟ್ಟು ರಾಮನ್ ಮೆನನ್ ಅವರು 'ಪರಜಾತಿ ಪರಿಣಯಂ' ಎಂಬ ವಿಡಂಬನಾ ಕೃತಿಯನ್ನು ಬರೆದರು. ಕರಟ್ ಅಚ್ಯುತ ಮೆನನ್ ಅವರ 'ವಿರುಟನ್ ಶಙ್ಕು' ಅಲೆಮಾರಿ ನಾಯಕನ ಸಾಹಸ ಕಾದಂಬರಿಯೊಂದರ ಚಿತ್ರಣವಿದೆ. 'ಪಾರಪ್ಪುರಂ', ಉದಯಭಾನು (೧೯೨೫) ಎಂಬ ಎರಡು ಕಾದಂಬರಿಗಳನ್ನು ಕೆ.ನಾರಾಯಣ ಕುರಕ್ಕಲ್ ಬರೆದರು. ಅಪ್ಪರ್ ತಂಪುರಾನ ಅವರ 'ಭಾಸ್ಕರ ಮೇನೋನ್' (೧೯೦೯) ಮಲಯಾಳಂನ ಮೊತ್ತ ಮೊದಲ ಪತ್ತೆದಾರಿ ಕಾದಂಬರಿಯಾಗಿದೆ. ಮುರ್ಕೋತು ಕುಮಾರನ್ ಅವರ 'ಕನಕಮ್ ಮೂಲಂ' ಹಾಗೆಯೇ ಅಪ್ಪುಲ್ ತಂಪುರನ್ ಅವರ 'ಭೂತರಾಯರ್' (೧೯೨೩) ಹೀಗೆ ಅನೇಕ ಚಾರಿತ್ರಿಕ ಸಾಹಸ ರಮ್ಯ ಕಾದಂಬರಿಗಳು ನಿರ್ಮಾಣವಾಗಿವೆ.೨ ೦ನೇ ಶತಮಾನದ ಮೊದಲ ದಶಕದಲ್ಲಿ ಮನೋರಂಜನೆಯೇ ಮೂಲ ಉದ್ದೇಶವಾಗಿರುವ ಕಾದಂಬರಿಗಳು ರಚನೆಯಾಗಿವೆ.

ಈ ಕಾದಂಬರಿಗಳ ಮಧ್ಯದಲ್ಲಿ ಮೊದಲ ಘಟ್ಟದಲ್ಲಿ ಕಾಣಿಸಿಕೊಂಡ ಅನೇಕ ಕಾದಂಬರಿಗಳಲ್ಲಿ ಮೂಡಿಬಂದಿರುವ ಸಮರ್ಥ ಸಾಮಾಜಿಕ ವಿಮರ್ಶೆಯಿಂದ ಮಹತ್ವಪಡೆದಿವೆ. ಕುನ್ನುಕುಳಿಯಿಲ್ ಕೊಚ್ಚ ತೊಮ್ಮನ್ ಅವರ 'ಪರಿಷ್ಕರಪ್ಪತಿ' (ಅರೆನಾಗರಿಕ ೧೯೨೫) ಆ ಕಾಲದ ಸಿರಿಯನ್ ಕ್ರಿಶ್ಚಿಯನ್ನರಲ್ಲಿದ್ದ ಸಾಮಾಜಿಕ ಪದ್ಧತಿಗಳ ಚಿತ್ರಣವನ್ನು ನೀಡುತ್ತದೆ. ಇಂಗ್ಲೀಷ್ ಶಿಕ್ಷಣ ಆ ಸಮಾಜದ ಮಹಿಳೆಯರಿಗೆ ತಂದುಕೊಟ್ಟ ವಿಮೋಚನೆಯ ಚಿತ್ರಣವಿದೆ. ಪೊತೇರಿ ಕುಂಇಂಪು ಅವರ 'ಸರಸ್ವತಿ ವಿಜಯಂ' ವಿದ್ಯೆಯ ಮೂಲಕ ಬಹಿಷ್ಕೃತ ಬ್ರಾಹ್ಮಣ ಹುಡುಗಿ ಜಯ ಸಾಧಿಸುವಳು ಹಾಗೂ ಸ್ವಪ್ರಯತ್ನದ ಬಲದಿಂದಲೇ ಒಬ್ಬ ಜಾತಿ ವಿಹೀನ ಬಾಲಕ ಸಮಾಜದಲ್ಲಿ ಮೇಲೆ ಬರುವನು ಎಂಬುದನ್ನು ತೋರಿಸುತ್ತದೆ. ಹಾಗೆಯೇ ಕೆ. ಎಂ. ಪಣಿಕ್ಕರ್ ಅವರ 'ದೊರೆಶ್ಶಾಣಿ' (ಮೇಮ್ ಸಾಹೀಬ್, ೧೯೩೧) ಎಂಬ ಕಾದಂಬರಿ, ಪಾಶ್ಚಾತ್ಯ ಮಹಿಳೆಯನ್ನು ಅನುಸರಿಸಿ ನಗೆಗೀಡಾಗುವ ಮಹಿಳೆಯರನ್ನು ಕುರಿತ ಒಂದು ವಿಡಂಬನೆಯಾಗಿದೆ. 'ಹರಿದಾಸಿ' ದೇವಾಲಯ ಪ್ರವೇಶ ಘೋಷಣೆಯ ಸಂದರ್ಭದಲ್ಲಿ ಜಾತಿ ಹೀನರು ಅನುಭವಿಸುವ ಬಿಡುಗಡೆಯ ಹಿಗ್ಗನ್ನು ಚಿತ್ರಿಸುತ್ತದೆ. ಭವತ್ರಾತನ ನಂಬೂದಿರಿಪ್ಪಾಡ್ ಅವರ 'ಅಪ್ಪಂಡೆ ಮಗಳ್' (ಅಪ್ಪನ ಮಗಳು ೧೯೩೩) ಈ ಕಾದಂಬರಿ, ಬ್ರಾಹ್ಮಣರ ವೈವಾಹಿಕ ಪದ್ಧತಿಗಳಲ್ಲಿರುವ ನ್ಯೂನತೆಗಳನ್ನು ಹಾಗೂ ಸಾಮಾಜಿಕ ಆಚರಣೆಗಳಲ್ಲಿರುವ ಅಸಮತೆಗಳನ್ನು ಬಹಿರಂಗಗೊಳಿಸುವುದು. ಅಲ್ಲದೇ ರಾಜ್ಯದಲ್ಲಿ ಬದಲಾಗುತ್ತಿದ್ದ ಸಾಮಾಜಿಕ ಮಾದರಿಗಳೊಂದಿಗೆ ಹೊಂದಿಕೊಂಡಂತೆ ಕಥಾನಾಯಕಿಯಾಗಿರುವ ಬ್ರಾಹ್ಮಣ ಹುಡುಗಿಯ ಬೆಳವಣಿಗೆಯನ್ನು ಗುರುತಿಸುತ್ತದೆ. ಮಲಯಾಳಂ ಸಾಹಿತ್ಯದಲ್ಲಿ ಮೊದಲು ಇಂಗ್ಲಿಷ್ ಹಾಗೂ ಬಂಗಾಳಿಯಿಂದ ಭಾಷಾಂತರಗೊಂಡಿವೆ.

ವಿಶ್ವದ ಮುಖ್ಯ ಲೇಖಕರ ಕೃತಿಗಳ ಒಳ್ಳೆಯ ಅನುವಾದಗಳು ಮಲಯಾಳಂನಲ್ಲಿ ಈಗ ದೊರೆಯುತ್ತಿವೆ. ಟಾಲ್‌ಸ್ಟಾಯ್, ದಾಸ್ತೊವಸ್ಕಿ, ವಾಲ್ಟರ್‌ಸ್ಕಾಟ್, ಅಲೆಕ್ಸಾಂಡರ್ ಡ್ಯೂಮ್, ವಿಕ್ಟರ್ ಹ್ಯೂಗೋ, ಅರ್ಮನ್ ಹೆಸ್, ಥಾಮಸ್‌ಮನ್, ಹೆರ್ಮನ್ ಮೆಲ್ವಿಲ್, ಆಂಡ್ರೆಜೇಡ್, ಆಲ್ಬರ್ಟ್ ಕಾಮೂ, ಫ್ರಾನ್ಜ್, ಕಾಫ್ಕಾ, ಶೋಲೊಕೋವ್ ಹಾಗೂ ಇತರರ ಕೃತಿಗಳ ಅನುವಾದಗಳು ದೊರೆಯುತ್ತಿವೆ. ಕೆಲವು ಕಾದಂಬರಿಗಳ ಭಾಷಾಂತರಗಳು ಮೊದಲು ಕಾಣಸಿಕೊಂಡವು. ನಾಲಪಾಟ್ ನಾರಾಯಣಮೆನನ್ ಅವರು 'ಪ್ಲಾವಜಾಳ್ (ಬಡಜನರು ೧೯೨೭) ಎಂಬ ಶೀರ್ಷಿಕೆಯಲ್ಲಿ ಅನುವಾದ ಮಾಡಿದ್ದರು. ಭಾರತೀಯ ಕಾದಂಬರಿಗಳಲ್ಲಿ ಬಂಗಾಳಿ ಕಾದಂಬರಿಗಳು ಮಲಯಾಳಂ ಸಂವೇದನೆಯೂ ಸಾಮ್ಯತೆಯನ್ನು ಹೊಂದಿದ್ದರಿಂದಲೇ ಇಂತಹ ಪ್ರಭಾವ ಬಿದ್ದಿದೆ. ಹೀಗೆ ಅನುವಾದದಿಂದ ಪ್ರಭಾವ ಬೀರಿದ ವ್ಯಕ್ತಿಗಳೆಂದರೆ ಬಂಕಿಮ್‌ಚಂದ್ರ ಚಟರ್ಜಿ, ಶರತ್‌ಚಂದ್ರ ಚಟರ್ಜಿ ಮತ್ತು ರವೀಂದ್ರನಾಥ ಟಾಗೂರ್. ಬಂಕೀಮಚಂದ್ರ ಅವರ 'ದುರ್ಗೇಶನಂದಿನಿ' ಮತ್ತು 'ಕಪಾಲಕುಂಡಲ', ಅನಂತರ ಶರತ್‌ಚಂದ್ರ ಅವರ 'ದೇವದಾಸ್' ಮತ್ತು 'ಚರೀತ್ರಹೀನ್'ಗಳ ಭಾಷಾಂತರಗಳು ಬಂದವು. ಟಾಗೋರರ ಕಾದಂಬರಿಗಳು ಮಲಯಾಳಂನಲ್ಲಿ ಕಾಣಿಸಿಕೊಂಡವು ಹೀಗೆ ಇತರ ಭಾಷೆಗಳ ಕಾದಂಬರಿಗಳು ಮಲಯಾಳಂ ಭಾಷೆಗೆ ಅನುವಾದಗೊಂಡಿವೆ .ಅವುಗಳೆಂದರೆ . ವಿಭೂತಿ ಭೂಷಣ್ ಚಟ್ಟೋಪಾಧ್ಯಾಯ, ಬಿಮಲ್‌ಮಿತ್ರ, ಶಂಕರ್ ಮತ್ತು ತಾರಾಶಂಕರ ಬ್ಯಾನರ್ಜಿ (ಬಂಗಾಳಿ) ಯಶ್‌ಪಾಲ್ ಮತ್ತು ಪ್ರೇಮ್‌ಚಂದ್ (ಹಿಂದಿ), ಖಾಂಡೇಕರ್ (ಮರಾಠಿ),. ನಂತರ ಪ್ರಗತಿಶೀಲ ಕಾದಂಬರಿಗಳು ರಚನೆಯಾಗಿವೆ. ಚಂದುಮೆನೋನ್ ಪರಿಚಯಿಸಿದ್ದ ಸಾಮಾಜಿಕ ಕಾದಂಬರಿಯು ಮಾದರಿಯಾಯಿತು. ನಂತರದಲ್ಲಿ ಮಹಮ್ಮದ್ ಬಷೀರ್ ಅವರ 'ಬಾಲ್ಯಕಾಲಸಖಿ' ಮತ್ತು ಪಿ.ಕೇಶವನ್ ಅವರ ಓಯಿಲ್ ನಿನ್ನು (ಚರಂಡಿ ಯಿಂದ) ಮುಂತಾದ ಕೃತಿಗಳು ಪ್ರಕಟಗೊಳ್ಳತೊಡಗಿದವು. ಈ ರೀತಿ ಮಲೆಯಾಳಂ ಸಾಹಿತ್ಯದಲ್ಲಿ ಕಾದಂಬರಿಗಳು ಬಂದಿರುವುದು ಕಾಣಬಹುದು.

ತುಳುವಿನಲ್ಲಿ ಆಧುನಿಕ ಸಾಹಿತ್ಯದ ಅರುಣೋದಯವು ೨೦ನೇ ಶತಮಾನದ ಆರಂಭದ ದಶಕಗಳಲ್ಲಿ ನಡೆಯಿತು. ಬ್ರಿಟಿಷರ ಆಗಮನದಿಂದ ಅವರ ಮುದ್ರಣ ಯಂತ್ರದ ಸಹಾಯದಿಂದ ಇಲ್ಲಿನ ಪ್ರಾದೇಶಿಕ ಕಥನ ಸಾಹಿತ್ಯವನ್ನೂ, ಇಲ್ಲಿದ್ದ ಜಾನಪದ ಸಾಹಿತ್ಯವನ್ನೂ ಹಾಗೆಯೇ ಜಾನಪದ ಸಾಹಿತ್ಯ ಸಂಸ್ಕೃತಿಯನ್ನು ಅಕ್ಷರ ಮಾಧ್ಯಮದಲ್ಲಿ ಸೃಷ್ಟಿಸಲು ಸಾಧ್ಯವಾಯಿತು. ತುಳುವಿನಲ್ಲಿ ಪಾಶ್ಚಾತ್ಯ ಕ್ರೈಸ್ತ ಮಿಶನರಿಗಳಿಂದ ತುಳು ನಿಘಂಟು, ಬೈಬಲಿನ ಭಾಷಾಂತರ, ನೀತಿವಚನಗಳ, ಭೂತಾರಾಧನೆ, ತುಳುಗಾದೆಗಳು, ಇವುಗಳ ಅಭ್ಯಾಸವು ನಡೆಯಿತು. ಈ ರೀತಿ ತುಳು ಭಾಷೆಯಲ್ಲಿನ ಸಾಹಿತ್ಯ ಚಟುವಟಿಕೆಗಳು ಭಾಷಾಂತರ, ಅನುವಾದಗಳ ಮೂಲಕ ಪ್ರಾರಂಭವಾದವು. ಆದರೆ ವಿಶಿಷ್ಟವಾಗಿ ಗುರುತಿಸ ಬೇಕಾದ ಅಂಶವೆಂದರೆ ತುಳುವಿನಲ್ಲಿ ಗದ್ಯ ಪ್ರಕಾರದ ಕಾದಂಬರಿಯು ಉಗಮವಾಗುವುದು ಎಸ್.ಯು. ಪಣಿಯಾಡಿಯವರ 'ಸತೀ ಕಮಲೆ' ಎಂಬ ಸ್ವತಂತ್ರ ಕೃತಿಯಿಂದಲೇ. ಆರಂಭಘಟ್ಟದಲ್ಲಿ ಇತರ ಭಾಷೆಗಳಿಂದ ತುಳುವಿಗೆ ಕಾದಂಬರಿಯು ಅನುವಾದ ನಡೆಯದೇ ಇದ್ದುದನ್ನು ಗುರುತಿಸಬಹುದು ಅಂದರೆ ಆ ಕಾಲದಲ್ಲಿ ಮತ್ತೆ ಯಾವ ಕಾದಂಬರಿಯು ಸಿಕ್ಕಿಲ್ಲ. ತುಳು ಭಾಷೆಯಲ್ಲಿ ವಿಸ್ತೃತವಾದ ಗದ್ಯಕಥನ ಆರಂಭವಾಗುವುದು ೧೯೩೪ರಲ್ಲಿ ಎನ್. ಎ. ಶೀನಪ್ಪ ಹೆಗ್ಗಡೆಯವರ 'ಮಿತ್ಯನಾರಾಯಣ ಕತೆ' ಹಾಗೂ ಎಸ್.ಯು. ಪಣಿಯಾಡಿಯವರ 'ಸತೀಕಮಲೆ' ಎಂಬ ಕಾದಂಬರಿಗಳ ಮೂಲಕ. ಇದರಿಂದ ತುಳು ನಾಡು, ಭಾಷೆ, ಸಾಹಿತ್ಯಗಳ ಕಥನಾತ್ಮಕ ಪುನರುಜ್ಜೀವನದ ಆರಂಭವನ್ನು ಗುರುತಿಸಲಾಗುತ್ತದೆ. ಕನ್ನಡ ಲಿಪಿಯನ್ನು ಬಳಸಿ ತುಳುಭಾಷೆಯಲ್ಲಿ ರಚನೆಯಾದ ಮಿತ್ಯನಾರಾಯಣ ಕತೆಯು ಕಥನ ಪರಂಪರೆಯನ್ನು ಸೃಷ್ಟಿಸಿತು. ಇದು ಕಾದಂಬರಿಯ ವಿಸ್ತಾರವಾದ ಗದ್ಯದ ಲಕ್ಷಣಗಳನ್ನು ಹೊಂದಿರುವುದರಿಂದ ಲೇಖಕರು 'ಮಿತ್ಯ ನಾರಾಯಣ ಕತೆ' ಎಂದು ಹೆಸರಿಸಿದ್ದಾರೆ.

ಕನ್ನಡ ಮತ್ತು ಇತರ ಭಾಷೆಗಳಲ್ಲಿ ಕಾದಂಬರಿ ಎಂಬ ಬರವಣಿಗೆ ಪಡೆದುಕೊಂಡ ರೂಪ , ವಿನ್ಯಾಸ ಕ್ರಮಕ್ಕಿಂತ ಭಿನ್ನವಾಗಿ ಮಿತ್ಯನಾರಾಯಣ ಕಥೆ ರೂಪುಗೊಂಡಿದೆ. ಇದೇ ಕಾಲಘಟ್ಟದಲ್ಲಿ ಪಣಿಯಾಡಿಯವರ ಸತೀಕಮಲೆ ಕಾದಂಬರಿ ಪ್ರಕಟಗೊಂಡಿತು.

ಕಾದಂಬರಿಯಲ್ಲಿ ಪಾರಂಪರಿಕ ಮೌಲ್ಯಗಳೆಂದು ಸ್ವೀಕರಿಸಿಕೊಂಡ ಆಸ್ತಿಕತೆ ಮತ್ತು ಶ್ರೇಣಿಕೃತ ವ್ಯವಸ್ಥೆ, ಜಾತಿಯ ಸ್ಥಾನಮಾನಗಳು, ಮಹಿಳೆಯರನ್ನು ಗುರುತಿಸುವ, ಪುರುಷ ಪ್ರಧಾನ ಮನೋಭಾವದ ಸಾಕ್ಷೀರೂಪವಾಗಿವೆ. ಹೀಗೆ ಎಲ್ಲ ದೃಷ್ಟಿಕೋನಗಳಿಂದಲೂ ಪಾರಂಪರಿಕವೆನ್ನುವ ಮೂಲದೆಡೆಗೆ ಮುಖ ಮಾಡಿರುವ ಚಿತ್ರಣಗಳೇ ಕಂಡುಬರುತ್ತವೆ. ಪುನರ್‌ವಿವಾಹ ವಿರೋಧಿ ನಿಲುವು ಕೂಡ ಇಲ್ಲಿ ಸ್ಥಾಯಿ ಭೂತವಾಗಿ ನಿಲ್ಲುತ್ತದೆ. ಸತೀಕಮಲೆ ಕಾದಂಬರಿಯ ನಾಯಕಿ ಕಮಲೆ ವಿಧವೆಯಾಗಿದ್ದು , ಆಧುನಿಕ ವಿದ್ಯಾಭ್ಯಾಸ ಪಡೆಯುವಂತ ಪ್ರಗತಿಪರ ನಿಲುವು ಇದ್ದರೂ ಕೂಡ ಆಕೆ ಸತೀಕಮಲೆಯಾಗಿ ಉಳಿದು ಬಿಡುತ್ತಾಳೆ. ಇದು ಅಲ್ಲಿನ ಬ್ರಾಹ್ಮಣ್ಯದ ಅಂಶಗಳನ್ನು ಪ್ರತಿಪಾದಿಸುತ್ತದೆ.

ಆಧುನಿಕ ಭಾರತದ ಭಾಷೆಗಳಲ್ಲಿ ಆಗಲೇ ಕಾದಂಬರಿಗಳು ಉದಯವಾಗಿದ್ದವು. ತುಳು ಭಾಷೆಯಲ್ಲಿ ಕಾದಂಬರಿ ಪ್ರಕ್ರಿಯೆ ಆರಂಭವಾದುದು ಹೆಚ್ಚು ಕಡಿಮೆ ೪೦ ವರ್ಷಗಳ ನಂತರ . ದಕ್ಷಿಣ ಭಾರತೀಯ ಭಾಷೆಗಳ ಕಾದಂಬರಿಗಳು ಪಾಶ್ಚಾತ್ಯರ ಹಾಗೂ ಬಂಗಾಳದ ಕಾದಂಬರಿಗಳ ಪ್ರಭಾವದಿಂದ ರಚನೆಯಾದವುಗಳು. ಆದರೆ ತುಳು ಕಾದಂಬರಿಯ ರಚನೆಗೆ ಅವು ಹೆಚ್ಚಿನ ಪ್ರಭಾವ ಬೀರದೆ ಇದ್ದರೂ ಅವುಗಳ ಸುಧಾರಣ ಪರ ಅಂಶಗಳನ್ನು ಕಾದಂಬರಿಯಲ್ಲಿ ಗುರುತಿಸಬಹುದಾಗಿದೆ.'ಮಿತ್ಯನಾರಾಯಣಕಥೆ' ಮತ್ತು 'ಸತೀಕಮಲೆ' ಪ್ರಕಟವಾದ ಮೇಲೆ ತುಳು ಭಾಷೆಯಲ್ಲಿ ಕಾದಂಬರಿ ಮತ್ತೆ ಕಾಣಿಸಿಕೊಳ್ಳಲು ಹಲವು ದಶಕಗಳೇ ಬೇಕಾದವು. ತುಳು ಕಾದಂಬರಿಯು ೨೦ನೇ ಶತಮಾನದ ಮೊದಲ ಭಾಗದಲ್ಲಿ ಆರಂಭವಾಯಿತು.

ಈ ಅವಧಿಯಲ್ಲಿ ಬಂದ ತಮಿಳು , ತೆಲುಗು,ಕನ್ನಡ , ಮಲೆಯಾಳಂ ಮತ್ತು ತುಳು ಭಾಷೆಗಳ ಸಾಹಿತ್ಯದಲ್ಲಿ ಪರಸ್ಪರ ಸಂಬಂಧ ಮತ್ತು ಪ್ರೇರಣೆಗಳನ್ನು ನಾವು ಗಮನಿಸ ಬಹುದು. ಮುಖ್ಯವಾಗಿ ಇಂಗ್ಲೀಷ್ ವಿದ್ಯಾಭ್ಯಾಸದಿಂದ ಒದಗಿದ ಪಾಶ್ಚಾತ್ಯ ವಿಚಾರಗಳು ಅಂದಿನ ಸಮಾಜ, ಸಂಸ್ಕೃತಿ ನಡೆನುಡಿಗಳ ಮೇಲೆ ಪರಿಣಾಮ ಬೀರಿದಂತೆ ಸಾಹಿತ್ಯದ ಮೇಲೂ ಪ್ರಭಾವ ಬೀರಿವೆ. ಪಾಶ್ಚಾತ್ಯರು ಭಾರತಕ್ಕೆ ಬಂದ ಮೇಲೆ ಪ್ರಾದೇಶಿಕ ಭಾಷೆಗಳಲ್ಲಿ ಪರಸ್ಪರ ಸಂಪರ್ಕವೇರ್ಪಟ್ಟಿತ್ತು. ಈ ಯುಗದ ಸಾಹಿತ್ಯದಲ್ಲಿ ಸಂಪ್ರದಾಯ ಸಾಹಿತ್ಯದ ಮೇಲೆ ಹೊಸ ವಿಚಾರಗಳು, ಹೊಸ ಪೀಳಿಗೆಯ ಆಶೋತ್ತರಗಳು ಕಾದಂಬರಿಗಳಲ್ಲಿ ಕಾಣಿಸಿಕೊಳ್ಳತೊಡಗಿದವು.

ಆಯಾ ಭಾಷೆಗಳಲ್ಲಿ ಸಾಹಿತ್ಯದ ಬದಲಾವಣೆಗೆ ಇದು ನೆರವಾಗಿರುವುದನ್ನು ಗುರುತಿಸಬಹುದು. ಪಾಶ್ಚಾತ್ಯ ಚಿಂತನೆಯಿಂದ ಬಂದ ಕಥಾ ಸಾಹಿತ್ಯವು ಕಾದಂಬರಿ, ಸಣ್ಣಕತೆ, ನಾಟಕ ಮೊದಲಾದ ರೂಪಗಳನ್ನು ತಾಳಿ ಎಷ್ಟೇ ವಿರೋಧ ಬಂದರೂ ಸಮಕಾಲೀನ ಸಮಾಜದ ಕೆಲವು ದುಷ್ಟಪದ್ಧತಿಗಳ ನಿವಾರಣೆಗೆ ಶ್ರಮಿಸಿರುವುದು ಈ ಕಾಲದ ವೈಶಿಷ್ಟ್ಯ. ಈ ಭಾಷೆಗಳಲ್ಲಿ ಹಳೆಯ ಶೈಲಿಯು ಸವೆದು ಸವಕಲಾಗಿ ಹೊಸತನವನ್ನು ಮೈಗೂಡಿಸಿಕೊಳ್ಳಲು ಹವಣಿಸಿರುವುದು ಪ್ರಸ್ತುತವಾಗಿದೆ. ಈ ೫ ಭಾಷೆಗಳಲ್ಲಿ ಪಾಶ್ಚಾತ್ಯ ಮಿಷನರಿಗಳು, ಅಧಿಕಾರಿಗಳು ಪ್ರವೇಶಿಸಿ ಸಾಹಿತ್ಯ ಚಿಂತನೆಯಲ್ಲಿ, ಭಾಷೆಯ ಪ್ರಯೋಗದಲ್ಲಿ ಪಾಶ್ಚಾತ್ಯ ದೃಷ್ಟಿಕೋನವನ್ನು ತಂದರು. ಪಾಶ್ಚಾತ್ಯ ವಿದ್ವಾಂಸರುಗಳಂತೆ ನಮ್ಮ ವಿದ್ವಾಂಸರುಗಳು ಹಳೆಯ ಕಾವ್ಯಗಳನ್ನು ಪುನಹ ಸಂಪಾದಿಸಿ, ಪ್ರಕಟಿಸುವಲ್ಲಿ ಪ್ರಮುಖ ಕಾರಣವಹಿಸಿದರು ಇದರ ಪರಿಣಾಮವಾಗಿ ಆಧುನಿಕ ಮುದ್ರಣ ಸೌಕರ್ಯದಿಂದಾಗಿ ಈ ಕಾವ್ಯಗಳು ಸಾವಿರ ಪ್ರತಿಗಳ ಸಂಖ್ಯೆಯಲ್ಲಿ ಹೊರತರುವಲ್ಲಿ ನೆರವಾದರು. ಸಾಹಿತ್ಯದ ಮೌಲ್ಯದ ದೃಷ್ಟಿಯಿಂದ ಅಲ್ಲಲ್ಲಿ ಕೆಲವು ಮಹಾಕೃತಿಗಳು ತಲೆದೋರಿದವು, ಈ ಕಾಲದ ಸಾಹಿತ್ಯವನ್ನು ಹಲವು ಮೊದಲ ಪ್ರಯೋಗಗಳಿಂದ ಕೂಡಿದ ಸಂಧಿಕಾಲದ ಸಾಹಿತ್ಯವೆಂದು ಕರೆಯಬಹುದು. ನಿಘಂಟುಗಳು, ವ್ಯಾಕರಣ ಗ್ರಂಥಗಳು , ಸಾಹಿತ್ಯ ಚರಿತ್ರೆಗಳು, ಜೀವನ ಚರಿತ್ರೆಗಳು, ಕಾದಂಬರಿಗಳು ಈ ಕಾಲದಲ್ಲಿ ಕಾಣಿಸಿಕೊಂಡವು. ವೃತ್ತಪತ್ರಿಕೆಗಳು ಆರಂಭವಾಗಿ ರಾಜಕೀಯ ಸಾಮಾಜಿಕ ಎಚ್ಚರವನ್ನು ಉಂಟುಮಾಡಲು ನೆರವಾದವು.

ಅಧ್ಯಾಯ-೪

ದಕ್ಷಿಣ ಭಾರತದ ಕಾದಂಬರಿಗಳಲ್ಲಿ ಕಾಲಘಟ್ಟದ ಸಂವೇದನೆಗಳು

೪.೧ ವಸಾಹತುಶಾಹಿ ಅನುಭವ, ಪಾಶ್ಚಾತ್ಯ ಪ್ರಭಾವ, ರಾಷ್ಟ್ರೀಯ ಪ್ರಜ್ಞೆ

೪.೨ ಸಂಪ್ರದಾಯ - ಆದರ್ಶಗಳ ಪ್ರತಿಪಾದನೆ

೪.೩ ಸುಧಾರಣಾವಾದಿ ನಿಲುವು

೪.೪ ಸ್ತ್ರೀ ಶಿಕ್ಷಣ

೪.೫ ವಿಧವಾ ವಿವಾಹ

ಅಧ್ಯಾಯ-೪
ದಕ್ಷಿಣ ಭಾರತದ ಕಾದಂಬರಿಗಳಲ್ಲಿ ಕಾಲಘಟ್ಟದ ಸಂವೇದನೆಗಳು

'ಆರಂಭಘಟ್ಟ' ಎಂಬ ಕಾಲಮಿತಿ ಪರಿಕಲ್ಪನೆಯ ಔಚಿತ್ಯವನ್ನು ಎರಡನೇ ಅಧ್ಯಾಯದಲ್ಲಿ ವಿಸ್ತಾರವಾಗಿ ಚರ್ಚಿಸಲಾಗಿದೆ. ರಾಜಕೀಯವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ, ಭಾಷಿಕವಾಗಿಯೂ, ಸಾಹಿತ್ಯಿಕವಾಗಿಯೂ, ಒಟ್ಟಾರೆ ಸಾಂಸ್ಕೃತಿಕವಾಗಿ ಅದು ಹೇಗೆ ಒಂದು ರೀತಿಯ ಸಂಕ್ರಮಣ ಕಾಲಘಟ್ಟವೆಂಬುದನ್ನು ಅಲ್ಲಿ ವಿಶ್ಲೇಷಿಸಲಾಗಿದೆ. ಕ್ರಿ.ಶ. ೧೮೭೫ ರಿಂದ ೧೯೨೦ರವರೆಗಿನ ಅವಧಿಯ ಆ ಕಾಲಘಟ್ಟವು ದಕ್ಷಿಣ ಭಾರತದಲ್ಲಿ ಕಾದಂಬರಿಯ ಹುಟ್ಟು ಮತ್ತು ಬೆಳವಣಿಗೆಯ ದೃಷ್ಟಿಯಿಂದಲೂ ಹೇಗೆ ಮಹತ್ವದ್ದಾಗಿದೆಯೆಂಬುದನ್ನು ವಿವರಿಸಲಾಗಿದೆ. ಆ ಸಂಕ್ರಮಣ ಕಾಲಘಟ್ಟದಲ್ಲಿ ಈ ಪ್ರದೇಶಗಳ ಜನರ ಸ್ಥಿತಿ-ಗತಿಗಳೇನಿದ್ದುವು? ಆ ಸ್ಥಿತಿ-ಗತಿಗಳನ್ನು ಅವರು ಹೇಗೆ ಅನುಭವಿಸಿದರು? ಅದಕ್ಕೆ ಅವರ ಸ್ಪಂದನೆ ಪ್ರತಿಕ್ರಿಯೆಗಳೇನು? ಎಂಬುದನ್ನು ಸೂಚ್ಯವಾಗಿ ಗಮನಿಸಲಾಗಿದೆ. ಈ ಸ್ಥಿತಿ - ಗತಿ, ಅನುಭವಗಳನ್ನು ದಕ್ಷಿಣ ಭಾರತೀಯ ಕಾದಂಬರಿಗಳು ಯಾವ ರೀತಿ ಪರಿಭಾವಿಸಿದುವು? ಅವುಗಳನ್ನು ಯಾವ ರೀತಿ ದಾಖಲಿಸಿದುವು? ಅವುಗಳಿಗೆ ಹೇಗೆ ಸ್ಪಂದಿಸಿ, ಪ್ರತಿಕ್ರಿಯಿಸಿದುವು? ಒಟ್ಟಾರೆಯಾಗಿ ಅವುಗಳನ್ನು ಹೇಗೆ ಕಲಾತ್ಮಕವಾಗಿ ಅಭಿವ್ಯಕ್ತಿಸಿದುವು, ಎಂಬುದನ್ನು ಪ್ರಸ್ತುತ ಅಧ್ಯಾಯದಲ್ಲಿ ವಿವೇಚಿಸಲಾಗುವುದು.

ಇಲ್ಲಿ ಕಾಲಘಟ್ಟದ ಸಂವೇದನೆಯಿಂದಾಗಿ ಅದು ಆ ಕಾಲದ ಜನಸಾಮಾನ್ಯರ ಸಂವೇದನೆಯೂ ಹೌದು; ಕಾದಂಬರಿಕಾರರ ಸಂವೇದನೆಯೂ ಹೌದು; ಅದೇ ವೇಳೆ ಕಾದಂಬರಿಯಲ್ಲಿನ ಪಾತ್ರಗಳ ಸಂವೇದನೆಯೂ ಹೌದು; ಇವುಗಳಲ್ಲಿ ಬಹುಪಾಲು ಅನುಭವಗಳು ದಕ್ಷಿಣ ಭಾರತಕ್ಕೆ ಸಾಮಾನ್ಯವೆಂಬತ್ತಿದ್ದುವು. ಹಾಗಾಗಿ ಆ ಕಾಲದ ದಕ್ಷಿಣ ಭಾರತೀಯ ಕಾದಂಬರಿಗಳಲ್ಲೂ ಬಹುಮಟ್ಟಿಗೆ ಸಮಾನವಾಗಿಯೂ ಅವು ಚಿತ್ರಿತವಾಗಿವೆ.[೧] ರಾಜಕೀಯವಾಗಿ ಹೇಳಬೇಕಾದ ಬಹು ಮುಖ್ಯ ಸಂಗತಿಯೆಂದರೆ ವಸಾಹತುಶಾಹಿ ಆಡಳಿತ ಮತ್ತು ಅದರಿಂದಾದ ಅನುಭವವೇ ಕಾರಣವೆನ್ನಬಹುದು. ನಮ್ಮ ನಾಡಿನ ಸಾಮಾಜಿಕ, ಧಾರ್ಮಿಕ, ಆರ್ಥಿಕ, ಶೈಕ್ಷಣಿಕ, ಭಾಷಿಕ, ಸಾಹಿತ್ಯಿಕ ವ್ಯವಸ್ಥೆಯ ಮೇಲೆ ವಸಾಹತುಶಾಹಿ ಆಡಳಿತ ತೀವ್ರ ಪ್ರಭಾವವನ್ನು ಬೀರಿತು. ಹಲವು ಬಗೆಯ ಸಾಂಸ್ಕೃತಿಕ ಸಂಘರ್ಷಗಳೂ ಏರ್ಪಟ್ಟವು. ದೇಶೀ ಪರಂಪರೆ ಸಂಪ್ರದಾಯಗಳ ಮೇಲೆ ಪಾಶ್ಚಾತ್ಯ ಸಂಸ್ಕೃತಿಯು ತನ್ನ ಪ್ರಭಾವ ಬೀರಲಾರಂಭಿಸಿತು. 'ಆಧುನಿಕತೆ' ಯ ಗಾಳಿ ಬೀಸತೊಡಗಿತು. ಸಾರ್ವತ್ರಿಕ ಶಿಕ್ಷಣ, ಸ್ತ್ರೀ ಶಿಕ್ಷಣ, ವಿಧವಾ ವಿವಾಹದಂತಹ ಕ್ರಾಂತಿಕಾರಿ ವಿಚಾರಗಳು ಪ್ರತಿಪಾದಿತವಾಗಿ ಜಾರಿಗೆ ಬರತೊಡಗಿದುವು. ಪಾರತಂತ್ರದ ಅನುಭವ ಸ್ಥಳೀಯರಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಮೂಡಿಸಿತು. ಸ್ವಾತಂತ್ರ್ಯ ಚಳುವಳಿಗಳೂ ಅಲ್ಲಲ್ಲಿ ಪ್ರಾರಂಭವಾದುವು. ಗಾಂಧೀಜಿಯಂಥ ರಾಷ್ಟ್ರ ನಾಯಕರುಗಳ ಗಾಢಪ್ರಭಾವವಾಗತೊಡಗಿತು. ಆಧುನಿಕತೆಯ ಅನುಭವದಿಂದಾದ ಎಲ್ಲಾ ಬಗೆಯ ಹರ್ಷ - ಉಲ್ಲಾಸಗಳೊಂದಿಗೆ ಇರಿಸು ಮುರಿಸುಗಳೆಲ್ಲವು ಆ ಕಾಲದ ದಕ್ಷಿಣ ಭಾರತೀಯ ಕಾದಂಬರಿಗಳಲ್ಲಿ ಪ್ರತಿಬಿಂಬಿತವಾಗಿವೆ. ಈ ಕಾಲಘಟ್ಟದ ಕಾದಂಬರಿಗಳು ವಸ್ತು ವೈಶಿಷ್ಟದಿಂದಲೂ, ನಿರೂಪಣಾ ಶೈಲಿಯಿಂದಲೂ ಸಮಕಾಲೀನ ಸಮಸ್ಯೆಗಳನ್ನು ಸಾರ್ವಕಾಲಿಕ ಸಮಸ್ಯೆಗಳೆಂದು ಪರಿಗಣಿಸಿವೆ.

---

೧) ಹಾಗಂದ ಮಾತ್ರಕ್ಕೆ ಆ ಕಾಲದ ಸ್ಥಿತಿ - ಗತಿ, ಅನುಭವಗಳಲ್ಲಾಗಲಿ, ಅವುಗಳನ್ನು ಕಾದಂಬರಿಕಾರರು ಪರಿಭಾವಿಸಿದ, ಅಭಿವ್ಯಕ್ತಿಸಿದ ರೀತಿಯಲ್ಲಾಗಲಿ ದಕ್ಷಿಣ ಭಾರತದಲ್ಲಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಭಿನ್ನತೆಗಳಿಲ್ಲ ಎಂದು ಇದರ ಅರ್ಥವಲ್ಲ ಅಂತಹ ಪ್ರಾದೇಶಿಕ ಅನನ್ಯತೆಯ ಬಗೆಗೆ ಮುಂದಿನ ಅಧ್ಯಾಯದಲ್ಲಿ ಪ್ರತ್ಯೇಕವಾಗಿ ಚರ್ಚಿಸಲಾಗುವುದು.

ಹಾಗೆಯೇ ಅದರ ಪರಿಚಯವನ್ನು ಮಾಡಿಕೊಡುವುದರಲ್ಲಿಯೂ ಈ ಕೃತಿಗಳ ಲೇಖಕರು ಸಫಲರಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಆರಂಭಘಟ್ಟದ ದಕ್ಷಿಣ ಭಾರತೀಯ ಕಾದಂಬರಿಗಳನ್ನು ತೌಲನಿಕವಾಗಿ ಪರಿಭಾವಿಸಿ ಅವುಗಳಲ್ಲಿ ಕಂಡುಬರುವ ಕೆಲವು ಸಮಾನವಾದ ಅಂಶಗಳನ್ನೂ ಈ ಅಧ್ಯಾಯದಲ್ಲಿ ಚರ್ಚಿಸಲಾಗುವುದು. ಸಮಾನ ಅಂಶಗಳು ಎಂದ ಮಾತ್ರಕ್ಕೆ ಎಲ್ಲಾ ಪ್ರದೇಶಗಳ ಜನರೂ ವಸಾಹತುಶಾಹಿ ಅನುಭವಗಳನ್ನು ಸಮಪ್ರಮಾಣದಲ್ಲಿ ಪಡೆದಿದ್ದಾರೆ ಎಂದು ಹೇಳುವಂತಿಲ್ಲ. ಅದೇ ರೀತಿ ಎಲ್ಲಾ ಪ್ರಾದೇಶಿಕ ಭಾಷೆಗಳ ಕಾದಂಬರಿಗಳಲ್ಲೂ ಅವುಗಳ ನಿರ್ವಹಣೆ ಏಕಪ್ರಕಾರವಾಗಿ ಆಗಿದೆ ಎಂದು ಭಾವಿಸುವಂತಿಲ್ಲ. ಸಮಾನತೆಯಲ್ಲೂ ಅನನ್ಯತೆ ಇದ್ದೆ ಇರುತ್ತದೆ. ಅದು ಪ್ರದೇಶದಿಂದ ಪ್ರದೇಶಕ್ಕೆ ಎಷ್ಟು ಸಹಜವೋ ಕಾದಂಬರಿಯಿಂದ ಕಾದಂಬರಿಗೂ ಅಷ್ಟೇ ಸಹಜ. ಮುಂದಿನ ವಿಶ್ಲೇಷಣೆ ಉದಾಹರಣೆಗಳು ಇದನ್ನು ಇನ್ನಷ್ಟು ಸ್ಪಷ್ಟಪಡಿಸುವುದು.

೪.೧ ವಸಾಹತುಶಾಹಿ ಅನುಭವ - ಪಾಶ್ಚಾತ್ಯ ಪ್ರಭಾವ, ರಾಷ್ಟ್ರೀಯ ಪ್ರಜ್ಞೆ

ವಸಾಹತುಶಾಹಿ ಅನುಭವವು ಸಾಹಿತ್ಯ ಕೃತಿಯೊಂದರಲ್ಲಿ ಅದು ಹೇಗೆ ಅಭಿವ್ಯಕ್ತಗೊಳ್ಳುತ್ತದೆ? ಎನ್ನುವುದು ತಿಳಿಯುವಂತಾಗಿದೆ. ಒಂದು ಕಲಾ ಕೃತಿಯಲ್ಲಿ ಅಭಿವ್ಯಕ್ತಗೊಂಡಿರುವ ನಿರ್ದಿಷ್ಟ ಕಾಲಘಟ್ಟದ ಅನುಭವವನ್ನೇ ಕೃತಿಗಳನ್ನು, ಆ ಕಾಲಘಟ್ಟದಲ್ಲಿ ಬದುಕಿದ್ದ ಜನರ ರೀತಿ ನೀತಿಗಳನ್ನೂ, ನೋವು ನಲಿವುಗಳನ್ನು ಕಾಲಘಟ್ಟ ಸಂವೇದನೆ ಎಂದು ಗುರುತಿಸಬಹುದು. ದಕ್ಷಿಣ ಭಾರತವು ವಸಾಹತುಶಾಹಿಯೊಂದಿಗೆ ಮೈಳೇಸಿದ ಸ್ವರೂಪವನ್ನು ಸಾಂಸ್ಕೃತಿಕವಾಗಿ ಅದನ್ನು ಹೇಗೆ ಕೃತಿಯೊಳಗೆ ಅಭಿವ್ಯಕ್ತಪಡಿಸಿಕೊಂಡಿದೆ ಎನ್ನುವುದನ್ನು ತಿಳಿಯುವುದಾಗಿದೆ. ''ವಸಾಹತುಶಾಹಿ ಆಡಳಿತ ಇಡೀ ಭಾರತವನ್ನು ವ್ಯಾಪಿಸಿದ್ದರೂ ಆಯಾ ಪ್ರದೇಶದ ಅನುಭವಗಳನ್ನು ಭಿನ್ನವಾಗಿಸಿವೆ. ಒಂದು ಪ್ರದೇಶದ ವಸಾಹತುಶಾಹಿ ಅನುಭವ ಇನ್ನೊಂದು ಪ್ರದೇಶದ ವಸಾಹತುಶಾಹಿ ಅನುಭವಕ್ಕಿಂತ ಭಿನ್ನವಾಗಿದೆ. ಈ ಬಗೆಯ ಭಿನ್ನ ಜಗತ್ತೆ ಆಯಾ ಪ್ರದೇಶಗಳ ಕಾದಂಬರಿಗಳಿಗೆ ವಸ್ತು ಜಗತ್ತನ್ನು ಒದಗಿಸಿದೆ'' ಎಂದು ಈ ಮೇಲಿನ ಮುಖ್ಯರು ಅಭಿಪ್ರಾಯಪಡುತ್ತಾರೆ. ಕನ್ನಡದ ಕಾದಂಬರಿಗಳಲ್ಲಿ ರೂಪುಗೊಂಡಿರುವ ಪ್ರಾದೇಶಿಕ ಲಕ್ಷಣಗಳನ್ನು ಗುರುತಿಸಿ ಈ ಮೇಲಿನ ವ್ಯಾಖ್ಯೆಯನ್ನು ಹೇಳಿದ್ದಾರೆ. ''ರಾಜ್ಯವ್ಯವಸ್ಥೆಯಲ್ಲಿ ನಾಮ ಮಾತ್ರವಾಗಿದ್ದು ಜನ ಜೀವನದ ಬುನಾದಿ ಅರಾಜಕವಾಗುತ್ತಿದ್ದ ಹಳೆಯ ಮೈಸೂರಿನ ಕಡೆಯ ಸಮಸ್ಯೆ ಒಂದೆಡೆಯಾದರೆ ಮಿಶನರಿಗಳ ಪ್ರಭಾವ ಹಾಗೂ ಶಿಕ್ಷಣ ಪ್ರಸಾರದಿಂದ ರೂಪಗೊಂಡ ಸಾಮಾಜಿಕ ಜಾಗೃತಿಗಳ ಸಮಸ್ಯೆ, ಇನ್ನೊಂದು ಕಡೆ ಇರುವುದು ದಕ್ಷಿಣ ಕನ್ನಡದಲ್ಲಿ ಕಂಡುಬಂದಿತು. ಆಧುನಿಕತೆ ಮತ್ತು ಹಿಂದೂ ಪುನರುತ್ಥಾನದ ತಿಕ್ಕಾಟ ಮರಾಠಿಯ ಮೂಲಕ ಉತ್ತರ ಕರ್ನಾಟಕದ ಕಡೆಯ ಸಮಸ್ಯೆಯಾಗಿತ್ತು''. ಎಂದು ಅಭಿಪ್ರಾಯ ಪಡುತ್ತಾರೆ. ಕನ್ನಡ ಕಾದಂಬರಿಗಳ ಸಂದರ್ಭದಲ್ಲಿ ವ್ಯಕ್ತವಾದ ಈ ಅಭಿಪ್ರಾಯವನ್ನು ಇತರ ದಕ್ಷಿಣ ಭಾರತೀಯ ಕಾದಂಬರಿಗಳಿಗೂ ಅನ್ವಯಿಸಿ ತೌಲನಿಕವಾಗಿ ವಿಚಾರ ಮಾಡಬಹುದಾಗಿದೆ.

ಇದರಂತೆ ವಸಾಹತುಶಾಹಿ ಅನುಭವವೂ ದಕ್ಷಿಣ ಭಾರತಕ್ಕೆಲ್ಲಾ ಸಮಾನವೆಂಬಂತೆ ಕಂಡುಬಂದರೂ ಆಯಾ ಪ್ರದೇಶಗಳ ಜನರು ಅದನ್ನು ಅನುಭವಿಸಿದ ಪ್ರಮಾಣ ರೀತಿಗಳಲ್ಲಿ ಭಿನ್ನತೆಗಳಿವೆ. ಆಯಾ ಪ್ರದೇಶಗಳ ಕಾದಂಬರಿಗಳು ಈ ಭಿನ್ನ ಅನುಭಗಳನ್ನು ಸಶಕ್ತವಾಗಿ ಅಭಿವ್ಯಕ್ತಿಸಿವೆ. ಒಟ್ಟಾರೆಯಾಗಿ ದಕ್ಷಿಣ ಭಾರತದ ಮೊದಲ ಘಟ್ಟದ ಕಾದಂಬರಿಗಳಲ್ಲಿ ವ್ಯಕ್ತಗೊಂಡ ಪಾಶ್ಚಾತ್ಯ ಮತ್ತು ದೇಶೀಯ, ಚಿಂತನೆಯ ತಾಕಲಾಟಗಳು, ತಾತ್ವಿಕ ನಿಲುವುಗಳು, ಸಮಾಜದಲ್ಲಿನ ವೈಚಾರಿಕ ಸುಧಾರಣೆಗಳು, ಧರ್ಮ ಹಾಗೂ ತಾತ್ವಿಕತೆಯಲ್ಲಿನ ಪಲ್ಲಟಗಳು ಇಲ್ಲಿ ಚರ್ಚಿತವಾಗಿವೆ. ಹಾಗೆಯೇ ಹೆಚ್ಚು ಸಾಮಾಜಿಕ ಆಸಕ್ತಿಗಳನ್ನು ಅಭಿವ್ಯಕ್ತಿಸುವುದರ ಜೊತೆಯಲ್ಲಿ ರಾಷ್ಟ್ರೀಯತೆಯ ಆಧುನಿಕ ಪರಿಕಲ್ಪನೆ ಉಗಮದ ಸಂದರ್ಭವನ್ನು ಸೂಚಿಸುತ್ತದೆ.

ಒಂದು ಸಮಾಜದಲ್ಲಿ ಕಾದಂಬರಿ ಪ್ರಕಾರದ ಆವಿಷ್ಕಾರವು ಆ ಸಮಾಜದಲ್ಲಿನ ಪರಿಸ್ಥಿತಿಗಳೊಂದಿಗೆ ಮೂಡಿ ಬಂದ ನಿರ್ದಿಷ್ಟ ಕಾಲಘಟ್ಟದೊಂದಿಗೆ ಸಂಬಂಧವನ್ನು ಹೊಂದಿರುವುದನ್ನು ಸೂಚಿಸುತ್ತದೆ. ಕನ್ನಡದ ಇಂದಿರಾಬಾಯಿಯಲ್ಲಿ ಭಾಸ್ಕರ ಮತ್ತು ಇಂದಿರಾಳ ವಿವಾಹವಾಗುವುದು, ಭಾಸ್ಕರನು ವಿಲಾಯಿತಿಗೆ ಹೋಗಿ ಮರಳಿ ಕಲೆಕ್ಟರನಾಗಿ ವಾಪಾಸಾಗುವುದು, ವಿಲಾಯಿತಿಗೆ ಹೋಗಿ ಬಂದ ಅವನನ್ನು ಜಾತಿಯಿಂದ ಬಹಿಷ್ಕಾರ ಹಾಕುವ ಬಗ್ಗೆ ಚರ್ಚೆ ನಡೆಯುತ್ತದೆ. ಹಾಗೆಯೇ ವಿಧವೆಯಾದ ಇಂದಿರೆಯನ್ನು ಭಾಸ್ಕರನು ಮದುವೆಯಾಗುವುದು-ಇವೆಲ್ಲಾ ವಸಾಹತುಶಾಹಿ ಅನುಭವ ಪರಿಣಾಮದಿಂದಾಗಿ ಸಂಪ್ರದಾಯದಲ್ಲಾದ ಬದಲಾವಣೆಗಳೆನ್ನಬಹುದು.

ಭಾಸ್ಕರನ ರೀತಿ ನೀತಿಗಳಲ್ಲಾದ ಬದಲಾವಣೆಯು ಅಂಬಾಬಾಯಿಯ ಮತ್ತು ಭೀಮರಾಯರ ನಡುವೆ ನಡೆಯುವ ಸಂಭಾಷಣೆಯ ಮಾತುಗಳಿಂದ ಸ್ಪಷ್ಟವಾಗುತ್ತದೆ.

''ಉಡಿಗೆಯ ಅಲಂಕಾರವೆಲ್ಲ ಹೇಗೆ''

ಜರಿಕಂಬಿಯ ನೀಲ ಬಣ್ಣದ ಪಟ್ಟೇ ಸೀರೆ, ಗುಲಾಬಿ ರಂಗಿನ ರೇಷ್ಮೆಯ ಕುಪ್ಪಸ, ಆಭರಣಗಳೆಲ್ಲ ನಮ್ಮ ಜಾತಿಗೆ ಒಪ್ಪಿದವುಗಳೇ, ನಿಡುಜಡೆಕಟ್ಟಿ, ಮಲ್ಲಿಗೆ, ಗುಲಾಬಿ ಹೂ ಮುಡಿದು ಕೊಂಡಿದ್ದಾಳೆ. ಕುಂಕುಮದ ಬೊಟ್ಟು, ಸಣ್ಣದೂ ದೊಡ್ಡದೂ ಅಲ್ಲದ ಒಂದು ವಿಧದ್ದು. ಕಣ್ಣಿಗೆ ಕಾಡಿಗೆ, ಮುಖಕ್ಕೂ ಕೈಗಳಿಗೂ ಅರಸಿನ ಹಚ್ಚಿಕೊಂಡಂತೆ ಕಾಣುತ್ತೆ''

''ಆ ಗಂಡನೆಂಬವನ ಅಲಂಕಾರ ಹೇಗೆ?''

''ಪಟ್ಟೇ ಕಂಬಿಯ ಹನ್ನೆರಡು ಮೊಳದ ಧೋತ್ರ, ಕಪ್ಪು ನಿಲವಂಗಿ, ಶ್ಯಾಮಲ ವರ್ಣದ ಸಣ್ಣ ಪಾಗೋಬೆ, ಹಣೆಯಲ್ಲಿ ಗೀರು ಗಂಧ ರಕ್ತ ಚಂದನದ ಬೊಟ್ಟು - ಅದಕ್ಕೆಲ್ಲ ಏನು ಕಡಿಮೆ? ಇಂಗ್ರೇಜಿ ಕಲಿತವರ ಹತ್ತಿರ ಏನೇನೆಲ್ಲ ಠಕ್ಕಿದೆ'' ವಸಾಹತು ಅನುಭವ, ಪಾಶ್ಚಾತ್ಯ ಪ್ರಭಾವ ಬೀರಿರುವುದನ್ನು ಕಾಣಬಹುದು. (ವೆಂಕಟರಾವ್ ಗುಲ್ವಾಡಿ : ೧೮೯೯ : ಪುಟ೯೮)

ಭಾಸ್ಕರನು ವಿಲಾಯಿತಿಗೆ ಹೋದ ಮೇಲೆ ಅಲ್ಲಿನ ಸಮಾಚಾರಗಳನ್ನು ತನ್ನ ತಂದೆ ತಾಯಿಯಂದಿರಿಗೆ ತಂತಿಯದ್ವಾರಾ ತಿಳಿಸುತ್ತಾನೆ. ಅವರೆಲ್ಲರೂ ಸಂತೋಷಪಟ್ಟರು. ಇಲ್ಲಿ ಜಲಜಾಕ್ಷಿ ಮತ್ತು ಅಮೃತರಾಯರು ವಸಾಹತು ಅನುಭವವನ್ನು ಸ್ವೀಕಾರ ಭಾವನೆಯಿಂದ ನೋಡುತ್ತಾರೆ. ಆದರೆ ಅಂಬಾಬಾಯಿ ಭೀಮರಾಯರು ವಿರೋಧ ಮನೋಭಾವವನ್ನು ವ್ಯಕ್ತಪಡಿಸುತ್ತಾರೆ. ಭಾಸ್ಕರನ ಉಡುಗೆ ತೊಡುಗೆಗಳಲ್ಲಿ ಆದ ಈ ಬದಲಾವಣೆಗಳಿಗೆ ಇಂಗ್ಲೀಷ್ ಶಿಕ್ಷಣ ಮತ್ತು ಪಾಶ್ಚಾತ್ಯ ಪ್ರಭಾವವೇ ಕಾರಣವೆನ್ನಬಹುದು.

ಕಂದಕೂರಿ ವೀರೇಶಲಿಂಗಂ ಪಂತುಲು ಅವರ ತೆಲುಗಿನ 'ಪ್ರಹಸನ ತರಂಗಂ' ಎನ್ನುವ ಕಾದಂಬರಿಯಲ್ಲಿ ಯುವಕನೊಬ್ಬನ ಉಡುಗೆ ತೊಡುಗೆಗಳಲ್ಲಾದ ಬದಲಾವಣೆಯನ್ನು ಸಂಪ್ರದಾಯ ಸಮುದಾಯವೂ ವಿಡಂಬಿಸುವ ಪ್ರಸಂಗ ವಸಾಹತು ಅನುಭವವನ್ನು ವಿರೋಧಿಸುವುದನ್ನು ವ್ಯಕ್ತಪಡಿಸುತ್ತದೆ. ಕಾಲಿಗೆ ಬೂಟನ್ನು ಹಾಕಿಕೊಳ್ಳುವುದು, ಹಣೆಯ ಮೇಲೆ ವಿಭೂತಿಯನ್ನು ಇಡದೇ ಇರುವುದು, ದೇವರುಗಳಿಗೆ ನಮಸ್ಕಾರ ಮಾಡದೆ ಇರುವುದು, ದೇವಸ್ಥಾನಕ್ಕೆ ಹೋಗದೆ ಇರುವುದು, ಆಪತ್ತು ಕಾಲದಲ್ಲಿ ಯಾರಾದರೂ ಇದ್ದಾರೆ ಎಂದಾಗ ಅವರಿಗೆ ತಮ್ಮಿಂದಾದ ಸಹಾಯವನ್ನು ಮಾಡುವುದು ಮನುಷ್ಯ ಧರ್ಮ ಎಂದು ತಿಳಿದು ಆ ಹುಡುಗ ಶೂದ್ರನ ಮಗನನ್ನು ಎತ್ತಿನ ಬಂಡಿಯ ಕೆಳಗೆ ಬಿದ್ದು ಸಾಯುವಂತ ಸಂದರ್ಭದಲ್ಲಿ ಕಾಪಾಡಿರುವುದನ್ನು ಸಂಪ್ರದಾಯವಾದಿಗಳು ವಿರೋಧಿಸಿದರು. ಆದರೆ ಈ ಮನೋಭಾವನೆ ಅವನಲ್ಲಿ ಬರಲು ಕಾರಣ ಅವನು ಪಡೆದ ವಸಾಹತು ಶಿಕ್ಷಣದಿಂದ ಈ ರೀತಿಯಲ್ಲಿ ವಸಾಹತುಶಾಹಿಯು ಜನರ ಮನೋಭಾವನೆಯಲ್ಲಿ, ನಡತೆಯಲ್ಲಿ, ಆಚಾರ, ವಿಚಾರಗಳಲ್ಲಿ ಬದಲಾವಣೆಯನ್ನುಂಟು ಮಾಡಿತು. ಇದನ್ನು ಆ ಕಾಲದ ಕಾದಂಬರಿಗಳು ವ್ಯಕ್ತಪಡಿಸಿವೆ. ಇಂದಿರಾಬಾಯಿಯಲ್ಲಿ ನಾಯಕಿಯ ಮದುವೆ ನಡೆಯುವ ಪ್ರಸಂಗವನ್ನು ಇಲ್ಲಿ ಗಮನಿಸಬಹುದಾಗಿದೆ. ವಿಠ್ಠಲರಾಯನಿಗೆ ಇಂದಿರೆಯನ್ನು ಕೊಟ್ಟು ಮದುವೆ ಮಾಡುತ್ತಾರೆ. ಮದುವೆ ಆಡಂಬರದಿಂದ, ವೈಭವದಿಂದ ನಡೆಯುತ್ತದೆ, ದಿಬ್ಬಣಗಳು, ನರ್ತನ ಸಂಘಗಳೂ, ಬ್ಯಾಂಡ್ ಎಂಬ ವಾದ್ಯದವರೂ, ಹಲವಾರು ವೇಷಗಳು, ಜನಸ್ತೋಮ, ಕುದುರೆಯ ಸಾರೋಟಿ, ಅಲಂಕೃತವಾದ ವಿದ್ಯುತ್‌ಗಳಿಂದ ಕಂಗೊಳಿಸುವ ಮದುವೆಯ ಮಂಟಪ, ಹೂಗಳಿಂದ ಗದ್ದುಗೆ ಶೃಂಗಾರ, ವೇಶ್ಯ ಸ್ತ್ರೀಯರ ನರ್ತನ ಇತ್ಯಾದಿಗಳಿಂದ ಅವಳ ವಿವಾಹವು ಮೂರು ದಿನಗಳ ಕಾಲ ವೈಭವದಿಂದ ನಡೆಸುತ್ತಾರೆ. ಇದು ಸಂಪ್ರದಾಯದ ಮೌಢ್ಯತೆಯ ಲಕ್ಷಣವನ್ನಾಗಿ ಲೇಖಕರು ವ್ಯಂಗವಾಗಿ ಚಿತ್ರಿಸಿದ್ದಾರೆ. ಇಂತಹ ಪದ್ಧತಿಗಳು ಸಮಾಜದಲ್ಲಿ ಬದಲಾಗಬೇಕು ಎನ್ನುವುದನ್ನು ವ್ಯಕ್ತಪಡಿಸುತ್ತಾರೆ. 'ಇಂದಿರೆ'ಯ ಎರಡನೆಯ ಮದುವೆಯಲ್ಲಿ ಅವರ ವಿವಾಹವು ಸರಳ ನೈಜ ರೀತಿಯಲ್ಲಿ ನಡೆಯುತ್ತದೆ. ಇದು ವಸಾಹತುಶಾಹಿಯ ಅನುಭವದಿಂದಾದ ಬದಲಾವಣೆ ಎನ್ನಬಹುದು. ಇಲ್ಲಿ ಲೇಖಕ ಸಮಾಜ ಸುಧಾರಣೆಗೊಳ್ಳಬೇಕು ಎಂಬ ಕಟಿಬದ್ಧವಾದ ನಿಲುವು ವ್ಯಕ್ತವಾಗುತ್ತದೆ.

ವಸಾಹತುಶಾಹಿ ಅನುಭವದಲ್ಲಿ ಮತ್ತೊಂದು ಅಂಶವೆಂದರೆ ಶಿಕ್ಷಣ ವ್ಯವಸ್ಥೆಯಲ್ಲಾದ ಸುಧಾರಣೆ ಇಂಗ್ಲಿಷ್ ಶಿಕ್ಷಣವನ್ನು ಅಳವಡಿಸಿಕೊಳ್ಳುವಲ್ಲಿ ದ್ವಂದ್ವ ವ್ಯಕ್ತವಾಗಿರುವುದನ್ನು ಕಾಣಬಹುದು. ಆಗಿನ ಮಧ್ಯಮ ವರ್ಗದಲ್ಲಿ ಬ್ರಾಹ್ಮಣರು ಮುಖ್ಯರಾಗಿದ್ದರು. ಆಯಾ ಸಮುದಾಯವು ಶಿಕ್ಷಣವನ್ನು ಸ್ವೀಕರಿಸುವಲ್ಲಿ ಭಯವನ್ನು ಆತಂಕವನ್ನು ವ್ಯಕ್ತಪಡಿಸಿರುವುದು ಕಾಣಹುದು. ಸಮುದಾಯದ ಪಾವಿತ್ರ್ಯಕ್ಕೆ ಎದುರಾಗುವ ಆತಂಕಗಳನ್ನು ನಿವಾರಿಸಿಕೊಂಡು ಅದನ್ನು ಸ್ವೀಕರಿಸಬೇಕು ಎಂದು, ಈ ಅಂತರ ಕಾಪಾಡಿಕೊಳ್ಳುವುದಕ್ಕಾಗಿ ಮೇಲ್ಜಾತಿಗಳು ಇಂಗ್ಲೀಷ್ ಭಾಷೆಯ ಶಿಕ್ಷಣವನ್ನು ಮುಕ್ತವಾಗಿ ಸ್ವೀಕರಿಸಿದ್ದಾರೆ. ಅವರಲ್ಲಿ ಕಾಡುವ ಆತಂಕವೆಂದರೆ ಆಧುನಿಕ ಶಿಕ್ಷಣದಿಂದ ಜಾತಿಯ ಪಾವಿತ್ರ್ಯವು ಕಳಂಕಿತವಾಗಿತ್ತದೆ ಎನ್ನುವ ವಿಚಾರ ಅಂದರೆ ಬಡ ಸಮುದಾಯ ಆಧುನಿಕ ಶಿಕ್ಷಣ ಪದ್ಧತಿಯನ್ನು ಸ್ವೀಕರಿಸಬಾರದೆನ್ನುವ ತಿಳುವಳಿಕೆಯನ್ನು ಕೊಡಲಾಗುತ್ತಿತ್ತು. ಅವರು ಶಿಕ್ಷಣ ಪಡೆದರೆ ತಮ್ಮ ಕೈಕೆಳಗೆ ಕೆಲಸಕ್ಕೆ ಸಿಗುವುದಿಲ್ಲ ಎನ್ನುವ ಆತಂಕ ಕಾಡುತ್ತಿತ್ತು ಇಂತಹ ಸನ್ನಿವೇಶವೊಂದು ಮಲಯಾಳಂ ಇಂದುಲೇಖಾ ಕಾದಂಬರಿಯಲ್ಲಿ ಕಂಡುಬರುತ್ತದೆ. ಮೇಲ್ವರ್ಗದ ನಾಯರ್ ಸಮುದಾಯಕ್ಕೆ ಎದುರಾಗಿ ತಮಗಿಂತ ಕೆಳವರ್ಗದವರಾದ 'ಶೀನ' ಎನ್ನುವ ಹುಡುಗನಿಗೆ ಇಂಗ್ಲೀಷ್ ಶಿಕ್ಷಣ ಕೊಡುವುದಕ್ಕೆ ಮಾಧವನ್ ಮುಂದಾದರೆ ಆ ಸಮುದಾಯದ ಕಾರಣವರ್ ಅದನ್ನು ವಿರೋಧಿಸುವುದನ್ನು ಕಾಣಬಹುದು. ಆದರೆ ಮಾಧವ ಶೀನನನ್ನು ಮದ್ರಾಸ್‌ಗೆ ಕರೆದುಕೊಂಡು ಹೋಗಿ ಅವನಿಗೆ ಇಂಗ್ಲೀಷ್ ಶಿಕ್ಷಣವನ್ನು ಪಡೆಯುವಂತೆ ಮಾಡುತ್ತಾನೆ. ಈ ಒಂದು ದಿಟ್ಟ ನಿರ್ಧಾರ ಅವನಲ್ಲಿ ಮೂಡುವಂತೆ ಮಾಡಿರುವುದು ಪಾಶ್ಚಾತ್ಯ ಪ್ರಭಾವ, ವಸಾಹತು ಅನುಭವದಿಂದಾದ ಬದಲಾವಣೆ ಎಂದು ಗುರುತಿಸಬಹುದು.

ಹಾಗೆಯೇ ಪೊತೇರಿ ಕುಂಜಬು ಅವರ ಸರಸ್ವತಿ ವಿಜಯಂ ಕಾದಂಬರಿಯಲ್ಲಿ ಮಲಬಾರ್ ಪ್ರದೇಶದ 'ಪುಲಯನ್' ಸಮಾಜದವರು ಸಮಾಜದ ಮೇಲುವರ್ಗವೆಂದು ಕರೆಯಲಾಗುತ್ತಿದ್ದು ನಂಬೂದಿರಿ ಅಥವಾ ಇತರರ ಕಾಲ್ತುಳಿತಕ್ಕೊಳಗಾಗಿ ಸಂಕಟಪಡುತ್ತಿದ್ದ, ಕ್ರೈಸ್ತಮತ ಸ್ವೀಕಾರ ಮತ್ತು ಇಂಗ್ಲೀಷ್ ಶಿಕ್ಷಣ ಪಡೆಯುವ ಮೂಲಕ ಮತ್ತೆ ಉತ್ತಮ ಸ್ಥಿತಿಗೆ ತಲುಪುವುದನ್ನು ಕಾಣಬಹುದು.

ಇದು ವಸಾಹತುಶಾಹಿ ಅನುಭವದಿಂದಾದ ಪ್ರತಿಪಾದನೆ ಎಂದು ಹೇಳಬಹುದು. ನಂಬ್ಯಾರನೋರ್ವನ ಆಡಳಿತದಿಂದ ನೊಂದ ವ್ಯಕ್ತಿಯೋರ್ವ ಕಲ್ಲಿಕೋಟೆಗೆ ತೆರಳಿ ಮತಾಂತರಗೊಂಡು ವರ್ಷಗಳ ಅನಂತರ ನ್ಯಾಯಾಧೀಶನಾಗಿ ಹಿಂತಿರುಗುತ್ತಾನೆ. ಇದೇ ಸಂದರ್ಭ ಪುಲಯ ಮಹಿಳೆಯೋರ್ವಳನ್ನು ಕೊಂದ ನಂಬೂದಿರಿಯ ವಿಚಾರಣೆ ನಡೆಯುತ್ತದೆ. ನಂಬೂದಿರಿಯ ಮುಗ್ಧಮಗಳ ಮೇಲೆ ಸುಳ್ಳು ಅಪವಾದ ಹೊರಿಸಿ ಗಡಿಪಾರು ಮಾಡಲಾಗುತ್ತದೆ. ಈಕೆಯನ್ನು ಬಾಸೆಲ್ ಮಿಶನ್‌ನವರು ಕರೆದುಕೊಂಡು ಹೋಗಿ ಕ್ರೈಸ್ತಮತಕ್ಕೆ ಸೇರಿಸುತ್ತಾರೆ. ಈಕೆಯ ಮಗಳು ಸರಸ್ವತಿಯನ್ನು ನ್ಯಾಯಾಧೀಶ ಮದುವೆಯಾಗುತ್ತಾನೆ. ಇಲ್ಲಿ ಎರಡು ಮತಗಳಲ್ಲಿ ಏರ್ಪಡುವ ಕಲಹ ಮತ್ತು ಮೇಲ್ವರ್ಗದಿಂದ ಉಂಟಾಗುವ ಶೋಷಣೆಗೆ ಶಿಕ್ಷಣದ ಮೂಲಕ ಪರೋಕ್ಷವಾಗಿ ಉತ್ತರ ನೀಡುವುದು ಕಂಡು ಬರುತ್ತದೆ. ಇದು ವಸಾಹತುಶಾಹಿಯಿಂದ ಆದ ಅನುಭವದ ಪ್ರತೀಕವಾಗಿ ಕಂಡುಬರುತ್ತದೆ.

ಜೊಸೆಫ್ ಮುಳಿಯಿಲ್ ಅವರ 'ಸುಕುಮಾರಿ' ಎಂಬ ಮಲಯಾಳಂ ಕಾದಂಬರಿಯಲ್ಲಿ ಬಾಸೆಲ್ ಮಿಶನ್ನಿನ ಚಟುವಟಿಕೆ ಹಾಗೂ ತತ್ಫಲವಾಗಿ ಕ್ರೈಸ್ತ ಧರ್ಮ ಸ್ವೀಕರಿಸಿದ ವ್ಯಕ್ತಿಗಳ ಬಗೆಗಿನ ನಿರೂಪಣೆಯೇ ಇದೆ. ತಿಯಾ ಸಮಾಜದಲ್ಲಿ ಹುಟ್ಟಿ ಬೆಳೆದ ರಾಮು ಬಾಸೆಲ್ ಮಿಶನ್ನಿನ ಸಂಪರ್ಕದಿಂದಾಗಿ ಕ್ರೈಸ್ತಧರ್ಮವನ್ನು ಸೇರಲು ತೀರ್ಮಾನಿಸುತ್ತಾನೆ. ಇದು ವಸಾಹತುಶಾಹಿಯಿಂದ ಬಂದಂತ ಪ್ರಕ್ರಿಯೆಯಾಗಿದೆ. ಮೇಲ್ವರ್ಗದವರ ಶೋಷಣೆಗೆ ಬೇಸತ್ತು ಸುಧಾರಣೆ ಬಯಸಿ ಆಧುನಿಕತೆ ಸೌಲಭ್ಯ ಪಡೆಯಲು 'ಕ್ರೈಸ್ತ ಧರ್ಮಕ್ಕೆ ಮತಾಂತರಗೊಳ್ಳುವುದು ಸಾಮಾನ್ಯವಾಗಿತ್ತು. ಎನ್ನುವುದನ್ನು ಅಭಿವ್ಯಕ್ತಿಸುತ್ತದೆ. ಹಾಗೆಯೇ 'ಸುಕುಮಾರಿ' ಯು ಕ್ರೈಸ್ತ ಧರ್ಮಕ್ಕೆ ಮತಾಂತರ ಹೊಂದಲು ಬಯಸುತ್ತಾಳೆ. ತಾಯಿ ನಿರಾಕರಿಸುತ್ತಾಳೆ. ಆದರೂ ತಾಯಿಯಿಂದ ತನ್ನ ಆಸೆಯನ್ನು ಈಡೇರಿಸಿಕೊಳ್ಳಲು ಪ್ರಯತ್ನಿಸಿ ಸಫಲಳಾಗುತ್ತಾಳೆ. ಹಾಗೆಯೇ ತನ್ನ ವಿವಾಹದೊಂದಿಗೆ ತನ್ನ ಕಷ್ಟಗಳಿಗೆ ಪರಿಹಾರ ಕಂಡುಕೊಳ್ಳುತ್ತಾಳೆ. ಇವೆಲ್ಲಾ ವಸಹಾತುಶಾಹಿ ಪ್ರಭಾವದ ಪ್ರಕ್ರಿಯೆಗಳೆನ್ನಬಹುದು.

ವಸಾಹತುಶಾಹಿ ಅನುಭವವು ಕಟ್ಟಿಕೊಡುವಂತದ್ದು ಭಾರತದಲ್ಲಿ ಆಗುತ್ತಿದ್ದ ಜಾತಿ ಪದ್ಧತಿಗಳಲ್ಲಿನ ಬದಲಾವಣೆಗಳನ್ನು ಕಾಣಬಹುದು. ಆಚಾರ, ವಿಚಾರಗಳು, ಇಲ್ಲಿಯ ಧಾರ್ಮಿಕ ಪರಿಕಲ್ಪನೆಗಳಲ್ಲಿ ಸೂಕ್ಷ್ಮ ಬದಲಾವಣೆಗಳಾಗುತ್ತಿವೆ. ನಂಬಿಕೆಗಳು, ಜಾತಿಯ ಕಟ್ಟುಪಾಡುಗಳು ವಿಧಿ ನಿಷೇಧಗಳು ಮಾಯವಾಗಿ ಅನೇಕರಿಗೆ ಪ್ರಪಂಚವು ಆಶಾದಾಯಕವಾಗಿ ಕಾಣುತ್ತದೆ. ಕೆಲವರಿಗೆ ಹಳೆಯ ಧಾರ್ಮಿಕ ಪ್ರಪಂಚದ ರಚನೆಗಳು ನಾಶವಾಗುತ್ತಿರುವುದನ್ನು ವಿಷಾದವಾಗಿ ಕಾಣಬಹುದು. ಇಂದಿರಾಬಾಯಿ ಕಾದಂಬರಿಯ ಕಥಾನಾಯಕಿ ಓದುವಂತ ಪುಸ್ತಕಗಳು, ನೀತಿಕಥೆಗಳು, ಮ್ಲೆಂಛರು ಛಾಪಿಸಿದ ಪುಸ್ತಕಗಳು, ಏಸೋಪನ ಕಥೆಗಳು, ಸ್ತ್ರೀಧರ್ಮ ನೀತಿ ಎಂಬ ಪುಸ್ತಕಗಳು ಇವುಗಳು ವಸಾಹತು ಆಡಳಿತದ ಪರಿಣಾಮವಾಗಿ ಮುದ್ರಣ ಯಂತ್ರದ ಆಗಮನದಿಂದ ಓದಲು ದೊರೆಯುವಂತಾಗುತ್ತದೆ. ಈ ಪುಸ್ತಕಗಳನ್ನು ಓದುವುದರಿಂದ ಅವಳ ವಿಚಾರ, ಆಲೋಚನೆಗಳಲ್ಲಿ ಬದಲಾವಣೆಗಳುಂಟಾಗುತ್ತವೆ. ಅದರ ಪರಿಣಾಮವೆಂಬಂತೆ ಸಂತಮಂಡಳಿಯ ಗುರುಗಳಿಂದ ತಪ್ಪಿಸಿಕೊಳ್ಳುವ ಧೈರ್ಯ ಬಂದಿರುವುದು, ಹಾಗೆಯೇ ಶಿಕ್ಷಿತರು ಉದ್ಯೋಗಗಳಲ್ಲಿ ಸೇರುವ ಅವಕಾಶವನ್ನು ಪಡೆಯುವಂತಾಯಿತು. ಆಗ ಭಾರತದ ವೈದ್ಯಕೀಯದಲ್ಲಿಯೂ ಉಂಟಾಗುತ್ತಿದ್ದ ಬದಲಾವಣೆ ಕಾಣಬಹುದು, ಪಂಡಿತರ ಔಷಧಿಯ ವಿಧಾನಗಳು ಅಂಚಿನ ಸ್ಥಿತಿಯಲ್ಲಿದ್ದುವು. ನಂತರ ವಸಾಹತು ಶಾಹಿಯಿಂದ ವೈದ್ಯಕೀಯದಲ್ಲಿ ಪದವಿ ಪಡೆಯುವ ಮತ್ತು ಎಂ.ಬಿ.ಬಿ.ಎಸ್. ಡಾಕ್ಟರ್ ಪದ್ಧತಿ ಅಲ್ಲದೇ ನಮ್ಮಲ್ಲಿ ನ್ಯಾಯವಿಧಾನದಲ್ಲಿ 'ಕಾನೂನು ವ್ಯವಸ್ಥೆ, ಕೋರ್ಟು, ಎಂಬಲ್ಲಿ ನ್ಯಾಯತೀರ್ಪನ್ನು ನೀಡುವ ಪದ್ಧತಿ ಬೆಳೆಯಿತು. ಇದು ವಸಾಹತು ಅನುಭವಾಗಿವೆ. 'ವಕೀಲ' ಎಂಬ ಹುದ್ದೆಯು ಇದರಲ್ಲಿ ಆಧುನಿಕ ರೂಪವಾಗಿದೆ. ನ್ಯಾಯವು ಹಣವಂತರ ಸ್ವತ್ತು ಎಂಬ ಒಂದು ಹಂತವನ್ನು ವ್ಯಕ್ತಪಡಿಸುತ್ತದೆ. ಸಾರಸ್ವತ ಸಮಾಜದಲ್ಲಿ ಸಮುದ್ರಯಾನ, ವಿಲಾಯಿತಿಗೆ ಹೋಗುವುದು ನಿಷೇದವಾಗಿತ್ತು. ಆವರೆ ವಸಾಹತುಶಾಹಿಯಿಂದ ಅದು ವಿಲಾಯಿತಿಗೆ ಹೋಗುವುದು ಪ್ರಾರಂಭವಾಯಿತು. ಅಲ್ಲದೇ ಭಾಸ್ಕರನು ಕಲೆಕ್ಟರ್ ಆಗಿ ಬರುವುದು ವಿಧವಾ ವಿವಾಹ ನಡೆಯುವುದು, ಇವುಗಳೆಲ್ಲ ವಸಾಹತುಶಾಹಿ ಅನುಭವ ತಂದುಕೊಟ್ಟಂತ ಸೌಲಭ್ಯದಿಂದ ಎನ್ನುವುದು ವ್ಯಕ್ತವಾಗುತ್ತದೆ.

ಹಾಗೆಯೇ ಭಾಸ್ಕರ ಮತ್ತು ಇಂದಿರಾ ಇವರ ವಿವಾಹ ನಡೆಯುವುದೇ ಒಂದು ಪ್ರಮುಖವಾದ ವಿಷಯ ಏಕೆಂದರೆ ಇಂದಿರಾ ವಿಧವೆಯಾಗಿರುತ್ತಾಳೆ. ಸಾರಸ್ವತ ಸಮಾಜದಲ್ಲಿ ವಿಧವಾ ವಿವಾಹ ಪದ್ಧತಿಯಿರುವುದಿಲ್ಲ. ಆದರೆ ಲೇಖಕರು ಸುಧಾರಣಾ ಪರ ಮನೋಭವವುಳ್ಳವರು. ಆದ್ದರಿಂದ ವಸಾಹತು ವಿಚಾರಧಾರೆಯನ್ನು ಸ್ವೀಕರಿಸುತ್ತಾ ಸಮಾಜ ಸುಧಾರಣೆಯಾಗಬೇಕೆಂಬ ದೃಢನಿರ್ಧಾರವನ್ನು ಹೊಂದಿ ವಿಧವೆಯಾದ ಇಂದಿರೆಯನ್ನು ಭಾಸ್ಕರನೊಂದಿಗೆ ವಿವಾಹ ಮಾಡಿಸುವುದರ ಮುಖಾಂತರ ಋತಪಡಿಸಿರುವುದನ್ನು ಕಾಣಬಹುದು.

ರಾಷ್ಟ್ರೀಯ ಪ್ರಜ್ಞೆ

ಹತ್ತೊಂಬತ್ತನೆಯ ಶತಮಾನದ ಭಾರತ ಇಂಗ್ಲೀಷರಿಂದ ಅನೇಕ ಮೌಲ್ಯಗಳನ್ನು ಪಡೆಯಿತು. ರಾಷ್ಟ್ರೀಯ ಕಲ್ಪನೆಯು ಪಾಶ್ಚಾತ್ಯರ ಮೌಲ್ಯವೆಂದು ಅಂಗೀಕರಿಸಿದರೂ ಅದರ ಉಗಮವು ವಸಾಹತು ಪ್ರದೇಶಗಳಲ್ಲಿ ಕಾಣಿಸಿಕೊಂಡಿತು. ಇದು ವಸಾಹತು ಆಡಳಿತಕ್ಕೆ ವಿರುದ್ಧದ ಪ್ರತಿಕ್ರಿಯೆ ಎಂಬಂತೆ ಉಗಮಗೊಂಡಿತು. ''ಶಂಕರ ಮೊಕಾಶೀ ಪುಣೇಕರ ಇದನ್ನೇ ಸಾಂಸ್ಕೃತಿಕ ಸ್ವಾತಂತ್ರವೆಂದು ಕರೆಯುತ್ತಾರೆ. ಬೇರೆ ಬೇರೆ ದೇಶಗಳ ಸಾಂಸ್ಕೃತಿಕ ವ್ಯಕ್ತಿತ್ವವನ್ನು ವಿವರಿಸುತ್ತಾ ಹೇಗೆ ೧೯ನೇ ಶತಮಾನದ ರಶಿಯಾದ ಸಾಂಸ್ಕೃತಿಕ ಸ್ವಾತಂತ್ರ್ಯವನ್ನು solvonism ತತ್ವ ಕಾಯ್ದಿತೋ, ಹೇಗೆ ಐರ್ಲೆಂಡಿನ ಸಾಂಸ್ಕೃತಿಕ ವ್ಯಕ್ತಿತ್ವವನ್ನು celticism ಕಾಯ್ದಿತೋ ಹಾಗೆಯೇ ಬ್ರಿಟೀಷರ ಕಾಲದಲ್ಲಿ 'ರಾಷ್ಟ್ರೀಯತ್ವ' ಭಾರತೀಯರ ಸಾಂಸ್ಕೃತಿಕ ಸ್ವಾತಂತ್ರ್ಯವನ್ನು ಕಾಯ್ದಿತ್ತು. ಇಂಥ ಸಾಂಸ್ಕೃತಿಕ ರಾಷ್ಟ್ರೀಯತೆ ಅಭಿವ್ಯಕ್ತಗೊಳ್ಳುವುದು ಕೇವಲ ತನ್ನ ಊರಿನ ಚೆಲುವನ್ನು ವರ್ಣಿಸುವಲ್ಲಿ ತನ್ನ ಸಮೀಪದವರ ಉದ್ಧಾರಕ್ಕಾಗಿ ಯತ್ನಿಸುವಲ್ಲಿ, ತನ್ನ ಭಾಷೆಯ ದೇಶೀಯ ಅಭ್ಯಾಸದಲ್ಲಿ, ಜನಪದ ಸಾಹಿತ್ಯದ ಅಭ್ಯಾಸದಲ್ಲಿ, ಇತಿಹಾಸದ ಅಭ್ಯಾಸದಲ್ಲಿ, ಸಾಮಾಜಿಕ ಸಮಸ್ಯೆಗಳಿಂದ ವಿಧವಾ ವಿವಾಹ, ಜಾತ್ಯಾತೀತ ಸಮಾಜ ರಚನೆ, ದೀನ ದಲಿತರ ಉದ್ದಾರ ಮುಂತಾದ ರೂಪಗಳಲ್ಲಿ ಪ್ರಕಟವಾಗಿರಬಹುದು ಎಂದು ಅಭಿಪ್ರಾಯ ಪಡುತ್ತಾರೆ. ಇವರ ಅಭಿಪ್ರಾಯವನ್ನು ಸಮ್ಮತಿಸಿಕೊಳ್ಳುವಂತಹ ಸನ್ನಿವೇಶವನ್ನು ದಕ್ಷಿಣ ಭಾರತದ ಕಾದಂಬರಿಗಳಲ್ಲಿ ಕಾಣಬಹುದು. ಕನ್ನಡದಲ್ಲಿಯ ಗುಲ್ವಾಡಿ ವೆಂಕಟರಾಯರು 'ಇಂದಿರಾಬಾಯಿ' ಕಾದಂಬರಿಯಲ್ಲಿ ಈ ರೀತಿಯ ರಾಷ್ಟ್ರೀಯತೆಯನ್ನು ಕಟ್ಟಿಕೊಳ್ಳುವ ಮಾದರಿಯನ್ನು ಗುರುತಿಸಬಹುದು.

ಕಾದಂಬರಿಯಲ್ಲಿ ಲೇಖಕರು ಕಮಲಾಪುರದ ವರ್ಣನೆಗಳಲ್ಲಿ ನಾಡಿನ ರಾಷ್ಟ್ರೀಯ ಕಲ್ಪನೆಯನ್ನು ಕಟ್ಟಿಕೊಳ್ಳುವುದನ್ನು ಕಾಣಬಹುದು.

ಕಾದಂಬರಿಯ ಮೊದಲ ಪುಟದಲ್ಲಿ ಕಲ್ಪಿತ ದೇಶ, ಪ್ರಾಂತಗಳ ಜೊತೆಗೆ ಕಲ್ಪಿತ ಕಮಲಾಪುರವೆಂಬ ನಗರವೊಂದರ ಭೌತಿಕ ಮತ್ತು ಅಭೌತಿಕ ಸ್ವರೂಪವನ್ನು ವಿವರಿಸುತ್ತಾರೆ. ''ವಿಂದ್ಯಾಚಲದ ದಕ್ಷಿಣ ಪ್ರಾಂತ್ಯದಲ್ಲಿ ರೋಹಿಣಿ ನದಿ ತೀರದಲ್ಲಿ ಕಮಲಪುರವೆಂಬೊಂದು ವಿಸ್ತಾರವಾದ ನಗರವಿರುವುದು. ಈ ನಗರವು ಪ್ರಾಚೀನ ಕಾಲದಿಂದಲೇ ಚರಿತ್ರೆಗಳಲ್ಲಿ ಪ್ರಸಿದ್ಧಿಯನ್ನು ಹೊಂದಿರುವುದಲ್ಲದೆ ಘನತರವಾದ ಅನೇಕ ಭವನಗಳು, ದೇವಾಲಯಗಳಲ್ಲಿ ಅಗ್ರಹಾರಗಳು, ಕೋಟೆಕೊತ್ತಲೆಗಳು, ನ್ಯಾಯಸ್ಥಾನಗಳು, ತರತರದ ಫಲವೃಕ್ಷಗಳ ತೋಟಗಳು, ವಿಶಾಲವಾದ ರಾಜಮಾರ್ಗಗಳು, ಸೇತುವೆಗಳು ಇವೇ ಮೊದಲಾದವುಗಳಿಂದ ಶೋಭಾಯಮಾನವಾಗಿರುವುದು. ಬ್ರಾಹ್ಮಣ ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣದ ಜನರು ಸಹ ಈ ನಗರದಲ್ಲಿ ವಾಸಿಸಿದ್ದು ಬೇರೆ ಬೇರೆ ಮತಾನುಯಾಯಿಗಳು ತಂತಮ್ಮ ವೃತ್ತಿಗಳನ್ನಾಚರಿಸುತ್ತಾ ನಗರದ ಬೇರೆ ಬೇರೆ ದಿಕ್ಕುಗಳಲ್ಲಿ ವಾಸವಾಗಿರುವರು''.(ಅದೇ; ಪು. ೧) ಲೇಖಕರು ದಕ್ಷಿಣ ಕನ್ನಡದವರಾಗಿದ್ದರಿಂದ ಬಹುಶಃ ತಮ್ಮ ಸುತ್ತಲಿನ ಪ್ರದೇಶವನ್ನು ಕಾದಂಬರಿಯಲ್ಲಿ ಚಿತ್ರಿಸಿರುವ ಸಂಗತಿಯನ್ನು ಕಾಣಬಹುದು. ಇನ್ನೂ ರಾಷ್ಟ್ರವಾಗಿ ರೂಪುಗೊಳ್ಳದಿರುವ ಆಗಿನ ಭಾರತದಲ್ಲಿ ವೈಯಕ್ತಿಕ ಸಮಾಜವೇ ರಾಷ್ಟ್ರೀತೆಯನ್ನು ಪ್ರತಿನಿಧಿಸುತ್ತದೆ. ಇಂತಹ ಐತಿಹಾಸಿಕ ಸನ್ನಿವೇಶದ ಮುಖಾಂತರ ರಾಷ್ಟ್ರೀಯತೆಯ ಪ್ರಜ್ಞೆಯನ್ನು ಮೂಡಿಸಿರುವುದನ್ನು ಕಾಣಬಹುದು.

ಹಾಗೆಯೇ ಲೇಖಕರು ತಮ್ಮ ಸಾರಸ್ವತ ಸಮಾಜದ ಉದ್ಧಾರಕ್ಕಾಗಿ ಶ್ರಮಿಸುವುದು ತನ್ನ ಭಾಷೆಯ ದೇಸಿಯ ಅಭ್ಯಾಸದಲ್ಲಿ ತೊಡಗುವುದು ಅಂದರೆ ಕಾದಂಬರಿಯಲ್ಲಿ ಕೊಂಕಣಿ ಭಾಷಾ ಬಳಕೆ ಮಾಡಿರುವುದು ಕಂಡುಬರುತ್ತದೆ. ಸಾಮಾಜಿಕ ಸಮಸ್ಯೆಗಳನ್ನು ನಿವಾರಿಸುವಲ್ಲಿ ತೆಗೆದುಕೊಳ್ಳುವ ಕ್ರಮ ಇವೆಲ್ಲಾ ಪ್ರಕ್ರಿಯೆಗಳಲ್ಲಿ ರಾಷ್ಟ್ರೀಯತೆಯ ಪ್ರಜ್ಞೆ ಮೂಡುತ್ತಿರುವುದನ್ನು ಗುರುತಿಸಬಹುದು. ಇದೇ ರೀತಿಯಲ್ಲಿ ರಾಷ್ಟ್ರೀಯ ಪ್ರಜ್ಞೆ ಮೂಡಿಸುವಂತ ಇತರ ಭಾಷೆಯ ಕಾದಂಬರಿಯಲ್ಲಿ ಕಾಣಬಹುದು.

ಎಸ್. ಯು. ಪಡಿಯಾಡಿ ಅವರು ರಚಿಸಿದ ತುಳು ಕಾದಂಬರಿ 'ಸತೀಕಮಲೆ'ಯಲ್ಲಿ ಬರುವ ವಿವರಣೆಗಳಲ್ಲಿ ರಾಷ್ಟ್ರೀಯತೆಯ ಮನೋಭಾವನೆಯು ವ್ಯಕ್ತಗೊಳ್ಳುತ್ತಿರುವುದನ್ನು ಗುರುತಿಸಬಹುದು.

ಕೃಷ್ಣ ಮತ್ತು ನಾರಾಯಣ ಇವರು ಸ್ವದೇಶಿ ಚಳುವಳಿಯ ಬಗ್ಗೆ ಮಾತನಾಡುವಾಗ ನಡೆಯುವ ಸಂಭಾಷಣೆಯಲ್ಲಿ ಭಾಷೆ ಮತ್ತು ರಾಷ್ಟ್ರದ ಬಗೆಗಿನ ಅಭಿಮಾನ ವ್ಯಕ್ತಪಡಿಸಿರುವುದನ್ನು ಗುರುತಿಸಬಹುದು.

''ನಾರಾಯಣ :- ಗುಡ್ ಯಿವ್ನಿನಿಂಗ್ ಫ್ರೆಂಡ್ಸ್

ಕೃಷ್ಣ :- ಎಡ್ಡೆ ಬಯ್ಯ (ಒಳ್ಳೆ ಸಂಜೆ) ರಾಯರೆ

ರಾಮ :- ಹಾಗೆಂದರೇನು?

ಕೃಷ್ಣ :- ಗುಡ್ ಎಂದರೆ ಒಳ್ಳೆಯ, ಈವಿನಿಂಗ್ ಎಂದರೆ ಸಂಜೆ

ರಾಮ :- ಹೀಗೆ ಹೇಳಿದರೆ ನಾರಾಯಣ ಮಾತಾಡಲಿಕ್ಕಿಲ್ಲ

ಜಗ :- ಮಾತಾಡದಿದ್ದರೆ ಬಿಡಿ, ನಾಡದು ಪರದೇಶಿ ಬಟ್ಟೆಗಳಿಗೆ ಹೋಳಿ ಮಾಡುತ್ತಾರಂತೆ, ನಾರಾಯಣನ ಎಲ್ಲಾ ಬಟ್ಟೆಗಳಿಗೂ ಆ ದಿನ ಬೆಂಕಿ ಬೀಳುತ್ತದೆ.ಅಷ್ಟರವರೆಗೆ ಮೆರೆಯಲಿ, ಖಾದಿ ಉಡದಿದ್ದರೆ ಬೆತ್ತಲೆಯಲ್ಲೇ ಹೊರಬರಲಿ.'' (ಪಾದೆಕಲ್ಲು ವಿಷ್ಣುಭಟ್ಟ, ೧೯೯೭, ಪುಟ-೧೩)

ಇಲ್ಲಿ ನಾರಾಯಣನು ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾದರೆ, ಕೃಷ್ಣ, ಜಗ, ರಾಮ ಸ್ವಂತ ದೇಶ ಭಾಷೆಯ ಅಭಿಮಾನಕ್ಕೆ ಪ್ರತೀಕವಾಗಿದ್ದಾರೆ.

ಹಾಗಾಗಿಯೇ ಇಲ್ಲಿನ ನಾರಾಯಣನ ಶುಭಾಶಯ ವಿನಿಮಯದಲ್ಲಿ ಇಂಗ್ಲೀಷ್ ವ್ಯಾಮೋಹ ವ್ಯಕ್ತವಾದರೆ, ಅದಕ್ಕೆ ಉತ್ತರವಾದ ಅವನ ಗೆಳೆಯರ ಪ್ರತಿಕ್ರಿಯೆಯಲ್ಲಿ ಸ್ವದೇಶ ಭಾಷೆಯ ಅಭಿಮಾನ ಎದ್ದು ಕಾಣುತ್ತದೆ. ಇದೇ ರೀತಿ ಇನ್ನಷ್ಟು ಉದಾಹರಣೆಗಳನ್ನು ಕಾದಂಬರಿಯಲ್ಲಿ ಗಮನಿಸಬಹುದಾಗಿದೆ.

''ಕೃಷ್ಣ:- ತುಳುವಿನಲ್ಲಿ ಮಾತಾಡುವುದೆಂದರೆ ಇಷ್ಟು ಹೀನವೇ? ಎಲ್ಲರೂ ದೇಶದ ಏಳಿಗೆಗೆ ದೇಶಭಾಷೆಯಲ್ಲೇ ಶಿಕ್ಷಣಕೊಡಬೇಕೆಂದಿದ್ದಾರೆ. ಹೀಗಿರುವಾಗ ನೀವು ಮಾತಾಡಲು ಹಿಂಜರಿಯುತ್ತೀರಲ್ಲ. ತುಳು ಜನಗಳ ಏಳಿಗೆ ಆಗಬೇಕಾದರೆ ತುಳಿವಿನಲ್ಲಿ ಕಲಿಸದಿದ್ದರೆ ನಮಗೆ ಕನ್ನಡವಾದರೇನು? ಇಂಗ್ಲೀಷಾದರೇನು''

''ನಾರಾಯಣ :- ಅದರಲ್ಲಿ ಲಿಖಿತ ಗ್ರಂಥಗಳೇ ಇಲ್ಲ. ಏನನ್ನು ಕಲಿಸುವುದು? ಅದು ಕಾಡು ಜನರ ಮಾತಿನಂತಲ್ಲವೆ?

ಕೃಷ್ಣ :- ಕಲಿತುದು ಇದನ್ನೇನು? ಎಲ್ಲಾ ಭಾಷೆಗಳಿಗೆ ಪುಸ್ತಕ, ವ್ಯಾಕರಣ ಇತ್ತೇನು? ಪುಸ್ತಕ ಬರೆಯುವುದು ಮನುಷ್ಯರಲ್ಲವೇ. ನಾವು ಮನುಷ್ಯರಲ್ಲವೇ? ಬರೆದರೆ ಪುಸ್ತಕ ಆಗುತ್ತದೆ. ಕಾಡುಜನಗಳ ನೂತೆಂದು ಹೇಳಿದರೆ, ನೀವಿನ್ನೂ ನಾಳೆ ನಿಮ್ಮ ತಾಯಿ, ತಂದೆಗಳಿಗೆ ಹುಟ್ಟಿದವರಲ್ಲವೆಂದೂ ಹೇಳುವಿರಿ. ಯಾಕೆಂದರೆ ತಂದೆ ತಾಯಿಗಳಿಗೆ ಇಂಗ್ಲೀಷ್ ಗೊತ್ತಿಲ್ಲ. ಒಳ್ಳೆ ಗಿರಾಕಿಯಯ್ಯ''. (ಪಾದೇಕಲ್ಲು ವಿಷ್ಣುಭಟ್ಟ ಪುಟ:೫-೬, ೧೯೯೭)

ಈ ರೀತಿಯಾಗಿ ನಾರಾಯಣ ಪಾಶ್ಚಾತ್ಯ ಪ್ರಭಾವಕ್ಕೆ ಒಳಗಾಗಿ ತನ್ನ ಭಾಷೆಯನ್ನು ಸಂಸ್ಕೃತಿಯನ್ನು ಕೀಳಾಗಿ ಕಾಣುವುದನ್ನು ಗಮನಿಸಬಹುದು. ಇಂತಹ ಸಮುದಾಯಕ್ಕೆ ಪ್ರತಿಕ್ರಿಯೆಯನ್ನು ನೀಡುವ ಸನ್ನಿವೇಶವೊಂದರಲ್ಲಿ ರಾಷ್ಟ್ರೀಯತೆಯ ಮನೋಭಾವವನ್ನು ಕಾಣಬಹುದು.

ಕಾದಂಬರಿ ನಿರೂಪಕರು ಒಂದು ಕಡೆ ದೇಶ, ಧರ್ಮ, ಆಸ್ತಿಕತೆ, ನಾಸ್ತಿಕತೆ ಇತ್ಯಾದಿಗಳ ಕುರಿತು ವ್ಯಕ್ತಪಡಿಸುವ ಅಭಿಪ್ರಾಯವು ಹೀಗಿದೆ:-

"...ಇದುವರೆಗೆ ಮಂತ್ರಶ್ಶಾಸ್ತ್ರ, ಭವಿಷ್ಯ, ಜ್ಯೋತಿಷ್ಯ ಎಲ್ಲಾ ಸುಳ್ಳೆಂದು ಹೇಳುತ್ತಿದ್ದವನು ಇಂದು ಮೆಲ್ಲನೆ ಹೊರಟ ಎಲ್ಲರೂ ಇನ್ನೊಬ್ಬರಿಗೆ ಹೇಳಲು ಬುದ್ಧಿವಂತರೇ ಹೊರತು ತಮ್ಮ ಸರದಿ ಬರುವಾಗ ಎಲ್ಲರಿಗೂ ಬೇಕು. ಪ್ರಿಯಾ ಮಹಾಶಯರೇ, ಇದು ಭಾರತ ಭೂಮಿ, ಅಸ್ತಿತ್ವಕ್ಕೆ ಉತ್ಪತ್ತಿಸ್ಥಳ ಎಲ್ಲಾ ತತ್ತ್ವಜ್ಞಾನಿಗಳೇ ಇಲ್ಲಿಯೇ ಉತ್ಪತ್ತಿ ಸ್ಥಾನ ಎಂತಹ ನಾಗರೀಕತೆ ಬಂದು ಏನು ಬೇಕಾದರೂ ಉಪದೇಶಿಸಲಿ, ಅಲ್ಪಕಾಲಕ್ಕೆ ಸಂಪತ್ತು ಇರುವವರೆಗೆ ಜನಗಳ ಮನಸ್ಸು ಸ್ವಲ್ಪ ನಾಸ್ತಿಕ ಮಾರ್ಗದಲ್ಲಿರುತ್ತದೆ. ಕಷ್ಟ ಬಂದಾಗ 'ಓ ದೇವರೆ' ಎಂದು ಬೊಬ್ಬೆ ಹಾಕುತ್ತಾರೆ. ಎಷ್ಟೋ ಜನರು ಯೌವನದಲ್ಲಿ ನಾಸ್ತಿಕರಾಗಿ ಬೇಕಷ್ಟು ಅನ್ಯಾಯ ಮಾಡಿ ಮನಬಂದಂತೆ ಇರುತ್ತಾರೆ. ಆದರೆ ಸ್ವಲ್ಪ ತಲೆ ನರೆಯಲು ತೊಡಗಿದಾಗ ಆ ಆರ್ಯ ಮನಸ್ಸಿಗೆ ಭಯವಾಗಿ ದೇವಸ್ಥಾನಕ್ಕೆ ಹೋಗುವುದೇನು? ವೇದಾಂತ ಕೇಳುವುದೇನು, ಪುರಾಣ ಶ್ರವಣವೇನು? ಮಡಿಯೇನು, ಭಾರಿಗಲಾಟೆ, ಕೊನೆ ಕೊನೆಗೆ ಅವರಿಗೆ ಬರುವ ಭಯ ಅಷ್ಟಿಷ್ಟಲ್ಲ. ಯಾರಿಂದಲೂ ಆರ್ಯ ಮನಸ್ಸನ್ನು ಸಂಪೂರ್ಣ ನಾಸ್ತಿಕ ಮಾರ್ಗದಲ್ಲಿ ಕೊಂಡು ಹೋಗಲು ಸಾಧ್ಯವಿಲ್ಲ.ಸಾಕ್ಷಾತ್ ವಿಷ್ಣುವಿನ ಅವತಾರವೆಂದು ಹೇಳುವ ಗೌತಮ ಬುದ್ಧನೇ ಬಂದು ಹೊಸ ಮತವನ್ನು ಸೃಷ್ಟಿಮಾಡಿದರೂ ಅದು ಇಲ್ಲಿ ಹೆಚ್ಚು ಸಮಯ ನಿಲ್ಲದೆ ಹಿಂದೂ ಸ್ಥಾನದಿಂದ ಹೊರಗೆ ಹೋಯಿತು". (ಪಾದೆಕಲ್ಲು ವಿಷ್ಣುಭಟ್ : ೧೯೯೨, ಪು-೮)

ಸತೀ ಕಮಲೆಯಲ್ಲಿ ಬರುವ ಉಮಾ ಹೇಳುವ ಮಾತುಗಳಲ್ಲಿ ಭಾರತದ ಮಹಿಳೆಯರು ಆದರ್ಶವನ್ನು, ಸತೀತ್ವವನ್ನು ಕಾಪಾಡಿಕೊಳ್ಳಬೇಕೆಂಬ ಭಾವವಿದೆ. ಜೊತೆಗೆ ರಾಷ್ಟ್ರಾಭಿಮಾನವು ಅಲ್ಲಿ ವ್ಯಕ್ತವಾಗುತ್ತದೆ. "ನನ್ನ ಮಾನಕ್ಕೆ ಸ್ವಲ್ಪವಾದರೂ ಹಾನಿ ಬರುವ ಸಂದರ್ಭ ಇದ್ದರೆ ರಜಪೂತ ಸ್ತ್ರೀಯರಂತೆ ಆತ್ಮ ಹತ್ಯೆ ಮಾಡಿಕೊಳ್ಳುತ್ತೇನೆ". (ಪಾದೇಕಲ್ಲು ವಿಷ್ಣುಭಟ್ : ೧೯೯೭ ಪು -೨೮)

ರಾಷ್ಟ್ರೀಯ ಸಪ್ತಾಹ ನಡೆಯುವ ಸಂದರ್ಭದಲ್ಲಿ ವಿದ್ಯಾರ್ಥಿಗಳು ಸೇರಿ ತೆಗೆದುಕೊಳ್ಳುವ ಅಭಿಪ್ರಾಯದಲ್ಲಿ ಸ್ವರಾಷ್ಟ್ರದ ಉದ್ಧಾರ, ರಾಷ್ಟ್ರೀಯ ಕಲ್ಪನೆ ವ್ಯಕ್ತವಾಗುತ್ತದೆ. 'ವಂದೇ ಮಾತರಂ' ಗೀತೆಯನ್ನು ರಾಷ್ಟ್ರೀಯ ಚಳುವಳಿಯ ಮಂತ್ರವನ್ನಾಗಿ ಸ್ವೀಕರಿಸುತ್ತಾ ಪ್ರತಿಯೊಂದು ಕೆಲಸದಲ್ಲಿ ತೊಡಗುವ ಮುನ್ನ ಅದನ್ನು ಹಾಡುತ್ತಾರೆ. ತಾವು ಕಲಿತ ಪಾಶ್ಚಾತ್ಯ ವಿದ್ಯೆಯಿಂದ ರಾಷ್ಟ್ರಕ್ಕೆ ಮಾರಕವಾದುದನ್ನಾಗಿ ಮಾಡುವುದರ ಬದಲು ಒಳಿತನ್ನೇ ಮಾಡಬೇಕೆಂಬ ನಿರ್ಧಾರವನ್ನು ಕೈಗೊಳ್ಳುತ್ತಾರೆ.

''ನಾವೆಲ್ಲಾ ನಮ್ಮ ವಿದ್ಯೆಯಿಂದಾಗಿ ದೇಶದ ಏಳಿಗೆಯಾಗುವುದೆಂದು ಹೇಳಿಕೊಂಡಿದ್ದೇವಲ್ಲ. ಹಾಗಾದರೆ ದೇಶದ ಏಳಿಗೆಗೆ ಆವಶ್ಯಕ ಬೇಕಾಗುವ ಸ್ವದೇಶಿ ವ್ರತನವನ್ನೇ ನಾವು ಹಿಡಿಯದಿದ್ದರೆ ಏನು ಪ್ರಯೋಜನ?'' ಎನ್ನುವ ಮಾತುಗಳಲ್ಲಿ ಪಾಶ್ಚಾತ್ಯ ಪ್ರಭಾವದ ಬಗ್ಗೆ ವಿಷಾದ ವ್ಯಕ್ತಪಡಿಸುತ್ತಾ, ರಾಷ್ಟ್ರೀಯ ಪ್ರಜ್ಞೆಯನ್ನು, ಮೈಗೂಡಿಸಿಕೊಳ್ಳಬೇಕಾದ ಅಗತ್ಯವನ್ನು ಒತ್ತಿಹೇಳಲಾಗಿದೆ. ಹಾಗೆಯೇ ಪಾಶ್ಚಾತ್ಯ ಸಂಸ್ಕೃತಿಯನ್ನು ಸ್ವೀಕರಿಸಿದರೂ ನಮ್ಮ ಸಂಸ್ಕೃತಿಗೆ ಮಾರಕವಾಗುವಷ್ಟು ಅದರ ಅನುಕರಣೆ ಬೇಡ ಎಂಬ ಭಾವವಿದೆ.

ವಿಕ್ಟೋರಿಯಾ ಹಾಸ್ಟೆಲ್‌ನಲ್ಲಿ ನಡೆಯುವ ಸಭೆಯಲ್ಲಿ ಹೇಳುವ ಹಾಡೊಂದು ಈ ಕೆಳಗಿನಂತಿದೆ.

'' ಖಾದಿಯನ್ನುಟ್ಟು ಸೇವೆಯ ಮಾಡಿರಿ ಭಾರತದೇಶಕ್ಕೀಗ ॥ ಪಲ್ಲ॥
ಚರಕದಿ ತೆಗೆದಿಹ ನೂಲನು ಮಗ್ಗದಿ ಹಾಕುತ ಮಾಡಿದ ಖಾದಿ ॥
ಭಾರತ ಭೂಮಿಯ ಬಡವರಿಗನ್ನವ ಕೊಡುವುದು ಹಿಂದಿನ ಖಾದಿ ॥
ಪರದೇಶಿ ಬಟ್ಟೆಯ ಸುಡಿರಿ ಎಲ್ಲರೂ ಉಡುತಿರಿ ಹಿಡಿಯಿರಿ ಖಾದಿ ॥
ಗಾಂದಿ ದಾಸ ಲಾಲ ನೆಹರು ಪಂಡಿತ ಹೇಳುವ ಖಾದಿ ॥
ದಾದ ತಿಲಕ ಚಟರ್ಜಿ ನೋಡಿ ಸಂತಸಪಡುತಿಹ ಖಾದಿ ॥''(ಅದೇ;ಪು.೪೫)

ಇದು ರಾಷ್ಟ್ರೀಯ ಭಾವನೆಯನ್ನು ವ್ಯಕ್ತಪಡಿಸುತ್ತದೆ. ಇದೇ ತೆರನಾದ ಭಾವನೆಯುಳ್ಳ ಇನ್ನಷ್ಟು ಸನ್ನಿವೇಶಗಳನ್ನು ಕಾದಂಬರಿಯಿಂದ ಉದಾಹರಿಸಬಹುದಾಗಿದೆ.

''ಓ ಪ್ರಿಯ ಸಹೋದರರೇ,

ನಮ್ಮ ದೇಶ ಸಾವಿರ ವರ್ಷಗಳಿಂದೀಚೆ ಪರದೇಶಿಗಳ ಕೈಗೆ ಸಿಕ್ಕಿ ಈಗ ಸಾಯಲು ತಯಾರಾಗಿದೆ. ಆದರಲ್ಲೂ ಈಗೀಗ ನಮ್ಮ ಸರ್ವಸ್ವಾತಂತ್ರ್ಯವೂ ಹೋಗಿ ಕುಡಿಯಲೂ ಗತಿಯಿಲ್ಲದಂತಾಗಿದೆ. ಉಡಲು ಬಟ್ಟೆಯಿಲ್ಲ ಒಂದು ವೇಳೆ ನಮ್ಮ ಮೇಲಿನ ಹಗೆಯಿಂದ ಪರದೇಶದವರು ಬಟ್ಟೆ ಕಳುಹಿಸುವುದನ್ನು ನಿಲ್ಲಿಸಿ ಬಿಟ್ಟರೆ ನಮ್ಮ ಗತಿಯೇನು? ಮಾನ ಮರ್ಯಾದೆ ಇಲ್ಲದೆ ಬತ್ತಲೆಯಲ್ಲಿ ತಿರುಗಾಡಬೇಕೆ? ನಮ್ಮ ವಸ್ತು ಸ್ವಾತಂತ್ರ್ಯ ಹೋಯಿತು. ರಾಜಕೀಯ ಸ್ವಾತಂತ್ರ್ಯವಂತೂ ಮೊದಲೇ ಇಲ್ಲ. ಪ್ರಕೃತ ನಾವು ಕಲಿಯುವ ವಿದ್ಯೆಯಿಂದಾಗಿ ನ್ಯಾಯ ಸ್ವಾತಂತ್ರ್ಯವೂ ಓಡಿಹೋಯಿತು. ನಾವು ಕೇವಲ ಕತ್ತೆಗಳಂತಾದೆವು. ಎಲ್ಲರ ಮರ್ಯಾದೆಯೂ ಹೋಗುವ ಕಾಲ ಬಂತು. ನಿಮ್ಮ ಶಕ್ತಿಯನ್ನು ನೋಡಿಕೊಳ್ಳಿ. ಯಾವ ಕಾಲದಲ್ಲಿಯೂ ಹೆಂಗಸರು, ಮಕ್ಕಳು ಮುದುಕರು ಯುದ್ಧಕ್ಕೆ ಹೋದುದನ್ನು ಕೇಳಿಲ್ಲ. ಸಕಲ ಸ್ವಾತಂತ್ರ್ಯವನ್ನೂ ರಕ್ಷಣೆ ಮಾಡುವುದು ತರುಣ ಪುರುಷವರ್ಗದ್ದೇ ಕರ್ತವ್ಯ. ಕೇವಲ ಮೋಹಕ್ಕೆ ಬಿದ್ದು ಹಾಳಾಗಬೇಡಿ, ನೋಡಿ ನಿಮ್ಮಂತಿರುವ ಇಪ್ಪತ್ತೈದು ಸಾವಿರ ಯುವಕರು ದೇಶ ಹಿತಕ್ಕೆ ಬೇಕಾಗಿ ಜೈಲುಗಳಲ್ಲಿ ಕಷ್ಟಪಡುತ್ತಾರೆ. ಆದರೂ ನಿಮಗೆ ಬುದ್ಧಿ ಬಂದಿಲ್ಲವಲ್ಲ. ಇಷ್ಟು ಜನರು ಕಷ್ಟ ಪಡುವಾಗ ಕೇವಲ ನಾಜೂಕುತನಕ್ಕಾಗಿ ಪರದೇಶಿ ಬಟ್ಟೆಗಳನ್ನೇ ಉಪಯೋಗಿಸುತ್ತೀರಲ್ಲ. ಗಂಡುಗಳಾಗಿ ಹುಟ್ಟಿ ಹೆಂಗಸರ ಕೈಯಿಂದಲೂ ಉಪದೇಶ ಪಡೆಯುವ ದಿನ ಬಂತಲ್ಲ! ಖಾದಿಯನ್ನೇ ಉಡಿರಿ ಸ್ವದೇಶಿ ವ್ರತವನ್ನು ಹಿಡಿಯಿರಿ ದೇಶಸೇವೆಗೆ ತೊಡಗಿರಿ, ಆತ್ಮತ್ಯಾಗ ಮಾಡಲು ತಯಾರಾಗಿರಿ. ಹಾಗೆಂದರೆ ನಿಮ್ಮನ್ನು ಚರಕದ ಕೆಲಸಕ್ಕೆ ಹಾಕಬೇಕೆಂದು ಹೇಳುವುದಿಲ್ಲ. ಇದಕ್ಕೆ ನಾವೇ ಇದ್ದೇವೆ. ಇದೊಂದು ದೊಡ್ಡ ಕೆಲಸವಲ್ಲ. ಹದಿನೈದೂವರೆ ಕೋಟಿ ಹೆಂಗಸರಿದ್ದೇವೆ. ನಮ್ಮ ಇಡೀ ದೇಶಕ್ಕೆ ಬೇಕಾದುದು ಐನೂರು ಕೋಟಿ ಗಜಗಳಷ್ಟು ಅರಿವೆ. ಇದಕ್ಕೆ ಎಂಬತ್ತು ಲಕ್ಷ ಚರಕಗಳೂ ಇಪ್ಪತ್ತು ಲಕ್ಷ ಮಗ್ಗಗಳೂ ಸಾಕು. ಇದರ ಆಡಳಿತವನ್ನು ಮನೆಯ ಕೆಲಸಗಳನ್ನೂ ನಾವು ನೋಡಿಕೊಳ್ಳುತ್ತೇವೆ.

ನೀವು ಖಾದಿಯನ್ನುಟ್ಟು ಉಳಿದ ವಿಷಯಗಳಿಗೆ ಕೈ ಹಾಕಿ ಯಾವ ಕೆಲಸ ಮಾಡಿದ್ದರಿಂದ ನಿಮಗೆ ಪುರುಷತ್ವ ಇದೆಯೆಂದು ತಿಳಿಯುವುದೋ ಅಂತಹ ರಾಜಕೀಯ ವಿಷಯಗಳಿಗೆ ಕೈಹಾಕಿ, ಹಾಳಾಗಬೇಡಿ, ಹಾಳುಮಾಡಬೇಡಿ, ನಿಜವಾಗಿಯೂ ನಿಮ್ಮಿಂದಾಗುವುದಿಲ್ಲವೆಂದಾದರೆ ಇಗೋ, ಬಳೆಗಳನ್ನು ತೊಡಿರಿ, ಸೀರೆಯುಟ್ಟುಕೊಳ್ಳಿ, ಮನೆಯ ಆಡಳಿತವನ್ನು ನೋಡಿಕೊಳ್ಳಿ. ನಾವೇ ದೇಶಕ್ಕೆ ಬೇಕಾಗಿ ಆತ್ಮತ್ಯಾಗ ಮಾಡುತ್ತೇವೆ. ಎಲ್ಲರೂ ಖಾದಿಯನ್ನು ಉಡಲು ತೊಡಗಿದರೆ ಅರವತ್ತು ಕೋಟಿ ರೂಪಾಯಿಗಳು ನಮ್ಮ ಜೇಬಿಗೆ ಸೇರುತ್ತವೆ. ಅಣ್ಣಂದಿರೇ, ಉದಾಸೀನ ಮಾಡಬೇಡಿರಿ, ಏಳಿರಿ, ವಂದೇ ಮಾತರಂ'' (ಅದೇ; ಪು.೩೬)

ಈ ರೀತಿಯ ದೀರ್ಘ ಉಪನ್ಯಾಸ ನೀಡುವಲ್ಲಿ ಪಾಶ್ಚಾತ್ಯ ಪ್ರಭಾವದಿಂದ ನಮ್ಮ ರಾಷ್ಟ್ರದಲ್ಲಿ ಉಂಟಾಗಿರುವ ಅರಾಜಕತೆಯನ್ನು, ಆರ್ಥಿಕ ಪರಿಸ್ಥಿತಿಯಲ್ಲಿ ಆಗಿರುವಂತ ಸ್ಥಿತಿಯನ್ನು ವಿವರಿಸುತ್ತಾ, ಪಾಶ್ಚಾತ್ಯರ ಮೇಲೆ ಅವಲಂಬಿತವಾಗಿ ಜೀವನ ನಡೆಸುವುದರಿಂದ ನಮ್ಮ ಸ್ವಾತಂತ್ರ್ಯವನ್ನು ನಾವು ಕಳೆದುಕೊಂಡಂತೆ ಎನ್ನುತ್ತಾ ನಮ್ಮ ಸಂಸ್ಕೃತಿಯ ಉಡುಗೆ - ತೊಡುಗೆಗಳನ್ನು ನಾವೇ ತಯಾರಿಸಿಕೊಳ್ಳುವಂತಾಗಬೇಕು. ಉದ್ಯೋಗ ಸೃಷ್ಟಿಸುವ ಕಾರ್ಯದಲ್ಲಿ ತೊಡಗಬೇಕು. ಇದರಿಂದ ರಾಷ್ಟ್ರದ ಅಭಿವೃದ್ಧಿ ಸಾಧ್ಯ ಎನ್ನುವುದನ್ನು ವ್ಯಕ್ತಪಡಿಸುತ್ತಾ ರಾಷ್ಟ್ರೀಯ ಮನೋಭಾವನೆಯನ್ನು ಪ್ರಕಟಪಡಿಸುತ್ತಾರೆ.

''ತಂದೆ, ತಾಯಿ, ಹೆಂಡತಿ, ಮಕ್ಕಳು ಬಂಧುಬಳಗ, ಆಸ್ತಿ, ದುಡ್ಡು, ಕಷ್ಟ, ಇಷ್ಟಗಳಿಗಿಂತಲೂ ದೇಶ ಸೇವೆ ಮೇಲೆಂದು ನಾನು ತಿಳಿದುಕೊಂಡಿದ್ದೇನೆ. ಎಲ್ಲವೂ ನನಗೆ ಬೇಕು ಆದರೆ ದೇಶಸೇವೆಗೆ ಅಡ್ಡಿ ಬರುವುದಾದರೆ ನನಗೊಂದು ಬೇಡ''. (ಅದೇ, ಪು. ೨೫)

ಮನುಷ್ಯನಿಗೆ ಎಲ್ಲವೂ ಬೇಕು ಆದರೆ ರಾಷ್ಟ್ರಕ್ಕೆ ಆಪತ್ತು ಬಂದಾಗ ಅವರಿಗೆ ಜೀವನದ ಸುಖಕ್ಕಿಂತ ದೇಶವನ್ನು ಕಾಪಾಡುವುದು ಅದಕ್ಕೋಸ್ಕರ ಹೋರಾಟ ನಡೆಸುವುದೇ ಮುಖ್ಯ ಗುರಿಯಾಗಬೇಕು ಎಂಬ ಉಮೇಶನ ಮೇಲಿನ ಮಾತುಗಳಲ್ಲಿ ರಾಷ್ಟ್ರಾಭಿಮಾನ ವ್ಯಕ್ತವಾಗುತ್ತದೆ.

೪.೨ ಸಂಪ್ರದಾಯ ಮತ್ತು ಆದರ್ಶದ ಪ್ರತಿಪಾದನೆ

ವಸಾಹತುಶಾಹಿ ಅನುಭವದಿಂದ ಆದ ಪರಿಣಾಮವಾಗಿ ಹಲವಾರು ನವೀನ ವಿಚಾರಗಳನ್ನು ಸಮಾಜ ಸುಧಾರಣೆಯನ್ನು ಅನುಮಾನ ಆತಂಕಗಳಿಂದ ನೋಡುತ್ತಾ ಅದನ್ನು ವಿರೋಧಿಸುವುದು ಮೊದಲ ಘಟ್ಟದ ಕಾದಂಬರಿಗಳಲ್ಲಿ ಕಾಣಬಹುದು. ನಮ್ಮ ದೇಶದ ಸಾಂಸ್ಕೃತಿಕ ಪರಂಪರೆಯ ಸಮರ್ಥನೆ ಹಾಗೂ ಪಾಶ್ಚಾತ್ಯ ಪ್ರಭಾವದಿಂದಾಗಿ ಜಾರಿಯಲ್ಲಿ ಹೊಸ ವಿಚಾರಗಳ ನಿರಾಕರಣೆಯನ್ನು ಸ್ಪಷ್ಟವಾದ ನಿಲುವನ್ನು ಕಾದಂಬರಿಗಳಲ್ಲಿ ಗುರಿತಿಸಬಹುದು.

ಕನ್ನಡದ ಕೆರೂರು ವಾಸುದೇವಾಚಾರ್ಯರ 'ಇಂದಿರಾ' (೧೯೦೮) ವನ್ನು ಗಮನಿಸಬಹುದು. ಕಾದಂಬರಿಯ 'ಪ್ರಾಥಮಿಕ ನಿರೂಪಣವು' ಎಂಬ ಭಾಗದಲ್ಲಿ ಸ್ತ್ರೀ ಶಿಕ್ಷಣದ ಬಗ್ಗೆ ಪ್ರಸ್ತಾಪಿಸುವ ಲೇಖಕರು - ಆಗಿದ್ದ ಸ್ತ್ರೀ ಶಿಕ್ಷಣದ ಪದ್ಧತಿಯು ಮಾತ್ರ ವಾದಗ್ರಸ್ತವಾದ ವಿಷಯವಾಗಿದೆ ಎಂಬ ಮಾತನ್ನೆತ್ತುತ್ತಾರೆ. ಹೇಗೆ ಇರಲಿ ಈಗಿನ ಪದ್ಧತಿಯಂತೆ ಕಲಿತು ವಿದ್ಯಾಸಂಪನ್ನೆಯರಾಗಿ ಉಭಯಕುಲಕ್ಕೂ ಆನಂದವನ್ನೀಯುವ ಅನೇಕ ಕುಲವಧುಗಳನ್ನು ನಿತ್ಯ ನೋಡುತ್ತೇವೆ. ಆದರೆ ಸಮಾಜಧ್ಮಸದ್ಯಸ್ಥಿತಿಯನ್ನು ಧಿಕ್ಕರಿಸಿ ಸ್ತ್ರೀಯರು ಪುರುಷರಿಗಿಂತಲೂ ಒಂದು ತೂಕ ಹೆಚ್ಚು ಸ್ವತಂತ್ರರಾಗಿರಬೇಕು, ಅನ್ಯದೇಶದ ಸ್ತ್ರೀಯರಂತೆ ಉಡಿಗೆ ತೊಡಿಗೆ ಆಹಾರ ವಿಹಾರಗಳನ್ನು ಮಾಡತಕ್ಕದ್ದು. ಇದುವರೆಗೆ ಪುರುಷರಿಗೆ ಸಲ್ಲುತ್ತ ಬಂದ ಮರ್ಯಾದೆಯು ಇನ್ನು ಮುಂದಿನವರೆಗೆ ಸಲ್ಲಲವಶ್ಯವಿಲ್ಲ, ಮುಂತಾದ ಹೀನವಿಚಾರಗಳನ್ನು ತಲೆಯಲ್ಲಿ ಹಾಕಿಕೊಂಡು ತಮ್ಮ ನಿಸರ್ಗರಮಣೀಯತೆಗೆ ಹೆಚ್ಚು ಶೋಭೆಯನ್ನು ಕೊಡುವ ಮರ್ಯಾದೆಯನ್ನು ಬಿಸುಟಿ ಸಮಾಜದ ಸೌಕರ್ಯವನ್ನು ಹಾಳು ಮಾಡತೊಡಗಿದ ಸ್ವೈರಿಣಿಯರು ಕೂಡ ತುಟ್ಟಿಯಾಗಿಲ್ಲ. (ವಾಸುದೇವಚಾರ್ಯ ಕೆರೂರು ೧೯೦೮ ಪು. ೩) ಎಂಬ ತೀಕ್ಷ್ಣವಾದ ಮಾತುಗಳಿವೆ.

ನಮ್ಮ ಕುಲಧರ್ಮಗಳೂ, ಮತಾಚಾರಗಳೂ ಉಳಿದಿರುವುದು ಸ್ತ್ರೀಯರಿಂದಲೇ. ಸಮಾಜದಲ್ಲಿ ಸ್ಥಿತಿಸ್ಥಾಪಕತೆಯನ್ನುಂಟುಮಾಡಿ ಸಂಸಾರ ಸುಖದಲ್ಲಿ ಕೊರತೆ ಬಾರದಂತೆ ನೋಡಿಕೊಂಡು ಹೋಗುವ ಶ್ರೇಯಸ್ಸು ಸ್ತ್ರೀಯರ ಜವಾಬ್ದಾರಿಯಾಗಿರುತ್ತದೆ ಎನ್ನುವದು ಕೆರೂರ ನಂಬಿಕೆಯಾಗಿದೆ. ಆದ್ದರಿಂದಲೇ ಲೇಖಕರು ವಸಾಹತು ಶಿಕ್ಷಣ ಕಲಿಯಬೇಕು , ಆದರೆ ನಮ್ಮ ಸಂಸ್ಕೃತಿ, ಸಂಪ್ರದಾಯಕ್ಕೆ ಧಕ್ಕೆ ತರುವಂತೆ ನಡೆದುಕೊಳ್ಳಬಾರದು ಎನ್ನುವುದನ್ನು ಕಾದಂಬರಿಯಲ್ಲಿ ಚಿತ್ರಿಸಿರುವುದನ್ನು ಗುರುತಿಸಬಹುದು. ಬಾಲ್ಯವಿವಾಹದ ವಿರುದ್ಧವಾಗಿ ಸಮಾಜದಲ್ಲಿ ನಡೆಯುತ್ತಿದ್ದ ಚಟುವಟಿಕೆಗಳನ್ನು ಪ್ರಸ್ತಾಪಿಸುತ್ತಾರೆ. ಆದರೆ ವಿಧವಾ ವಿವಾಹದ ಪರವಾಗಿ ನಡೆಯುತ್ತಿದ್ದ ಚಳುವಳಿಗಳ ಕುರಿತಾಗಿ ಅಸಮ್ಮತಿಯ ಧೋರಣೆಯನ್ನು ವ್ಯಕ್ತಪಡಿಸುತ್ತಾರೆ. ''ವಿಧವೆಯರ ಪುನರ್ವಿವಾಹಕ್ಕೆ ಶಾಸ್ತ್ರಗಳು ಒಪ್ಪುತ್ತವೆಂತಲೂ ಕೆಲವು ಸ್ಥಿಯಲ್ಲಿದ್ದ ವಿಧವೆಯರ ಪುನರ್ ವಿವಾಹವನ್ನು ಮಾಡಬೇಕು ಎನ್ನುವ ಸುಧಾರಣೆ ಮನಸ್ಸುಳ್ಳವರು ಪ್ರತಿಪಾದಿಸುತ್ತಾರೆ. ಮದ್ರಾಸು, ಪುಣೆ, ಕಲ್ಕತ್ತಾ ಮುಂತಾದ ಸ್ಥಳಗಳಲ್ಲಿ ಈ ವಿಷಯದ ಮೇಲೆ ಪ್ರಚಂಡ ವಾಗ್ವಾದ ನಡೆದು ಕಡೆಗೇನೂ ನಿರ್ಣಯವಾಗದಿದ್ದರೂ ಸಾವಿರಾರು ವಿಧವೆಯರು ಹೊಸ ಗಂಡಂದಿರನ್ನು ಸಂಪಾದಿಸಿಕೊಂಡಿರುವರು''. ಎಂಬ ವ್ಯಂಗದ ಮಾತುಗಳು ಲೇಖಕರ ನಿಲುವನ್ನು ಸ್ಪಷ್ಟಪಡಿಸುತ್ತವೆ.(ಅದೇ; ಪು. ೪) ಲೇಖಕರು ವಸಾಹತು ಅನುಭವದಿಂದ ಒದಗಿರುವಂತ ಶಿಕ್ಷಣವು ಸಮಾಜದ ವ್ಯಕ್ತಿಗಳಲ್ಲಿ ಅದರಲ್ಲೂ ಸ್ತ್ರೀಯರು ಅವಳ ನಡವಳಿಕೆ ಹೇಗಿರಬೇಕೆಂದು ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ. ಪಂಡಿತ ರಾಧಾಬಾಯಿ ಹಾಗೂ ಕಮಲಾ - ಈ ಪಾತ್ರಗಳಿಗೆ ದೇವಯಾನಿ ಮತ್ತು ಇಂದಿರಾ ಈ ಪಾತ್ರಗಳ ಮೂಲಕ ತಮ್ಮ ಸಂಪ್ರದಾಯ ಮತ್ತು ಆದರ್ಶವನ್ನು ಪ್ರತಿಪಾದಿಸುತ್ತಾರೆ.

ಕಮಲಾ ಶಿಕ್ಷಿತ ಯುವತಿ, ವಿಧವೆ, ಪಂಡಿತ ರಾಧಾಬಾಯಿಯ ಶಿಷ್ಯೆ ಕರ್ವೆಯವರ ವಿಧವಾ ಮಹೋದಧಿ ಎಂಬ ಪಾಠಶಾಲೆಯಲ್ಲಿ ಕಲಿತು ಬಂದವಳು ಪುನರ್ವಿವಾಹವನ್ನು ಪ್ರಚಾರಗೊಳಿಸಲು ಹಾಗೂ ಇತರ ಸುಧಾರಣೆಗಳನ್ನು ತರಲು ಪ್ರಯತ್ನ ಪಡುತ್ತಿರುವ, ಸುಧಾರಣೆ, ಆಧುನಿಕ ಪಾತ್ರವಾಗಿ ಚಿತ್ರಿತವಾಗಿದೆ.

ಅವಳು ಮೂರುಭಾರಿ ಮದುವೆಯಾಗಿ ಮತ್ತೆ ವಿಧವೆಯಾದ ಪಂಡಿತ ರಾಧಾಬಾಯಿ ಮೂರನೇ ಬಾರಿ ಮದುವೆಯಾದದ್ದು ಒಬ್ಬ ಕ್ರೈಸ್ತನನ್ನು - ಈ ರೀತಿಯಾಗಿ ಬ್ರಹ್ಮ ಸಮಾಜ, ಉಪಾಸನಾ ಸಮಾಜ ಮುಂತಾದ ಸಂಘಗಳೊಂದಿಗೆ ಸೇರಿಕೊಂಡು ಪುನರ್ವಿವಾಹ ಇತ್ಯಾದಿ ಸುಧಾರಣ ಚಟುವಟಿಕೆಗಳಲ್ಲಿ ನಿರತರಾಗುವ ಪಾತ್ರಗಳಲ್ಲಿ ವ್ಯಂಗ್ಯ ಚಿತ್ರಗಳ ಮಾದರಿಯಲ್ಲಿ ಚಿತ್ರಿತವಾಗಿರುವುದೂ ಲೇಖಕರ ಉದ್ದೇಶವನ್ನು ಸೂಚಿಸುತ್ತದೆ. ಇಲ್ಲಿ ಸುಧಾರಣೆ ಅಥವಾ ಬದಲಾವಣೆ ಎನ್ನುವುದು ಅದರಷ್ಟಕ್ಕೇ ಆಗಬೇಕಾದುದು. ಅದು ಕಾನೂನು ಅಥವಾ ಪ್ರಚಾರ ಭಾಷಣಗಳಿಂದ ಅಲ್ಲ ಎನ್ನುವುದು ಲೇಖಕರು ಮುನ್ನುಡಿಯಲ್ಲಿ ಪ್ರತಿಪಾದಿಸುತ್ತಾರೆ.

ಇವರ ಚಟುವಟಿಕೆಗಳ ಬಗ್ಗೆ ಅಸಹನೆ ಸಹಜವಾಗಿದೆ. ರಾನಡೆ, ವೀರೇಶ ಲಿಂಗಂಪಂತುಲು ಮುಂತಾದವರ ಪುಸ್ತಕಗಳನ್ನು ಓದುತ್ತಿದ್ದ ರಾಧಾಬಾಯಿ, ಕಮಲೆ, ನಟೇಶರು ಸತ್ವವಿಲ್ಲದ ಟೊಳ್ಳು ಪಾತ್ರಗಳಾಗಿ ಅವರ ಸುಧಾರಕ ಚಟುವಟಿಕೆಗಳನ್ನು ಟೀಕಿಸುವುದರ ಮೂಲಕ ರಮಾಕಾಂತ ಪ್ರತಿಪಾದಿಸುತ್ತಾರೆ. ಆಧುನಿಕ ಶಿಕ್ಷಣ ಪಡೆದರೂ ಇಂದಿರೆಯರು ಸಾಂಪ್ರದಾಯದ ಮೌಲ್ಯಗಳನ್ನು ಮೀರದೆ ಇರುವ ಆದರ್ಶದ ಪಾತ್ರಗಳನ್ನು ಸೃಷ್ಟಿಸುವುದರ ಮೂಲಕ ಸಂಪ್ರದಾಯ ಮತ್ತು ಆದರ್ಶದ ಪ್ರತಿಪಾದನೆಯ ಪರ ಇರುವುದು ವ್ಯಕ್ತವಾಗುತ್ತದೆ.

ರಮಾಬಾಯಿಯು 'ಸರಸ್ವತಿ ಸದನ'ವನ್ನು ವಿಧವೆಯರು ಮತ್ತು ಅನಾಥ ಹೆಣ್ಣು ಮಕ್ಕಳಿಗಾಗಿ ಸ್ಥಾಪಿಸಿದರು. ತಮ್ಮ ಬಾಳಿನ ಕೊನೆಯ ಹಂತದಲ್ಲಿ ಕ್ರೈಸ್ತ ಧರ್ಮಕ್ಕೆ ಒಲಿಯುವ ರಮಾಬಾಯಿಯನ್ನು ಲೇಖಕರು ಅವಳು ಮಾಡುವ ಸುಧಾರಣೆಯನ್ನು ವಿಡಂಬನಾತ್ಮಕವಾಗಿ ಚಿತ್ರಿಸುತ್ತಾರೆ. ರಮಾಕಾಂತ ಮತ್ತು ಇಂದಿರೆಯ ಪ್ರಣಯ, ಅದಕ್ಕೆದುರಾಗಿ ನಡೆಯುವ ಆತಂಕಗಳು ಕೊನೆಗೆ ಅವುಗಳ ನಿವಾರಣೆಗಾಗಿ ಮದುವೆಯಲ್ಲಿ ಒಂದುಗೂಡುವುದು ಕಾದಂಬರಿಯ ಮುಖ್ಯ ಕಥೆಯಾಗಿದೆ. ಅವರ ಪ್ರೀತಿಗೆ ಇಂದಿರೆಯ ತಂದೆ ಜಯರಾಯರಿಂದ ಅಡ್ಡಿಯಾಗದಿದ್ದರೆ ದೇವಯಾನಿ ಮಾತ್ರ ಪೋಷಕಳಾಗಿ ನಿಲ್ಲುತ್ತಾಳೆ.

ದೇವಯಾನಿಯ ಬಗ್ಗೆ ಹೇಳುವಾಗ "ಬಾಲ್ಯದಲ್ಲಿಯೇ ತನ್ನ ಸೌಖ್ಯಲತೆಗೆ ಬೆಂಕಿ ಹತ್ತಿ ಸುಟ್ಟು ಹೋಗಿದ್ದರೂ ತನ್ನ ಮನೋನಿಗ್ರಹದಿಂದ ಆಸೆಯಲ್ಲಿಯೇ ಕೊಳೆಯದೇ ಧೈರ್ಯತೊಟ್ಟು ಇದ್ದದ್ದರಲ್ಲಿ ಸುಖ ಹಂಚಿಕೊಂಡ ಇವಳನ್ನು ನೋಡದಿದ್ದರೆ ರಮಾಕಾಂತನಿಗೆ ವ್ರತಸ್ಥರಾದ ಬಾಲವಿಧವೆಯರು ಹೇಗಿರುವರೆಂಬುದು ತಿಳಿಯುವುದೇ ಕಷ್ಟವಾಗುತ್ತಿತ್ತು". (ಅದೇ;ಪು. ೨೪) ಎಂಬ ಹೇಳಿಕೆ ಇದೆ. ದೇವಯಾನಿಯ ಯೌವ್ವನಾವಸ್ಥೆಯಲ್ಲಿ ಅವಳನ್ನು ಪ್ರೀತಿಸಿ ಮದುವೆಯಾಗ ಬಯಸಿದವರು ಜಯರಾಯ ಹಾಗೂ ರಮಾಕಾಂತನ ತಂದೆ ಕಮಲಾಕಾಂತ. ದೇವಯಾನಿಯ ಪ್ರೀತಿ ಕಮಲಾಕಾಂತನ ಕಡೆಗೆ ಇರುತ್ತದೆ. ಇದನ್ನು ತಿಳಿದ ಜಯರಾಯನು ಕುತಂತ್ರದಿಂದ ಅದನ್ನು ಹಾಳುಮಾಡುತ್ತಾನೆ. ಆದರೆ ದೇವಯಾನಿ ತನ್ನ ಜೀವನದುದ್ದಕ್ಕೂ ವಿಧವಾ ವ್ರತಸ್ಥತಳಾಗಿಯೇ ಬದುಕುತ್ತಾಳೆ. ಇಲ್ಲಿ ತ್ಯಾಗ, ಮತ್ತು ಸಂಯಮಗಳ ಆದರ್ಶ ಮತ್ತು ಸಂಪ್ರದಾಯ ಪ್ರತೀಕವಾಗಿ ದೇವಯಾನಿಯ ಪಾತ್ರವನ್ನು ಚಿತ್ರಿಸುತ್ತಾರೆ. ಇದಕ್ಕೆ ವಿರುದ್ಧವಾಗಿ ಬರುವ ಆಧುನಿಕ, ವಸಾಹತು ಮನೋಭಾವವುಳ್ಳ ರಾಧಾಬಾಯಿಯ ಪಾತ್ರದ ಮೂಲಕ ಮೂರು ಮದುವೆಯಾದರೂ, ಸಂತೃಪ್ತಿ ಇರದ ವೈರುದ್ಧದ ಪಾತ್ರವಾಗಿ ಚಿತ್ರಿಸುತ್ತಾರೆ.

ಈ ಎರಡು ಪಾತ್ರಗಳ ಮೂಲಕ ಆದರ್ಶದ ಪ್ರತಿಪಾದನೆಯು ವ್ಯಕ್ತವಾಗುತ್ತದೆ.

ಈ ಕಾದಂಬರಿಯಲ್ಲಿ ಬರುವ ಮತ್ತೊಂದು ಮಹತ್ವದ ಸನ್ನಿವೇಶ, ರಮಾಕಾಂತ ಇಂದಿರೆಯರ ವಿವಾಹ ಪೂರ್ವ ಪ್ರಣಯದ ವಿಚಾರ. ಇವರು ಪರಸ್ಪರ ಒಬ್ಬರನ್ನೊಬ್ಬರು ತುಂಬಾ ಪ್ರೀತಿಸುತ್ತಿರುತ್ತಾರೆ. ಅವರಿಬ್ಬರ ಆರಂಭದ ಭೇಟಿಯ ಸಂದರ್ಭದಲ್ಲಿ ರಥದಲ್ಲಿ ಇಂದಿರೆಯ ಪಕ್ಕ ಕುಳಿತ ರಮಾಕಾಂತರ "ಮೈಯಲ್ಲಿ ವಿದ್ಯುತ್ಪ್ರವಾಹವು ಸಂಚಾರ ಮಾಡಿದಂತಾಯಿತು". (ಅದೇ;ಪು. ೧೮) ಎಂದು ಹೇಳುವಲ್ಲಿ, ಆದರೆ ಇದಕ್ಕೆ ಕಾಮವಿಕಾರವೆಂದು ಮಾತ್ರ ಹೇಳಿಕೊಂಡನು ಎಂದು ಹೇಳುತ್ತಾರೆ.

ಮತ್ತೊಂದು ಸಂದರ್ಭದಲ್ಲಿ ರಮಾಕಾಂತನು ಭಾವೋತ್ಕಟತೆಯಿಂದ ಇಂದಿರೆಯ ಹಸ್ತವನ್ನು ಹಿಡಿದ ಸಂದರ್ಭದಲ್ಲಿ ಇಂದಿರೆಯು ಕಾಮವಿಕಾರಕ್ಕೊಳಗಾಗಲಿಲ್ಲ ಎನ್ನುವಂತೆ ಚಿತ್ರಿಸುತ್ತಾರೆ. ''ರಮಾಕಾಂತನ ಹಸ್ತಸ್ಪರ್ಶದಿಂದಲೂ ಅವನ ಆವೇಶದ ಭಾಷಣದಿಂದಲೂ ಇಂದಿರೆಯ ಮನಸ್ಸಿನಲ್ಲಿ ಒಂದು ಪ್ರಕಾರದ ಭಾವನೆಯಾಯಿತು. ಇದರಿಂದ ತನಗಾನಂದವಾಯಿತೋ ಮತ್ತೇನಾದರು ಆಯಿತೋ ಎಂಬುದು ಅವಳಿಗೆ ತಿಳಿಯಲಿಲ್ಲ''. (ಅದೇ; ಪು ೮೧). ಮುಂದೆ ಪಂಚಶರನು ರಮಾಕಾಂತನ ಹೃದಯವನ್ನು ಭೇದಿಸಿದ ಬಾಣಗಳನ್ನು ಕಾವೇರಿಯ ನಿರ್ಮಲ ಲೋಕದಂತಿದ್ದ ಇಂದಿರೆಯ ಹೃದಯದಲ್ಲಿ ತೊಳೆದು ಅವಳ ಹೃದಯಕ್ಕೆ ಅನುರಾಗದ ಬಣ್ಣವನ್ನು ಕೊಟ್ಟಿದ್ದಿಲ್ಲ. ರಮಾಕಾಂತನು ಅನುಭವಿಸಿದ ತೀವ್ರವಾದ ವ್ಯಥೆಗೆ ತಾನೇ ಕಾರಣಳೆಂದು ಈ ಮುಗ್ಧೆಗೆ ತಿಳಿಯುವುದಾದರೂ ಹೇಗೆ? (ಅದೇ;ಪು. ೮೨) ಇತರ ಸಂದರ್ಭಗಳಲ್ಲಿ ಅವಳ ಘಾಟಿ ನಡವಳಿಕೆಯನ್ನು ಚಿತ್ರಿಸಿದ್ದಾರೆ. ಪಂಡಿತ ರಾಧಾಬಾಯಿಯ ಜೊತೆ ಸ್ತ್ರೀ ಸ್ವಾತಂತ್ರ್ಯ ಇತ್ಯಾದಿ ವಿಷಯಗಳ ಕುರಿತಾಗಿ ವಾದಿಸುವ ಅವಳ ಮಾತುಗಳು ತಿಳುವಳಿಕೆಯುಳ್ಳ ಅನುಭವಿಗಳ ಮಾತಿನಂತಿದೆ. 'ಇಂದಿರೆ' ಕೆರೂರರ ಚಿತ್ರಿಸಿರುವ ಶಿಕ್ಷಿತ ಯುವತಿಯ ಆದರ್ಶ ಪಾತ್ರವಾಗಿದದ್ದಾಳೆ. ಇದಕ್ಕೆ ವಿರುದ್ಧ ಪಾತ್ರವಾಗಿ ಕಮಲಾಳ ಪಾತ್ರವನ್ನು ಚಿತ್ರಿಸಿದ್ದಾರೆ. ಸುಶಿಕ್ಷಿತ ನಾಗರಿಕ ಹೆಣ್ಣಾಗಿ ಇಂದಿರಾ ರಮಾಕಾಂತನಲ್ಲಿ ಸ್ನೇಹ ಭಾವವನ್ನು ತೋರಿದಳು. ಪ್ರಣಯದ ವಿಚಾರದಲ್ಲಿ ಸಂಯಮ ಕಾಯ್ದಳು, ಎಂಬಂತೆ ಅವಳ ಪಾತ್ರ ಚಿತ್ರಿತವಾಗಿದೆ.

ಹಾಗೆಯೇ ತಾನು ರಮಾಕಾಂತನನ್ನು ಬಿಟ್ಟು ಬೇರೆ ಯಾರನ್ನೂ ಮದುವೆಯಾಗುವುದಿಲ್ಲ ಎಂದು ತಂದೆಯ ಮುಂದೆ ಹೇಳುತ್ತಾಳೆ. ಇಲ್ಲಿ ಅವಳ ಸ್ವಂತ ವ್ಯಕ್ತಿತ್ವವನ್ನು, ಅಭಿಪ್ರಾಯವನ್ನು ಅಭಿವ್ಯಕ್ತಿಸುವ ಘಟನೆ ಇದೆ. ಇವಳು ಸ್ವಂತ ವ್ಯಕ್ತಿತ್ವವುಳ್ಳವಳಾಗಿ ಕಾಣುತ್ತಾಳೆ. ಕೊನೆಗೆ ಪರಸ್ಪರ ಪ್ರೀತಿಸಿ ಮದುವೆಯಾಗುವ ರಮಾಕಾಂತ ಇಂದಿರೆಯರು ಪ್ರೌಢ ವಿವಾಹಕ್ಕೆ ನಿದರ್ಶನವಾಗುತ್ತಾರೆ. ಇಲ್ಲಿ ಕಾದಂಬರಿಯು ಆದರ್ಶವನ್ನು ಪ್ರತಿಪಾದಿಸುತ್ತದೆ. ಸುಧಾರಣೆಯ ಆಶಯವನ್ನು ಹೊಂದಿರುವ ಕಾದಂಬರಿಯು ಪಾಶ್ಚಾತ್ಯ ಕಾದಂಬರಿ ಕಲ್ಪನೆಯನ್ನು ನಮ್ಮ ದೇಶಿಯವಾದಿ ಪ್ರಣಯ ಕಥೆಗಳ ಮಾದರಿಯನ್ನು ಬಳಸಿಕೊಳ್ಳುವುದರಲ್ಲಿ ಕೆರೂರರು ಆದರ್ಶವನ್ನು ಎತ್ತಿ ಹಿಡಿದಿದ್ದಾರೆ.

ವಾಗ್ದೇವಿ ಕಾದಂಬರಿಯಲ್ಲಿ ಬೋಳಾರ ಬಾಬುರಾಯರು ಕಾದಂಬರಿಯಲ್ಲಿ ವ್ಯಕ್ತಪಡಿಸುವ ಆದರ್ಶ ಪ್ರಾಮುಖ್ಯವಾದುದು ಸುಧಾರಣೆಗೊಂಡ ಸಮಾಜದಲ್ಲಿ ಆದರ್ಶ ಗುಣಗಳು ಮೇಲುಗೈ ಪಡೆಯುತ್ತವೆ ಎನ್ನುವುದನ್ನು ಕೃತಿಯಲ್ಲಿ ಸಂಪ್ರದಾಯ ಬದ್ಧ ವಿಚಾರವನ್ನು ವಿಡಂಬನೆಗೆ ಒಳಪಡಿಸುತ್ತಾರೆ. ವಾಗ್ದೇವಿಯ ಮಗನು ಉತ್ತರಾಧಿಕಾರಿಯಾಗುವಲ್ಲಿ ಮಠದ ಮೌಲ್ಯವನ್ನು ಧಿಕ್ಕರಿಸುವುದು ವ್ಯಕ್ತಪಡಿಸುತ್ತದೆ. ಆದರೆ ಕೊನೆಯಲ್ಲಿ ನೀತಿಯೇ ಜಯಸಾಧಿಸುತ್ತದೆ. ಪಾಶ್ಚಾತ್ತಾಪದಿಂದ ವಾಗ್ದೇವಿ ನರಳುವುದು, ಯತಿಗಳ ಮರಣ ಸೂರ್ಯನಾರಾಯಣ ಓಡಿಹೋಗುವುದು, ಮುಂತಾದ ವಿವರಗಳಿಂದ ಆದರ್ಶವನ್ನು ಸಾಕ್ಷಾತ್ಕಾರಗೊಳ್ಳುವುದನ್ನು ವ್ಯಕ್ತಪಡಿಸುತ್ತದೆ.

ಎಸ್.ಯು.ಪಣಿಯಾಡಿಯವರು 'ಸತೀತ್ವ', ಪಾವಿತ್ರ್ಯದಂತಹ ಮೌಲ್ಯಗಳು ಸ್ತ್ರೀಯರ ಪರಮ ಆದರ್ಶವೆಂದು ತಮ್ಮ ಕಾದಂಬರಿಯ ಮೂಲಕ ಸ್ತ್ರೀಯರಿಗೆ ನೆನಪಿಸುವ ಕೆಲಸ ಮಾಡುತ್ತಾರೆ. ಲೇಖಕರು ಕಮಲೆಯ ಪಾತ್ರದ ಮೂಲಕ ಸಂಪ್ರದಾಯದಂತೆ ಸತೀತ್ವವನ್ನು ಉಳಿಸಿಕೊಂಡು ಬರಬೇಕು ಎಂಬ ಅಂಶವನ್ನು ಕಾದಂಬರಿಯಲ್ಲಿ ಪ್ರತಿಪಾದಿಸಿದ್ದಾರೆ. ಬಾಲ್ಯ ವಿವಾಹದ ಬಗ್ಗೆ, ಅದರಿಂದುಂಟಾಗುವ ಬಾಲವಿಧೆಯರ ಚರ್ಚೆ ನಡೆಯುವುದು.

ನಾರಾಯಣ : ''ನಮ್ಮಲ್ಲಿ ದೊಡ್ಡ ತೊಂದರೆಯಿದೆ. ಚಿಕ್ಕ ಹುಡುಗಿಯರನ್ನು ಮದುವೆ ಮಾಡಿ ಬೀಡುತ್ತಾರೆ. ಹುಡುಗನಿಗೂ ಹುಡುಗಿಯನ್ನು ತೋರಿಸುವುದಿಲ್ಲ. ಈ ಬಾಲ್ಯವಿವಾಹದಿಂದಾಗಿ ಒಂದೆರಡು ನಷ್ಟವೇ? ಎಷ್ಟು ಹುಡುಗಿಯರಿಗೆ ಚಿಕ್ಕಂದಿನಲ್ಲೇ ತಲೆಬೋಳಿಸುವ ಸಂದರ್ಭ ಬರುತ್ತದೆ. ಕಮಲೆ - ಏನು? ಬಾಲ್ಯ ವಿವಾಹ ತಪ್ಪೆ? ಇದರಿಂದಾಗಿ ಬಾಲವಿಧವೆಯರು ಹೆಚ್ಚಾಗುವರೆ? ನೀವೇ ಹೇಳಬೇಕು ; ನೀವೇಕೇಳಬೇಕು. ಬೇರೆ ಯಾರಾದರೂ ಕೇಳಿದರೆ ನಗದಿರಲಾರರು. ಮನುಷ್ಯ ಹೆಚ್ಚು ಸಮಯ ಬದುಕಲು ಒಂದನೇ ಕಾರಣ ಬ್ರಹ್ಮಚರ್ಯರ ಈಗಿನ ವಿದ್ಯಾರ್ಥಿಗಳಿಗೆ ಎಂತಹ ಬ್ರಹ್ಮಚರ್ಯ ಇದೆ? ಇಲ್ಲದ ದುರಭ್ಯಾಸಗಳಿಂದ ಇಡೀ ದೇಹವನ್ನು ಹಾಳು ಮಾಡಿಕೊಂಡು ಬೇಗ ಸಾಯುವುದು. ಈ ಕಾರಣ ಗೊತ್ತಿಲ್ಲ. ಅಷ್ಟು ಮಾತ್ರವಲ್ಲದೆ ಅದಕ್ಕೆ ಸಹಾಯವಾಗಿ ಈಗಿನ ವಿದ್ಯಾಭ್ಯಾಸ ಕ್ರಮ ಒಬ್ಬನಿಗೂ ಒಂದೂ ತಿಳಿಯದು.

ಪುಸ್ತಕವನ್ನು ಬಾಯಿಗೆ ಮಾಡಿಯೋ, ಪರೀಕ್ಷಕರಿಗೆನಮಸ್ಕಾರ ಮಾಡಿಯೋ, ದುಡ್ಡು ಕೊಟ್ಟೋ ಹೇಗಾದರೂ ಹೀಗೆಲ್ಲ ದೋಷಗಳಿರುವುದರಿಂದ ಜನರು ಬೇಗ ಸಾಯುತ್ತಾರೆ. ಇದಕ್ಕೆ ಬಾಲ್ಯ ವಿವಾಹ ಏನು ತಪ್ಪು ಮಾಡಿದೆ? ಬಾಲ್ಯವಿವಾಹದ ಕ್ರಮನಿಮಗೆ ಏನು ತಿಳಿದಿದೆ? ಕಾಮಶಾಸ್ತ್ರದ ತತ್ವವನ್ನೂ, ಸ್ತ್ರೀ ಪುರುಷ ಸಾಹಜಿಕ ಗುಣಗಳ ತತ್ವವನ್ನೂ ತಿಳಿದವರಿಗೆ ಗೊತ್ತಿದೆ. ಇಲ್ಲದಿದ್ದರೆ ಹುಡುಗಿಯರನ್ನು ಕೇಳಬೇಕು. ಹುಡುಗಿಯರಿಗೆ ಚಿಕ್ಕಂದಿನಲ್ಲಿ ಮದುವೆಯಾಗಬೇಕು, ದೊಡ್ಡವರಾದ ಮೇಲೆಯೆ ಎಂದು ಹುಡುಗರಿಗೆ ಯಾಕೆ ಯೋಚನೆ? ಅಷ್ಟು ಮಾತ್ರವಲ್ಲದೆ ಹುಡುಗಿಯರಿಗೆ ಪ್ರಾಯ ಬಂದ ಮೇಲೆ ಪ್ರಕೃತ ಕಾಲದಲ್ಲಿ ಸ್ವಯಂವರ ಸ್ವಾತಂತ್ರ್ಯವನ್ನು ಕೊಟ್ಟರೆ ಜಾತಿ, ಮತ, ನೀತಿ, ಧರ್ಮ - ಎಲ್ಲ ಹಾಳಾಗಿ ದೇಶ ಹಾಳಾದಿತು. ಕಾಮಾತುರೆಯಾಗಿರುವ ಹುಡುಗಿಯರಿಗೆ ಮೋಸ ಕೊಡಲು ನಿಮ್ಮಂತಹ ಗಂಡಸರು ಕಾದುಕೊಂಡರೆ ಮೋಸ ಕೊಡಲು ನಿಮ್ಮಂತಹ ಗಂಡಸರು ಕಾದುಕೊಂಡೇ ಇದ್ದಾರೆ. ಮದುವೆಯೇನೋ ತಾಯಿ ತಂದೆಯರ ಸಮ್ಮತಿಯಲ್ಲೇ ಆಗಬೇಕು. ಆದರೆ ರೂಪದ ಮಟ್ಟಿಗೆ ಹುಡುಗ ಹುಡುಗಿಯರ ಸಮ್ಮತಿಯಲ್ಲೇ ಆಗಬೇಕು. ಆದರೆ ರೂಪದ ಮಟ್ಟಿಗೆ ಹುಡುಗ ಹುಡುಗಿಯರ ಸಮ್ಮತಿಯೂ ಇರಬೇಕು. ತಂದೆ ತಾಯಿಯರು ಕೇವಲ ಹಣಕ್ಕೆ ಆಸೆಪಟ್ಟು ಮದುವೆ ಮಾಡಬಾರದು ಹುಡುಗ ಹುಡುಗಿಯರ ಮುಂದಿನ ಒಳಿತನ್ನು ನೋಡಿ ಮಾಡಬೇಕು''.

ಈ ಮಾತುಗಳಲ್ಲಿ ಬಾಲ್ಯವಿವಾಹ ತಪ್ಪಲ್ಲ, ಅದು ನ್ಯಾಯ ಸಮ್ಮತವಾದುದು. ಆದರೆ ಬಾಲವಿಧವೆಯರು ಆಗುವುದು ಪುರಷರ ದುರಭ್ಯಾಸಗಳಿಂದ ಇದಕ್ಕೆ ಪುರುಷರು ಬ್ರಹ್ಮಚಾರ್ಯವನ್ನು ಪರಿಪಾಲಿಸಿದರೆ ಈ ರೀತಿಯ ವಿಧವಾ ಸಮಸ್ಯೆಯು ಉಂಟಾಗುವುದಿಲ್ಲ. ಎಂದು ಪುರುಷರು ಸ್ತ್ರೀಯರಂತೆ ಪಾತಿವ್ರತ್ಯ ಕಾಪಾಡಿಕೊಳ್ಳಬೇಕು ಎನ್ನುವುದನ್ನು ಪ್ರತಿಪಾದಿಸುತ್ತದೆ. ''ಶಾಸ್ತ್ರಗಳಲ್ಲಿ 'ಋತುಮತಿ' ವಿವಾಹ ಮಾಡುವುದು ಯೋಗ್ಯವೆಂದು ಇದೆ. ಆದರೆ ಅಷ್ಟಕ್ಕೆ ಸಂಪ್ರದಾಯದಲ್ಲಿದ್ದ ಬಾಲ್ಯವಿವಾಹವು ಒಂದು ರೀತಿಯಲ್ಲಿ 'ಆದರ್ಶ'ವನ್ನು ಕಾಪಾಡಿಕೊಳ್ಳುತ್ತದೆ. ಎನ್ನುವುದನ್ನು ಕಮಲೆಯ ಮಾತುಗಳು ಸ್ಪಷ್ಟಪಡಿಸುತ್ತವೆ.

''ಕಮಲೇ'' - ''ಹುಡುಗಿಯರು ದೊಡ್ಡವರಾಗುವುದಕ್ಕೆ ಮೊದಲು ಆದರೆ ಒಳ್ಳೆಯದು ಮಕ್ಕಳಿಗೆ ಮದುವೆ ಮಾಡಬಾರದು.

ಅಷ್ಟು ಮಾತ್ರವಲ್ಲದೆ ಹುಡುಗಿಯರಿಗೆ ಬಾಲ್ಯವಿವಾಹ ವೈಧವ್ಯಕ್ಕೆ ಕಾರಣ ಅಲ್ಲ. ಹುಡುಗರಿಗೆ ಮಾಡುವ ಬಾಲ್ಯವಿವಾಹ ವೈಧವ್ಯಕ್ಕೆ ಕಾರಣ. ಯಾವ ಶಾಸ್ತ್ರದಲ್ಲಿ ಗಂಡಸರು ಮೂವತ್ತು ವರ್ಷದೊಳಗೆ ಸ್ತ್ರೀ ಸಂಗವನ್ನು ಮಾಡಬಹುದೆಂದಿದೆ? ದೊಡ್ಡವರಾದ ಹುಡುಗಿಯರು ಪುರುಷ ಸಂಸರ್ಗ ಮಾಡಬೇಕೆಂಬುದಕ್ಕೆ ಶಾಸ್ತ್ರವನ್ನು ತೋರಿಸುತ್ತೇನೆ. ಈಗಿನ ಕಾಲದಲ್ಲಿ ಮೀಸೆ ಬರುವ ಮೊದಲೆ ಗಂಡಸರಿಗೆ ಎರಡು ಮೂರು ಮಕ್ಕಳಾಗಿ ಬಿಡುತ್ತವೆ. ಮದುವೆಯಾಗದಿದ್ದರೆ ಬೇರೆ ಯಾವ ಪ್ರಕಾರದಲ್ಲಾದರೂ ಬ್ರಹ್ಮಚರ್ಯವನ್ನು ಹಾಳು ಮಾಡಿಕೊಂಡು ಚಿಕ್ಕ ಹುಡುಗಿಯರ ತಲೆಬೋಳಿಸುವರು. ಈ ರೀತಿಯ ಅನರ್ಥಕ್ಕೆ ಕಾರಣ ಗಂಡುಸರಿಗೆ ಬ್ರಹ್ಮಚಾರ್ಯ ಇಲ್ಲದಿರುವುದೇ? ಬಾಲ್ಯ ವಿವಾಹವೇ?''

ಆರ್ಯಮತ ಪ್ರಕಾರ ಗಂಡುಸರಿಗೆ ಬೇಕಾದ ಬ್ರಹ್ಮಚಾರ್ಯ ಸ್ತ್ರೀಯರಿಗೆ ಬೇಡ ಏಕೆಂದರೆ, ಸ್ತ್ರೀವರ್ಗ ಅಗ್ರಣಿಯಾಗಿ ಗಂಡಸರನ್ನು ಅನುಸರಿಸಿಕೊಂಡು ಅವರನ್ನು ಎಲ್ಲ ಕೆಲಸಗಳಲ್ಲೂ ಪ್ರೋತ್ಸಾಹಿಸುತ್ತಿರುವುದೇ ಕರ್ತವ್ಯ ನಿಯಮಿತ ಸಂಸರ್ಗವಿರಬೇಕು. ನೈಷ್ಟಿಕ ಬ್ರಹ್ಮಚಾರ್ಯ ಬೇಡ.

ನಾರಾಯಣ : ನೈಷ್ಠಿಕ ಬ್ರಹ್ಮಚಾರ್ಯ ಬೇಡದಿದ್ದರೆ ವಿಧವೆಯರು ಮದುವೆ ಮಾಡಿಕೊಳ್ಳುವುದು ಒಳ್ಳೆಯದಲ್ಲವೆ? ಅವರಿಗೆ ಮಾತ್ರ ಆ ನಿಯಮವೇನು?

ಕಮಲೆ : ವಿಧವೆಯರಿಗೆ ಮದುವೆ ಬೇಕು ಬೇಡವೇ ಎಂಬುದನ್ನು ಪುರುಷರು ನಿಶ್ಚಯಿಸುವುದು ಬೇಡ. ಅದರ ಸಂಪೂರ್ಣ ಅಧಿಕಾರ ವಿಧವೆಯರಿಗೇ ಇರಲಿ. ನಿಮ್ಮ ಸ್ವಾರ್ಥದಿಂದಾಗಿ ಅವರು ಪಾತಿವ್ರತ್ಯವನು ಹಾಳು ಮಾಡಿಕೊಳ್ಳುವುದು ಬೇಡ.'' (ಅದೇ, ಪುಟ ೫೦, ೫೩). ಆಕೆ ತನ್ನ ಶೀಲವನ್ನು ಉಳಿಸಿಕೊಳ್ಳುವುದು ಪರಮ ಆದರ್ಶವಾಗುತ್ತೆ. ಎನ್ನುವುದನ್ನು ಪ್ರತಿಪಾದಿಸುತ್ತದೆ.

೪.೩ ಸುಧಾರಣಾವಾದಿ ನಿಲುವು

ಭಾರತದ ಸಾಂಸ್ಕೃತಿಕ ಪುನರುಜ್ಜೀವನವು ಮುಖ್ಯವಾಗಿ ಎರಡು ನೆಲೆಗಳಿಂದ ಪ್ರಾರಂಭವಾಯಿತು. ವೈಯಕ್ತಿಕ ಮತ್ತು ಸಾಮುದಾಯಿಕ ನೆಲೆಯಿಂದು ಗುರುತಿಸಬಹುದು. ಇವುಗಳ ಅವಶ್ಯಕತೆಗಳಿಂದ ಹುಟ್ಟಿಕೊಂಡದ್ದು ಭಾರತೀಯ ನವೋದಯ ಅತಿಯಾದ ಮೂಡನಂಬಿಕೆ, ಕಂದಾಚಾರಗಳ ಬಂಧನದಲ್ಲಿ ಮಾನಸಿಕವಾಗಿ ಹಾಗೂ ದೈಹಿಕವಾಗಿ ಸೋತು ಹೋಗಿದ್ದ ವ್ಯಕ್ತಿಗತ ಪ್ರಜ್ಞೆ ಅದರ ಬಿಡುಗಡೆಗಾಗಿ ಹಾತೊರೆದದ್ದು ಒಂದು ಕಡೆಗಾದರೆ, ಇಂತಹ ಸಾಂಪ್ರಾದಾಯಿಕತೆಯ ಮನುಷ್ಯರನ್ನು ಅಮಾನವೀಯವಾಗಿ ಬೇರ್ಪಡಿಸಿ ರಾಷ್ಟ್ರವನ್ನು ಹೋಳು ಮಾಡಿರುವ ಸಂಘಟನಾ ಶಕ್ತಿಯನ್ನು ದುರ್ಬಲಗೊಳಿಸಿರುವ ಅರಿವು, ರಾಷ್ಟ್ರದ ಐಕ್ಯತೆಯ ಪ್ರಜ್ಞೆಯನ್ನು, ಜಾಗೃತಗೊಳಿಸಲು ಕಾರಣವಾಯಿತು. ಜೊತೆಗೆ ಭಾರತೀಯ ಬದುಕಿನ ಪುನರುಜ್ಜೀವನಕ್ಕೆ ಒಂದು ಸಮಗ್ರತೆಯನ್ನು ತಂದುಕೊಟ್ಟಿತು. ಹೀಗೆ ಪ್ರಾರಂಭವಾಗಿ ಅದು ಹರಡಿಕೊಂಡಿದ್ದು ಸಾಮಾಜಿಕ ಸುಧಾರಣೆಯ ಕಡೆಗೆ, ಇದಕ್ಕೆ ಮೂಲವಾದದ್ದು ಜಾತಿ ಪದ್ಧತಿಯ ನಿರಾಕರಣೆ, ಸ್ತ್ರೀಯರಿಗೆ ಸಮಾನ ಹಕ್ಕುಗಳು, ಬಾಲ್ಯವಿವಾಹ ಪದ್ಧತಿ ವಿರೋಧ, ವಿಧವಾ ವಿವಾಹ ಪದ್ಧತಿ, ಸ್ತ್ರೀ ಶಿಕ್ಷಣ ಮುಖ್ಯವಾಗಿದ್ದವು. ಇದರಿಂದಾಗಿ ಹುಟ್ಟಿಕೊಂಡ ಸಂಸ್ಥೆಗಳು, ಆರ್ಯಸಮಾಜ, ಬ್ರಹ್ಮಸಮಾಜ, ಪ್ರಾರ್ಥನಾ ಸಮಾಜ, ಸತ್ಯಶೋಧಕ ಸಮಾಜ, ಇಂತಹ ರಾಷ್ಟ್ರೀಯ ಚಳುವಳಿಯಲ್ಲಾದ ಪ್ರಗತಿ ಮತ್ತು ಈಗಾಗಲೇ ಅಸ್ತಿತ್ವಕ್ಕೆ ಬಂದಂತಹ ಸಾಮಾಜಿಕ ವರ್ಗಗಳು, ಜಾತಿ ಪ್ರಜ್ಞೆಯನ್ನು ದುರ್ಬಲಗೊಳಿಸುವಲ್ಲಿ ಮುಖ್ಯ ಪಾತ್ರ ವಹಿಸುವುವು. ಹಾಗೆಯೇ ಅನುವಂಶೀಯತೆಯ ಕಾರಣಕ್ಕಾಗಿ ಸ್ತ್ರೀ ಪುರುಷ ಅಸಮಾನತೆಯನ್ನು ವಿರೋಧಿಸುವುದು, ಇಂತಹ ಸಮಾಜ ಸುಧಾರಕರ ಪ್ರತಿಪಾದನೆಗಳು ದಕ್ಷಿಣ ಭಾರತೀಯ ಕಾದಂಬರಿಗಳ ಲೇಖಕರ ಮೇಲೆ ಪ್ರಭಾವ ಬೀರಿದವು. ಮೊದಲ ಘಟ್ಟದಲ್ಲಿ ಬದುಕಿದ ಲೇಖಕರು ಅತ್ಯಂತ ಸಂಕೀರ್ಣ ಹಾಗೂ ವೈರುದ್ಯಗಳ ಮುಖಾ ಮುಖಿಯನ್ನು ಎದುರಿಸುವಂತಾಗಿತ್ತು. ಅಂದಿನ ಸಮಾಜದಲ್ಲಿ ರಾಜಕೀಯವಾಗಿ ಸಾಂಸ್ಕೃತಿಕವಾಗಿ ಪ್ರಕ್ಷುಬ್ದ ಪರಿಸ್ಥಿತಿ ಇತ್ತು.

ರಾಜಕೀಯವಾಗಿ ಬ್ರಿಟೀಷರು ಈ ದೇಶದಲ್ಲಿ ತಮ್ಮ ಸತ್ತೆಯನ್ನು ಬಲಪಡಿಸುಕೊಳ್ಳುವುದರ ಮೂಲಕ ಬದಲಾವಣೆಗೆ ಯತ್ನಿಸುತ್ತಿದ್ದರು. ಇಂಥ ಬದಲಾವಣೆಗೆ ಹೊಸ ವಿದ್ಯಾವಂತರ ಬೆಂಬಲವು ಇತ್ತು. ಇಂಥ ಸಂದರ್ಭದಲ್ಲಿ ರೂಪುಗೊಂಡ ಕಾದಂಬರಿಗಳಲ್ಲಿ ಸುಧಾರಣವಾದ ವ್ಯಕ್ತವಾಗಿರುವುದನ್ನು ಕಾಣಬಹುದು.ನ ಕನ್ನಡದ ಸುಧಾರಣಾವಾದಿ ನಿಲುವುಳ್ಳ 'ಇಂದಿರಾಬಾಯಿ' ಕಾದಂಬರಿಯಲ್ಲಿ ವ್ಯಕ್ತಗೊಳ್ಳುವ ಸಾಮಾಜಿಕ ಸುಧಾರಣೆ ಎರಡು ರೀತಿಯಲ್ಲಿ ನಡೆಯುತ್ತದೆ. ಅಂದರೆ ಇಲ್ಲಿ ಧಾರ್ಮಿಕ ಮತ್ತು ಜಮೀನ್ದಾರಿ ವ್ಯವಸ್ಥೆಯಿಂದ ರೂಪಗೊಂಡ ಪ್ರಧಾನ ವರ್ಗವೊಂದು ಸಮಾಜವನ್ನು ತೀವ್ರ ಶೋಷಿಸುತ್ತಿರುವ ನಡುವೆಯೇ ಸುಧಾರಣೆ ಮಂದವಾಗಿ ನಡೆಯುತ್ತಿರುತ್ತದೆ. ಎರಡನೇ ಹಂತದಲ್ಲಿ ವಿದ್ಯಾಭ್ಯಾಸ ಪಡೆದ ಎಲ್ಲ ಶೋಷಿತ ವರ್ಗಗಳು ಸಮಗ್ರ ಪ್ರಗತಿಗಾಗಿ ಶ್ರಮಿಸುತ್ತವೆ.

ಅಂಬಾಬಾಯಿ ಮತ್ತು ಭೀಮರಾಯರಂಥ ವ್ಯಕ್ತಿಗಳು ಹಾಗೂ ಮಠದ ಧರ್ಮಾಧಿಕಾರಿಗಳು ಸಮಾಜದಲ್ಲಿ ದುಷ್ಟತನ ಮತ್ತು ಅನೀತಿಗಳನ್ನು ಬಿತ್ತುವ ಕಾರಣದಿಂದ ಅಂಥವರು ಸುಧಾರಿಸಬೇಕೆನ್ನುವ ನೀತಿಯನ್ನು ಇಡೀ ಕಾದಂಬರಿ ಅಮೂರ್ತವಾಗಿ ಪ್ರತಿಪಾದಿಸುತ್ತದೆ. ಇಂತಹ ಸಾಂಪ್ರದಾಯಿಕ ವ್ಯಕ್ತಿಗಳಿಂದ ದಾರಿ ತಪ್ಪುವ ಇಂದಿರಾಬಾಯಿಯಂಥ ಮಹಿಳೆಯರು ಆಧುನಿಕ ವಿದ್ಯಾಭ್ಯಾಸ ಪಡೆದು ಸುಧಾರಣೆಗೊಳ್ಳಬೇಕೆನ್ನುವ ನಿಲುವನ್ನು ಕಾದಂಬರಿ ಪ್ರತಿಪಾದಿಸುತ್ತದೆ. ಸ್ಥಳೀಯ ಸಂಸ್ಕೃತಿಯನ್ನು ಬಳಸಿಕೊಳ್ಳುವುದರ ಮೂಲಕ, ಭಾಸ್ಕರ, ಇಂದಿರಾಬಾಯಿ ಅಮೃತರಾಯ ಮತ್ತು ಜಲಜಾಕ್ಷಮ್ಮನವರ ಪಾತ್ರಗಳ ಮೂಲಕ, ಪಾದ್ರಿಗಳ ಪುಸ್ತಕದ ಮೂಲಕ ಸುಧಾರಣಾವಾದಿ ನಿಲುವು ವ್ಯಕ್ತವಾಗುವುದನ್ನು ಕಾಣಬಹುದು. ದುರಾಚಾರ, ಮೌಢ್ಯತೆಗಳಿಂದ ಕೂಡಿದ ಸಮಾಜದ ದುಷ್ಟ ಮುಖಗಳನ್ನು ಬಿಚ್ಚಿಡುತ್ತಾ, ಅದರ ಸುಧಾರಣೆಯ ಸಾಧ್ಯತೆಗಳನ್ನು ಚಿಕಿತ್ಸೆ ವಿಧಾನವನ್ನು ಸೂಚಿಸುತ್ತಾ ಸದ್ಧರ್ಮ ವಿಜಯದ ಆಶಯವನ್ನು ಲೇಖಕರು ಎತ್ತಿಹಿಡಿಯುತ್ತಾರೆ. ಸ್ಥೂಲವಾಗಿ ಅದರ ವಿವರಗಳಲ್ಲಿ ಗಮನಿಸಬಹುದು.

ಭೀಮರಾಯ - ಅಂಬಾಬಾಯಿ ದಂಪತಿಗಳ ಏಕಮಾತ್ರ ಪುತ್ರಿ ಇಂದಿರೆಯ ಬಾಲ್ಯವಿವಾಹವು ಶ್ರೀಮಂತ ಪುತ್ರ ವಿಠಲರಾಯನೊಂದಿಗೆ ಜರುಗುತ್ತದೆ. ಆತ ಯೌವ್ವನಾವಸ್ಥೆಯಲ್ಲಿ ಕೆಟ್ಟ ಚಾಳಿಗಳ ದಾಸನಾಗಿ ಅಕಾಲ ಮರಣವನ್ನಪ್ಪಲು ವಿಧವೆಯಾದ ಇಂದಿರೆ ಎದುರಿಸುವ ಕಷ್ಟ ಪರಂಪರೆಗಳು, ತಲೆಬಾಚಬಾರದು, ಪುಸ್ತಕ ಓದಬಾರದು, ರವಕೆ ತೊಡಬಾರದು ಇತ್ಯಾದಿ ನಿರ್ಬಂಧಗಳು, ಸಂತಮಂಡಲಿಯ ಪ್ರಸಂಗದಲ್ಲಿ ಅವಳು ಅನುಭವಿಸುವ ಮಾನಸಿಕ ಯಾತನೆ, ಅದರ ಪರಾಕಾಷ್ಠೆ ಅಲ್ಲಿ ತನ್ನ ಕಷ್ಟಗಳಿಂದ ಪಾರಾಗುವುದು, ಸುಧಾರಣಾ ಮನಸ್ಸುಳ್ಳ ಅಮೃತರಾಯನ ಆಶ್ರಯದಲ್ಲಿ ಬೆಳೆಯುವುದು, ಸುಶಿಕ್ಷಿತಳಾಗುವುದು, ಭೀಮರಾಯನಿಂದಲೇ ಕೊಲೆಯಾದ ಸುಂದರರಾಯನ ಮಗ ವಿದ್ಯಾವಂತ ಭಾಸ್ಕರರಾಯನನ್ನು ಮದುವೆಯಾಗುವುದು- ಹೀಗೆ ಇಂದಿರೆಯ ಜೀವನದಲ್ಲಿ ಘಟನೆಗಳು ನಡೆಯುತ್ತವೆ.ದುಷ್ಟರಾದ ಹಾಗೂ ದುಷ್ಟತನವನ್ನು ಮುಚ್ಚಿಡಲು ಭ್ರಷ್ಟರಾದ ಹೆತ್ತವರ ಮಗಳಾಗಿ ಜನಿಸಿ ಇಂದಿರಾ ಬಾಲ್ಯವಿವಾಹ ಎಂಬ ಸಾಮಾಜಿಕ ವ್ಯವಸ್ಥೆಯಲ್ಲಿ ಬಿದ್ದು ಬಲಿಯಾಗಿ ಕೊನೆಗೆ ತನ್ನ ಜೀವನದಲ್ಲಿ ಸುಧಾರಣೆ ಕಂಡುಕೊಳ್ಳುತ್ತಾಳೆ ಜೀವನದ ಸಾರ್ಥಕತೆ ಪಡೆಯುತ್ತಾಳೆ. ಇಲ್ಲಿ ಸ್ತ್ರೀ ಸುಧಾರಣೆಯ ಪ್ರತೀಕ ಪಾತ್ರವಾಗಿ 'ಇಂದಿರೆ' ಯ ಪಾತ್ರ ಬರುತ್ತದೆ. ಆದರ್ಶ ವ್ಯಕ್ತಿತ್ವವುಳ್ಳ ಸ್ತ್ರೀಯಾಗಿ ನಿಲ್ಲುತ್ತಾಳೆ. ವಿಠಲರಾಯನು ಮರಣಹೊಂದಿದಾಗ ತನ್ನ ಜನ್ಮವನ್ನು ಹಳಿದುಕೊಳ್ಳುತ್ತಾಳೆ. ಆದರೆ ಮುಂದೆ ಭಾಸ್ಕರನ ಮದುವೆಯಾಗುವಾಗ ತನ್ನ ದಿಟ್ಟತನ ಪ್ರದರ್ಶಿಸುತ್ತಾಳೆ. ಅವಳಲ್ಲಿ ಆತ್ಮವಿಶ್ವಾಸ ಹಾಗೂ ದಿಟ್ಟತನದ ನಿರ್ಧಾರ ಕೈಗೊಳ್ಳಲು ಸಹಾಯವಾದುದು ಹಿನ್ನೆಲೆಯಾಗಿ ಒದಗಿದ್ದು ವಿಧವಾ ಗೃಹದಲ್ಲಿ ದೊರೆತ ವಸಾಹತು ಶಿಕ್ಷಣ ಪ್ರಭಾವ ಎನ್ನುವುದನ್ನು ಗುರುತಿಸಬಹುದು. ಅಂಬಾಬಾಯಿಯ ಪಾತ್ರವು ಮಾನವೀಯ ಸಂವೇದನೆಗೆ ಸುಧಾರಣೆಯ ವಿರುದ್ಧವಾದ ಸಮಾಜಘಾತುಕ ಪಾತ್ರವಾಗಿ ಬರುತ್ತದೆ. ತನ್ನ ಅನೈತಿಕ ಸಂಬಂಧವನ್ನು ಮುಚ್ಚಿಡುವುದಕ್ಕಾಗಿ ನಿರಪರಾಧಿ ಸುಂದರರಾಯನನ್ನು ಕೊಲ್ಲಿಸುವುದು, ಇಂದಿರೆಯ ಬಾಳಿನ ದುರಂತಕ್ಕೆ ಕಟ್ಟಳೆಗಳನ್ನು ರೂಪಿಸುವುದು, ಭೀಮರಾಯನಿಗೆ ದುರ್ಬೋಧನೆ ಮಾಡಿ ಕೆಟ್ಟದಾರಿಯಲ್ಲಿ ನಡೆಯುವಂತೆ ಮಾಡುವುದು ಇವೆಲ್ಲಾ ಅವಳ ಕೆಡುಕಿನ ಚಿತ್ರಣವನ್ನು ಪ್ರತಿಪಾದಿಸುತ್ತವೆ. ಇಲ್ಲಿ ಕೇವಲ ಅಂಬಾಬಾಯಿ ಮಾತ್ರವಲ್ಲ ಸಮಾಜದ ಕೆಡಿನ ಸಮುದಾಯದ ಪ್ರತೀಕವಾಗಿ ಪ್ರತಿಬಿಂಬಿತವಾಗುತ್ತದೆ.

ಸುಧಾರಣೆಯ ಧ್ಯೇಯವನ್ನು ಪ್ರತಿಪಾದಿಸುವ ತೀವ್ರ ಕಾಳಜಿಯುಳ್ಳ ಸಂದರ್ಭದಲ್ಲಿ ಈ ರೀತಿಯ ಕಪ್ಪು-ಬಿಳುಪಿನ ಸರಳ ವರ್ಗೀಕರಣ ವ್ಯಕ್ತವಾಗುತ್ತದೆ. ಮೌಢ್ಯ, ಕಂದಾಚಾರ ಸಂಪ್ರದಾಯಗಳಿಗೆ ಬಲಿಯಾಗುವ ಹೆಣ್ಣು ಗುಲ್ವಾಡಿಯವರ ಪ್ರಧಾನ ಕಾಳಜಿ ಎಂದು ಗುರುತಿಸಬಹುದು. ವಿಠಲರಾಯನ ಹದಿಹರೆಯದ ಕಾಮವನ್ನು ತಣಿಸಲು ಪೊಕ್ಕುಸೆಟ್ಟಿ ನೇಮಿಸಿದ ಗುಲಾಬಿ ಗೋಕುಳಿಯರೆಂಬ ವೇಶ್ಯಯರ ಪಾತ್ರಗಳನ್ನು ಗಮನಿಸಬೇಕು. ಪುರುಷ ಪ್ರಧಾನವಾದ ಸಾಮಾಜಿಕ ವ್ಯವಸ್ಥೆಯಲ್ಲಿ ವಿವಾಹಬಾಹಿರ ಸಂಬಂಧಗಳು ಒಂದು ಪ್ರತಿಷ್ಠೆಯ ವಿಷಯವಾಗಿದ್ದ ಆ ಕಾಲದ ಶ್ರೀಮಂತ ಐಶಾರಾಮಿ ಜೀವನದ ಲೋಲುಪತೆಯನ್ನು ಗುಲಾಬಿ ಗೋಕುಳಿಯರ ಪ್ರಕರಣ ವಿವರಿಸುತ್ತದೆ.

ಎಳೆಯ ಪ್ರಾಯದ ಯುವಕನಾದ ವಿಠಲರಾಯನು ತಪ್ಪುದಾರಿ ಹಿಡಿದಾಗ ಅವನ ಮತ್ತು ಮಾವನ ಮನೆಯವರ ಕಾಳಜಿ ಇರುವುದಿಲ್ಲ. ಅವನು ರೋಗ ಪೀಡಿತನಾಗಿ ಸಾಯುವ ಸಂದರ್ಭದಲ್ಲಿ ಕಾಳಜಿ ವಹಿಸುತ್ತಾರೆ. ವಿಠಲರಾಯನ ಮರಣದ ವಿಚಾರದಲ್ಲೂ ಅದು ನಕಲಿ ವೈದ್ಯರ ನಕಲಿ ಚಿಕಿತ್ಸೆಯಿಂದಾಗಿ ಸಂಭವಿಸುತ್ತದೆ. ಸೂಕ್ತ ಕಾಲದಲ್ಲಿ ಆಧುನಿಕ, ಇಂಗ್ಲಿಷ್, ವೈದ್ಯರ ಚಿಕಿತ್ಸೆ ದೊರಕುತ್ತಿದ್ದರೆ ಆತ ಬದುಕುತ್ತಿದ್ದ ಎಂಬ ಅಂಶವನ್ನು ಸೂಚಿಸುವುದು ಲೇಖಕರ ಉದ್ದೇಶವಾಗಿ ಕಾಣುತ್ತದೆ. ಹೀಗೆ ಲೇಖಕರು ಸಮಾಜದ ಅನಿಷ್ಟ ಪದ್ಧತಿಗಳು ಚಿತ್ರಿಸುವುದರ ಮೂಲಕ ಅವಕ್ಕೆ ಸೂಕ್ತವಾದ ಚಿಕಿತ್ಸೆಯ ಸೂಚನೆಯನ್ನು ನೀಡುವುದರ ಮೂಲಕ ಸುಧಾರಣೆಯ ನಿಲುವನ್ನು ವ್ಯಕ್ತಪಡಿಸುತ್ತದೆ. ಆರಂಭದಲ್ಲಿ ಸುಧಾರಣೆಯ ಪರವಾಗಿರದೆ ವಿರುದ್ಧವಾಗಿರುವ ಗುರುಮಠ ಅನಿವಾರ್ಯವಾಗಿ ಬದಲಾವಣೆಗೆ ಒಳಗಾಗಿರುವುದೂ ಸಂಪ್ರದಾಯ ಪಕ್ಷವು ಸುಧಾರಣೆಯ ಪಕ್ಷಕ್ಕೆ ಮಣಿಯುವುದೂ ಕಾದಂಬರಿಕಾರರ 'ಸದ್ಧರ್ಮ ವಿಜಯ'ದ ಆಶಯಕ್ಕನುಗುಣವಾಗಿ ಇದೆ.

ವಸಾಹತುಶಾಹಿಯ, ಪಾಶ್ಚಾತ್ಯ ಪ್ರಭಾವದಿಂದ ಬಂದಿರುವ ಆಚಾರಗಳು ಮತ್ತು ಸುಧಾರಣೆಗಳನ್ನು ಜನರು ಮೊದಲು ಶಂಕೆ ಅನುಮಾನಗಳಿಂದ ನೋಡಿದರೂ ಕ್ರಮೇಣ ಅವುಗಳ ಭಾಗವಾಗಿ ಬಿಡುತ್ತಾರೆ. ಆದರೆ ಕೆಲವು ಸಂಪ್ರದಾಯವಾದಿಗಳು ಅಂತಹ ಸುಧಾರಣೆಗಳಿಗ ತೋರಿಸುವ ಪ್ರತಿಕ್ರಿಯೆಯನ್ನು ಇಂದಿರಾಬಾಯಿ ಕಾದಂಬರಿಯಲ್ಲಿ ವಿಡಂಬನಾತ್ಮಕವಾಗಿ ಚಿತ್ರಿತವಾಗುತ್ತವೆ. ಕಾದಂಬರಿಯಲ್ಲಿ ಆ ಕಾಲದಲ್ಲಿ ವಿದೇಶ ಪ್ರಯಾಣ ಮಾಡಿದವರಿಗೂ, ವಿಧವಾ ವಿವಾಹದವರೆಗೂ ಸಾಮಾಜಿಕ ಮತ್ತು ಧಾರ್ಮಿಕ ಕಟ್ಟುಪಾಡುಗಳು, ಬಹಿಷ್ಕಾರಗಳನ್ನು ಹಾಕುತ್ತಿದ್ದರು. ಈ ರೀತಿಯ ವಿರೋಧದ ನೆಲೆ ಮೂಡಲು ಕಾರಣ ಆಧುನಿಕ ವಿದ್ಯಾಭ್ಯಾಸ ಪಡೆದ ಜನಾಂಗದಿಂದ ತಮ್ಮ ಅಸ್ತಿತ್ವಕ್ಕೆ ಧಕ್ಕೆ ಬರುವುದೆಂಬ ಆತಂಕವು ಸಂಪ್ರದಾಯವಾದಿಗಳಲ್ಲಿ ಮನೆ ಮಾಡಿಕೊಂಡಿತ್ತು. ಸುಧಾರಣಾವಾದಿಗಳು ಬ್ರಿಟೀಷರ ಜೊತೆ ಬಂದ ಶಿಕ್ಷಣ, ವೈಚಾರಿಕತೆಯನ್ನು ಸ್ವಾಗತಿಸಿದರು. ಇಂಗ್ಲಿಷ್ ವಿದ್ಯಾಭ್ಯಾಸವಾದ ಸ್ತ್ರೀ ಸುಧಾರಣಾವಾದ ಹಾಗೂ ಸಂಪ್ರದಾಯ ವಿರೋಧದಂತಹ ಮುಖ್ಯ ಸಂಗತಿಗಳು ಇಂದಿರಾಬಾಯಿಯು ಸುಧಾರಣಾವಾದದ ನಿಲುವನ್ನು ಎತ್ತಿ ಹಿಡಿಯುವ ಅಂಶಗಳು ಭಾಸ್ಕರ, ಅಮೃತರಾಯ, ಇವರಲ್ಲೂ ಸುಧಾರಣಾವಾದವನ್ನು ಪ್ರತಿಪಾದಿಸುವ ವ್ಯಕ್ತಿಗಳಾಗಿದ್ದಾರೆ.

ಇಂದಿರಾಬಾಯಿಯಲ್ಲಿ ಅಂಬಾಬಾಯಿ ಮತ್ತು ಭೀಮರಾಯರು ಸೋತು ಹೊಸ ಬದುಕನ್ನು ಅನಿವಾರ್ಯವಾಗಿ ಸ್ವೀಕರಿಸುತ್ತಾರೆ. ಭಾಸ್ಕರರಾಯ, ಅಮೃತರಾಯ, ಇಂದಿರಾಬಾಯಿ ಪ್ರತಿನಿಧಿಸುವ ವಿದ್ಯಾವಂತವರ್ಗದ ಸುಧಾರಣಾವಾದಿ ಮೌಲ್ಯಗಳನ್ನು ಇವರು ಸ್ವೀಕರಿಸುತ್ತಾರೆ. ಅದು ಕಾದಂಬರಿಯ ಕೊನೆಯಲ್ಲಿ ಬರುವುದನ್ನು ಕಾಣಬಹುದು.

''ಈ ವಿದ್ಯಮಾನವನ್ನು ಅಂಬಾಬಾಯಿಗೆ ತಿಳುಹಿಸಲು ಆಕೆಯು ಒಂದೆರಡು ಗಳಿಗೆವರೆಗೆ ಆಲೋಚಿಸಿ ನಮ್ಮ ದಶಾನಾಥನು ನಮ್ಮ ಕೈಯನ್ನು ಬಿಟ್ಟಿರುವುದಾಗಿ ನಾನು ನಂಬುತ್ತೇನೆ. ನಾವೆಷ್ಟು ಹಣ ವೆಚ್ಚ ಮಾಡಿದರೂ ಏನು ಮಾಡಿದರೂ ಇಡೀ ಊರೇ ಒಂದಾದ ಮೇಲೆ ಅವರೆಲ್ಲರೂ ಕೂಡಿ, ಶ್ರೀ ಗುರುಗಳಿಗೆ ಅನೇಕ ನ್ಯಾಯಗಳನ್ನು ಸೂಚಿಸಿ ಅವರ ಮನಸ್ಸನ್ನು ತಿರುಗಿಸುವುದು ಯಾವ ದೊಡ್ಡ ಮಾತು? ಇನ್ನು ನಾವು ಸಹಾ ಅವರ ಸಂಗಡ ಸೇರಿರುವುದೇ ಉತ್ತಮ. ನಮಗೀ ಧರ್ಮ ವಿಚಾರ ಸ್ಥಾನವೂ, ಯಾವನೊಬ್ಬನ ಹತ್ತಿರ ಜಗಳವೂ ಬೇಡ. ಇಷ್ಟು ದಿವಸ ಜಗಳಾಡಿ ನಷ್ಟ ಕಷ್ಟಗಳನ್ನನುಭವಿಸಿದ್ದೇ ಸಾಕು. ರತ್ನದಂತಿರುವ ಮಗಳನ್ನು ಸಹಾ ಕಳೆದುಕೊಂಡ ಹಾಗಾಯಿತು. ಈ ಹೊತ್ತೇ ತಮ್ಮ ಧರ್ಮ ವಿಚಾರಕ ಸ್ಥಾನಕ್ಕೆ ರಾಜೀನಾಮೆಯನ್ನು ಕಳುಹಿಸಬೇಕು. ನಾಳೆಯೇ ನಾವಿಬ್ಬರೂ ಹೋಗಿ, ಅಮೃತರಾಯ, ಜಲಜಾಕ್ಷಿ, ಸುಶೀಲೆ, ಭಾಸ್ಕರರಾಯ, ಇಂದಿರೆ, ಇವರ ಕ್ಷಮೆಯನ್ನು ಬೇಡಿ ಅವರೆಲ್ಲರನ್ನು ನಮ್ಮಲ್ಲಿಗೆ ಕರೆತಂದು ಯೋಗ್ಯವಾದ ರೀತಿಯಲ್ಲಿ ಊಟ ಉಪಚಾರಗಳನ್ನು ಮಾಡಿ ಮುಂದೆ ಸ್ನೇಹದಿಂದಲೂ ಪ್ರೀತಿಯಿಂದಲೂ ಇರೋಣ. ಇದೇ ನಮ್ಮ ಮುಂದಿನ ಪರಿಣಾಮ. ಹೀಗೆ ಸುಧಾರಣಾ ಮೌಲ್ಯಗಳನ್ನು ಸ್ವೀಕರಿಸುವುದರ ಮೂಲಕ ಸಮಾಜ ಬದಲಾಗುತ್ತದೆ ಎನ್ನುವ ಆಶಾಭಾವನೆ ವ್ಯಕ್ತವಾಗುತ್ತದೆ.

ಅಂಬಾಬಾಯಿಯು ಮಗಳಿಗೆ ಪಾದ್ರಿಗಳು ಪ್ರಕಟಿಸಿದ ಪುಸ್ತಕ ಓದುವುದರಿಂದ ಕೆಡುತ್ತಾಳೆ ಎನ್ನುವ ಭಾವನೆ ಇದೆ. ಆದರೆ ಅದನ್ನು ವಿರೋಧಿಸುವುದು ಇಂದಿರಾಬಾಯಿಯಲ್ಲಿ ವ್ಯಕ್ತವಾಗುತ್ತದೆ. ಇಂದಿರೆ ನಿಂತಿರುವ ವೈಚಾರಿಕ ನೆಲೆಯನ್ನು ವ್ಯಕ್ತಪಡಿಸುತ್ತವೆ. ಗಂಡನನ್ನು ಪರೀಕ್ಷಿಸಲು ಡಾಕ್ಟರ್ ದೊರೆಗಳು ಬರಬೇಕೆಂಬುದನ್ನೂ ಸಂತ ಮಂಡಳಿ ಕುರಿತು ಔದಾಸೀನ್ಯ ತೋರುವುದು, ವಿಧವೆಯಾದ ಬಳಿಕ ಸೀರೆ, ಕುಪ್ಪಸ ತೊಡುವುದಕ್ಕೂ ಮುಂದೆ ಭಾಸ್ಕರನೊಂದಿಗೆ ವಿವಾಹವಾಗುವುದಕ್ಕೋ ಈ ಓದಿಗೂ ಸಂಬಂಧವಿದೆ. ಇವುಗಳಲ್ಲಿ ವಿಪಲ ಹೊಂದುವುದು ಹೊಸ ವಿದ್ಯಾವಂತನಾಗಿ ಭಾಸ್ಕರನು ಕಮಲಪುರಕ್ಕೆ ಕಲೆಕ್ಟರ್ ಆಗಿ ಬರುವುದು ಈ ಎಲ್ಲಾ ವಿದ್ಯಾಮಾನಗಳು ಸುಧಾರಣಾವಾದವನ್ನು ವ್ಯಕ್ತಪಡಿಸುತ್ತದೆ.

ಆರಂಭ ಕಾಲದ ಮಹತ್ವದ ಕೃತಿಗಳಲ್ಲಿ ಒಂದು ಎಂದು ಗುರುತಿಸಲಾದ 'ವಾಗ್ದೇವಿ' (೧೯೦೫)ಯಲ್ಲಿ ಬೋಳಾರ ಬಾಬುರಾಯರು. ಪರಂಪರಾಗತ ಸಮಾಜದ ನಿಷ್ಠುರ ವಿಮರ್ಶೆ ತೀವ್ರ ಸಾಮಾಜಿಕ ಕಳಕಳಿಯಿಂದ ಕೂಡಿದ ಸುಧಾರಣಾವಾದವನ್ನು ವ್ಯಕ್ತಪಡಿಸುತ್ತದೆ.

ಒಂದು ಬ್ರಾಹ್ಮಣ ಮಠವನ್ನು ಕೇಂದ್ರವಾಗಿರಿಸಿಕೊಂಡು. ಅದರ ಸುತ್ತ ಪರಂಪರಾಗತ ಹಾಗೂ ಸಂಪ್ರದಾಯ ಸಮಾಜದ ಟೀಕೆಯನ್ನು ಮಾಡುತ್ತಾರೆ.

ವಾಗ್ದೇವಿಯ ಕಥೆಯ ವಿವರ: - ಪಂಚಮಠಗಳಲ್ಲಿ ಒಂದಾದ ಕುಮುದಪುರ ಮಠದ ಸ್ವಾಮಿಗಳಾದ ಚಂಚಲನೇತ್ರರು ಸನ್ಯಾಸವನ್ನು ಸ್ವೀಕರಿಸಿ ಹದಿನೈದು ವರ್ಷಗಳ ನಂತರ ಒಮ್ಮೆ ತಮ್ಮ ಪೂರ್ವಾಶ್ರಮದಲ್ಲಿ ದೂರದ ಸಂಬಂಧಿಯಾಗಿದ್ದ ವಾಗ್ದೇವಿ ಎಂಬ ವಿವಾಹಿತ ಸ್ತ್ರೀಯನ್ನು ನೋಡಿ ಅವಳಲ್ಲಿ ಮೋಹ ಗ್ರಸ್ತರಾಗುತ್ತಾರೆ. ಅವರ ಕೋರಿಕೆಯನ್ನು ಪಾರುಪತ್ತೆಗಾರನು ವಾಗ್ದೇವಿಗೆ ತಿಳಿಸಿದಾಗ, ತನಗೆ ಮಗನು ಜನಿಸಿದರೆ ಅವನನ್ನೇ ಮುಂದಿನ ಮಠಾಧಿಪತಿಯನ್ನಾಗಿ ಮಾಡಬೇಕೆಂಬ ಕರಾರನ್ನು ಅವನ ಮುಂದಿಡುತ್ತಾಳೆ. ಈ ಕರಾರಿಗೆ ಚಂಚಲನೇತ್ರರು ಒಪ್ಪಿದ ನಂತರ ವಾಗ್ದೇವಿ, ಅವಳ ಪತಿ, ಆಬಾಚಾರ್ಯ ಮತ್ತೆ ಅತ್ತೆ ಇವರು ಮೂವರು ಮಠದಲ್ಲಿಯೇ ವಾಸಿಸಲು ಪ್ರಾರಂಭಿಸುತ್ತಾರೆ. ಅದೇ ಮಠದಲ್ಲಿ ಪುರಾಣ ಪ್ರವಚನ ಮಾಡುತ್ತಿದ್ದ ವೇದವ್ಯಾಸ ಉಪಾಧ್ಯ ಎಂಬುವವನು ಸ್ವಾಮಿಗಳ ಕಾಮಕ್ರೋಧಕ್ಕೆ ಬೇಸತ್ತು, ತನ್ನ ಕಾರ್ಯವನ್ನು ಕೈಬಿಟ್ಟು, ಮಠವನ್ನು ಹಾಗೂ ಮಠಾಧಿಪತಿಯನ್ನು ಟೀಕಿಸಲು ಪ್ರಾರಂಭಿಸುತ್ತಾನೆ. ಚಂಚಲನೇತ್ರರ ಕಪಟ ಜೀವನವನ್ನು ಬಹಿರಂಗಗೊಳಿಸಲು ಮತ್ತು ಮಠವನ್ನು ಸುಧಾರಿಸಲು ವೇದವ್ಯಾಸನು, ಮಾಡುವ ಅನೇಕ ಪ್ರಯತ್ನಗಳು ಮತ್ತು ತಂತ್ರಗಳು ಹಾಗೂ ಅವನ್ನು ನಿಷ್ಫಲಗೊಳಿಸಲು ವಾಗ್ದೇವಿಯು ಹೂಡುವ ತಂತ್ರಗಳು ಇವೆ.

ಸ್ವಲ್ಪ ಕಾಲದ ನಂತರ ವಾಗ್ದೇವಿಗೆ ಸೂರ್ಯನಾರಾಯಣನೆಂಬ ಮಗನು ಜನಿಸುತ್ತಾನೆ. ಚಂಚಲನೇತ್ರರು ಅಕಾಲ ಮರಣಕ್ಕೆ ತುತ್ತಾಗುವ ಮೊದಲು ವಾಗ್ದೇವಿಗೆ ಮಾತುಕೊಟ್ಟಂತೆ ಸೂರ್ಯನಾರಾಯಣನನ್ನೇ ಮಠದ ಸ್ವಾಮಿಯನ್ನಾಗಿ ಮಾಡುತ್ತಾರೆ.

ಆದರೆ ಇದು ಸಂಪ್ರದಾಯ ವಿರುದ್ಧವೆಂದು ಇತರ ಮಠಾಧಿಪತಿಗಳು ಕೋರ್ಟಿಗೆ ಹೋಗಿ ಗೆಲ್ಲುತ್ತಾರೆ. ಇವೆಲ್ಲಾ ಘಟನೆಗಳಿಂದ ರೋಸಿ ಹೋಗಿ, ಸೂರ್ಯನಾರಾಯಣನು ತಾನು ಪ್ರೀತಿಸಿದ ಆ ಬ್ರಾಹ್ಮಣ ಸ್ತ್ರೀಯನ್ನು ಮದುವೆಯಾಗಿ, ದೂರದ ಒಂದು ದೇಶಕ್ಕೆ ಹೋಗಿ ನೆಲೆಸುತ್ತಾನೆ. ಅವನ ಅನುಪಸ್ಥಿತಿಯಲ್ಲಿ ಮಠದಿಂದ ಹೊರದೂಡಲ್ಪಟ್ಟು ವಾಗ್ದೇವಿ ಕಷ್ಟಪಡುತ್ತಾ, ಮಗನನ್ನು ನೆನಪಿಸಿಕೊಳ್ಳುತ್ತಾ ಜೀವನ ಸಾಗಿಸುತ್ತಾಳೆ. ಆತ್ಮಹತ್ಯೆಗೆ ಪ್ರಯತ್ನಿಸುವ ಸಂದರ್ಭದಲ್ಲಿ ಮಗನು ತಾಯಿಯನ್ನು ನೋಡಲು ಬಂದಾಗ ಆ ಅನಾಹುತ ತಪ್ಪಿಸಿ ತನ್ನ ಜೊತೆಗೆ ಕರೆದುಕೊಂಡು ಹೋಗುತ್ತಾನೆ. ಮತ್ತೆ ಮಠಕ್ಕೆ ಹೊಸ ಸ್ವಾಮಿಗಳು ಬರುತ್ತಾರೆ. ಇದರಿಂದ ಮಠದ ಪಾವಿತ್ರ್ಯ - ಕೀರ್ತಿಗಳು ಮತ್ತೆ ಲಭಿಸುತ್ತವೆ.

ಈ ರೀತಿಯಲ್ಲಿ ಕಾದಂಬರಿಕಾರರು ಒಂದು ಭ್ರಷ್ಟ ಸಮಾಜದ ವಾಸ್ತವ ಚಿತ್ರಣವನ್ನು ನೀಡುವ ಸಾಮಾಜಿಕ ಕಾಳಜಿ ಇದೆ. ಅದನ್ನು ಬಹಳ ನಿಷ್ಠುರವಾಗಿ ನಿರ್ವಹಿಸುತ್ತಾರೆ. ವಾಗ್ದೇವಿಯು ಚಂಚಲ ನೇತ್ರರೊಡನೆ ಸಂಬಂಧ ಬೆಳೆಸುವುದರಿಂದ ಎಲ್ಲಿ ತಮ್ಮ ಸ್ಥಾನಮಾನಕ್ಕೆ ತೊಂದರೆಯಾಗುವುದೋ ಎಂದು ಸಂಶಯದಿಂದ ವೆಂಕಟಾಪತಿ ಆಚಾರ್ಯನಿಗೆ ಯತಿಗಳು ''ಕಾಲಿನ ಪಾದರಕ್ಷೆಯನ್ನು ಯಾವನೊಬ್ಬನು ತಲೆಯ ಮೇಲೆ ಇಷ್ಟು ಕೊಳ್ಳುವನೋ'' ಎಂದು (ಬೋಳಾರ ಬಾಬುರಾವ್;೧೯೦೫; ಪುಟ-೪೩) ಸಮಾಧಾನವನ್ನು ಹೇಳುತ್ತಾರೆ, ಆದರೆ ಪಾದರಕ್ಷೆಯ ಹೋಲಿಕೆ ತುತ್ತಾಗಿರುವ ಹೆಣ್ಣಗೆ ರೂಡಿಯಾಗಿದ್ದರೂ ಕಾದಂಬರಿಯಲ್ಲಿ ಚಂಚಲನೇತ್ರರೇ ವಾಗ್ದೇವಿಯ ಪಾದರಕ್ಷೆಯಾಗಿರುವ ವ್ಯಂಗ್ಯವಿದೆ. ವಾಗ್ದೇವಿಯ ರೂಪಲಾವಣ್ಯಗಳೇ ಅವಳಿಗೆ ಜಯವನ್ನು ತಂದುಕೊಡುತ್ತವೆ. ವಾಗ್ದೇವಿಯ ರೂಪಕ್ಕೆ ಕೇವಲ ಚಂಚಲ ನೇತ್ರರು ಮಾತ್ರವಲ್ಲ, ವಂಚಕಿ, ಕಪಟಿ ಹಾಗೂ ಪುರುಷರನ್ನು ಹಾದಿ ತಪ್ಪಿಸುವ ಮೋಹಿನಿಯಾಗಿ ವಾಗ್ದೇವಿ ಇಲ್ಲಿ ಕೆಡುಕಿನ ಸಾಕಾರವಾಗುತ್ತಾಳೆ. ಆದರೆ ಚಂಚಲನೇತ್ರರ ಪ್ರೇಯಸಿಯಾಗಿಯೂ, ಸತ್ಯನಾರಾಯಣನ ತಾಯಿಯಾಗಿಯೂ ಅಧಿಕಾರದಾಹಿಯಾಗಿ ಮೆರೆಯುವ ವಾಗ್ದೇವಿ ಕಡೆಯಲ್ಲಿ ಮಾತ್ರ ಸೋಲುವಲ್ಲಿ 'ಸೊಕ್ಕಿದ ಹೆಣ್ಣಗೆ ತಕ್ಕ ಶಾಸ್ತಿ'ಯಾದ ವಿಡಂಬನೆ ಇದೆ. ಇಲ್ಲಿ ದುರಾಚಾರ, ಮೌಢ್ಯತೆ, ಭ್ರಷ್ಟಾಚಾರ ಸಮಾಜದ ವಿಮರ್ಶೆಯು ವ್ಯಕ್ತವಾಗಿಸುತ್ತದೆ.

ಆದರ ಸುಧಾರಣೆಯ ಸಾಧ್ಯತೆಯನ್ನು ಸೂಚಿಸುವ ಲೇಖಕರ ಸಾಮಾಜಿಕ ಕಳಕಳಿ ವ್ಯಕ್ತವಾಗುತ್ತದೆ. ವಾಗ್ದೇವಿಯ ಪಾತ್ರದ ಮೂಲಕ ಲೇಖಕರು ಮಠದ ಭ್ರಷ್ಟತೆ, ವ್ಯವಸ್ಥೆಯ ಭೀಕರ ಮುಖಗಳನ್ನು ಚಿತ್ರಿಸುತ್ತಾರೆ. ಅಲ್ಲದೆ ನಾಯಕಿ ಪಾತ್ರದ ಮೂಲಕ ಸಮಾಜದಲ್ಲಿ ಭ್ರಷ್ಟತೆಗೆ ಕಾರಣವಾಗಿರುವ ಮನುಷ್ಯ ದೌರ್ಬಲ್ಯಗಳನ್ನು ಬಯಲಿಗೆಳೆಯುತ್ತಾರೆ. ಇದರ ಮೂಲಕ ಸಮಾಜ ಸುಧಾರಣೆಯೇ ಮುಖ್ಯವಾದ ಅಂಶವಾಗಿದೆ.

ಇಲ್ಲಿ ಕುಮುದಪುರ ಮಠದ ಭ್ರಷ್ಟತೆಯನ್ನು ಬಯಲಿಗೆಳೆಯಲು ಮಾಡುವ ವೇದವ್ಯಾಸನ ಪ್ರಯತ್ನದಲ್ಲಿ ಸಫಲಗೊಳ್ಳುವ ವಿಧಾನದಲ್ಲಿ ನ್ಯಾಯವ್ಯವಸ್ಥೆಯನ್ನು ವಿವರಿಸುತ್ತಾ, ಸಮಾಜದ ಅತ್ಯುನ್ನತ ಸ್ಥಾನದಲ್ಲಿ ಅಂದರೆ ರಾಜನಿಂದ ಅವನಿಗೆ ನ್ಯಾಯ ದೊರೆಯುತ್ತದೆ. ಇಲ್ಲಿ ಸಾಂಪ್ರದಾಯಿಕ ನ್ಯಾಯ ವ್ಯವಸ್ಥೆಯು ಭ್ರಷ್ಟತೆ ಹೊಂದಿ ವಿಫಲವಾಗಿ ಆಧುನಿಕ ಪದ್ಧತಿಯ ನ್ಯಾಯ ವ್ಯವಸ್ಥೆಯನ್ನು ವ್ಯಕ್ತಪಡಿಸುತ್ತದೆ. ಹಾಗೆಯೇ ಸೂರ್ಯನಾರಾಯಣನು ಮಠದ ವ್ಯವಸ್ಥೆಯಲ್ಲಾದ ಅರಾಜಕತೆಯನ್ನು ಗೊಂದಲ ಜೀವನವನ್ನು ಕೊಳೆತ ಸಮಾಜದಲ್ಲಿ ಬದುಕು ನಡೆಸಲಾರದೆ, ಅಂತರ್ಜಾತಿ ವಿವಾಹವಾಗಿ ಸುಖಮಯ ಜೀವನ ನಡೆಸುವುದು ಒಂದು ರೀತಿಯಲ್ಲಿ ಸುಧಾರಣೆಯ ನಿಲುವನ್ನು ವ್ಯಕ್ತಪಡಿಸುತ್ತದೆ.

ಈ ರೀತಿ ಲೇಖಕರು ಸುಧಾರಣಾವಾದಿ ಆಶಯವನ್ನು ಕಾದಂಬರಿಯನ್ನು ವ್ಯಕ್ತಪಡಿಸಲು ಆಧುನಿಕ ಇಂಗ್ಲೀಷ್ ಶಿಕ್ಷಣ, ಮಿಶನರಿ ಚಟುವಟಿಕೆ, ಆರ್ಯಸಮಾಜ, ಬ್ರಹ್ಮಸಮಾಜ ಆಧುನಿಕತೆ ಮತ್ತು ಸಂಪ್ರದಾಯ ಮೇಳೈಸುವಲ್ಲಿ ಯಶಸ್ವಿಯಾಗಿದ್ದಾರೆ. ಆ ಕಾಲಘಟ್ಟದ ತೆಲುಗು ಕಾದಂಬರಿಗಳಲ್ಲಿ ಸುಧಾರಣಾ ಪರ ಕಾಳಜಿ ಇರುವುದನ್ನು ಕಾಣಬಹುದು. ವೀರೇಶಲಿಂಗಂ ಪಂತುಲು ಅವರ ಕಾದಂಬರಿಯಲ್ಲಿ 'ಪ್ರಹಸ ತರಂಗಂ' (ಶ್ರೀಕಂಠ ಶಾಸ್ತ್ರಿ(ಅನು):೧೯೧೦) ಕಾದಂಬರಿಯಲ್ಲದಿದ್ದರೂ ಅದರಲ್ಲಿ ಸಮಕಾಲೀನ ವಿದ್ಯಮಾನಗಳ ಮತವೈಷಮ್ಯಗಳ, ಮೂಢನಂಬಿಕೆಗಳ, ಬಹಿಷ್ಕಾರದಂತಹ ಪತ್ರಿಕೆಗಳ ವಿಡಂಬನೆಯನ್ನು ಬಹಳ ಸಮರ್ಥವಾಗಿ ಮಾಡುತ್ತಾರೆ. 'ವಿಸ್ಮಯವಿವಾಹ' ವೆಂಬ ಮೂರನೆಯ ತರಂಗದಲ್ಲಿ ವಿಷಮ ವಿವಾಹದ ವಿಚಾರವಿದೆ.

ಮುದುಕನ ಆರನೇ ಮದುವೆ ಇದರ ಪ್ರಧಾನ ವಸ್ತು. ಶಾಸ್ತ್ರಿಗಳೂ ತಮ್ಮ ಒಬ್ಬ ಮಗಳನ್ನು ಈ ಮುದುಕನಿಗೆ ಕೊಟ್ಟು ಮದುವೆ ಮಾಡಿ ಅವನ ಆಸ್ತಿಯನ್ನು ಪಡೆಯಬೇಕೆಂದು ನಿಶ್ಚಯಿಸುತ್ತಾನೆ. ಮುಂದೆ ಈ ಬಗೆಯ ವಿಷಮ ವಿವಾಹದಿಂದ ಉದ್ಭವಿಸುವ ಬಾಲವಿಧವೆಯರ ಸಂಖ್ಯೆ ಅವರ ಸಮಸ್ಯೆ ಅದರ ನಿವಾರಣೆಗೆ ಪುನರ್ವಿವಾಹಕ್ಕೆ ಅಡ್ಡಿಮಾಡುವ ಸಂಪ್ರದಾಯವಾದಿಗಳ ವಿಚಾರ ಬರುತ್ತದೆ. 'ಆಚಾರ'ವೆಂಬ ಶೀರ್ಷಿಕೆಯ ಇನ್ನೊಂದು ಭಾಗದಲ್ಲಿ ಮಡಿಮೈಲಿಗೆಯು ಮಂಗಮ್ಮನೂ ಆಚಾರದ ಆಕ್ಕಮ್ಮನೂ ನಡೆಸುವ ಸಂಭಾಷಣೆಯು ಅವರಿಬ್ಬರೂ ಮೂಢನಂಬಿಕೆಯಲ್ಲಿ ಒಬ್ಬರನ್ನೊಬ್ಬರು ಮೀರಿಸಿದವರು. ಗಜ್ಜುಗ ಗಾತ್ರದ ಸೆಗಣಿ ಉಂಡೆಯನ್ನು ತಿನ್ನುವುದು ಗೋಮೂತ್ರವನ್ನು ಪೋಷಿಸಿಕೊಳ್ಳುವುದು, ಹಾಗೆಯೇ ಕರಿಯ ಹಸುವಿನ ಗಂಜಳಕ್ಕಾಗಿ ಕಾದು ಅದು ಗಂಜಳ ಹಾಕುತ್ತಿದ್ದಾಗ ಎತ್ತಿಕೊಳ್ಳಹೋದರೆ ಅದರ ಒದೆತ ತಿಂದ ಅನುಭವವು ಅಕ್ಕಮ್ಮನಿದ್ದರೆ, ಹುಡುಗನ ಮಡಿಬಟ್ಟೆಯನ್ನು ಆರು ತಿಂಗಳಿಗೊಮ್ಮೆ ಒಗೆಯುವ ಮಂಗಮ್ಮಳು ಹೀಗೆ ಇಂತಹ ಸ್ಥಿತಿಯಲ್ಲಿ ಕಾಣಿಸಿಕೊಳ್ಳುವ ಸ್ತ್ರೀಯರು ಜನಗಳಲ್ಲಿ ಮನೆಮಾಡಿದ ಇಂತಹ ಮೂಢನಂಬಿಕೆಗಳಿಂದ ಮುಕ್ತರಾಗುವುದರಲ್ಲಿ ಸಮಾಜದ ಸುಧಾರಣೆ ಯಾಗಬೇಕು ಎನ್ನುವುದು ಲೇಖಕರ ಕಾಳಜಿಯಾಗಿದೆ.ಪಂತುಲು ಅವರು ತಮ್ಮ ರಾಜಶೇಖರ ಚರಿತ್ರೆಯಲ್ಲಿ ಬರುವ ಪಾತ್ರಗಳ ಮೂಲಕ ಸುಧಾರಣಾವಾದಿ ನಿಲುವನ್ನು ಪ್ರತಿಪಾದಿಸುತ್ತಾರೆ.

ಕಥಾನಾಯಕ ರಾಜಶೇಖರ ತನ್ನ ಮಗಳು ರುಕ್ಮಿಣಿಗೆ ತಾನೇ ಓದು ಬರಹ ಕಲಿಸುತ್ತಾನೆ. ಅದಕ್ಕೆ ಉಳಿದವರು ಆಕ್ಷೇಪವನ್ನೆತ್ತುತ್ತಾರೆ. ರಾಜಶೇಖರ ಅದನ್ನು ಸಮರ್ಥಿಸಿಕೊಳ್ಳುತ್ತಾನೆ. ಆತ ತನ್ನ ಬಾಳಿನಲ್ಲಿ ಎದುರಾದ ಸನ್ನಿವೇಶಗಳಿಂದ ಅನುಭವವನ್ನು ಪಡೆದು ವಿವೇಕವನ್ನು ಹೊಂದುವುದು ಕಾದಂಬರಿಯ ಮುಖ್ಯವಾದ ಆಶಯವಾಗಿದೆ. ಆದರೆ ಸಾಂದರ್ಭಿಕವಾಗಿ ಬರುವ ಸ್ತ್ರೀ ಪರವಾದ ಚಿಂತನೆಯು ಇಲ್ಲಿದೆ. ನಕಲಿ ವೈದ್ಯರು, ಮಠಾಧಿಪತಿಗಳು ಮುಂತಾದವರಿಂದ ಕೂಡಿದ ಒಂದು ಭ್ರಷ್ಟ ಸಮಾಜದ ಚಿತ್ರಣ ಕಾದಂಬರಿಯಲ್ಲಿ ಬರುತ್ತದೆ. ಅಸ್ಪೃಶ್ಯತೆ, ಜಾತಿಭೇದ, ಮಹಿಳೆಯರ ಅದರಲ್ಲೂ ವಿಶೇಷವಾಗಿ ವಿಧವೆಯರ ಬಗ್ಗೆ ತಳೆಯುವ ಕ್ರೂರವಾದ ಧೋರಣೆ ಪ್ರಸ್ತಾಪಿತವಾಗುತ್ತದೆ.

ನದಿಯ ಬಳಿ ಬಂದ ಹೆಂಗಳೆಯರ ಮಾತುಕತೆಯಲ್ಲಿ ಅತ್ತೆಯಂದಿರು ಸೊಸೆಯಂದಿರನ್ನು ಪೀಡಿಸುತ್ತಿದ್ದ ಬಗೆಯ ಸಹಜವಾದ ಚಿತ್ರ ಇದೆ. ಆ ಕಾಲದ ಸಾಮಾಜಿಕ ಆಚಾರ ವಿಚಾರಗಳಿಗೆ ಕಾದಂಬರಿ ಕನ್ನಡಿ ಹಿಡಿಯುತ್ತದೆ. ರುಕ್ಮಿಣಿಯ ಗಂಡ ಕಾಶೀಯಾತ್ರೆ ಮಾಡಿ ಬರುವ ದಾರಿಯಲ್ಲಿ ಮೃತನಾದನೆಂಬ ವಿಚಾರ ತಿಳಿದಾಗ ರುಕ್ಮಿಣಿಗೆ ಕೇಶ ಮುಂಡನದ ವಿಚಾರ ಪ್ರಸ್ತಾಪಗೊಂಡರೂ ರಾಜಶೇಖರ ಅದಕ್ಕೆ ಸಮ್ಮತಿಸುವುದಿಲ್ಲ. ಇಲ್ಲಿ ವಿಧವೆಯರ ಬಗ್ಗೆ ಆಡುವ ಮಾತುಗಳು ತುಂಬ ಮುಖ್ಯವಾಗಿವೆ. ''ನಮ್ಮ ದೇಶದಲ್ಲಿ ಎಳೆಯರ ವಿಧವೆಯರ ದುರವಸ್ಥೆಯನ್ನು ನೆನೆಸಿಕೊಂಡರೆ ಹಗೆಗಳಿಗೆ ಕೂಡ ಮನಸ್ಸು ಕರಗದೆ ಇರಲಾರದು. ಹೆತ್ತವರೇ ಪತಿರಹಿತೆಯರಾದ ತಮ್ಮ ಹೆಣ್ಣು ಮಕ್ಕಳನ್ನು ಅಮಾನುಷವಾಗಿ ನೋಡಿಕೊಳ್ಳುವುದರ ಬಗ್ಗೆ ಹೇಳುತ್ತಾರೆ''. ತಲೆಬೋಳಿಸಿ, ವಿರೂಪ ಮಾಡಿ ಮುಸುಕು ಹಾಕಿಸಿ ಮೂಲೆಯಲ್ಲಿ ಕುಳ್ಳಿರಿಸುವವರು, ಎರಡು ಹೊತ್ತು ಹೊಟ್ಟೆ ತುಂಬ ತಿಂಡಿಯನ್ನಾದರೂ ಕೊಡದೆ ಸೊರಗಿಸಿ ಎಲ್ಲರ ಊಟವೂ ಆದ ಮೇಲೆ ಮೂರು ಜಾವಕ್ಕೆ ಸ್ವಲ್ಪ ಅನ್ನವನ್ನು ಹಾಕುವರು. ಒರಟು ಸೀರೆಗಳನ್ನು ಉಡುವುದಕ್ಕೆ ಕೊಡುವರು ಎಂಬ ವಿವರಗಳನ್ನು (ಪು. ೮೭,೮೮) ನಿರೂಪಿಸುತ್ತಾರೆ. ಇಂತಹ ಹೀನ ಕೃತ್ಯಗಳನ್ನು ಸಹಿಸಲಾರದೆ ಲೇಖಕರು ಅದಕ್ಕೆ ವಿರುದ್ಧವಾದ ನೆಲೆಯಲ್ಲಿ ರಾಜಶೇಖರನ ಪಾತ್ರವನ್ನು ಚಿತ್ರಿಸಿದ್ದಾರೆ.

ರುಕ್ಮಿಣಿಯ ಕೇಶಮುಂಡನ ಮಾಡದಿರುವುದಕ್ಕೆ ರಾಜಶೇಖರನಿಗೆ ಬಹಿಷ್ಕಾರ ಹಾಕುವ ಬೆದರಿಕೆ ಬರುತ್ತದೆ. ಈ ನಿಮಿತ್ತವಾಗಿ ಊರು ಬಿಟ್ಟು ಕಾಶೀಯಾತ್ರೆ ಮಾಡುವಾಗ ಮಾರ್ಗಮಧ್ಯೆ ದರೋಡೆಕೋರರರಿಂದ ಆಪತ್ತು ಎದುರಾಗಿ ರುಕ್ಮಿಣಿ ಕಳೆದು ಹೋಗುತ್ತಾಳೆ. ಆಕೆ ಪುರುಷವೇಷದಲ್ಲಿದ್ದು ಕಷ್ಟಗಳಿಂದ ಪಾರಾಗಿ ತಂದೆಯನ್ನು ಸೇರುವುದು ಹಾಗೂ ಸತ್ತು ಹೋದವನೆಂದು ತಿಳಿಯಲಾಗಿದ್ದ ಆಕೆಯ ಗಂಡನೂ ಬಂದು ಸೇರುವ ನಾಟಕೀಯ ಘಟನೆಗಳನ್ನು ಕಾಣುತ್ತೇವೆ. ಈ ಭಾಗದಲ್ಲಿ ರುಕ್ಮಿಣಿಯದು ಕ್ರಿಯಾಶೀಲ ಪಾತ್ರವಾಗಿ ಕಾಣುತ್ತದೆ. ತನ್ನನ್ನು ತಾನು ರಕ್ಷಿಸಿಕೊಳ್ಳುವಲ್ಲಿಯೂ ಮುಂದೆ ಎದುರಾದ ಪರಿಸ್ಥಿತಿಗಳನ್ನು ನಿಭಾಯಿಸುವಲ್ಲಿಯೂ ಆಕೆ ತೋರಿದ ಜಾಣ್ಮೆ, ಸಾಹಸ ಪ್ರಶಂಸೆ ಗಳಿಸುತ್ತದೆ.

ರುಕ್ಮಿಣಿಯ ಜಾಣ್ಮೆ, ಸಾಹಸವನ್ನು ಓದುಗರು ಸಂಭಾವ್ಯವಲ್ಲವೆಂದು ಹೇಳಬಹುದೆಂಬ ಸಂಶಯವನ್ನು ಎತ್ತುತ್ತಾ ಲೇಖಕರು ಚರಿತ್ರೆಗಾರನಿಗೆ ವಾಸ್ತವವನ್ನು ಮರೆಮಾಚದೆ ಹೇಳುವುದು ಅವಶ್ಯ. ಆಕೆಗೆ ಜಾಣ್ಮೆ, ಪ್ರೌಢಿಮೆಯನ್ನು ಕಲಿಸಿದ್ದು ಆಕೆ ಪಡೆದ ಶಿಕ್ಷಣ ಎಂದು ಹೇಳಬಹುದು. ಈ ರೀತಿಯಲ್ಲಿ ಸಮಾಜದಲ್ಲಿ ಆಗುತ್ತಿದ್ದ ಬದಲಾವಣೆ ಕ್ರೀಯೆಗಳಿಗೆ ಶಿಕ್ಷಣದಿಂದಾಗುವ ಮಹತ್ವವನ್ನು ಅದರಲ್ಲೂ ಸ್ತ್ರೀಯರಿಗೆ ನೀಡುವ ಶಿಕ್ಷಣವು ಅವಶ್ಯ ಎನ್ನುವುದನ್ನು ಸ್ಪಷ್ಟಪಡಿಸುತ್ತದೆ.

ಮುಂದೆ ಶ್ರೀಶಂಕರ ಭಗವತ್ಪಾದರ ಕಾರ್ಯಗಳ ಬಗ್ಗೆ ಬರುವ ವಿವರಗಳಲ್ಲಿ ಆ ಗ್ರಾಮದ (ಪೀಠಾಪುರ) ಧನವಂತಳಾದ ಬಾಲವಿಧವೆಯೊಬ್ಬಳು ಭ್ರೂಣಹತ್ಯೆ ಮಾಡಿದಳೆಂದು ಗ್ರಾಮದ ಸಭಾಪತಿಗಳು ಕೆಲವರು ಆಕೆಗೆ ಬಹಿಷ್ಕಾರ ಹಾಕಿದ್ದು, ತರುವಾಯ ಆಕೆ ಜಗನ್ನಾಥ ಸಂತರ್ಪಣೆ ಮಾಡಿದ್ದಾಗ ಹಣದ ಆಶೆಯಿಂದ ಕೆಲವು ಬ್ರಾಹ್ಮಣರು ಭೋಜನ ಸ್ವೀಕರಿಸುತ್ತಾರೆ. ಕೊನೆಗೆ ಅಲ್ಲಿಗೆ ಭೋಜನಕ್ಕೆ ಹೋಗಿದ್ದವರು ಒಂದು ಪಕ್ಷವಾದರೆ, ಹೋಗದವರು ಮತ್ತೊಂದು ಪಕ್ಷವಾಗುತ್ತಾರೆ. ಆಕೆಯು ಲಕ್ಷಬತ್ತಿಯ ವ್ರತಗಳನ್ನು, ಬ್ರಾಹ್ಮಣ ಸಮಾರಾಧನೆಗಳನ್ನೂ ಮಾಡುತ್ತಾ ಬಂದದ್ದರಿಂದ ಕ್ರಮೇಣ ಆಕೆಯ ಪಕ್ಷದವರು ಮೇಲುಗೈಯಾಗಿ ಮೊದಲು ಬಹಿಷ್ಕಾರ ಹಾಕಿದವರಿಗೇ ಈಗ ಬಹಿಷ್ಕಾರವಾದಂತಾಗುವುದು. ಕೊನೆಗೆ ಸ್ವಾಮಿಗಳೇ ಇನ್ನೂರು ರೂ. ವನ್ನು ಸ್ವೀಕರಿಸಿ ಅವಳ ಕೇಶ ಮುಂಡನ ಮಾಡಿಸಿ ಅವಳಿಂದಲೇ ಭಿಕ್ಷೆ ಸ್ವೀಕರಿಸುವುದರಲ್ಲಿ ವ್ಯಂಗ್ಯದ ತೀಕ್ಷ್ಣತೆ ವ್ಯಕ್ತವಾಗುತ್ತದೆ. (ವೀರೇಶಲಿಂಗಂ ಪಂತುಲು : ೧೮೮೧, ಪು. ೨೪೦-೪೧) ಪಂತುಲು ಅವರು ಸಮಾಜದಲ್ಲಿದ್ದ ಮೂಢತೆ, ಕಂದಾಚಾರಗಳನ್ನು ಟೀಕಿಸುತ್ತಾ ವಿಡಂಬನೆಗೊಳಪಡಿಸಿರುವುದನ್ನು ಇಲ್ಲಿ ಕಾಣಬಹುದು. ಹೀಗೆ ರಾಜಶೇಖರನ ಪಾತ್ರವು ಕಾದಂಬರಿಯಲ್ಲಿ ಸಮಾಜ ಸುಧಾರಕನಂತೆ ಚಿತ್ರಿತವಾಗಿದೆ. ಇದು ಲೇಖಕರ ಸುಧಾರಣಾ ಪರ ಕಳಕಳಿಯನ್ನು ಅಭಿವ್ಯಕ್ತಿಸುತ್ತದೆ.

ಸತ್ಯವತೀ ಚರಿತ್ರೆಯಲ್ಲಿ ಲೇಖಕರು ಬಾಲ್ಯವಿವಾಹದ ಬಗ್ಗೆ ವಿಷಾದಮಯವಾದ ಚಿತ್ರಣವನ್ನು ನೀಡುತ್ತಾರೆ. ಕೃತಿಯ ಆರಂಭದಲ್ಲಿ ''ಯಾವಜ್ಜೀವವೂ ಸುಖದುಃಖಗಳಿಗೆ ಭಾಗಿಗಳಾಗಿರಬೇಕಾದ ಕನ್ಯಾವರರ ಇಷ್ಟಾನುಸಾರ ಮದುವೆಯಾಗುವ ಕಾಲಹೋಗಿ ಮಾತನಾಡುವುದಕ್ಕೂ ಚೆನ್ನಾಗಿ ತಿಳಿಯದ ಹಸುಳೆಗಳಿಗೆ ತಮ್ಮ ವಿನೋದಾರ್ಥವಾಗಿ ಮದುವೆ ಮಾಡಿ ಅವರನ್ನು ಪಾಲಕ್ಕಿಗಳಲ್ಲಿ ಕುಳ್ಳಿರಿಸಿ ಮೆರವಣಿಗೆ ಮಾಡಿಸಿ ಆಮರಣಾಂತರವಾಗಿ ದುಃಖವೆಂಬ ಸೆರೆಗೆ ಸಿಕ್ಕಿಸುವ ಕಾಲ ಬಂದಿತು''. ಗಯ್ಯಾಳಿ ಯಶೋಧಮ್ಮ ಹಾಗೂ ಸಾಧು ಲಕ್ಷ್ಮಿನಾರಾಯಣ ಇವರ ಎರಡನೆಯ ಮಗ ನಾರಾಯಣ ಮೂರ್ತಿಯ ಹೆಂಡತಿ ಸತ್ಯವತಿ ಇಲ್ಲಿ ಕೇಂದ್ರಪಾತ್ರವಾಗಿದ್ದಾಳೆ. ನಾರಾಯಣ ಮೂರ್ತಿ ವಿದ್ಯಾವಂತ, ಮನೆಗೆ ಬಂದ ಮಗ ಮತ್ತು ಸೊಸೆಗೆ ಸಮಾಗಮಕ್ಕೆ ಸಿಡಿಮಿಡಿಗುಟ್ಟುವ ಅತ್ತೆ ಶಯನಗೃಹದ ಇದಿರಾಗಿಯೇ ಕುಳಿತುಕೊಳ್ಳುವುದು ಹಾಗೂ ಹಿರಿಸೊಸೆ ಹೆಣ್ಣು ಹಡೆದದ್ದಕ್ಕೆ ಮತ್ತೆ ಮತ್ತೆ ಜರೆಯುವುದು ಹೀಗೆ ಕಾದಂಬರಿಯುದ್ದಕ್ಕೂ ಯಶೋದಮ್ಮ ಬೈಯ್ಯುವುದೇ ಕಾಣುತ್ತದೆ. ಸತ್ಯವತಿ ಹಗಲು ಗಂಡನೊಡನೆ ಮಾತಾಡಿದ್ದು ಆಕೆಯ ದೃಷ್ಟಿಯಲ್ಲಿ ಅಪರಾಧವಾಗುತ್ತದೆ. ಅವಳು ವಿದ್ಯಾವಂತಳಾಗಿರುವುದು ಅವಳ ಎರಡನೆಯ ತಪ್ಪು. 'ಹೆಂಗಸು ಓದಿಕೆಟ್ಟಳು, ಗಂಡಸು ಓದದೆ ಕೆಟ್ಟನು' ಎಂಬುದಾಗಿ ಆಕೆಯ ಆಕ್ಷೇಪವಿದೆ. ಆದರೆ ಸತ್ಯವತೀ, ಮಾತ್ರ ಗಂಡನ ಪ್ರೋತ್ಸಾಹ ದಿಂದ ತನ್ನ ಓದನ್ನು ಮುಂದುವರಿಸುತ್ತಾಳೆ ಅವಳು ನಿಯಮ ವ್ರತಗಳನ್ನು ಪಾಲಿಸುವುದಿಲ್ಲ. ಶುಚಿತ್ವವನ್ನು ಕಾಪಾಡಿಕೊಳ್ಳುತ್ತಾಳೆ. ಇವುಗಳೇ ಅವಳ ಅತ್ತೆಯ ಬೈಗುಳಕ್ಕೆ ಕಾರಣವಾಗುತ್ತದೆ.

ಕಾದಂಬರಿಯಲ್ಲಿ ಸತ್ಯವತಿಯನ್ನು ಆದರ್ಶ ಸ್ತ್ರೀಯಾಗಿ ಚಿತ್ರಿಸಿದ್ದಾರೆ. ಸತ್ಯವತಿಯ ಅಜ್ಜಿ ಪಾರ್ವತಮ್ಮ, ಅವಳು ನೋಡಿದ ಸಹಗಮನ ವರ್ಣನೆಯನ್ನು ಮಾಡಿವ ಒಂದು ಸಂದರ್ಭವಿದೆ. ಆಕೆ ಸರಕಾರದವರನ್ನು ವರ್ಣಸಂಕರಕ್ಕೆ ಅವಕಾಶ ಮಾಡಿಕೊಟ್ಟವರೆಂದೂ ಸಹಗಮನವನ್ನು ನಿಲ್ಲಿಸಿದವರೆಂದೂ ಬೈಯ್ಯಲು ವಿಪರ್ಯಾಸವನ್ನು ವ್ಯಂಗ್ಯಪೂರ್ಣವಾಗಿ ತರಲಾಗಿದೆ. (ಶ್ರೀಕಂಠಶಾಸ್ತ್ರಿ ;೧೯೧೦;ಪು. ೪೬,೪೭)

ನಮ್ಮ ನೆಂಟನೇ ಒಬ್ಬನು ಎಪ್ಪತ್ತು ವರುಷದವನು ಸತ್ತು ಹೋದಾಗ ಅವನಿಗೆ ಚಿಕ್ಕ ಏಳುವರುಷ ಹುಡುಗಿಯನ್ನು ಮದುವೆ ಮಾಡಿರುತ್ತಾರೆ. ಆ ಹುಡುಗಿಯನ್ನು ಸಹಗಮನ ಮಾಡಿಸಲು ಕರೆದುಕೊಂಡು ಹೋಗುವಾಗ ಅವಳಿಗೆ ಮಾಡುವ ಶೃಂಗಾರದ ವರ್ಣನೆ. ಮೈತುಂಬ ಒಡವೆಗಳನ್ನು ಇಡಿಸಿ, ಒಳ್ಳೆ ಸೀರೆಯನ್ನು ಉಡಿಸಿ, ಹೊಸ ಮದುವಣಗಿತ್ತಿಯಂತೆ ಸಿಂಗರಿಸಿ ಬಾಜಾ ಬಜಂತ್ರಿ ಮುಂತಾದವುಗಳಿಂದ ಶವದೊಂದಿಗೆ ಮೆರವಣಗೆ ಮಾಡಿಸುತ್ತಾ ಗೋದಾವರೀ ತೀರಕ್ಕೆ ಕರೆದುಕೊಂಡು ಹೋದರು. ಅದನ್ನು ನೋಡುವುದಕ್ಕಾಗಿ ಊರಿಂದ ಸಾವಿರಾರು ಮಂದಿಗಳು ಹೋದರು. ಅರಸಿನ ಕುಂಕುಮ ತೆಗೆದುಕೊಳ್ಳುವುದಕ್ಕಾಗಿ ಊರಲ್ಲಿದ್ದ ಮುತ್ತೈದೆಯರೆಲ್ಲಾ ಹೋದರು. ಮೊತ್ತಮೊದಲು ಬ್ರಾಹ್ಮಣರು ತಲೆಯನ್ನು ಆ ಹುಡುಗಿಯ ಮೇಲೆ ಇರಿಸಿ ಕರ್ಮಗಳನ್ನು ಮಾಡಿಸಿದರು. ನಂತರ ಅವಳ ನಗಗಳನ್ನು ದಾನ ಮಾಡಿದರು. ಈ ರೀತಿಯಲ್ಲಿ ಹಸುಳೆ ಕಂದಮ್ಮನನ್ನು ತಮ್ಮ ಸಂಪ್ರದಾಯ, ಶಾಸ್ತ್ರ ಕಟ್ಟಳೆಗಳೆಂದು ಪ್ರಯೋಗಿಸಿ ಬಾಲಕಿ ಹತ್ಯೆಯನ್ನು ಮಾಡುತ್ತಾರೆ.

ಅವಳನ್ನು ಸಹಗಮನ ಮಾಡಿಸುವಾಗ ಆ ಕ್ರೂರ ನರಳುವಿಕೆಯನ್ನು ಕೇಳಲಾರದೆ ವಾದ್ಯ ಮಂತ್ರಗಳನ್ನು ಘೋಷಿಸುತ್ತಾರೆ. ಚಿತೆಯ ಮೇಲೆ ಆ ಹುಡುಗಿಯನ್ನು ಗಂಡನ ಮಗ್ಗುಲಲ್ಲಿ ಮಲಗಿಸಿ ಸುಮ್ಮನೆ ಮಂತ್ರ ಹೇಳುತ್ತಾರೆ. ಆಗ ವಾದ್ಯದ ಶಬ್ದ ಮಾತ್ರ ಕಿವಿಗೆ ಬೀಳುವಂತೆ ಇರುತ್ತದೆ. ಈ ರೀತಿಯ ಕ್ರೂರ ಪದ್ಧತಿಯನ್ನು ವಿಡಂಬತನಾತ್ಮಕವಾಗಿ ಕಾದಂಬರಿಯಲ್ಲಿ ಚಿತ್ರಿಸುತ್ತಾ ಸಮಾಜದಲ್ಲಿ ಇಂತಹ ಕೃತ್ಯಗಳು ನಡೆಯಬಾರದು ಸುಧಾರಣೆಯಾಗಬೇಕು ಎನ್ನುವ ಮನೋಭಿಲಾಷೆಯನ್ನು ಪಂತುಲು ಅವರು ವ್ಯಕ್ತಪಡಿಸುತ್ತಾರೆ.

ಪಂತುಲು ಅವರ ಇನ್ನೊಂದು ಕೃತಿ 'ಸತ್ಯರಾಜನ ಪೂರ್ವದೇಶಯಾತ್ರೆಗಳು'. ಯಾತ್ರೆಗಳು ಎಂದು ಹೆಸರಿದ್ದರೂ ಪ್ರವಾಸ ಕಥನವಲ್ಲ. ಸಾಮಾಜಿಕ ರಾಜಕೀಯ ಸನ್ನಿವೇಶಗಳನ್ನು ವಿಡಂಬನೆ ಮಾಡುವ ಉದ್ದೇಶದಿಂದ ಬರೆದುದಾಗಿದೆ. ಇದರಲ್ಲಿ 'ಸ್ತ್ರೀ ಮಲೆಯಾಳ' ಎಂಬ ಮೊದಲ ಭಾಗದ ಶೀರ್ಷಿಕೆಯಂತಿದೆ. ಸತ್ಯರಾಜನು ಭೇಟಿಕೊಡುವ ಈ ದೇಶದಲ್ಲಿ ಸೂರ್ಯನು ಪಶ್ಚಿಮ ದಿಕ್ಕಿನಲ್ಲಿ ಉದಯಿಸಿ ಪೂರ್ವದಲಿ ಅಸ್ತಮಿಸುವ ವಿಪರೀತ ಮೊದಲ್ಗೊಂಡು ಎಲ್ಲವೂ, ಹಿಂದೂ ದೇಶದ ಆಚಾರ ವಿಚಾರಗಳಿಗೆ ತೀರ ವ್ಯತಿರಿಕ್ತವಾಗಿದೆ. ಸ್ತ್ರೀ ಪ್ರಧಾನವಾದ ಸಮಾಜದಲ್ಲಿ ಪುರುಷರ ದಾಸ್ಯ, ಪುರುಷರು ಆಚರಿಸತಕ್ಕ ವ್ರತಗಳು, ಪತ್ನಿವ್ರತರು, ವಿವಾಹೇತರ ಕಾಮಸಂಬಂಧಕ್ಕೆ ಭೋಗಪುರುಷರು, ಪತಿ ಸಹಗಮನ, ಪತ್ನಿರಹಿತ (ವಿಧುರ) ಮೂಗುಕೊಯ್ಯುವುದು - ಇತ್ಯಾದಿ ವಿಚಾರಗಳನ್ನು ಸತ್ಯರಾಜನು ಗಮನಿಸುತ್ತಾನೆ. ಅಲ್ಲಿ ಪುರುಷರಿಗೆ ವಿದ್ಯೆ ನಿಷೇಧಿತವಾದ ವಿಚಾರವಾಗಿದೆ. ಅವರಿಗೆ ವಿದ್ಯಾಭ್ಯಾಸ ಕೊಡಿಸುವ ಬಗ್ಗೆ ಮಾತನಾಡುವ ನವನಾಗರಿಕ ಸಂಸ್ಕಾರ ಪಕ್ಷದವರು ಜಗದ್ಗುರುಗಳು ಬಹಿಷ್ಕಾರ ಪತ್ರಿಕೆಯನ್ನು ಎದುರಿಸಬೇಕಾಗುತ್ತದೆ. ಪಂತುಲು ಅವರ ಸಮಕಾಲೀನ ಭಾರತದಲ್ಲಿ ಸ್ತ್ರೀಯರು ಪುರುಷಪ್ರಧಾನ ವ್ಯವಸ್ಥೆಯಲ್ಲಿ ಯಾವ ಬಗೆಯಲ್ಲಿ ನಲುಗುತ್ತಿದ್ದರೂ ಅದೇ ಬಗೆಯಲ್ಲಿ ಪುರುಷರು ನಲುಗುವ ಸನ್ನಿವೇಶವನ್ನು ಸತ್ಯರಾಜನು ಕಾಣುತ್ತಾನೆ.

ಇಂತಹ ಅನ್ಯೋಕ್ತಿಗಳ ಮೂಲಕ ಲೇಖಕರು ಸ್ತ್ರೀಪರವಾದ ನಿಲುವನ್ನು ಮಂಡಿಸಿರುವ ರೀತಿ ವಿಶಿಷ್ಟವಾದುದು. ಸ್ತ್ರೀ ಪ್ರಧಾನವಾದ ವ್ಯವಸ್ಥೆಯಲ್ಲಿ ಪುರುಷರ ಬವಣೆಯ ಚಿತ್ರಣವನ್ನು ನೀಡುವುದರ ಮೂಲಕವಾಗಿ ಹಿಂದೂ ದೇಶದ ಸ್ತ್ರೀಯರ ಬವಣೆಯ ಬಗ್ಗೆ ಕಳಕಳಿಯನ್ನು ಮೂಡಿಸುವುದು ಲೇಖಕರ ಉದ್ದೇಶವಾಗಿದೆ. ಸ್ತ್ರೀಯರೇ ಸ್ವತಂತ್ರರಾಗಿರುವ, ಪುರುಷರು ಅವರ ಆಜ್ಞಾನುವರ್ತಿಗಳಾಗಿ ನಡೆಯುವ ಆ ದೇಶದಲ್ಲಿ ಪುರುಷರು ಹೇಗೆ ವಿದ್ಯಾವಂಚಿತರೆಂಬ ವಿಷಯವನ್ನು ಸತ್ಯರಾಜನು ಪ್ರಸ್ತಾಪಿಸುತ್ತಾನೆ. ನಮ್ಮ ದೇಶದ ಭೋಗ ಸ್ತ್ರೀಯರು ಹಾಗೆಯೇ. ಆ ದೇಶದಲ್ಲಿ ಭೋಗಪುರುಷರು ಮಾತ್ರ ಅಲ್ಪ ಸ್ವಲ್ಪ ವಿದ್ಯೆಯನ್ನು ಅಭ್ಯಸಿಸಿರುವರು. ಆದರೂ ಅವರ ವೃತ್ತಿಗೆ ತಕ್ಕಷ್ಟು ವಿದ್ಯೆಯನ್ನು ಅಭ್ಯಸಿಸುವರು. ಅದು ಅವರ ವೃತ್ತಿಗೆ ಅನುಕೂಲವಾಗಿಯೇ ಇರುವುದು, ಗಂಡಸರನ್ನು ಓದಿಕೊಳ್ಳೆಂದು ಹೇಳಿದರೆ ದೊಡ್ಡ ತಪ್ಪಾಗುತ್ತದೆ.

ಘೋರ ಪಾಪ ಮಾಡುತ್ತಿರುವವರನ್ನು ಗದರಿಸುವ ಹಾಗೆ ಗದರಿಸುವರು. ವಿದ್ಯೆಯಿಲ್ಲದೆ ಹೋದುದರಿಂದಲೋ ಅಥವಾ ಬೇರೆಯಾದ ಹೇತುವಿನಿಂದಲೋ ಆ ದೇಶದಲ್ಲಿ ಗಂಡಸರಿಗೆ ಆಭರಣಗಳಲ್ಲಿ ಆಸಕ್ತಿ, ನಮ್ಮ ಸ್ತ್ರೀಯರಿಗಿಂತಲೂ ವಿಶೇಷವಾಗಿರುವುದು (ಅದೇ ಪು. ೪೨). ಹೀಗೆ ತನ್ನ ದೇಶದ ರೀತಿ ರಿವಾಜುಗಳನ್ನು ತೀರ ವಿರುದ್ಧವಾದ ಆ ದೇಶದವರ ಕಟ್ಟಳೆಗಳ ಕುರಿತಾದ ವಿವರಗಳನ್ನು ಓದುಗರ ಜೊತೆ ಹಂಚಿಕೊಳ್ಳುವ ಸಹಗಮನವೆಂಬ ಸದಾಚಾರವನ್ನು ಅದು ಹೇಗೆ ಶಾಸ್ತ್ರಸಿದ್ಧವೆಂದು ಆಧಾರ ಸಹಿತವಾಗಿ ಆ ದೇಶದವರ ಮುಂದೆ ವಿವರಿಸಿ ಬೆಂಟಿಂಕ್ ಪ್ರಭು ಸಹಗಮನ ತಪ್ಪಿಸಿ ಪ್ರತಿ ವರ್ಷ ಅಷ್ಟೊಂದು ಮಂದಿ ಪತಿವ್ರತೆಯರು ಪುಣ್ಯಲೋಕಗಳಿಗೆ ಹೋಗದಂತೆ ವಿರೋಧಿಸಿ ಪುಣ್ಯ ಕಟ್ಟಿಕೊಂಡನು ಎಂದು ದೂರಿಕೊಂಡರೆ ಅವರು ಸತಿ ಸಹಗಮನ ಸಮರ್ಥನೆಯನ್ನು ಖಂಡಿಸಿದ ವಿಚಾರವನ್ನು ಹೇಳುತ್ತಾನೆ.

ಈ ರೀತಿಯಲ್ಲಿ ಲೇಖಕರು ಸತ್ಯರಾಜನೆಂಬ ಕಲ್ಪಿತ ಪಾತ್ರದ ಮೂಲಕವಾಗಿ ನಮ್ಮ ದೇಶದ ಸ್ತ್ರೀಯರ ಸ್ಥಿತಿಗತಿಗಳ ಚಿತ್ರಣದೊಂದಿಗೆ ಸಾಮಾಜಿಕ ಮೌಢ್ಯತೆಗಳನ್ನು ಮಾರ್ಮಿಕವಾಗಿ ಅಭಿವ್ಯಕ್ತಿಸಿದ್ದಾರೆ.ಹೀಗೆ ಪಂತುಲು ಅವರು ಸಾಮಾಜಿಕ ಸುಧಾರಣೆಯ ಬಗ್ಗೆ ಆಸಕ್ತಿ ವಹಿಸಿದ ಬಗೆಯನ್ನು ಕಾದಂಬರಿಗಳಲ್ಲಿ ಕಾಣಬಹುದು.

೪.೪ ಸ್ತ್ರೀ ಶಿಕ್ಷಣ

ಮಹಿಳೆಯರನ್ನು ಕುರಿತಂತೆ ಅಂದಿನ ಸಮಾಜ ಹೆಚ್ಚಿನ ಕಾಳಜಿ ವಹಿಸಿದಂತೆ ಕಾಣುತ್ತದೆ. ಅದರಲ್ಲೂ ಕಾದಂಬರಿ ಪ್ರಕಾರವು ಮಹಿಳೆಯರ ಸುಧಾರಣೆಯನ್ನು ಮಾಡಲು ಪ್ರಯತ್ನಿಸಿರುವುದನ್ನು ಕಾಣಬಹುದು. ಸ್ತ್ರೀಯರಿಗೆ ವಿದ್ಯಾಭ್ಯಾಸ ನೀಡಿದರೆ ಆಗಬಹುದಾದ ಅಪಾಯಗಳನ್ನು ಕುರಿತಂತೆ ಕೆಲವು ಕಾದಂಬರಿಗಳು ಸಂದೇಶ ನೀಡುತ್ತಿದ್ದರೆ ಮತ್ತೆ ಕೆಲವು ಕಾದಂಬರಿಗಳು ಸ್ತ್ರೀ ವಿದ್ಯಾಭ್ಯಾಸದ ಪ್ರಯೋಜನವನ್ನು ಕುರಿತಂತೆ ಮಾತನಾಡಿವೆ. ಅಲ್ಲದೆ ಸಮಾಜದ ಭ್ರಷ್ಟತೆಗಳನ್ನು ಹೇಳುವಾಗಲೂ, ಸ್ತ್ರೀ ಕಾದಂಬರಿಯ ಮುಖ್ಯ ಪಾತ್ರದಲ್ಲಿರುವುದು ಈ ಕಾಲಘಟ್ಟದ ಕುತೂಹಲಕರವಾದ ಅಂಶ. ಈ ಅವಧಿಯಲ್ಲಿ ಅನೇಕ ಕಾದಂಬರಿಗಳು ಹೆಸರೇ ಸೂಚಿಸುವಂತೆ ಇಂದಿರಾಬಾಯಿ, ವಾಗ್ದೇವಿ, ಇಂದಿರೆ (ಕನ್ನಡ), ಇಂದುಲೇಖಾ, ಸರಸ್ವತಿ ವಿಜಯಂ, ಸುಕುಮಾರಿ (ಮಲಯಾಳಿ), ಕಮಲಂಬಾಳ್ (ತಮಿಳು), ಚಂದ್ರಮತಿ, ಸತ್ಯವತೀ ಚರಿತ್ರೆ, ರಾಜಶೇಖರ ಚರಿತ್ರೆ, ಸತ್ಯರಾಜ ಪೂರ್ವದೇಶಯಾತ್ರೆಗಳು (ತೆಲುಗು), ಸತೀಕಮಲೆ (ತುಳು), ಮೊದಲಾದ ಕಾದಂಬರಿಗಳು ಸಹ ಸ್ತ್ರೀಯನ್ನೇ ಕೇಂದ್ರವಾಗಿಟ್ಟುಕೊಂಡಿರುವುದು ಗಮನಾರ್ಹ ಅಂಶ. ಸ್ತ್ರೀಯರಿಗೆ ಶಿಕ್ಷಣದ ಅಗತ್ಯವಿರುವುದನ್ನು ಕಂಡುಕೊಂಡದ್ದು ಬ್ರಿಟೀಷರ ಆಳ್ವಿಕೆಯ ಪರಿಣಾಮವಾಗಿ, ಕ್ರಿಶ್ಚಿಯನ್ ಮತ ಪ್ರಚಾರಕರ ಪ್ರಭಾವದಿಂದಾಗಿ ಸ್ವಧರ್ಮದಲ್ಲಿನ ಅಜ್ಞಾನ, ಮೌಢ್ಯ, ಕಂದಾಚಾರಗಳ ಅರಿವೂ ಅವುಗಳ ಬಗ್ಗೆ ತಿರಸ್ಕಾರವೂ ಮೂಡಿದವು. ಈ ಸಂದರ್ಭದಲ್ಲಿ ಸಮಾಜ ಸುಧಾರಕರ ಗಮನವನ್ನು ಸೆಳೆದ ವಿಷಯವೆಂದರೆ 'ಸ್ತ್ರೀ ಶಿಕ್ಷಣ' ಇದಕ್ಕೆ ವಿರೋಧಗಳಿರುವುದು ಕಂಡು ಬರುತ್ತವೆ. ಈ ಶತಮಾನದಲ್ಲಿ ಅನ್ಯಮತವೊಂದರ ಮತ್ತು ಅನ್ಯ ಸಂಸ್ಕೃತಿಯೊಂದರ ಪ್ರಭಾವಗಳಿಗೆ ಸ್ತ್ರೀಯರು ಒಳಗಾಗಬಹುದೆಂಬ ಭೀತಿಯಿಂದಾಗಿ ಸ್ತ್ರೀ ಶಿಕ್ಷಣವನ್ನು ನಿಷೇಧಿಸಿದ್ದರು. ಹಾಗೆಯೇ ಸಂಸ್ಕೃತಿಯ ಹೆಸರಿನಲ್ಲಿ ಸ್ತ್ರೀಗೆ ವಿದ್ಯಾಭ್ಯಾಸವನ್ನು ನಿಷೇಧಿಸಿದ್ದರು. ಸ್ತ್ರೀ ಶಿಕ್ಷಣದ ಬಗೆಗಿನ ಪರ ವಿರೋಧ ನಿಲುವುಗಳು ಆ ಕಾಲದ ಕಾದಂಬರಿಗಳಲ್ಲಿ ಕಾಣಿಸಿಕೊಂಡಿರುವುದನ್ನು ಗಮನಿಸಬಹುದು.

ವೀರೇಶಲಿಂಗಂ ಪಂತುಲು ಅವರ ತೆಲುಗಿನ ಕೃತಿಯಾದ 'ರಾಜಶೇಖರ ಚರಿತ್ರೆ' ಯಲ್ಲಿ ರುಕ್ಮಿಣಿಯ ಕೇಶಮುಂಡನ ಮಾಡದಿರುವುದಕ್ಕೆ ರಾಜಶೇಖರನಿಗೆ ಬಹಿಷ್ಕಾರ ಹಾಕುವ ಬೆದರಿಕೆ ಬರುತ್ತದೆ. ಆ ನಿಮಿತ್ತವಾಗಿ ಊರು ಬಿಟ್ಟು ಕಾಶೀಯಾತ್ರೆ ಮಾಡುವಾಗ ಮಾರ್ಗಮಧ್ಯೆ, ದರೋಡೆಕೋರರಿಂದ ಆಪತ್ತು ಎದುರಾಗಿ ರುಕ್ಮಿಣಿ ಕಳೆದು ಹೋಗುತ್ತಾಳೆ. ಆಕೆ ಪುರುಷವೇಷದಲ್ಲಿದ್ದು ಕಷ್ಟಗಳಿಂದ ಪಾರಾಗಿ ತಂದೆಯನ್ನು ಸೇರುವುದು ಹಾಗೂ ಸತ್ತು ಹೋದವನೆಂದು ತಿಳಿಯಲಾಗಿದ್ದ ಆಕೆಯ ಗಂಡನೂ ಬಂದು ಸೇರುವ ನಾಟಕೀಯ ಘಟನೆಗಳನ್ನು ಕಾಣುತ್ತೇವೆ. ಈ ಭಾಗದಲ್ಲಿ ರುಕ್ಮಿಣಿಯದು ಕ್ರಿಯಾಶೀಲ ಪಾತ್ರವಾಗಿ ಕಾಣುತ್ತದೆ. ತನ್ನನ್ನು ತಾನು ರಕ್ಷಿಸಿಕೊಳ್ಳುವಲ್ಲಿ ಮುಂದೆ ಎದುರಾದ ಪರಿಸ್ಥಿತಿಗಳನ್ನು ನಿಭಾಯಿಸುವಲ್ಲಿಯೂ ಆಕೆ ತೋರಿದ ಜಾಣ್ಮೆ, ಸಾಹಸ ಪ್ರಶಂಸೆಗಳಿಸುತ್ತದೆ. ಈ ರೀತಿ ಜಾಣ್ಮೆ, ಪ್ರೌಢಿಮೆಗಳು ಬಂದಿರುವುದು ಅವಳು ಪಡೆದ ಶಿಕ್ಷಣದಿಂದಾಗಿ ಎನ್ನುವುದನ್ನು ವ್ಯಕ್ತಪಡಿಸುತ್ತದೆ. ಅಲ್ಲದೇ ಕಥಾನಾಯಕ ರಾಜಶೇಖರ ತಾನೇ ಸ್ವತಃ ಮಗಳಾದ ರುಕ್ಮಿಣಿಗೆ ಓದು ಬರಹ ಕಲಿಸುತ್ತಾನೆ. ಅದಕ್ಕೆ ಉಳಿದವರು ಆಕ್ಷೇಪವೆತ್ತಿದರೆ ರಾಜಶೇಖರ ಅದನ್ನು ಸಮರ್ಥಿಸುತ್ತಾನೆ. ಇದು ಸ್ತ್ರೀ ಶಿಕ್ಷಣದ ವಿಷಯಕ್ಕೆ ನೀಡಿರುವ ಮಹತ್ವವನ್ನು ಸ್ಪಷ್ಟಪಡಿಸುತ್ತದೆ.

ಪಂತುಲು ಅವರ ಮತ್ತೊಂದು ಕೃತಿಯಾದ 'ಚಂದ್ರಮತಿ' ಯಂತಹ ಪೌರಾಣಿಕ ಕತೆಯಲ್ಲೂ ಸ್ತ್ರೀಶಿಕ್ಷಣದ ಮಹತ್ವದ ಕುರಿತಾದ ಪ್ರತಿಪಾದನೆ ಇದೆ. ರಾಜಕುಮಾರಿ ಚಂದ್ರಮತಿಗೆ ವಿದ್ಯಾಸಮುದ್ರನೆಂಬ ಬ್ರಾಹ್ಮಣನಿಂದ ವಿದ್ಯಾಭ್ಯಾಸ ನೀಡುವುದು, ಆಗ ವಿದ್ಯೆಯ ಮಹತ್ವದ ಕುರಿತು ಒಂದು ಧೀರ್ಘ ಉಪನ್ಯಾಸವನ್ನು ಮಾಡಿದನು.

''ಲೋಕದಲ್ಲಿ ಸ್ಥೂಲದೇಹವನ್ನು ಬೆಳೆಯಿಸುವುದಕ್ಕೆ ಆಹಾರವು ಹೇಗೆ ಅವಶ್ಯಕವೋ ಹಾಗೆಯೇ ಜ್ಞಾನವೆಂಬ ದೇಹವನ್ನು ಬೆಳೆಯಿಸುವುದಕ್ಕೆ ವಿದ್ಯೆಯೆಂಬ ಆಹಾರವು ಅವಶ್ಯಕ. ವಿದ್ಯೆಯಿಂದ ವಿನಯ ವಿವೇಕಾದಿಗಳುಂಟಾಗುವುವು; ಅದರಿಂದ ಸಮಸ್ತ ಸದ್ಗುಣಗಳೂ ಉಂಟಾಗುವುವು.

ಓದಿರತಕ್ಕವರು ಸಾಧಾರಣವಾಗಿ ತಮ್ಮ ವಿದ್ಯೆಗೆ ತಕ್ಕ ಬುದ್ಧಿಯನ್ನು ಸತ್ಪ್ರವರ್ತನವನ್ನು ಹೊಂದಿ ಯಾವುದೋ ಒಂದು ಬಗೆಯಲ್ಲಿ ಗೌರವದಿಂದ ಜೀವನ ಮಾಡುತ್ತಿರುವುದನ್ನು ಓದದೇ ಇರುವವರು ಬುದ್ಧಿಶಕ್ತಿಯು ಸಾಲದೆ ಒಳ್ಳೆಯ ನಡೆನುಡಿಗಳನ್ನರಿಯದೆ ಕಟ್ಟಿಗೆಯೊಡೆದು ಮಾರುವುದೇ ಮೊದಲಾದ ಕಾರ್ಯಗಳಲ್ಲಿ ನೀಚವಾಗಿ ಜೀವನ ಮಾಡುತ್ತಿರುವುದನ್ನೂ ನಾವು ಸಮಸ್ತ ದೇಶಗ್ಗಳಲ್ಲಿಯೂ ನೋಡುತ್ತಿರುವೆವಲ್ಲವೇ? ಕಳ್ಳತನ, ಕೊಲೆ, ಮೊದಲಾದ ದೊಡ್ಡ ತಪ್ಪುಗಳನ್ನು ಮಾಡತಕ್ಕವರು ಸಂಪೂರ್ಣವಾಗಿ ವಿದ್ಯಾಹೀನರಾದ ಹೀನಜಾತಿಯುವರೇ ಎಂಬುದು ಸಕಲರಿಗೂ ತಿಳಿದಿರುವುದು. ಸಭೆಗಳಿಗೆ ಹೋಗಿ ಉದ್ಯೋಗಗಳನ್ನು ಮಾಡಲಾರರಾದುದರಿಂದ, ಸ್ತ್ರೀಯರಿಗೆ ವಿದ್ಯೆಯು ಅನಾವಶ್ಯಕವೆಂದು ಅನರ್ಥದಾಯಕವೆಂದೂ ಕೆಲವರು ಅಭಿಪ್ರಾಯಪಡುವರಲ್ಲದೆ ಆದನ್ನು ವಿವೇಕಿಗಳಾದವರು ಮೆಚ್ಚರು.ವಿದ್ಯೆಯನ್ನು ಜ್ಞಾನಾಭಿವೃದ್ಧಿಗೋಸುಗ ಅಭ್ಯಾಸ ಮಾಡಬೇಕಲ್ಲದೆ ಉದ್ಯೋಗಗಳನ್ನು ಮಾಡುವುದಕ್ಕೋಸುಗವಲ್ಲ! '' (ಶ್ರೀಕಂಠಶಾಸ್ತ್ರಿ; ೧೯೧೧; ಪು ೮) ಈ ಮಾತುಗಳಲ್ಲಿಪ್ರತಿಯೊಬ್ಬ ವ್ಯಕ್ತಿಗೂ ವಿದ್ಯೆಯೆನ್ನುವುದು ಅವಶ್ಯಕ ಎನ್ನುವುದನ್ನು ತಿಳಿಸುತ್ತಾರೆ.

''ಹೊರಗೆ ಬೇರೆ ಬೇರೆಯಾಗಿ ಕಾಣಿಸುತ್ತಿದ್ದರೂ ಭಾರ್ಯಾಭರ್ತರಿಬ್ಬರ ಶರೀರವೂ ಒಂದೇ ಎಂದು ಎಲ್ಲಾ ದೇಶದವರೂ ಹೇಳುವರು ಹಾಗಾದ ಪಕ್ಷದಲ್ಲಿ ಗಂಡನು ವಿದ್ಯಾವಂತನಾಗಿ ನಲಿಯಬೇಕೆಂದೂ ಹೆಂಡತಿಯು ಅವಿದ್ಯಾವತಿಯಾಗಿ ನರಳಬೇಕೆಂದೂ ಹೇಳುವರು ಅರ್ಧಶರೀರವು ಮನುಷ್ಯನಾಗಿಯೇ ಉಳಿದ ಅರ್ಧಶರೀರವೂ ಪಶುವಾಗಿಯೂ ಇರಬೇಕೆಂದು ಹೇಳಿದಂತಾಯಿತು''.(ಅದೇ.ಪು.೧೦) ಈ ರೀತಿ ಒಂದು ಸಂಸಾರದಲ್ಲಿ ಗಂಡ ಹೆಂಡತಿ ಇಬ್ಬರೂ ತಕ್ಕ ಮಟ್ಟಿಗಾದರೂ ವಿದ್ಯೆಯನ್ನು ಕಲಿಯಬೇಕು . ಒಂದು ಪೂರ್ಣ ವ್ಯಕ್ತಿತ್ವ ಪಡೆಯಲು ಹೇಗೆ ಮನುಷ್ಯ ಪ್ರತ್ನಿಸುತ್ತಾನೆಯೋ ಹಾಗೆ ಸುಖ ಸಂಸಾರಕ್ಕೆ ಇಬ್ಬರೂ ವಿದ್ಯಾವಂತರಿರಬೇಕು ಎನ್ನುವುದು ವ್ಯಕ್ತವಾಗಿತ್ತದೆ.

''ನಿಷ್ಪಕ್ಷಪಾತವಾಗಿ ಆಲೋಚಿಸಿದರೆ, ವಿದ್ಯೆಯಿಲ್ಲದವರಿಗೂ ವಿದ್ಯೆಯನ್ನು ಕಲಿತವರಿಗೂ ಕತ್ತಲೆಗೂ ಬೆಳಕಿಗೂ ಇರುವಷ್ಟು ಬೇಧವಿರುವುದು, ಐಕ್ಯಮತದಿಂದ ಇಬ್ಬರಿಗೂ ಸ್ತ್ರೀ ಪುರುಷರು ಕೆಲವಿಷಯಗಳಲ್ಲಿ ಮಾತ್ರ ಭಿನ್ನರಾಗಿದ್ದರೂ, ಜ್ಞಾನ, ಬುದ್ಧಿ, ಮೊದಲಾದುವುಗಳು ಮಾತ್ರ ಇಬ್ಬರಿಗೂ ಸಮಾನಗಳಾಗಿಯೇ ಇರುವುವು. ಆದುದರಿಂದ ಜ್ಞಾನಾಭಿವೃದ್ಧಿಗೆ ಕಾರಣಭೂತವಾದ ವಿದ್ಯೆಯು ಪುರುಷರಿಗೆ ಹೇಗೋ ಸ್ತ್ರೀಯರಿಗೂ ಹಾಗೆಯೇ ಪರಮ ಪ್ರಯೋಜನಕರವಾಗಿರುವುದರಲ್ಲಿ ಸಂದೇಹವಿಲ್ಲ''. ಪಂತುಲು ಅವರು ವಿದ್ಯಾಸಮುದ್ರನೆಂಬ ಬ್ರಾಹ್ಮಣನಿಂದ ವಿದ್ಯೆಯ ಮಹತ್ವವನ್ನು ಸ್ತ್ರೀಯರಿಗೆ ಅದರ ಅಗತ್ಯವಿರುವುದನ್ನು ಉಪನ್ಯಾಸದ ಮೂಲಕ ಅಭಿವ್ಯಕ್ತಪಡಿಸಿದ್ದಾರೆ. ಇದರಿಂದ ಆ ಕಾಲಘಟ್ಟದಲ್ಲಿ ಸ್ತ್ರೀಯರಿಗೆ ವಿದ್ಯೆಯನ್ನು ನೀಡುವುದು ಅವಶ್ಯಕವಿಲ್ಲವೆಂಬ ಒಂದು ರೂಢಮೂಲಕ್ಕೆ ಜೋತುಬಿದ್ದಿರುವ ಸ್ಥಿತಿಯನ್ನು ವ್ಯಕ್ತಪಡಿಸುವುದರ ಮೂಲಕ ಅದರಿಂದ ಆಗುವ ಅನರ್ಥಗಳನ್ನು ತಿಳಿಸುತ್ತಾ ಸ್ತ್ರೀಯರಿಗೆ ಶಿಕ್ಷಣದ ಅರಿವು ಇರುವುದರಿಂದ ಆಗುವ ಪ್ರಯೋಜನವನ್ನು ತಿಳಿಸುತ್ತಾರೆ.

''ಜ್ಞಾನ ನೇತ್ರಕ್ಕೆ ಸಹಾಯಕಾರಿಯಾದ ವಿದ್ಯೆಯಿಂದ ಪುರುಷರಿಗೆ ಶುಭವೂ ಸ್ತ್ರೀಯರಿಗೆ ಅಶುಭವೂ ಉಂಟಾಗುವುದೆಂದು ವಾದಿಸುವುದು, ಬಾಹ್ಯನೇತ್ರಕ್ಕೆ ಸಹಾಯಕಾರಿಯಾದ ಬೆಳಕನ್ನು ಪುರುಷರಿಗೆ ಪ್ರಯೋಜನಕರವಾದುದನ್ನಾಗಿಯೂ ಸ್ತ್ರೀಯರಿಗೆ ಅನರ್ಥಕಾರಿಯಾದುದನ್ನಾಗಿಯೂ ಭಾವಿಸಿ ವಾದಿಸುವಂತೆ ಹಾಸ್ಯಾಸ್ಪದವಾದುದಲ್ಲವೇ?''(ಅದೇ ಪು೧೧)

ಇಲ್ಲಿ ಸ್ತ್ರೀಯರಿಗೆ ಶಿಕ್ಷಣ ಕೊಡಿಸುವುದನ್ನು ವಿರೋಧಿಸುವುದನ್ನು ನಿಂದನೆಗೊಳಪಡಿಸಿರುವುದನ್ನು ಕಾಣಬಹುದು. ''ಸಸಿಗಳಿಗೆರೆದ ನೀರು ಕಳೆಗಳು ಬೆಳೆಯುವುದಕ್ಕೂ ಉಪಯೋಗಕರವಾಗುವಂತೆ, ಸನ್ಮಾರ್ಗ ಪ್ರವರ್ತನೆಗೋಸುಗ ವಿನಿಯೋಗಿಸಲ್ಪಡಬೇಕಾದ ವಿದ್ಯೆಯು ಒಂದೊಂದು ವೇಳೆ ಸ್ತ್ರೀ ಪುರುಷರ ದುರ್ಮಾರ್ಗ ಪ್ರವರ್ತನೆಗೂ ಸಹಾಯಕಾರಿಯಾಗಬಹುದು.

ಕಳೆಯು ಬೆಳೆದೀತೆಂಬ ಕಡೆಯಿಂದ ನೀರೆರೆಯದೆ ಬೆಳೆಯನ್ನು ಒಣಗಿಸಿ ಹಾಳು ಮಾಡುವುದು ಹೊಲದ ಯಜಮಾನನಿಗೆ ಹೇಗೆ ಧರ್ಮವಲ್ಲವೋ ಹಾಗೆಯೇ ಯಾವಾಗಲೋ ದುಷ್ಕಾರ್ಯಗಳಿಗೆ ಸಹಾಯಕಾರಿಯಾಗುವುದೆಂಬ ಶಂಕೆಯಿಂದ ಜ್ಞಾನ ಮೂಲವಾದ ವಿದ್ಯೆಯನ್ನು ತಾಯ್ತಂದೆಗಳು ತಮ್ಮ ಮಕ್ಕಳಿಗೆ ಕಲಿಸದೆ ಬಿಡುವುದು ಧರ್ಮವಲ್ಲ. ಕಳೆಗಳನ್ನು ಬೆಳೆಯಗೊಡಿಸಿದರೆ ಸಸ್ಯಗಳಿಗೆ ಅಪಾಯವುಂಟಾಗಿ ಫಲವು ಲಭಿಸಲಾರದೆಂಬುದನ್ನರಿತು ಹೊಲದ ಯಜಮಾನನು ಯುಕ್ತಕಾಲಗಳಲ್ಲಿ ಕಳೆಯನ್ನು ಕಿತ್ತು ಹಾಕಿ ಸಸ್ಯಗಳನ್ನು ಕಾಪಾಡುವಂತೆಯೇ, ಮಕ್ಕಳಿಗೆ ಕಲಿಸುವ ವಿದ್ಯೆಯು ದುಷ್ಕಾರ್ಯಗಳಿಗೆ ಉಪಯೋಗಕರವಾಗದಂತೆ ಅವರನ್ನು ಜಾಗರೂಕತೆಯಿಂದ ನೋಡಿಕೊಂಡು ಯುಕ್ತಕಾಲಗಳಲ್ಲಿ ಶಿಕ್ಷೆರಕ್ಷೆಗಳನ್ನು ಮಾಡುತ್ತ ಅದರ ಫಲವನನ್ನುಭವಿಸುವುದಕ್ಕೆ ಪ್ರಯತ್ನಿಸಬೇಕು''.(ಅದೇ ಪು೧೩) ತಂದೆತಾಯಿಗಳು ಮಕ್ಕಳಿಗೆ ಮೊದಲು ಶಿಕ್ಷಣ ಕೊಡಿಸಬೇಕು. ಅದರಿಂದ ಅವರಲ್ಲಿ ಅರಿವು ಮೂಡಿಸುವಂತಾಗಬೇಕು. ಎನ್ನುವುದನ್ನು ಹೊಲ ಮತ್ತು ಫಲದ ಸಂಕೇತಗಳನ್ನು ಉದಾಹರಣೆಯಾಗಿ ನೀಡಿದ್ದಾರೆ. ವಿದ್ಯಾವಂತರನ್ನಾಗಿ ಮಾಡುವುದರಿಂದ ಆಗುವ ಪ್ರಯೋಜನ ವ್ಯಕ್ತವಾಗುತ್ತವೆ. ಗಂಡು-ಹೆಣ್ಣು ಬೇಧವಿಲ್ಲದೆ ಶಿಕ್ಷಣ ನೀಡಬೇಕೆಂದು ಪ್ರತಿಪಾದಿತವಾಗುತ್ತದೆ.

''ಬಾಲರ ವಿಷಯಕ್ಕಿಂತ ಬಾಲೆಯರ ವಿಷಯದಲ್ಲಿ ಹೆಚ್ಚಾದ ಶ್ರಮವನ್ನು ವಹಿಸಬೇಕು. ನಿರಂತರವೂ ಗಂಡುಮಕ್ಕಳು ತಾಯ್ತಂದೆಗಳ ಮನೆಯಲ್ಲಿಯೇ ಇರತಕ್ಕವರು, ಹೆಣ್ಣುಮಕ್ಕಳಾದರೋ ಎಂದಾದರೂ ಮತ್ತೊಬ್ಬರ ಮನೆಗೆ ಹೋಗಿ ಸೇರತಕ್ಕವರಾಗಿರುವರಲ್ಲದೆ ನಿರಂತರವೂ ತವರ್ಮನೆಯಲ್ಲಿ ಇರತಕ್ಕವರಲ್ಲ. ಆದುದರಿಂದ ಸಾಕಿದವರು ತಮಗೆ ಅಪಖ್ಯಾತಿಯು ಬಾರದಂತೆ ಹೆಣ್ಣುಮಕ್ಕಳು ಅತ್ತೆಯ ಮನೆಗೆ ಹೋಗುವ ಕಾಲವು ಸಮೀಪಿಸುವುದಕ್ಕೆ ಮೊದಲೇ ಅವರನ್ನು ಉತ್ತಮಗುಣವುಳ್ಳವರನ್ನಾಗಿಯೂ, ತಿಳುವಳಿಕೆವುಳ್ಳವರನ್ನಾಗಿಯೂ ಮಾಡಿರಬೇಕು.

ತಮ್ಮ ಪುತ್ರಿಯರಿಗೆ ಮೊದಲು ಸುಗುಣಗಳನ್ನು ಕಲಿಸಿ ಜ್ಞಾನವತಿಯರನ್ನಾಗಿ ಮಾಡದೆ ಸಂಸಾರ ಸಾಗರದಲ್ಲಿ ಈಜುವುದಕ್ಕೋಸುಗ ಅವರನ್ನು ಪುರುಷರ ಮನೆಗಳಿಗೆ ಕಳುಹಿಸುವಂತಹ ತಾಯ್ತಂದೆಗಳು, ಈಜುಕಲಿಯದವರನ್ನು ಸಮುದ್ರಕ್ಕೆ ತಳ್ಳಿ ಅವರು ಮುಳುಗಿ ಮುಳುಗಿ ಎದ್ದು ಗೋಳಾಡುತ್ತಿರುವಾಗ ಕಣ್ಣಾರೆ ಕಂಡು ಪಶ್ಚಾತ್ತಾಪಪಟ್ಟು ಆಗ ಏನನ್ನು ಮಾಡಲಾರದೆ ನಿಂದೆಗೆ ಗುರಿಯಾಗಿ ವ್ಯಸನಪಡುವಂತಹ ಮೂಢರಂತೆ ತಾವೂ ಅಪಕೀರ್ತಿಯನ್ನು ಹೊಂದಿ ಪಶ್ಚಾತ್ತಾಪ ಪಡುವರು''. (ಆದೇ) ಈ ಹೆಣ್ಣು ಮಕ್ಕಳಿಗೆ ಶಿಕ್ಷಣದ ನೀಡದೇ ಮದುವೆ ಮಾಡುವುದು, ಅದರಿಂದುಂಟಾಗುವ ತೊಂದರೆಗಳನ್ನು ತಿಳಿಸುತ್ತಾರೆ. ಅದಕ್ಕಾಗಿ ಹೆಣ್ಣು ಸಮರ್ಥವಾಗಿ ಸಂಸಾರ ನಡೆಯಿಸಿಕೊಂಡು ಹೋಗಬೇಕೆಂದರೆ ಅವಳಿಗೆ ಮೊದಲು ಶಿಕ್ಷಣ ನೀಡಬೇಕು ಎನ್ನುವ ಅಗತ್ಯತೆಯನ್ನು ಸಾರುತ್ತದೆ.

ಈ ದೀರ್ಘವಾದ ಉಪನ್ಯಾಸದಲ್ಲಿ ಸ್ತ್ರೀ ಶಿಕ್ಷಣದ ಅಗತ್ಯವನ್ನು ಪ್ರತಿಪಾದಿಸುವುದು ಸುಖೀ ದಾಂಪತ್ಯಕ್ಕೆ ಇಬ್ಬರೂ ವಿದ್ಯಾವಂತರಾಗುವುದು ಯುಕ್ತವೆಂದು ಬಾಲೆಯರಿಗೆ ಶಿಕ್ಷಣ ನೀಡಿದ ಬಳಿಕ ಮದುವೆ ಮಾಡುವುದು ಉತ್ತಮವೆಂದು ಹೇಳುವುದು, ಈ ಬಗೆಯಲ್ಲಿ ಆಧುನಿಕ ವಿಚಾರಗಳನ್ನು ಪೌರಾಣಿಕ ಕತೆಯ ಚೌಕಟ್ಟಿನಲ್ಲಿ ನಿರೂಪಿಸಿರುವುದು ಅದರಲ್ಲೂ ಪುರಾಣದ ವಸ್ತುವನ್ನು ಕಾದಂಬರಿಯ ವಸ್ತುವನ್ನಾಗಿ ತೆಗೆದುಕೊಂಡು ಸಮಕಾಲೀನ ಸಮಾಜದಲ್ಲಿನ ಸ್ತ್ರೀಯರ ಸಮಸ್ಯೆಯನ್ನು ಸ್ತ್ರೀ ಶಿಕ್ಷಣದ ಬಗ್ಗೆ ನಿರೂಪಿಸಿರುವುದು ಮಹತ್ವದ ವಿಷಯವಾಗಿದೆ.

ಇವರ ಮತ್ತೊಂದು ಕೃತಿ 'ಸತ್ಯವತೀ' ಚರಿತ್ರೆಯಲ್ಲಿ ಸತ್ಯವತಿಯೇ ಕೇಂದ್ರಬಿಂದುವಾಗಿದ್ದಾಳೆ. ಸತ್ಯವತಿ ಹಗಲು ಗಂಡನ ಜೊತೆ ಮಾತನಾಡುವುದು ಅತ್ತೆಯ ದೃಷ್ಟಿಯಲ್ಲಿ ಅಪವಾದವಾಗುತ್ತದೆ. ಅವಳು ವಿದ್ಯಾವಂತಳಾಗಿರುವುದು ಅವಳ ಎರಡನೆಯ ತಪ್ಪು 'ಹೆಂಗಸು ಓದಿಕೆಟ್ಟಳು. ಗಂಡನು ಓದದೆ ಕೆಟ್ಟನು' ಎಂಬುದಾಗಿ ಆಕೆಯ ಆಕ್ಷೇಪವಿದೆ. ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡಿದರೆ ತಪ್ಪುದಾರಿ ಹಿಡಿಯುತ್ತಾರೆ. ಅವಳಿಗೆ ವಿದ್ಯಾಭ್ಯಾಸ ಯೋಗ್ಯವಲ್ಲ ಎಂದು ಭಾವಿಸಿಕೊಂಡಿರುವ ಸಮಾಜದ ಪರಿಸ್ಥಿತಿಯನ್ನು ವಿವರಿಸುತ್ತದೆ.

ಸ್ತ್ರೀಯರಿಗೆ ವಿದ್ಯೆಯು ನಿಷೇಧಿತ ವಿಚಾರ ಎನ್ನುವುದು ಯಶೋಧಮ್ಮನ ಅಭಿಪ್ರಾಯ. ಇಲ್ಲಿ ಯಶೋಧಮ್ಮ ಕೇವಲ ಪಾತ್ರವಾಗಿ ಮುಖ್ಯವಾಗುತ್ತಿಲ್ಲ. ಸಮಕಾಲೀನ ಸಮಾಜದ ಸಂಪ್ರದಾಯಸ್ಥ ಮನೋಭಾವನೆಯನ್ನು ಹೊಂದಿರುವ ಆಧುನಿಕತೆಯನ್ನು ವಿರೋಧಿಸುವ ಸಮುದಾಯದ ಪ್ರತೀಕವಾಗಿದ್ದಾಳೆ.

ಇದೇ ರೀತಿಯ ಸಮಾನ ಸನ್ನಿವೇಶಗಳನ್ನು ಹೊಂದಿದ ಮಲಯಾಳಂದ ಮೊದಲ ಸ್ವತಂತ್ರ ಸಾಮಾಜಿಕ ಕಾದಂಬರಿ ಕೃತಿಯಾಗಿ ಓ ಚಂದುಮೇನೂನ್ ಅವರ ಕಾದಂಬರಿ ಗಮನ ಸೆಳೆಯುತ್ತದೆ. ನಾಯರ್ ಸ್ತ್ರೀಯರು ಇಂಗ್ಲೀಷ್ ಶಿಕ್ಷಣದಿಂದ ಪಡೆಯುವ ಪ್ರಯೋಜನವನ್ನು ವ್ಯಕ್ತಪಡಿಸುತ್ತಾ ತರವಾಡಿನ ಹಿಡಿತದಲ್ಲಿದ್ದ ವಿವಾಹ ಕಾರ್ಯದಲ್ಲಿ ಸ್ತ್ರೀಯರನ್ನು ಸ್ವತಂತ್ರವಾಗಿರಿಸಲು ಇಂಗ್ಲೀಷ್ ವಿದ್ಯಾಭ್ಯಾಸದಿಂದ ಸಾಧ್ಯ ಎನ್ನುವುದನ್ನು ತೋರಿಸುವುದನ್ನು ಇಂದುಲೇಖಾ ಪಾತ್ರದ ಮೂಲಕ ಕಾದಂಬರಿಯು ತೋರಿಸುತ್ತದೆ. ಅದೇ ರೀತಿಯಾಗಿ ಶಿಕ್ಷಣ ಪಡೆಯದ ಕಲ್ಯಾಣಿಕುಟ್ಟಿಯ ಸಂಬಂಧ ಪ್ರಸಂಗವನ್ನು ಇಲ್ಲಿ ಗಮನಿಸಬಹುದು. ಇವೆರಡು ಪಾತ್ರಗಳ ಮೂಲಕ ಸ್ತ್ರೀಯರಿಗೆ ಅರಿವನ್ನು ಮೂಡಿಸುವಲ್ಲಿ ಸ್ತ್ರೀ ಶಿಕ್ಷಣದ ಅಗತ್ಯತೆಯನ್ನು ಹೇಳುವಲ್ಲಿ ಕಾದಂಬರಿಯ ಇಂದುಲೇಖಾಳಿಗೆ ಹನ್ನೆರಡು ವರ್ಷ ತುಂಬಿದಾಗ ಅವಳ ವಿವಾಹ ಮಾಡುವುದರ ಬಗ್ಗೆ ವಿಚಾರ ಬಂದಾಗ ಅವಳ ಮಾವ ಹೇಳುವ ಮಾತುಗಳು ಈ ರೀತಿ ಇವೆ. 'ಅವಳ ವಿದ್ಯಾಭ್ಯಾಸ ಪೂರ್ತಿಯಾಗಲಿಲ್ಲ'. ಅದು ಮುಗಿದ ನಂತರ ಮಾತ್ರ ಮದುವೆ ವಿಷಯ ಆಲೋಚನೆ ಮಾಡಲಾಗುವುದು. ಅವಳಿಗೆ ಶಿಕ್ಷಣ ನೀಡಿ ಯೋಗ್ಯ ಮಹಿಳೆಯನ್ನಾಗಿ ಮಾಡುವುದು ನನ್ನ ಜವಾಬ್ದಾರಿ. ಅವಳಿಗೆ ಆ ಯೋಗ್ಯತೆ ಬಂತು. ಎಂದಾದರೆ ಅವಳು ಸ್ವತಃ ತನಗೆ ಬೇಕಾದುದನ್ನೆಲ್ಲಾ ಬೇಕು ಬೇಕಾದಂತೆ ಮಾಡಿಕೊಳ್ಳುತ್ತಾಳೆ ಎಂದು ಹೇಳುತ್ತಾರೆ''.(ರಾಘವನ್ ಸಿ.;೨೦೦೦;ಪು೨) ಅಂದರೆ ಸ್ತ್ರೀ ಶಿಕ್ಷಣ ಪಡೆದರೆ ಪರಾವಲಂಬಿಯಾಗದೆ ಸ್ವತಂತ್ರವಾಗಿ ವಿಚಾರ ಮಾಡುವಂತಾಗುತ್ತಾಳೆ. ಸ್ತ್ರೀಗೆ ಶಿಕ್ಷಣ ನೀಡುವುದರಿಂದ ಆಗುವ ಪ್ರಯೋಜನಗಳನ್ನು ಇದು ವ್ಯಕ್ತಪಡಿಸುತ್ತದೆ.

ಮಾಧವನ್ ಮತ್ತು ಇಂದುಲೇಖಾಳ ಪಾತ್ರಗಳ ಸಂಭಾಷಣೆಯ ಮೂಲಕ, ಕಾದಂಬರಿಕಾರರು ಆ ಕಾಲದಲ್ಲಿ ಹೆಣ್ಣು ಶಿಕ್ಷಣ ಪಡೆದರೆ ಅವಳಿಗೆ ಸಮಾಜದಲ್ಲಿ ನೀಡುವ ಸ್ಥಾನ ಹಾಗೂ ಗ್ರಹಿಸುವ ವಿಧಾನವನ್ನು ಸ್ಪಷ್ಟಪಡಿಸುತ್ತಾರೆ.

''ಮಾಧವನ್:- ಕೇರಳದ ಸ್ತ್ರೀಯರು ಅನ್ಯದೇಶಗಳ ಸ್ತ್ರೀಯರಂತೆ ಪಾತಿವ್ರತ್ಯ ಧರ್ಮವನ್ನು ಆಚರಿಸೋದಿಲ್ಲ, ಗಂಡರನ್ನು ಸ್ವೀಕರಿಸೋ ವಿಷಯದಲ್ಲಿ ಲಂಗಿಲ್ಲ, ಲಗಾಮಿಲ್ಲ, ಇಷ್ಟಬಂದಂತೆ ಸ್ವೀಕರಿಸೋದು, ಬಿಡೋದು ಇದು ಅವರ ಪರಿಪಾಠ, ಇದಲ್ಲದೆ ಇನ್ನೂ ಕೆಲವು ಸ್ವಾತಂತ್ರ್ಯಗಳೆಲ್ಲ ಇವೆ. ಅದ್ರಿಂದಾಗಿ ಮಲಯಾಳದ ಸ್ತ್ರೀಯರಿಗೆ ಅಹಂಕಾರ ವಿಪರೀತ, ನಾನು ಹೇಳ್ತಿರೋ ವಿಷಯ ಇದೇಯೆ.

ಇಂದುಲೇಖಾ:- ಅಕಟಕಟಾ! ಭಾರೀ ಭರ್ಜರಿ ಮಾತುಗಳು ನಿಂಗೆ ಇಷ್ಟೆಲ್ಲಾ ವಿದ್ಯೆ, ಬುದ್ಧಿ ಇದ್ದೂ ಕೇರಳದ ಸ್ತ್ರೀಯರ ಕುರಿತು ನಿನ್ನ ಅಭಿಪ್ರಾಯ ಇದೇ ಏನು? ಅದ್ಭುತ. ಈ ವಿಷಯದಲ್ಲಿ ವಿವೇಕಶಾಲಿನಿಯಾದ ಒಬ್ಬ ಕೇರಳದ ಹೆಂಗಸು ನಿಂಗೆ ಕೊಡುವ ಉತ್ತರ ಏನು ಗೊತ್ತಾ?

ಹೇಳಿದ್ದೇನು, ಕೇರಳದ ಸ್ತ್ರೀಯರ ಪಾತಿವ್ರತ್ಯ ಧರ್ಮವನ್ನು ಆಚರಿಸೋದಿಲ್ಲ, ಅಂತಲೇ? ಅಯ್ಯೋ ಪಾಪ! ಇನ್ನಿತರ ದೇಶಗಳ ಸ್ತ್ರೀಯರಂತೆ ಕೇರಳದ ಸ್ತ್ರೀಯರೂ ಆಚರಿಸ್ತಾರೆ. ಬಹುತೇಕ ಮಂದಿ ಸ್ತ್ರೀಯರು ಆಚರಿಸ್ತಾರೆ. ಒಬ್ಬಿಬ್ರು ಪತಿವ್ರತಾಧರ್ಮ ಆಚರಿಸೋದಿಲ್ಲ ಎಂದು ಹೇಳಿದ್ರೆ ಅವ್ರು ವ್ಯಭಿಚಾರಿಣಿಯರೆಂದೇ ತಿಳಿಯಬೇಕು. ಕೇರಳದ ಸ್ತ್ರೀಯರೆಲ್ಲಾ ಅಥವಾ ಹೆಚ್ಚಿನೋರು ವ್ಯಭಿಚಾರಣಿಯರೆಂದು ನೀನು ಹೇಳ್ತೀಯಾ? ಹಾಗೆ ನೀನು ಹೇಳಿದ್ರೂ ನಾನು ಒಪ್ಪಲಾರೆ - ಖಂಡಿತ. ವ್ಯಭಿಚಾರ ಎಲ್ಲ ಕಡೆಯಲ್ಲೂ, ಯಾವ ಸಮಾಜದಲ್ಲೂ ಇರಬಹುದು.

ಆದ್ರೆ ನಾವು ನಾಯರ ಹೆಂಗಸರು ಅಂತರ್ಜನಗಳಂತೆ ಇತರ ಜನರಲ್ಲಿ ಮಾತಾಡದೆ ಶಿಕ್ಷಣ ಪಡೆಯದೆ, ಶುದ್ಧ ಪಶುಸಮಾನರಾಗಿ ನಡೆಯೋದಿಲ್ಲವಾದ ಕಾರಣ ವ್ಯಭಿಚಾರಿಣಿಗಳೆಂದಾಗಲಿ, ಪತಿವ್ರತಾಧರ್ಮ ಆಚರಿಸದವರು ಎಂದಾಗಲಿ ನೀನು ಗ್ರಹಿಸಿರಬಹುದು. ನೀನು ಹಾಗೇ ತಿಳಿದಿರುವಿ ಎಂದಾದ್ರೆ ಇಂಥ ತಪ್ಪು ಅಭಿಪ್ರಾಯ ಇನ್ನೊಂದಿಲ್ಲ. ಯುರೋಪ್, ಅಮೇರಿಕ ಮುಂತಾದ ದೇಶಗಳಲ್ಲಿನ ಅವಸ್ಥೆ ಯೋಚಿಸಿ ನೋಡು ಈ ದೇಶಗಳಲ್ಲಿ ಹೆಣ್ಣು ಶಿಕ್ಷಣ, ಅರಿವು, ಸ್ವಾತಂತ್ರ್ಯ ಎಲ್ಲದರಲ್ಲೂ ಗಂಡಿಗೆ ಸರಿಸಮಾನಗಳಾಗಿದ್ದಾಳೆ, ಅಲ್ವೆ? ಈ ಸ್ತ್ರೀಯರೆಲ್ಲ ಹಾದರಗಿತ್ತಿಗಳೇ? ನಮ್ಮ ಸುಂದರಿಯಾದೊಬ್ಬಳು ಹೆಣ್ಣು ಮಗಳಿಗೆ ಸ್ವಲ್ಪ ವಿದ್ಯಾಭ್ಯಾಸ ಇದೆ ಎಂದಿರಲಿ ಅವಳಲ್ಲಿ ಮಾತಾಡುತ್ತಾ ಸಂತೋಷದಲ್ಲಿರುವ ಗಂಡಸರೆಲ್ಲರೂ ಅವಳ ಮಿಂಡರು ಎಂದು ಕೂಡ್ಲೆ ಊಹಿಸಿ ಬಿಡ್ತಾರೆ. ಇದ್ರಲ್ಲಿ ನಿಜಾಂಶ ಎಷ್ಟು? ಸಂಗೀತ ಕಲಿತ ಹೆಣ್ಣು ಮಗಳೊಬ್ಬಳ ಹಾಡೊಂದನ್ನು ಹತ್ತು ಹನ್ನೆರಡು ಗಂಡಸ್ರು ಒಟ್ಟಿಗೆ ಕೂತು ಕೇಳಿದರೆಂದ್ರೆ ಈ ಹನ್ನೆರಡೂ ಮಂದಿ ಅವಳ ರಹಸ್ಯ ಕಾಮುಕರು ಎಂದು ಹೇಳುತ್ತೀರಿ ನಿಮ್ಮಂಥ ಮೂರ್ಖರು ಈ ಗಂಡಸಾದ್ರೂ ಹಾಗೆಂದೇ ಭಾವಿಸಲಿಕ್ಕೂ ಭಾವಿಸ್ತಾರೆ. ನೀವೇ ಹೀಗೆ ಪ್ರಚಾರ ಮಾಡ್ತೀರಿ.(ಅದೇ ಪು.೮)

ಇಂದುಲೇಖಾ ಆಡುವ ಮಾತುಗಳಿಂದ ಸ್ತ್ರೀ ಸ್ವಾತಂತ್ರ್ಯವನ್ನು ಅವಳ ಸುಧಾರಿತ ಸಮಾಜವನ್ನು ಅವಳು ಗ್ರಹಿಸಿದ ರೀತಿ ಮಾಧವನ ಟೀಕೆಗೆ ಅವಳು ನೀಡುವ ತೀಕ್ಷ್ಣ ಪ್ರತಿಕ್ರಿಯೆ ಇತ್ಯಾದಿಗಳು ವ್ಯಕ್ತವಾಗುತ್ತವೆ. ಕೇರಳದ ಸ್ತ್ರೀಯರನ್ನು ಸಮರ್ಥಿಸಿಕೊಳ್ಳುವ ದಿಟ್ಟತನ, ಶಿಕ್ಷಣದಿಂದಾಗಿ ಎನ್ನುವುದು ಸ್ಪಷ್ಟಪಡಿಸುತ್ತದೆ. ಈ ಮನೋಭಾವನೆಗಳು ಅವಳಲ್ಲಿ ಕಾಣಿಸಿಕೊಳ್ಳಲು ಅವಳು ಪಡೆದ ಶಿಕ್ಷಣವೇ ಕಾರಣವೆನ್ನಬಹುದು.

ತಮಿಳು ಕೃತಿಯಾದ (ಕಮಲಾಂಬಾಳ್) 'ಬಾಳಿನ ರಹಸ್ಯ'ದಲ್ಲಿ ಬಾಲಕಿಯರಿಗೆ ವಿದ್ಯೆಯನ್ನು ಕಲಿಸುವ ಸನ್ನಿವೇಶವೂ ಚಿತ್ರಿತವಾಗಿವೆ.

'''ಕಲ್ಯಾಣೀ' ಎಂದು ಕರೆದಳು. ಆ ಮಗು ನಮ್ಮಣ್ಣ ಕರೆಯುತ್ತಾರೆ ಎಂದು ಹೇಳುತ್ತಾ ತನ್ನ ಸ್ನೇಹಿತೆಯರನ್ನು ಬೀಳ್ಕೊಂಡು, ಕೈಯಲ್ಲಿ ಪುಸ್ತಕಗಳನ್ನು ಹಿಡಿದುಕೊಂಡು ಬಂದು ನಿಂತಳು''. ಒಂದು ವಿಷಯ - ಪುಸ್ತಕಂ ಹಸ್ತಭೂಷಣಂ ಎಂದ ಹಾಗೆ ನಮ್ಮ ಕಲ್ಯಾಣಿ ಅಣ್ಣ ಅವರನ್ನು ಕಾಣುವಾಗಲೆಲ್ಲಾ ಕೈಯಲ್ಲಿ ಪುಸ್ತಕವಿಲ್ಲದೆ ಇರುವುದಿಲ್ಲ ಎಂದು ಹೇಳಿದರು''. (ಸಂಪದ್ಗಿರಿರಾಯರು; ೧೯೫೫;ಪುಟ; ೩,೪,). ಸ್ತ್ರೀ ಪುರುಷ ಸಂವಾದದಲ್ಲಿ ಇಬ್ಬರು ಸಂಭಾಷಣೆ ಮಾಡುವಾಗ ಅವರ ಮಗಳ ಬಗ್ಗೆ ಮಾತನಾಡುತ್ತಾ ವಿದ್ಯೆಯ ಮಹತ್ವ ವ್ಯಕ್ತವಾಗುತ್ತದೆ.

ತುಳು ಕೃತಿಯಲ್ಲಿ ಬರುವ ಕಮಲೆ ವಿಧವೆಯಾದರೂ ಅವಳಿಗೆ ನೀಡುವ ಶಿಕ್ಷಣವು ಸುಧಾರಣಾ ಪರ ಕಾಳಜಿಯನ್ನು ವ್ಯಕ್ತ ಪಡಿಸುತ್ತದೆ. ಅವಳು ಮದ್ರಾಸಿನ ಮೇರಿ ಕಾಲೇಜಿನಲ್ಲಿ ಬಿ. ಎ. ಶಿಕ್ಷಣ ಪೂರೈಸುತ್ತಾಳೆ. ಇವಳಿಗೆ ಮರುಳಾದ ನಾರಾಯಣನನ್ನು ಕಮಲೆ ತಿರಸ್ಕರಿಸುತ್ತಾಳೆ. ಇಲ್ಲಿ ಹೆಣ್ಣಿನ ಅವಸ್ಥೆಯ ಎರಡು ಮುಖಗಳನ್ನು ಕಾಣಬಹುದು. ನಾರಾಯಣನ ಹೆಂಡತಿ ಗಂಗೆ ಅವಿದ್ಯಾವಂತೆಯಾಗಿರುತ್ತಾಳೆ. ಆದ್ದರಿಂದ ಅನಾಗರಿಕ ಹೆಣ್ಣೆಂದು ಅವಳಲ್ಲಿ ಇವನಿಗೆ ತಿರಸ್ಕಾರ ಮನೋಭಾವನೆ ಬೆಳೆದಿದೆ. ಕಮಲೆ ಸುಶಕ್ಷಿತ ಹೆಣ್ಣು ಹಾಗಾಗಿ ಅವಳ ಹಿಂದೆ ಬೀಳುತ್ತಾನೆ. ಇಲ್ಲಿ ಶಿಕ್ಷಿತಳಾದ ಕಮಲೆ ನಾರಾಯಣನನ್ನು ಸುಲಭವಾಗಿ, ತನ್ನ ಚಾಣಕ್ಷತನದಿಂದ ನಿರಾಕರಿಸುತ್ತಾಳೆ. ಆದರೆ ಗಂಗೆ ತನ್ನ ಗಂಡನ ಮೋಸಕ್ಕೆ ಬಲಿಯಾಗಿ ಸಾಯುತ್ತಾಳೆ. ಕಮಲೆಯನ್ನು ಮದುವೆಯಾಗುವ ಆಸೆಯಲ್ಲಿ ನಾರಾಯಣ ಗಂಗೆಗೆ ತಿನ್ನುವ ಪದಾರ್ಥದಲ್ಲಿ ವಿಷ ಹಾಕಿ ಎಂದೆಂದೂ ತೋರಿಸದ ಪ್ರೀತಿಯನ್ನು ಆ ದಿನ ತೋರಿಸುತ್ತಾನೆ. ಇಂಥ ಒಂದು ನಟನೆಯ ಪ್ರೀತಿಯನ್ನು ಅರಿಯದವಳಾದ ಗಂಗೆ ಅವನ ಮಾತನ್ನು ನಿಜವೆಂದು ನಂಬಿ ಅವನು ಕೊಟ್ಟ ಪದಾರ್ಥ ಸೇವಿಸಿ ಸಾಯುತ್ತಾಳೆ. ಇಂತಹ ಸೂಕ್ಷ್ಮತೆ ಅರಿಯಲು ಸಂದರ್ಭತೆಗಳನ್ನು ಅವಲೋಕಿಸುವ, ಜಾಣ್ಮೆ ಬರಲು ಸ್ತ್ರೀಗೆ ಶಿಕ್ಷಣ ಅಗತ್ಯ ಎನ್ನುವುದನ್ನು ಕಾದಂಬರಿಯು ವ್ಯಕ್ತಪಡಿಸುತ್ತದೆ. ಸ್ತ್ರೀ ಶಿಕ್ಷಣದ ಬಗ್ಗೆ ಪರವಾಗಿರುವ ಲೇಖಕರು ಅದರ ಅವಶ್ಯಕತೆ ಎಷ್ಟಿದೆ ಎನ್ನುವುದನ್ನು ವ್ಯಕ್ತಪಡಿಸುತ್ತಾರೆ.

ಕಮಲೆಯು ತನ್ನ ವಿದ್ಯಾಭ್ಯಾಸ ಮುಗಿದ ನಂತರ ಸ್ವಾತಂತ್ರ ಚಳುವಳಿಯಲ್ಲಿ ಭಾಗವಹಿಸಲು ಮುಂದಾಗುತ್ತಾಳೆ. ತನ್ನ ಸ್ನೇಹಿತೆಯರೊಂದಿಗೆ ಖಾದಿ ಬಟ್ಟೆಯನ್ನು ತೊಟ್ಟು ಚಳುವಳಿಯಲ್ಲಿ ಹೋರಾಟ ನಡೆಸುತ್ತಾಳೆ. ಈ ರೀತಿ ಅವಳಲ್ಲಿ ಬದಲಾವಣೆ ಮೂಡಲು ಕಾರಣ ಅವಳು ಪಡೆದ ಶಿಕ್ಷಣದಿಂದ ಎಂದು ಹೇಳಬಹುದು.

೪.೫ ವಿಧವಾ ವಿವಾಹ

ಬ್ರಿಟೀಷರ ಆಗಮನದ ನಂತರ ಅವರ ಆಡಳಿತದ ಪರಿಣಾಮವಾಗಿ ಬದಲಾಗುತ್ತಿದ್ದ ಸಾಮಾಜಿಕ, ಸಾಂಸ್ಕೃತಿಕ ಪರಿಸರದಲ್ಲಿ ಬಾಲ್ಯವಿವಾಹ, ವಿಧವಾ ವಿವಾಹ, ಪದ್ಧತಿಯು ಹೆಚ್ಚು ಚರ್ಚಿತವಾದ ವಿಚಾರವಾಗಿದೆ. ಸಮಾಜದಲ್ಲಿರುವ ವಿಧವೆಯರ ಬಾಳು ಕೇಶಮುಂಡನ, ಕಠಿಣ ಜೀವನ, ಮುಂತಾದ ಪದ್ಧತಿಗಳೆಲ್ಲವೂ ಪಾಶ್ಚಾತ್ಯ ಸಂಸ್ಕೃತಿಗೆ ವಿಚಿತ್ರವೆನಿಸಿದವು. ಪತಿ ಮರಣ ಹೊಂದಿದ್ದ ತಕ್ಷಣವೇ ಅವಳನ್ನು ಅಮಂಗಳತಿ, ಅಶುಭಳೆಂದು ಶಾಸ್ತ್ರದ ಹೆಸರಿನಲ್ಲಿ ಕೇಶಮುಂಡನ ಮಾಡಿ, ಬಿಳಿಬಟ್ಟೆಯನ್ನು ಧರಿಸಿಕೊಳ್ಳುವಂತೆ ಒತ್ತಾಯಪಡಿಸುತ್ತಾರೆ. ಸ್ತ್ರೀಯರ ಸೌಂದರ್ಯ ವಿಕೃತಗೊಳಿಸುವುದರ ಬಗೆಗೆ ತೀವ್ರವಾದ ವಿರೋಧ ಅಂದಿನ ದಿನಗಳಲ್ಲಿ ಸಾಮಾಜಿಕವಾಗಿಯೂ ಪ್ರಕಟವಾಗಿದೆ. ವಿಧವೆಯರ ಜೀವನವು ಪ್ರಾಣಿಗಳಿಗಿಂತ ಹೀನವಾಗಿದ್ದುದರಿಂದ ಈ ಪದ್ಧತಿಯನ್ನು ತೊಲಗಿಸಬೇಕೆಂದು ಪಣತೊಟ್ಟವರು ರಾಜರಾಮಮೋಹನರಾಯ್, ಈಶ್ವರ ಚಂದ್ರ ವಿದ್ಯಾಸಾಗರ, ಜ್ಯೋತಿಬಾಪುಲೆ, ಬಾಬಾ ಪದಮುಂಜೆ ಮತ್ತಿತರ ಸಮಾಜ ಸುಧಾರಕರು. ಸಮಕಾಲೀನ ದಿನಗಳಲ್ಲಿ ಬಹು ಚಿಂತನೆಗೆ ಒಳಗಾಗಿರುವ ಸಮಸ್ಯೆ ಇದಾಗಿತ್ತು. ವರದಕ್ಷಿಣೆ ಬಹುಪತ್ನಿತ್ವ ವಿಷಮ ವಿವಾಹದಂತಹ ಪಿಡುಗುಗಳು ಹೆಣ್ಣು ಮಕ್ಕಳನ್ನು ಹೇಗೆ ಬಲಿತೆಗೆದುಕೊಳ್ಳುತ್ತಿದ್ದವು ಎನ್ನುವುದನ್ನು ವಿದ್ಯಾಸಗರರು ಕಂಡುಕೊಂಡಿದ್ದರು. ಈ ವಿಷಯಗಳ ಕುರಿತಾಗಿ ಸಾಮಾಜಿಕ ಜಾಗೃತಿ ಮೂಡಿಸಲು ಅವರು ವಿಶೇಷವಾಗಿ ಶ್ರಮಿಸಿದರು. ಶಾಸ್ತ್ರಗ್ರಂಥಗಳನ್ನು ಅಧ್ಯಯನ ಮಾಡಿ ಶಾಸ್ತ್ರಾಧಾರಗಳ ಮೂಲಕವಾಗಿಯೇ ವಿಧವಾ ವಿವಾಹದ ಸಮರ್ಥನೆಯನ್ನು ಮಾಡಿದರು. ವಿದ್ಯಾಸಾಗರರು ವಿಧವಾ ವಿವಾಹವನ್ನು ಸಮರ್ಥಿಸಿ ಬರೆದ ಗ್ರಂಥ ಸಾವಿರ ಪ್ರತಿಗಳಲ್ಲಿ ಮಾರಾಟವಾಯಿತು. ಅದು ರಾಷ್ಟ್ರದ ಮೂಲೆ ಮೂಲೆಗಳನ್ನು ತಲುಪಿತು. ೧೮೫೬ ರಲ್ಲಿ ಪ್ರಕಟವಾದ ಅವರ ಕೃತಿ Marriage of Hindu widows ಒಂದು ರಾಷ್ಟ್ರೀಯ ದಾಖಲೆಯಾಗಿ ನಿಲ್ಲುತ್ತದೆ. ವಿದ್ಯಾಸಾಗರರೇ ಹೇಳಿದಂತೆ ನಾನು ಜೀವಮಾನದಲ್ಲಿ ಮಾಡಿದ ಒಳ್ಳೆ ಕಾರ್ಯಗಳಲ್ಲಿ ಅತ್ಯಂತ ಉದಾತ್ತವಾದ ಕಾರ್ಯವೆಂದರೆ ವಿಧವಾ ಪುನರ್ವಿವಾಹ (ಬೋಸ್ ಎಸ್. ಕೆ. ೧೯೬೯- ಪುಟ ೧೨) ಬಂಗಾಳದಲ್ಲಿ ಪ್ರಚಲಿತವಿದ್ದ ಬಹುಪತ್ನಿತ್ವವನ್ನು ಟೀಕಿಸುತ್ತಾ ವಿದ್ಯಾ ಸಾಗರರು ಎರಡು ಗ್ರಂಥಗಳನ್ನು ಬರೆದಿದ್ದರು.

ಇವರು ತಮ್ಮ ಜೀವನದಲ್ಲಿ ಸ್ತ್ರೀಯರ ಮಾನವೀಯ ಹಕ್ಕುಗಳಿಗಾಗಿ ನಡೆಸಿದ ಹೋರಾಟದ ಬಗೆ ಸಿ. ಎಚ್. ಹೀಮನಾಥ ಎಂಬುವರು ಹೇಳುವ ಮಾತು - ''ಭಾರತದ ಸಮಾಜ ಸುಧಾರಣೆಯ ಇತಿಹಾಸದಲ್ಲಿ ವಿಧವಾ ಪುನರ್ ವಿವಾಹದ ಆಂದೋಲನವು ಒಂದು ಮಹತ್ವದ ಭಾಗವಾಗಿದೆ. ಸ್ವತಂತ್ರ ಭಾರತದ ಸ್ತ್ರೀಯರು ಅಲ್ಲಿಯವರೆಗೆ ಅನಾಮಿಕವಾಗಿದ್ದ ಒಂದು ಸಣ್ಣ ಹಳ್ಳಿಯಿಂದ ಬಿರಸಿಂಘಾದ ಈ ಸರಳ ಸದಾ ಪೋಷಾಕಿನ ಪಂಡಿತನನ್ನು ಬಹಳ ಕೃತಜ್ಞತೆಯಿಂದ ನೆನೆಯಲು ಬಲವಾದ ಕಾರಣಗಳಿವೆ. ಭಾರತೀಯ ಸ್ತ್ರೀ ಕುಲಕ್ಕೆ ಯಾರೂ ಎಂದೆಂದಿಗೂ ಮಾಡಲಾರದ ಉಪಕಾರ ಮಾಡಿದ್ದ ಮಹಾವ್ಯಕ್ತಿ ಈಶ್ವರ ಚಂದ್ರ ವಿದ್ಯಾಸಾಗರರು''. (ಬೋಸ್, ಎಸ್. ಕೆ. ೧೯೬೯ ಪು;೮೦) ಇವರ ಮನೋಭಾವವು ಭಾರತದ ಇತರ ಭಾಗಗಳಲ್ಲಿ ಅಬಲೆಯರ ಗೋಳನ್ನು ತೊಡೆಯುವುದಕ್ಕೆ ಸುಧಾರಕರು ಹೋರಾಡುವಂತೆ ಉತ್ತೇಜನವನ್ನು ನೀಡಿತು. ಸ್ತ್ರೀಯರಿಗೆ ಸಾಮಾಜಿಕ ಸಮಸ್ಯೆಗಳ ನಿವಾರಣೆಗೆ ಶ್ರಮಿಸಿದವರನ್ನು ವಿದ್ಯಾಸಾಗರರ ಹೆಸರಿನಿಂದ ಕರೆಯುವ ರೂಢಿ ಬಂತು. ವೀರೇಶಲಿಂಗಂ ಪಂತುಲು ಅವರನ್ನು ಈಶ್ವರ ಚಂದ್ರ ವಿದ್ಯಾಸಾಗರರು ಎಂದು ಹೇಳುವ ರೂಡಿ ಇತ್ತೆಂದು ತಿಳಿಯುತ್ತದೆ. ಈ ಪರಿಧಿಯಲ್ಲಿ ೧೮೮೧ರಲ್ಲಿ ಪಂತುಲು ಅವರ ಮನೆಯಲ್ಲಿ ಆಂಧ್ರದ ಮೊದಲ ವಿಧವಾ ವಿವಾಹ ನಡೆಯಿತು.

''ಮದ್ರಾಸಿನಲ್ಲಿ ಹಾಗೂ ರಾಜ ಮಹೇಂದ್ರಿಯಲ್ಲಿ ವಿಧವಾ ಗೃಹಗಳನ್ನು ತೆರೆಯುವಲ್ಲಿ ಅವರ ಶ್ರಮ ಅಪಾರವಾಗಿತ್ತು. ತಮ್ಮ ಬರವಣಿಗೆಯನ್ನು ಸಮಾಜ ಸುಧಾರಣೆಗೆ ಮೀಸಲಿಟ್ಟ ಪಂತುಲು ಅವರು ಸುಮ್ಮನೆ ಪುಸ್ತಕಗಳನ್ನು ಪ್ರಕಟಿಸುವುದರಲ್ಲಿ ಪ್ರಯೋಜನವಿಲ್ಲ ಎಂದು ನಂಬಿದವರು. ಸತ್ಯ ಎಂದು ತಿಳಿದದ್ದನ್ನು ಧೈರ್ಯದಿಂದ ಕಾರ್ಯರೂಪಕ್ಕೆ ತರುವುದು ಮುಖ್ಯವಾದ ಅನಿವಾರ್ಯ ವಿಷಯ'' (ನಾರ್ಲಾ ವಿ. ಆರ್.; ೧೯೭೩;ಪು೬) ಎಂದು ತಮ್ಮ ದಿನಚರಿಯಲ್ಲಿ ದಾಖಲಿಸಿದರು ಇದನ್ನು ನಿವಾರಿಸಲು ವಿಧವೆಯರಿಗೆ ಪುನರ್ವಿವಾಹವಾಗುವುದೇ ಸೂಕ್ತ ಪರಿಹಾರವೆಂದು ಕಾದಂಬರಿಗಳ ಮುಖಾಂತರ ಸಾರಿ ಹೇಳುವುದುನ್ನು ಇಲ್ಲಿ ಗಮನಿಸಬಹುದು.

ಈ ಆರಂಭ ಘಟ್ಟದ ಕಾದಂಬರಿಗಳಲ್ಲಿ ಬಾಲ್ಯವಿವಾಹದ ಬಗ್ಗೆ, ವಿಧವಾ ವಿವಾಹದ ಬಗೆಗೆ ಮೂಡಿಬಂದ ಧೋರಣೆಗಳು ಸ್ವಾಗತಾರ್ಹವಾಗಿವೆ. ಹಾಗೆಯೇ ಸ್ತ್ರೀ ಶಿಕ್ಷಣವನ್ನು ಪ್ರೋತ್ಸಾಹಿಸುವ ಅಂಶಗಳು ಕಂಡುಬರುತ್ತವೆ. ಒಟ್ಟಾರೆ ಸ್ತ್ರೀ ಏಳ್ಗೆಯ ಬಗ್ಗೆ ಆಶಾದಾಯಕವಾದ ಅಂಶಗಳೇ ಮೂಡಿ ಬಂದಿವೆ.

ಈ ನಿಟ್ಟಿನಲ್ಲಿ ಗುಲ್ವಾಡಿ ವೆಂಕಟಾರಾಯರು ಬರೆದ ಕನ್ನಡದ ಮೊದಲ ಸಾಮಾಜಿಕ ಕಾದಂಬರಿ 'ಇಂದಿರಾಬಾಯಿ'ಯಲ್ಲಿ ಬರುವಂತ 'ಇಂದಿರೆ'ಯ ಪಾತ್ರ ಬಾಲ್ಯ ವಿವಾಹ ಮತ್ತು ವಿಧವಾ ವಿವಾಹದ ಬಗ್ಗೆ ತಳೆದಿರುವ ಧೋರಣೆಗಳನ್ನು ಸ್ಪಷ್ಟಪಡಿಸುತ್ತದೆ. ಸಮಾಜ ಸುಧಾರಣಾವಾದಿ ನಿಲುವನ್ನು ವ್ಯಕ್ತಪಡಿಸುತ್ತದೆ.

ವೀರೇಶ ಲಿಂಗಂಪಂತುಲು ಅವರ 'ಪ್ರಹಸನ ತರಂಗಂ' (ಅನು: ನಂ. ಶ್ರೀಕಂಠಶಾಸ್ತ್ರಿ - ೧೯೧೦) ವಿಧವೆಯರ ಸಮಸ್ಯೆಗಳನ್ನು ಅಭಿವ್ಯಕ್ತಿಸುತ್ತಾರೆ . ಇದರಲ್ಲಿ 'ವಿಸ್ಮಯ ವಿವಾಹ'ವೆಂಬ ಮೂರನೆಯ ತರಂಗದಲ್ಲಿ ವಿಷಮ ವಿವಾಹದ ವಿಚಾರ ಮೂಡಿ ಬಂದಿದೆ. ಅಂದರೆ ಮುದುಕನಿಗೆ ಮದುವೆಯಾಗಿ ಐದು ಮಂದಿ ಹೆಂಡತಿಯರು ಸಾವನ್ನಪ್ಪುತ್ತಾರೆ. ಮುದುಕನಿಗೆ ವಯಸ್ಸಾದರೂ ಆರನೆಯ ಮದುವೆ ಮಾಡಿಕೊಳ್ಳಬೇಕೆಂದು ನಿರ್ಧರಿಸಿದ್ದಾನೆ.

''ಕುಕ್ಷಿ:- ಈ ಶತ ವೃದ್ಧನಿಗೆ ಇನ್ನಾರು ಹೆಣ್ಣು ಕೊಡುವರು?

ಕರು:- ಯಾವ ಮಹಾನುಭಾವರಾದರೂ ಕೊಡುವರು ಸಹಸ್ರ ಮಾಸ ಜೀವಿಯಾದ ಆತನಿಗೆ ಹೆಣ್ಣು ಕೊಡುವುದೇ ಶ್ರೇಷ್ಠತರ. ಅಂತವನನ್ನು ಅಳಿಯನಾಗುವ ಭಾಗ್ಯವು ಎಷ್ಟು ಪುಣ್ಯ ಮಾಡಿದರೆ ಲಭಿಸಿತು? ಇದೂ ಅಲ್ಲದೆ ಹಣವು ಕಹಿಯೋ? ಹಣವನ್ನು ಕೊಟ್ಟರೆ ವೆಚ್ಚದ ಮೇಲಿರುವ ದೇವರಾದರೂ ಇಳಿದು ಬರುವನು ಹಾಗೂ ಹೆಣ್ಣನ್ನು ಯಾರು ಕೊಡದಿದ್ದರೆ ನನ್ನ ಮಗಳನ್ನು ಕೊಟ್ಟು ಆ ಕನ್ಯಾದಾನ ಫಲವನ್ನು ನಾನೇ ದಕ್ಕಿಸಿ ಕೊಳ್ಳುವೆನು.

ಕನ್ಯೆಯನ್ನು ಕೊಟ್ಟು ಹಣವನ್ನು ತೆಗೆದುಕೊಂಡರೆ ಪಾಪ ಬರುವುದಾದರೂ ಸಾಲಂಕಾರ ಕನ್ಯಾಧಾನವನ್ನು ಮಾಡಿದರೆ ಸಹಸ್ರಯಜ್ಞಗಳ ಫಲವು ಬರುವುವೆಂದು ಶಾಸ್ತ್ರಗಳು ಹೇಳುವುವು (ಶ್ರೀಕಂಠಶಾಸ್ತ್ರಿ ;೧೯೧೧ - ಪು. ೧೩) ಹೀಗೆ ಕರುಣಾಕರ ಶಾಸ್ತ್ರಿ ತಮಗೆ ಇದ್ದ ಒಬ್ಬ ಮಗಳನ್ನು ಈ ಮುದುಕ ಸಾಯುವುದರೊಳಗೆ ಇವನಿಗ ಕೊಟ್ಟು ಮದುವೆ ಮಾಡಿಬಿಡಬೇಕೆಂಬ ತರಾತುರಿಯಲ್ಲಿರುತ್ತಾನೆ. ಇಲ್ಲಿ ಬಾಲಕಿಯನ್ನು ತಮ್ಮ ಹಣದ ದಾಹಕ್ಕಾಗಿ ಅವಳ ಬದುಕನ್ನೇ ಬಲಿಕೊಡುತ್ತಾರೆ. ಇದರಿಂದ ಬಾಲವಿಧವೆಯರ ಸಂಖ್ಯೆ ಹೆಚ್ಚುತ್ತದೆ. ಇದರಿಂದ ಅವಳ ಸಮಸ್ಯೆ ಹೆಚ್ಚಾಗುತ್ತದೆ.

''ಕುಕ್ಷಿ:- ಇವೆಲ್ಲವೂ ಸರಿಯೇ ಆದರೂ ಉಚಿತಾನುಚಿತಗಳನ್ನರಿತಿರುವ ನಿಮ್ಮ ಮಗಳು ಆತನನ್ನು ಮದುವೆಯಾಗುವುದಕ್ಕೆ ಒಪ್ಪುವಳೇ?

ಕರು:- ಒಪ್ಪದೆ ಏನು ಮಾಡುವಳು? ಇಲ್ಲದ ಆಟಗಳನ್ನು ತೋರಿಸಿ ವಿಘ್ನಮಾಡ್ಡುವಳೇನೋ ಎಂಬ ಶಂಕೆಯಿಂದಲೇ ನಾನವಳನ್ನು ಗರ್ಲ್ ಸ್ಕೂಲಿಗೆ ಕಳುಹಿಸಲಿಲ್ಲ. ಒಪ್ಪುವುದಕ್ಕೂ ಒಪ್ಪದಿರುವುದಕ್ಕೂ ಅವಳಿಗೆ ಸ್ವಾತಂತ್ರ್ಯವೆಲ್ಲಿರುವುದು? 'ನಸ್ತ್ರೀ ಸ್ವಾತಂತ್ರ್ಯಮರ್ಹತಿ' ಎಂದು ಮನುಸ್ಮೃತಿಯಲ್ಲಿರುವುದು, ನೀವು ಅದನ್ನು ಕೇಳಿಲ್ಲವೇ? 'ಪಿತಾರಕ್ಷತಿ ಕೌಮಾರೇ' ಎಂದು ಹೇಳಿರುವನಾದುದರಿಂದ ತಂದೆಯಾದವನು ಹೆಣಕ್ಕೆ ಕೊಟ್ಟು ಮದುವೆ ಮಾಡಿದರೂ ಮಗಳು ಒಪ್ಪಲೇಬೇಕು. ಅವಳಿಗೆ ಮಾತ್ರ ಹಣವು ಕಹಿಯೇನು? ಈಗ ಆ ಮುದುಕಯ್ಯನಿಗಿರುವ ತುಸು ಪ್ರಾಣವೂ ಹಾರಿ ಹೋದ ತರುವಾಯ ಹಣವನ್ನಿಟ್ಟುಕೊಂಡು ಹಾಯಾಗಿ ಚಕ್ರವರ್ತಿನಿಯ ಹಾಗೆ ಸಮಸ್ತ ಸೌಖ್ಯಗಳನ್ನು ಅನುಭವಿಸುತ್ತಾ ಸೌಖ್ಯವಾಗಿರಬಹುದು''. (ಅದೇ - ಪು. ೧೫,೧೬,೧೯೧) ಹೀಗೆ ಮಗಳ ಮದುವೆ ಮಾಡುವಲ್ಲಿ ಅವಳ ಒಪ್ಪಿಗೆಗೆ ಅಭಿಪ್ರಾಯಕ್ಕೆ ಮನ್ನಣೆಯಿಲ್ಲ ಅವಳು ಸ್ವಂತವಾಗಿ ವಿಚಾರ ಮಾಡುವ ಸ್ವಾತಂತ್ರ್ಯವನ್ನು ನೀಡಿಲ್ಲ. ಸ್ತ್ರೀ ಒಂದು ಪ್ರಾಣಿಯಂತೆ, ಚಿತ್ರಿತವಾಗಿರುವುದನ್ನು ಇಲ್ಲಿ ಕಾಣಬಹುದು.

ವಿಧವೆಯರ ಕಟ್ಟುಪಾಡುಗಳನ್ನು ಕಿತ್ತೆಗೆದು ಅವರಿಗೆ ವಿವಾಹ ಮಾಡಬಯಸುವವರಿಗೆ ವಿರೋಧವಾದ ನಿಲುವು ಇಲ್ಲಿನದು ವೈಧವ್ಯ ಎನ್ನುವುದು ಪೂರ್ವಾರ್ಜಿತ ಕರ್ಮಫಲ ಎಂಬ ಪ್ರಾಚೀನ ನಂಬಿಕೆಯೇ ಇಲ್ಲಿನದಾದ ಮೇಲೆ ಅದನ್ನು ಒಪ್ಪಿಕೊಂಡು ಅದಕ್ಕೆನುಗುಣವಾಗಿ ಬಾಲವಿಧವೆಯರ ಸಂಖ್ಯೆ ಹೆಚ್ಚಾದಂತೆ ಅವರ ಸಮಸ್ಯೆಗಳು ಉದ್ಭವವಾಗುತ್ತವೆ.

''ಈಗ ಸ್ತ್ರೀ ಪುನರ್ವಿವಾಹ ಸಮಾಜಗಳೆಂದು ನಮ್ಮ ಭಾಗಕ್ಕೆ ಅವು ಬೇರೆ ಮೃತ್ಯುದೇವತೆಗಳಾಗಿ ಪರಿಣಮಿಸಿರುವವು. ಸಣ್ಣ ಹುಡುಗಿಯರನ್ನು ಮದುವೆಯಾದ ನನ್ನಂತಹ ವೃದ್ಧರಿಗೆಲ್ಲ ಅವುಗಳ ಹೆಸರನ್ನು ಕೇಳಿದರೆ ಮೈ ನಡುಗುವುದು. ಹೆಣ್ಣು ಮುಂಡೆಯರಿಗೆ ಎರಡನೆಯ ಮದುವೆಯು ಯಾವ ಕಾಲದಲ್ಲಾದರೂ ಉಂಟೆ ಸ್ವಾಮಿ? ಈಗ ಈ ಹಾಳಾದ ಕಾಲದಲ್ಲಿ ಎಲ್ಲಾ ಅಕಾರ್ಯಗಳೂ ನಡೆಯುತ್ತಿರುವವು. ಒಳ್ಳೆಯ ಕಾಲ ಬಂದಿತು. ಇನ್ನು ವರ್ಣಾಶ್ರಮಧರ್ಮಗಳು ನಿಲ್ಲುವ ಸಂಭವವಿಲ್ಲ''. (ಅದೇ - ಪು-೨೦)

ಈ ರೀತಿಯಲ್ಲಿ ಅದರ ನಿವಾರಣೆಗೆ ಪುನರ್ವಿವಾಹ, ವಿಧವಾ ವಿವಾಹದಂತೆ, ಸುಧಾರಣೆಗಳುಳ್ಳ ಸಮಾಜಗಳು ಜಾರಿಗೆ ಬರುತ್ತಿರುವಲ್ಲಿ ಅವುಗಳಿಗೆ ಅಡ್ಡಿ ಮಾಡುವ ಸಂಪ್ರದಾಯವಾದಿಗಳು ಶಾಸ್ತ್ರಜ್ಞರು ಬರುತ್ತಾರೆ. ಅವರು ಇಂತಹ ಸಮಾಜಗಳನ್ನು ನಿಂದನೆಗೆ ಗುರಿ ಮಾಡುತ್ತಾರೆ. ಸ್ತ್ರೀಯರಿಗೆ ಎರಡನೇ ಮದುವೆ ಅಗತ್ಯವಿಲ್ಲ. ಇಂತಹ ಸಮಾಜಗಳು ಸ್ಥಾಪಿತವಾಗಿ ವಿಷಮ ವಿವಾಹವಾಗುವುದಕ್ಕೆ ಅವಕಾಶವಿಲ್ಲದಂತಾಗುತ್ತದೆ. ಹಾಗಾಗಿ ಸಂಪ್ರದಾಯವಾದಿಗಳು ವಿಧವಾ ವಿವಾಹವನ್ನು ವಿರೋಧಿಸುತ್ತಿರುವುದು ಕಾಣಬಹುದು.

ವೀರೇಶಲಿಂಗಂ ಪಂತುಲು ಅವರ ಮತ್ತೊಂದು ಕಾದಂಬರಿ 'ಸತ್ಯವತಿ ಚರಿತ್ರೆ' ಯಲ್ಲಿ ಕೃತಿಯ ಆರಂಭದಲ್ಲಿ ಬಾಲ್ಯವಿವಾಹದ ಬಗ್ಗೆ ಟಿಪ್ಪಣೆ ಇದೆ:-

''ಯಾವಜ್ಜೀವವೂ ಸುಖದುಃಖಗಳಿಗೆ ಭಾಗಿಗಳಾಗಿರಬೇಕಾದ ಕನ್ಯಾವರರ ಇಷ್ಟಾನುಸಾರ ಮದುವೆಯಾಗುವ ಕಾಲಹೋಗಿ ಮಾತನಾಡುವುದಕ್ಕೂ ಚೆನ್ನಾಗಿ ತಿಳಿಯದ ಹಸುಗಳೆಗಳಿಗೆ ತಮ್ಮ ವಿನೋದಾರ್ಥವಾಗಿ ಮದುವೆ ಮಾಡಿ ಅವರನ್ನು ಪಾಲಕ್ಕಿಗಳಲ್ಲಿ ಕುಳ್ಳಿರಿಸಿ ಮೆರವಣಿಗೆ ಮಾಡಿಸಿ ಆಮರಣಾಂತವಾಗಿ ದುಃಖವೆಂಬ ಸೆರೆಗೆ ಸಿಕ್ಕಿಸುವ ಕಾಲ ಬಂದಿತು''. (ಮಹೇಶ್ವರಿ.ಯು ಪುಟ-೮೧) ಲೇಖಕರ ಈ ಮಾತುಗಳಿಂದ ಸ್ಪಷ್ಟವಾಗುತ್ತದೆ. ಬಾಲ್ಯವಿವಾಹವು ಒಂದು ಅನಿಷ್ಟ ಪದ್ಧತಿ ಇದರಿಂದ ವಿಧವೆಯರ ಸಂಖ್ಯೆ ಹೆಚ್ಚುತ್ತದೆ. ಮುಗ್ದ ಜೀವಿಗಳಾದ ಬಾಲಕಿಯ ಮದುವೆ ಮಾಡಿಸಿ ಅವಳ ಜೀವನ ಮುಂದೆ ಕಷ್ಟಗಳಿಗೆ ಈಡಾಗುವ ಸಂಗತಿಯನ್ನು ಸ್ಪಷ್ಟಪಡಿಸುತ್ತದೆ. ತಂದೆ-ತಾಯಿಗಳೆನಿಸಿಕೊಂಡವರು ತಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಹಿರಿಯರು ಮಾಡಿದ ತಪ್ಪುಗಳನ್ನು ಅನುಸರಿಸುತ್ತಾ, ಶಾಸ್ತ್ರಗಳ ಹೆಸರಿನಲ್ಲಿ ನಿಯಮಗಳನ್ನು ಮಾಡಿ ಅವುಗಳನ್ನು ಸ್ತ್ರೀಯರ ಮೇಲೆ ಹೇರುವುದು ಅಸಂಬದ್ಧವಾಗಿದೆ. ಪ್ರಾಪ್ತ ವಯಸ್ಸಿಗೆ ಬರುವುದಕ್ಕಿಂತ ಮುಂಚೆಯೇ ವಿವಾಹಮಾಡುವುದು. ಇಲ್ಲದಿದ್ದರೆ ಶಾಸ್ತ್ರದಲ್ಲಿ ನಿಯಮದ ಪ್ರಕಾರ ಅಪರಾಧ ಎನ್ನುವ ಕೆಟ್ಟ ಮನೋಭಾವ, ಬಹಿಷ್ಕಾರ ಹೇರುವುದು ಇಂತಹ ಅಸಂಬದ್ಧ ನಿಯಮಗಳಿಂದ ಆಗುವ ಅನಾಹುತಗಳನ್ನು ಹೋಗಲಾಡಿಸಲು ಪ್ರಯತ್ನಿಸುವುದನ್ನು ಕಾಣಬಹುದು. ಇವೆಲ್ಲವೂ ಸ್ತ್ರೀಯರು ಅನುಭವಿಸುವ ಸ್ಥಿತಿಯನ್ನು ವಿವರಿಸುತ್ತವೆ. (ಮ. ೨೬) ಎಸ್.ಯು. ಪಣಿಯಾಡಿಯವರ ತುಳು ಕಾದಂಬರಿ ಸತೀಕಮಲೆಯಲ್ಲಿ ವಿಧವ ವಿವಾಹದ ಬಗ್ಗೆ ಮೂಡಿದ ವಿಚಾರವನ್ನು ಪರಿಗಣಿಸಬಹುದು. ''ಹಿಂದೂ ನಾರಿವರ್ಗಕ್ಕೆ ಪುನರ್ವಿವಾಹ ಪ್ರಶಸ್ತ ಅಲ್ಲವೆಂದು ಹೇಳಿದ್ದನ್ನು ಮರೆತು ಬಿಟ್ಟೆಯಾ? ಹೆಣ್ಣು ಜಾತಿಯನ್ನು ನಂಬಲು ಸಾಧ್ಯವಿಲ್ಲ. ಅಯ್ಯೋ ಕಮಲೆ ನಿನ್ನ ಹಣೆ ಬರಹವೇ! ಕಮಲೆ, ನಾನು ಜೀವದಲ್ಲಿರುವಾಗಲೆ ಪರಪುರಷನನ್ನು ಸೇರಿದೆ. ಆಗಲಿ ಇಡೀ ಹಿಂದೂಸ್ಥಾನದಲ್ಲಿ ವಿಲಾಯಿತಿ ಬಟ್ಟೆಗೆ ಬಹಿಷ್ಕಾರ ಮಾಡಿ ದೇಶೀ ಖಾದಿಯನ್ನು ಉಡಬೇಕೆಂದಾಗ ನಿನಗೆ ಮೆಂಚಸ್ಟರಿನ ದಿರಸೆ ಆಗಬೇಕೆಲ್ಲವೆ? ದೇಶಭಾಷೆಯಲ್ಲೇ ಮಾತಾಡಬೇಕೆಂದಿರುವಾಗ ಅದರಲ್ಲೂ ಹೊಸತಾಗಿ ತುಳು ಭಾಷೆಯ ಚಳುವಳಿ ಇರುವಾಗ ತುಳುವನ್ನೂ ಕನ್ನಡವನ್ನೂ ಬಿಟ್ಟು ಇಂಗ್ಲೀಷಿನಲ್ಲೇ ಮಾತನಾಡುತ್ತೀಯಲ್ಲವೇ? ಆಕೆಗೆ ಬಿದ್ದ ಕನಸಿನಲ್ಲಿ ಬಂದ ಈ ಮೇಲಿನ ಮಾತುಗಳಿಂದ ಹುಡುಗಿಯರಿಗೆ ಬಾಲ್ಯವಿವಾಹವೇ ಪ್ರಶಸ್ತವೆಂಬ ಅಭಿಪ್ರಾಯ ಕಾದಂಬರಿಯಲ್ಲಿ ವ್ಯಕ್ತವಾಗುತ್ತದೆ.

ಹಾಗೆಯೇ ವಿಧವಾ ವಿವಾಹ ಬಗೆಗಿನ ನಿಷೇಧಾತ್ಮಕ ಧೋರಣೆಯನ್ನು ಸ್ಪಷ್ಟಪಡಿಸುತ್ತದೆ. ಉಮಶರ್ಮ ಎಂಬಾತ ಸತ್ತುಹೋಗಿದ್ದಾನೆಂಬ ವಾರ್ತೆಯನ್ನು ಉಮೇಶರಾಯನೆಂದೇ ತಿಳಿದು ಆತನ ಪತ್ನಿ ಕಮಲೆ ವಿಧವೆಯಂತೆ ಬಾಳುವುದು. ವಿಧುರನಾದವನು ವಿಧವೆಯನ್ನು ಬೇಕಾದರೆ ಮದುವೆ ಮಾಡಿಕೊಳ್ಳಬಹುದು ಎಂಬ ಚರ್ಚೆಯು ಬರುತ್ತದೆ. ವಿಧವಾ ವಿವಾಹವು ಎಂತಹ ಸಮಯದಲ್ಲಿ ನಡೆಯಬೇಕು ಎನ್ನುವುದು ಕಮಲೆ ಮತ್ತು ನಾರಾಯಣರ ಸಂಭಾಷಣೆಯ ''ಕಮಲೆ : ಗಂಡ ಸತ್ತವರಿಗೂ, ಹೆಂಡತಿ ಸತ್ತವರಿಗೂ ಪುನರ್ವಿವಾಹ ತಪ್ಪು''

ನಾರಯಾಣ : ಏ. ನೀನು ಒಳ್ಳೆ ಗಡಸುಗಾರ್ತಿಯಾಗಿದ್ದೀ. ಪುರುಷರ ವಿಷಯದಲ್ಲಿ ಮಾತಾಡಲು ಹೆಂಗಸರಿಗೆ ಹಕ್ಕಿಲ್ಲ. ಹೆಂಡತಿ ಸತ್ತವರನ್ನು ಕೇಳಬೇಕು.

ಕಮಲೆ : ಆದರಲ್ಲಿ ಸಂದೇಹವಿಲ್ಲ. ನಾನು ಈಗ ವಿಷಯ ವಿಚಾರ ಮಾಡುತ್ತೇನೆ. ಸಂದರ್ಭ ಬಂದಾಗ ಆವರಿಗೇ ಕೊಡುತ್ತೇನೆ. ಸ್ತ್ರೀ ಪುರುಷರಿಗೆ ಪರಸ್ಪರ ಅನುರಾಗ ಇದ್ದುದರಿಂದ, ಆದರಲ್ಲಿ ವಿಯೋಗವಾದರೆ ಅವರು ಸನ್ಯಾಸಿಗಳೇ ಆಗಿರಬೇಕು. ಹಾಗೆಂದರೆ, ಅವರಿಗೆ ಅನುರಾಗವಿದ್ದರೆ, ಇಷ್ಟವಿದ್ದರೆ, ನಿಜವಾಗಿಯೂ ಗಂಡನಿಗೆ ಹೆಂಡತಿಯ ಮೇಲೂ ಹೆಂಡತಿಗೆ ಗಂಡನ ಮೇಲೂ ಅನುರಾಗ ಇದ್ದರೆ, ಆದರಲ್ಲಿ ಒಬ್ಬರು ಸತ್ತು ಹೋದರೆ, ಮತ್ತೊಬ್ಬರು ಮದುವೆ ಮಾಡಿಕೊಳ್ಳಲಿಕ್ಕಿಲ್ಲ. ಮಾಡಿಕೊಂಡರೆ ಪ್ರೀತಿಯಿಲ್ಲವೆಂದು ಅರ್ಥ ಇಡೀ ನಮ್ಮ ದೇಶದಲ್ಲಿ ಸ್ತ್ರೀಯರಿಗೆ ಪಾತಿವ್ರತ್ಯವೂ ಪುರುಷರಿಗೆ ಏಕಪತ್ನೀ ವ್ರತವೂ ಇದ್ದಂತೆ ಬೇರೆ ಯಾವ ಧರ್ಮವೂ ಇಲ್ಲ. ಆದರೆ ಪುರುಷರು ತಮ್ಮ ದುಷ್ಟತನದಿಂದಾಗಿ ಕ್ರಮವಾಗಿ ತಾವು ಪುನರ್ವಿವಾಹ ಮಾಡಿಕೊಂಡು ಸ್ತ್ರೀಯರಿಗೆ ನಿಷೇಧಿಸಿದ್ದಾರೆ.

ಇದು ತಪ್ಪು. ಆದುದರಿಂದಲೇ ಪುತ್ರಾವೇಷ ಇದ್ದರೆ ಮಾತ್ರವೇ ನಿಯೋಗ ಮಾಡಬಹುದೆಂದು ಅಪ್ಪಣೆ ಕೊಟ್ಟಿದ್ದಾರೆ. ಪುನರ್ವಿವಾಹ ಮಾಡಿಕೊಳ್ಳಲು ಅಪ್ಪಣೆಯಿಲ್ಲ. ಈ ನಿಯಮವನ್ನೇ ಗಂಡಸರಿಗೆ ಯಾಕೆ ಮಾಡಿಲಿಲ್ಲವೆಂದು ಅವರನ್ನು ಕೇಳಬೇಕು. ಒಂದು ವೇಳೆ ಪುರುಷರಿಗೆ ಪುನರ್ವಿವಾಹವಾಗುತ್ತಿದ್ದರೆ ಸ್ತ್ರೀಯರಿಗೂ ಖಂಡಿತ ಆಗಬಹುದು.

ಅವರವರಿಗೆ ಸುತ್ತುಹೋದ ಗಂಡ ಹೆಂಡತಿ ಮೇಲೆ ಪ್ರೀತಿಯಿಲ್ಲದಿದ್ದರೆ ಮಾಡಿಕೊಳ್ಳಲಿ. ಆದರೆ ಮಕ್ಕಳಿದ್ದವರು ಮದುವೆ ಮಾಡಿಕೊಳ್ಳುವುದು ತಪ್ಪು. ಏಕೆಂದರೆ ಆ ಮಕ್ಕಳಿಗೆ ಗತಿಯಿಲ್ಲವೆಂದಾಗುವುದು. ಅಷ್ಟು ಮಾತ್ರವಲ್ಲದೆ ಮದುವೆಯಾಗುವ ಸಂದರ್ಭದಲ್ಲಿ ಗಂಡ ಸತ್ತವಳು ಹೆಂಡತಿ ಸತ್ತವನನ್ನೇ, ಹೆಂಡತಿ ಸತ್ತವನು ಗಂಡ ಸತ್ತವಳನ್ನೇ ಮದುವೆ ಮಾಡಿಕೊಳ್ಳಬೇಕು'' (ಪಾದೆಕಲ್ಲುವಿಷ್ಣುಭಟ್ಟ, ೧೯೯೭, ಪುಟ ೫೪) ಹೀಗೆ ವಿಧವಾ ವಿವಾಹವು ನಡೆಯಬೇಕೆಂದು ಚರ್ಚೆನಡೆಸುತ್ತಾರೆ.

ವಿದ್ಯಾಭ್ಯಾಸ ಮುಗಿಸಿ ಊರಿಗೆ ಬರುವಾಗ ಒಂದೇ ಬೋಗಿಯಲ್ಲಿ ಪ್ರಯಾಣ ಮಾಡುವ ಸಂದರ್ಭ ಕಮಲೆ-ನಾರಾಯಣರಿಗೆ ಎದುರಾಗುತ್ತದೆ. ಕಮಲೆಯನ್ನು ಒಲಿಸುವ ನಾರಾಯಣನ ಪ್ರಯತ್ನ ವಿಫಲವಾದರೂ ಆಕೆಗೆ ವಯಸ್ಸಿಗೆ ಸಹಜವಾದ ಮನೋವಿಕಾರವಾಗುತ್ತದೆ ಎಂದು ಲೇಖಕರು ಗುರುತಿಸುವುದು ವಿಶೇಷವಾಗುತ್ತದೆ. ಆಕೆ ಅದನ್ನು ನಿಗ್ರಹಿಸುತ್ತಾಳೆ. ಪುನರ್ವಿವಾಹವನ್ನು ಮಾಡಿಕೊಳ್ಳಬಾರದೆಂದೂ ಪಾತಿವ್ರತ್ಯ ಬ್ರಹ್ಮಚರ್ಯರ ಮಹಿಮೆ ಎಷ್ಟೆಂದು ಕಾಣಿಸಬೇಕೆಂದು ಇದ್ದ ಆಶೆ ಮಣ್ಣುಗೂಡಿತಲ್ಲವೇ ಎಂದು ತಾನು ಕ್ಷಣಿಕ ಮಾನಸಿಕ ವಿಕಾರಕ್ಕೊಳಗಾದ ಬಗ್ಗೆ ಆಕೆ ಅಳುತ್ತಾಳೆ.[೧]

---

೧. ಸತೀಕಮಲೆ ಕಾದಂಬರಿಯು ಪ್ರಗತಿಪರ ವಿಚಾರಗಳ ಕುರಿತಾದ ಚರ್ಚೆಯ ಕಾರಣಕ್ಕಾಗಿ ನಮಗೆ ಮುಖ್ಯವಾಗುತ್ತದೆ. ಆದರೆ ಪರಿಣಾಮದ ದೃಷ್ಟಿಯಿಂದ ನೋಡಿದಾಗ ಕಾದಂಬರಿಯು ಸಾಂಪ್ರದಾಯಿಕ ಮೌಲ್ಯಗಳತ್ತಲೇ ವಾಲುತ್ತಿರುವುದನ್ನು ಗುರುತಿಸಬಹುದಾಗಿದೆ. 'ಸತೀಕಮಲೆ' ಎಂಬ ಶೀರ್ಷಿಕೆಯೇ ಇದನ್ನು ಧ್ವನಿಸುತ್ತದೆ. ಈಗಾಗಲೇ ಗಮನಿಸಿದಂತೆ ಭಾಷಾಭಿಮಾನ, ರಾಷ್ಟ್ರಾಭಿಮಾನ, ದೇಸೀ ಪ್ರಜ್ಞೆ, ಸ್ತ್ರೀ ಶಿಕ್ಷಣ, ವಿಧವಾ ವಿವಾಹ ಇತ್ಯಾದಿಗಳ ಬಗೆಗಿನ ವೈಚಾರಿಕ ಪ್ರತಿಪಾದನೆಗಾಗಿ ಕಾದಂಬರಿ ಮಹತ್ವ ಪಡೆದುಕೊಳ್ಳುತ್ತದೆ.

ವೀರೇಶಲಿಂಗಂ ಪಂತುಲು ಅವರ ತೆಲುಗಿನ ಪ್ರಥಮ ಕಾದಂಬರಿಯಾದ 'ರಾಜಶೇಖರ ಚರಿತ್ರೆ' ವಿಧವಾ ಹೆಣ್ಣಿನ ಕ್ರೂರ ಪರಿಸ್ಥಿತಿಯನ್ನು ವಿವರಿಸುತ್ತದೆ. ''ನಮ್ಮ ದೇಶದಲ್ಲಿ ಎಳೆಯ ವಿಧವೆಯರ ದುರವಸ್ಥೆಯನ್ನು ನೆನಸಿಕೊಂಡರೆ ಹಗೆಗಳಿಗೆ ಕೂಡ ಮನಸ್ಸು ಕರಗದೆ ಇರಲಾರದು. ಹೆತ್ತವರೇ ಪತಿರಹಿತೆಯರಾದ ತಮ್ಮ ಹೆಣ್ಣು ಮಕ್ಕಳನ್ನು ಅಮಾನುಷವಾಗಿ ನೋಡಿಕೊಳ್ಳುವುದರ ಬಗ್ಗೆ ಹೇಳುತ್ತಾರೆ. ತಲೆಬೋಳಿಸಿ ವಿರೂಪಮಾಡಿ, ಮುಸುಕು ಹಾಕಿಸಿ ಮೂಲೆಯಲ್ಲಿ ಕುಳ್ಳಿರಿಸುವವರು, ಎರಡು ಹೊತ್ತು ಹೊಟ್ಟೆ ತುಂಬ ತಿಂಡಿಯನ್ನು ಕೊಡದೆ ಸೊರಗಿಸಿ ಎಲ್ಲರ ಊಟವೂ ಆದ ಮೇಲೆ ಮೂರು ಜಾವಕ್ಕೆ ಸ್ವಲ್ಪ ಅನ್ನವನ್ನು ಹಾಕುವರು. ಒರಟು ಸೀರೆಗಳನ್ನು ಉಡುವುದಕ್ಕೆ ಕೊಡುವರು'' ಎಂಬ ವಿವರಣೆಗಳನ್ನು ಲೇಖಕರು ಕಾದಂಬರಿಯಲ್ಲಿ ಕೊಡುತ್ತಾರೆ. (ವಿರೇಶಿ ಲಿಂಗಂ ಪಂತಲು : ಪು. ೮೭,೮೮)

ವಿಧವಾ ಹೆಣ್ಣಿನ ಪರಿಸ್ಥಿತಿಯನ್ನು ಪರಿಗಣಿಸಿದರೆ ತುಂಬಾ ಹೀನಾಯ ಪರಿಸ್ಥಿತಿಯನ್ನು ವಿವರಿಸುತ್ತದೆ ಇಲ್ಲಿ ಲೇಖಕರ ಅನುಕಂಪ ವ್ಯಕ್ತವಾಗುತ್ತದೆ.ಇಂತಹ ಒಂದು ಘಟನೆ ಕನ್ನಡದ ಇಂದಿರಾಬಾಯಿ ಕಾದಂಬರಿಯಲ್ಲಿ ಬರುತ್ತದೆ. ಇಂದಿರಾ ಹಣೆಯಲ್ಲಿಯ ಬೊಟ್ಟನ್ನು ತಾಯಿ ಅಳಿಸಿದಳು. ಹಾಗೆಯೇ ಪತಿಯ ಮರಣಾನಂತರ ಪತ್ನಿಯು ಕೇಶ ಛೇದನವಾಗದೆ ಸ್ನಾನ ಮಾಡಿದರೆ ಅವನಿಗೆ ಅಘೋರವಾದ ನರಕದಲ್ಲಿ ನೋವನ್ನು ಅನುಭವಿಸುತ್ತಾನೆ ಎಂದು ಶಾಸ್ತ್ರಗಳಲ್ಲಿ ಇದೆ ಎಂದು ಅವಳ ತಲೆಯನ್ನು ಬೋಳಿಸುತ್ತಾರೆ. ಹಾಗೆಯೇ ಅವಳು ಒಂದು ವರ್ಷದವರೆಗೆ ಯಾರಿಗೂ ಮುಖವನ್ನು ತೋರಿಸುವಂತಿಲ್ಲ ಎಂದು ಕಟ್ಟಳೆಗಳನ್ನು ನಿರ್ಮಿಸುತ್ತಾರೆ.

ಇಂತಹ ಕಟ್ಟಳೆಗಳನ್ನು ನಿರ್ಮಿಸಿ ಶಾಸ್ತ್ರ ಎನ್ನುವ ನಾಮಫಲಕವಿಟ್ಟು ಹೆಣ್ಣನ್ನು ಕ್ರೂರವಾಗಿ ಕೊಲ್ಲುತ್ತಾರೆ. ಅಷ್ಟೇ ಅಲ್ಲದೆ ದಿನಗಳೆದಂತೆ ಅವಳು ತಲೆಯನ್ನು ಬಾಚಿಕೊಂಡಳು. ಸೀರೆ ಕುಪ್ಪಸಗಳನ್ನು ತೊಟ್ಟಳೆಂತಲೂ, ನೀತಿ ಕಥೆಗಳನ್ನು ಓದಿ ಕೆಡುತ್ತಿದ್ದಾಳೆಂತಲೂ ಅವಳನ್ನು ಅಪರಾಧದ ದೃಷ್ಟಿಯಲ್ಲಿ ನೋಡಿ ಬೈಯುತ್ತಾರೆ.

ಕಾದಂಬರಿಯಲ್ಲಿ ವಿಧವಾ ವಿವಾಹದ ಪರವಾಗಿ ನಡೆಯುತ್ತಿದ್ದ ಚಳುವಳಿಗಳ ಕುರಿತಾಗಿ ಅಸಮ್ಮತಿಯ ಧೋರಣೆಯನ್ನು ಹೊಂದಿದ್ದರು ಎನ್ನುವುದು ಸ್ಪಷ್ಟವಾಗುತ್ತದೆ.

ಗುಲ್ವಾಡಿ ವೆಂಕಟರಾಯರು ವಿಧವಾ ವಿವಾಹವನ್ನು ಸಮರ್ಥಿಸುವುದನ್ನು ಕಾದಂಬರಿಯಲ್ಲಿ ಬರುವ ಭಾಸ್ಕರನ ಮಾತುಗಳ ಮೂಲಕ ಆಡಿಸುತ್ತಾರೆ.

''ಪುನರ್ವಿವಾಹವಿಲ್ಲದ ಬೇರೆ ನಿವೃತ್ತಿ ಇಲ್ಲವೇ?''

ಇದು ಅಮೃತರಾಯನ ಪ್ರಶ್ನೆ ಆದಕ್ಕೆ ಭಾಸ್ಕರನ ಉತ್ತರ ಹೀಗೆ :

''ಇದೆ ಜನ್ಮ ಪರ್ಯಂತ ಬ್ರಹ್ಮಚರ್ಯದಲ್ಲಿರುವುದೇ ಹೆಚ್ಚು ಸಾರ್ಥಕವಾದದ್ದು.

ಆದರೆ ಈಗಿನ ಕಾಲಸ್ಥಿತಿಗೂ ಮನಷ್ಯ ಶರೀರ ಸ್ವಭಾವಗಳಿಗೂ ಅದು ಅಸಾಧ್ಯ'' ಈ ರೀತಿಯಾಗಿ ಭಾಸ್ಕರನ ಮಾತುಗಳಲ್ಲಿ ಬದಲಾದ ಸಾಮಾಜಿಕ ಸನ್ನಿವೇಶಕ್ಕೆ ತಕ್ಕಂತೆ ಸಾಂಪ್ರದಾಯಕ ಸಮಾಜ ಬದಲಾವಣೆಗೊಳಗಾಗಬೇಕು ಎನ್ನುವುದನ್ನು ಅಭಿವ್ಯಕ್ತಿಸುತ್ತದೆ. ವಿಧವೆಯರ ಪುನರ್ವಿವಾಹಕ್ಕೆ ಶಾಸ್ತ್ರಗಳೊಪ್ಪುತ್ತವೆಂತಲೂ, ಕೆಲವು ಸ್ಥಿತಿಯಲ್ಲಿದ್ದ ವಿಧವೆಯರ ಪುನರ್ವಿವಾಹವನ್ನು ಮಾಡಲೇಬೇಕೆಂತಲೂ ಸಾಮಾಜಿಕ ಸುಧಾರಣೆಯ ಇಚ್ಛೆಯುಳ್ಳವರು ಪ್ರತಿಪಾದಿಸುತ್ತಾರೆ. ಮದ್ರಾಸು, ಪುಣೆ, ಕಲಕತ್ತ ಮುಂತಾದ ಸ್ಥಳಗಳಲ್ಲಿ ಈ ವಿಷಯದ ಮೇಲೆ ಪ್ರಚಂಡ ವಾಗ್ವಾದ ನಡೆದು ಕಡೆಗೇನೂ ನಿರ್ಣಯವಾಗದಿದ್ದರೂ ಸಾವಿರಾರು ವಿಧವೆಯರು ಹೊಸ ಗಂಡಂದಿರನ್ನು ಸಂಪಾದಿಸಿಕೊಂಡವರು. (ವಾಸುದೇವಾಚಾರ್ಯ ಕೆರೂರು, ೧೯೨೨ ಪು. ೪) ಎಂಬ ವ್ಯಂಗದ ಮಾತು. ಲೇಖಕರ ನಿಲುವನ್ನು ವ್ಯಕ್ತಪಡಿಸುತ್ತದೆ. ಕಾದಂಬರಿಯಲ್ಲಿ ಲೇಖಕರು ಚಿತ್ರಿಸಿರುವ ಕೆಲವು ಪಾತ್ರಗಳ ಮೂಲಕ ಸುಧಾರಣಾ ವಿರೋಧ ಸಾಗಿರುವುದನ್ನು ಸ್ಪಷ್ಟಪಡಿಸುತ್ತದೆ.

ಪಂಡಿತ ರಾಧಾಬಾಯಿ ಹಾಗೂ ಕಮಲಾ ಈ ಪಾತ್ರಗಳಿಗೆ ದೇವಯಾನಿ ಮತ್ತು ಇಂದಿರಾ ಇವರನ್ನು ಮುಖಾಮುಖಿಯಾಗಿಸಿದ್ದಾರೆ.

ಕಮಲಾ ಶಿಕ್ಷಿತ ಯುವತಿ, ವಿಧವೆ, ಪಂಡಿತ ರಾಧಾಬಾಯಿಯ ಶಿಷ್ಯಕರ್ವೆಯವರ ವಿಧವಾ ಮಹೋದದಿ ಎಂಬ ಶಾಲೆಯಲ್ಲಿ ಕಲಿತು ಬಂದವಳು ಪುನರ್ವಿವಾಹವನ್ನು ಪ್ರಚಾರಗೊಳಿಸಲು ಹಾಗೂ ಇತರ ಸುಧಾರಣೆಗಳನ್ನು ತರಲು ಕಟಿ ಬದ್ಧಳಾದವಳು ಎಂಬಂತೆ ಅವಳ ಪರಿಚಯವಿದೆ. ಮೂರು ಭಾರಿ ಮದುವೆಯಾಗಿ ಮತ್ತೆ ವಿಧವೆಯಾದ ಪಂಡಿತ ರಾಧಾಬಾಯಿ ಮೂರನೇ ಭಾರಿ ಮದುವೆಯಾದದ್ದು ಒಬ್ಬ ಕ್ರೈಸ್ತನನ್ನು ಹೀಗೆ ಬ್ರಹ್ಮಸಮಾಜ, ಉಪಾಸನಾ ಸಮಾಜ ಮುಂತಾದ ಸಂಘಗಳೊಂದಿಗೆ ಸೇರಿಕೊಂಡು ಪುನರ್ವಿವಾಹ ಇತ್ಯಾದಿ ಸುಧಾರಣ ಚಟುವಟಿಕೆಗಳಲ್ಲಿ ನಿರತರಾಗುವ ಪಾತ್ರಗಳಲ್ಲಿ ವ್ಯಂಗ್ಯ ಚಿತ್ರಗಳ ಮಾದರಿಯಲ್ಲಿ ಚಿತ್ರಿತವಾಗಿರುವುದು ಲೇಖಕರ ಉದ್ದೇಶವನ್ನು ಸೂಚಿಸುತ್ತದೆ.

ಲೇಖಕರಿಗೆ ವಿಧವಾ ವಿವಾಹದ ಬಗ್ಗೆ ದ್ವಂದ್ವ ಮನೋಭಾವನೆ ಇರುವುದು ವ್ಯಕ್ತವಾಗುತ್ತದೆ. ಅಂದರೆ ಇಂದಿರಾ ಕಾದಂಬರಿಯಲ್ಲಿ ವಿಧವೆ ದೇವಯಾನಿ ಕಮಲಾಕಾಂತನನ್ನು ಮದುವೆಯಾಗುವ ಸಾಧ್ಯತೆ ಇತ್ತು. ಆದರೆ ಮತ್ಸರಿ ಜಯರಾಯನಿಂದಾಗಿ ಅದು ಜರುಗುವುದಿಲ್ಲ. ಆಕೆ ವಿಧವೆಯಾಗಿಯೇ ಉಳಿದ ಬಾಳನ್ನು ಕಳೆಯುತ್ತಾಳೆ. ಪುನರ್ವಿವಾಹವಾಗುವ ವಿಧವೆಯರು ಟೀಕೆಗೆ ಒಳಗಾಗುತ್ತಾರೆ. ಹಾಗೆ ಮದುವೆಯಾಗದ ದೇವಯಾನಿ ಆದರ್ಶ ಮಹಿಳೆಯಾಗುತ್ತಾಳೆ.

ಸಂತ ಮಂಡಳಿಯನ್ನು ಕರೆಸಿ ಅವಳಲ್ಲಿ ಜೀವನದ ಬಗ್ಗೆ ವೈರಾಗ್ಯ ಮೂಡುವಂತ ಕಾರ್ಯಗಳನ್ನು, ಸಲಹೆಗಳನ್ನು ನೀಡುತ್ತಾರೆ. ಈ ರೀತಿ ವಿಧವೆಯರ ಜೀವನ ಸ್ಥಿತಿಯನ್ನು ಅಭಿವ್ಯಕ್ತಿಸುವುದರ ಮೂಲಕ ಅವುಗಳ ಸುಧಾರಣೆಯನ್ನು ಕೈಗೊಳ್ಳಬೇಕೆಂಬ ಮನೋಭಾವನೆಯನ್ನು ಕಾದಂಬರಿಗಳಲ್ಲಿ ಕಾಣುತ್ತೇವೆ.

ವಿಧವೆಯಾದ ಇಂದಿರೆಯು ಭಾಸ್ಕರನೊಂದಿಗೆ ವಿವಾಹವಾಗುವುದರ ಮೂಲಕವೆ ಕಾದಂಬರಿಯಲ್ಲಿ ಸುಧಾರಣಾ ಪರ ಕಾಳಜಿ ವ್ಯಕ್ತವಾಗುತ್ತದೆ.

ಈ ರೀತಿಯಲ್ಲಿ ಕಾದಂಬರಿಗಳಲ್ಲಿ ಬರುವ ಸಾಮಾಜಿಕ ಚಿತ್ರಣದಿಂದ ಅಂದಿನ ವಿಧವಾ ಹೆಣ್ಣಿನ ಜೀವನ ಸ್ಥಿತಿಯನ್ನು ಅನಾವರಣ ಮಾಡುವುದರ ಮೂಲಕ ಅವುಗಳ ಸುಧಾರಣೆಗೆ ವಿಧವಾ ವಿವಾಹ ನಡೆಸಿರುವುದನ್ನು ಕಾಣಬಹುದು. ಹೀಗೆ ನಮ್ಮ ದಕ್ಷಿಣ ಭಾರತೀಯ ಕಾದಂಬರಿಗಳಲ್ಲಿ ಪಾಶ್ಚಾತ್ಯರ ಸಂಸ್ಕೃತಿಯ ಪ್ರಭಾವದಿಂದ ಹೊಸ ಆಚರಣೆಗಳು ಆಗಮಿಸಿದಂತೆ, ಭಾರತೀಯ ಸಂಸ್ಕೃತಿಯ ಮೇಲೂ ಅವು ದಟ್ಟವಾದ ಪ್ರಭಾವ ಬೀರಿರುವುದನ್ನು ಕಾಣಬಹುದು. ಸ್ತ್ರೀಯರು ಸಂಪ್ರದಾಯದ ವಿರುದ್ಧ ಪ್ರತ್ಯಕ್ಷ ಹೋರಾಟ ಇಲ್ಲದಿದ್ದರೂ ಅಪ್ರತ್ಯಕ್ಷವಾದ ವಿರೋಧದ ನೆಲೆಯನ್ನು ಗುರುತಿಸಬಹುದು. ಹೀಗೆ ಭಾರತೀಯ ಸಂಸ್ಕೃತಿಯ ಮೇಲೆ ಪಾಶ್ಚಾತ್ಯ ಜೀವನ ಕ್ರಮದ ದಟ್ಟ ಪ್ರಭಾವ ಬೀರಿರುವುದನ್ನು ದಕ್ಷಿಣ ಭಾರತದ ಪ್ರಾರಂಭಘಟ್ಟದ ಕೆಲವು ಕಾದಂಬರಿಗಳು ತೋರಿಸಿಕೊಡುತ್ತವೆ. ಬಾಲ್ಯವಿವಾಹದ ದುಷ್ಪರಿಣಾಮ, ವಿಧವೆಯರ ಜೀವನದ ಸಮಸ್ಯೆ, ಇತ್ಯಾದಿಗಳ ಚರ್ಚೆಯ ಜೊತೆಗೆ ವಿಧವಾ ವಿವಾಹದ ಪ್ರಯೋಜನದ ಕುರಿತು ಆ ಕಾಲದ ಕೆಲವು ಕಾದಂಬರಿಗಳು ಇತ್ಯಾತ್ಮಕ ನಿಲುವನ್ನು ವ್ಯಕ್ತಪಡಿಸುತ್ತವೆ. ಆದರೆ ದಕ್ಷಿಣ ಭಾರತೀಯ ಭಾಷೆಗಳ ಮೊದಲ ಘಟ್ಟದ ಕಾದಂಬರಿಗಳಲ್ಲಿ ವ್ಯಕ್ತವಾಗುವ ವಿಧವಾ ವಿವಾಹದ ಪ್ರತಿಪಾದನೆಗಳು, ಅದರ ಸಮಸ್ಯೆಗಳನ್ನು ಅನಾವರಣಗೊಳಿಸುವಲ್ಲಿ ಕೆಲವು ಕಾದಂಬರಿಗಳು ಪ್ರಯತ್ನಿಸಿವೆ. ಉದಾಹರಣೆಗೆ ತೆಲುಗಿನ ಸತ್ಯರಾಜ ಪೂರ್ವ ದೇಶಗಳು , 'ಸತ್ಯವತೀ ಚರಿತ್ರೆ', ಕನ್ನಡದ ಕೆರೂರು ವಾಸುದೇವಾಚಾರ್ಯರ 'ಇಂದಿರೆ' ತುಳುಭಾಷೆಯ ಎಸ್. ಯು.ಪಣಿಯಾಡಿ ಯವರ 'ಸತೀಕಮಲೆ' ಇವುಗಳಲ್ಲಿ ಕೇವಲ ವಿಧವೆಯರ ಸಮಸ್ಯೆಯ ಬಗ್ಗೆ ಅವರ ಕರುಣಾಜನಕ ಸ್ಥಿತಿಯನ್ನು ವರ್ಣಿಸುವಲ್ಲಿ ಅವು ಬದಲಾಗಬೇಕು ಎನ್ನುವ ಸಾಧ್ಯತೆಗಳ ಸೂಚನೆಯನ್ನಷ್ಟೇ ವಿವರಿಸುತ್ತವೆ. ಆದರೆ ಕನ್ನಡದ ಮೊದಲ ಸಾಮಾಜಿಕ ಕಾದಂಬರಿಯಾದ 'ಇಂದಿರಾಬಾಯಿಯೊಂದೇ' ತನ್ನ ಬಂಧದಲ್ಲಿಯೇ ವಿಧವಾ ವಿವಾಹವನ್ನು ಸಾಧ್ಯ ಮಾಡಿ ತೋರಿಸಿದೆ. ಎನ್ನುವುದು ಮುಖ್ಯವಾದ ಅಂಶವಾಗಿದೆ.

ಕಾದಂಬರಿಯು ಮನುಷ್ಯನ ಸಂಕೀರ್ಣ ಅನುಭವಗಳ ಅಭಿವ್ಯಕ್ತಿಗೆ ಹೇಳಿ ಮಾಡಿಸಿದ ಪ್ರಕಾರವೆಂಬುದನ್ನು ಮೊದಲಘಟ್ಟದ ದಕ್ಷಿಣ ಭಾರತೀಯ ಕಾದಂಬರಿಗಳು ಶೃತ ಪಡಿಸುತ್ತವೆ. ಪಾಶ್ಚಾತ್ಯ ಪ್ರಭಾವ ವಸಾಹತುಶಾಹಿ ಅನುಭವಗಳು ಆ ಕಾಲದ ಜನರ ಬದುಕಿನಲ್ಲಿ ಒಂದು ರೀತಿಯ ಸಂದಿಗ್ಧತೆಯನ್ನು ಉಂಟುಮಾಡಿತು. ವಸಾಹತುಶಾಹಿ ಆಡಳಿತವನ್ನು ವಿರೋಧಿಸಿದ ಜನರೂ ಬದುಕಿನ ಉತ್ತಮಿಕೆ ಪೂರಕವಾಗಬಲ್ಲ ಸುಧಾರಣಾವಾದಿ ವಿಚಾರಗಳನ್ನು ಪಾಶ್ಚಾತ್ಯರಿಂದ ಸ್ವೀಕರಿಸಿದರು. ಒಂದೆಡೆ ಸಂಪ್ರದಾಯವನ್ನು ಬಿಡಲಾರದ, ಸುಧಾರಣೆಯತ್ತಲೂ ತುಡಿಯುವ ಮಾನಸಿಕ ಹೊಯ್ದಾಟ ಆ ಕಾಲದ ಅನೇಕರಲ್ಲಿ ಇತ್ತೆನ್ನಬಹುದು. ಹಾಗಾಗಿಯೇ ಬಾಲ್ಯವಿವಾಹ, ವಿಧವಾ ವಿವಾಹ, ಸ್ತ್ರೀ ಶಿಕ್ಷಣ, ಇತ್ಯಾದಿಗಳನ್ನು ಸಮರ್ಥಿಸುವ ಮತ್ತು ಖಂಡಿಸುವ, ಚರ್ಚೆ ವಾದ-ವಿವಾದಗಳು, ಭಾಷಣ ಉಪನ್ಯಾಸಗಳು ಆ ಕಾಲದ ಕಾದಂಬರಿಗಳಲ್ಲಿ ಸರ್ವೇಸಾಮಾನ್ಯವಾಗಿವೆ ಎನ್ನಬಹುದು. ಕೆಲವು ಕಾದಂಬರಿಗಳು ಬರಿಯ ಚರ್ಚೆಯಲ್ಲಷ್ಟೇ ನಿಂತುಬಿಟ್ಟರೆ, ಮತ್ತೆ ಕೆಲವು ಕ್ರಾಂತಿಕಾರಕ ಸುಧಾರಣಾವಾದ ನಿಲುವುಗಳಲ್ಲಿ ಪ್ರಕಟಪಡಿಸುತ್ತವೆ. ಕೆಲವು ಕಾದಂಬರಿಗಳ ಪಾತ್ರಗಳು ಬಾಲ್ಯ ವಿವಾಹದ ಸಮಸ್ಯೆ, ವಿಧವಾ ವಿವಾಹ, ಸ್ತ್ರೀ ಶಿಕ್ಷಣಗಳ ಮಹತ್ವದ ಬಗೆಗೆ ಉದ್ದುದ್ದ ಭಾಷಣಗಳನ್ನೇ ಮಾಡುತ್ತವೆ. ಮತ್ತೆ ಕೆಲವು ಕಾದಂಬರಿಗಳ ಪಾತ್ರಗಳು ಸ್ವತಃ ಬಾಲವಿಧವೆಯರಾಗಿ ಸಂಕಟಪಡುತ್ತವೆ. ಇನ್ನೂ ಕೆಲವು ಸ್ತ್ರೀ ಪಾತ್ರಗಳು ಶಿಕ್ಷಣ ಪಡೆದು, ಮರುಮದುವೆಯಾಗಿ ಸುಧಾರಣೆ ಹೊಂದುತ್ತವೆ. ಒಟ್ಟಾರೆಯಾಗಿ ಪಾರತಂತ್ರ್ಯದಂತಹ, ಸಾಂಪ್ರದಾಯಗಳ ಖಂಡನೆ, ಸ್ತ್ರೀ ಶಿಕ್ಷಣ, ಇಂಗ್ಲೀಷ್ ಶಿಕ್ಷಣ, ವಿಧವಾ ವಿವಾಹಗಳತ್ತ ಒಲವು - ಇತ್ಯಾದಿಗಳು ಆ ಕಾಲದ ಪ್ರಜ್ಞಾವಂತರಲ್ಲಿ ಕಾಣಿಸಿಕೊಳ್ಳತೊಡಗಿದವು. ವಸಾಹತುಶಾಹಿ ಅನುಭವ, ಪಾಶ್ಚಾತ್ಯ ಪ್ರಭಾವಗಳು ಕೆಲವು ಸಂಪ್ರದಾಯವಾದಿಗಳಲ್ಲಿ ಆತಂಕ - ತಲ್ಲಣಗಳನ್ನು ಉಂಟುಮಾಡಿದ್ದು ಇದೆ. ಈ ಎಲ್ಲಾ ಅಂಶಗಳು ಪ್ರಾರಂಭ ಘಟ್ಟದ ದಕ್ಷಿಣ ಭಾರತೀಯ ಕಾದಂಬರಿಗಳಲ್ಲಿ ಹೇಗೆ ಪಡಿಮೂಡಿವೆ ಎಂಬುದು ಇದುವರೆಗಿನ ಚರ್ಚೆಗಳಿಂದ ಸ್ಪಷ್ಟವಾಗುತ್ತದೆ.

★ ಈ ಅಧ್ಯಾಯದಲ್ಲಿ ತಮಿಳು ಕೃತಿಗಳು ಲಭ್ಯವಿಲ್ಲದ ಕಾರಣ ಚರ್ಚಿಸಲು ಸಾಧ್ಯವಾಗಿಲ್ಲ.

ಅಧ್ಯಾಯ-೫

ದಕ್ಷಿಣ ಭಾರತದ ಕಾದಂಬರಿಗಳಲ್ಲಿ ಪ್ರಾದೇಶಿಕ ಅನನ್ಯತೆಗಳು

ಅಧ್ಯಾಯ-೫

ದಕ್ಷಿಣ ಭಾರತದ ಕಾದಂಬರಿಗಳಲ್ಲಿ ಪ್ರಾದೇಶಿಕ ಅನನ್ಯತೆಗಳು

ಆರಂಭಘಟ್ಟದ ದಕ್ಷಿಣ ಭಾರತೀಯ ಕಾದಂಬರಿಗಳನ್ನು ತೌಲನಿಕವಾಗಿ ಪರಿಭಾವಿಸಿ, ಅವುಗಳಲ್ಲಿ ಕಂಡು ಬರುವ ಕೆಲವು ಸಮಾನವಾದ ಅಂಶಗಳನ್ನು ಈ ಮೇಲಿನ ಅಧ್ಯಾಯದಲ್ಲಿ ಚರ್ಚಿಸಲಾಯಿತು. ಆದರೆ ಸಾದೃಶ್ಯಸಂಬಂಧಗಳನ್ನು ಗುರುತಿಸುವುದಷ್ಟೇ ತೌಲನಿಕ ಅಧ್ಯಯನವೊಂದರ ಉದ್ದೇಶವಾಗಿರುವುದಿಲ್ಲ. ಅಲ್ಲಿರುವ ಅನನ್ಯತೆಯ ಅಂಶಗಳಲ್ಲಿ ವಿಶ್ಲೇಷಣೆಗಳಲ್ಲೂ ಇಂತಹ ಅಧ್ಯಯನದ ಸಂದರ್ಭದಲ್ಲಿ ಮುಖ್ಯವಾಗುತ್ತದೆ. ಕಾದಂಬರಿ ಯಂಥ ಸಾಹಿತ್ಯಪ್ರಕಾರದ ಸಂದರ್ಭದಲ್ಲಿ ಇಂದು ನಾವು ಒಂದು ಭಾಷೆ ಒಳಗಡೆಯೇ ಹಲವು ಪ್ರಾದೇಶಿಕತೆಗಳನ್ನು ಗುರುತಿಸುವುದಿದೆ. ಅದರಂತೆ ಕರ್ನಾಟಕದ ಸಂದರ್ಭದಲ್ಲಿ ಉತ್ತರ ಕರ್ನಾಟಕ, ಹೈದರಾಬಾದ ಕರ್ನಾಟಕ, ದಕ್ಷಿಣ ಕರ್ನಾಟಕ, ಮಲೆನಾಡು ಕರ್ನಾಟಕ, ಕರಾವಳಿ ಕರ್ನಾಟಕ, ಇತ್ಯಾದಿ ಪ್ರಾದೇಶಿಕತೆಗಳಿಗನುಗುಣವಾದ ಕಾದಂಬರಿಗಳು ರಚನೆಯಾಗಿವೆ. ಸಾಹಿತ್ಯದಲ್ಲಿ ಈ ಪ್ರಾದೇಶಿಕತೆಯ ಅಭಿವ್ಯಕ್ತಿಗೆ ಹೆಚ್ಚು ಸೂಕ್ತವಾಗುವ ಪ್ರಕಾರವೆಂದರೆ ಕಾದಂಬರಿ. ಕನ್ನಡದಂತೆ ಇತರ ಭಾಷೆಗಳ ಕಾದಂಬರಿಗಳಲ್ಲೂ ಇಂತಹ ಪ್ರಾದೇಶಿಕ ಪರಿಕಲ್ಪನೆಗಳು ಇರಬಹುದಾದುದು ಸರ್ವೇಸಾಮಾನ್ಯ. ಅಂತಹ ಉಪ ಪ್ರಾದೇಶಿಕತೆಗಳನ್ನು ಗುರುತಿಸುವುದು ಇಲ್ಲಿನ ಉದ್ದೇಶವಲ್ಲ.

ಅಧ್ಯಯನಕ್ಕೆ ಎತ್ತಿಕೊಳ್ಳಲಾದ ಕೃತಿಗಳಲ್ಲಿ ಆಯಾ ರಾಜ್ಯಕ್ಕೆ ಸಂಬಂಧಪಟ್ಟ ಸಾಂಸ್ಕೃತಿಕ ಅನನ್ಯತೆಗಳು ಹೇಗೆ ಬಿಂಬಿತವಾಗಿವೆ ಎನ್ನುವುದನ್ನು ಕಂಡುಕೊಳ್ಳುವುದೇ ಇಲ್ಲಿನ ಉದ್ದೇಶವಾಗಿದೆ. ಅಂತಹ ಅನನ್ಯತೆಯ ಅಂಶಗಳು ಆಯಾ ರಾಜ್ಯದ ನಿರ್ದಿಷ್ಟ ಪ್ರದೇಶಕ್ಕಷ್ಟೇ ಸಂಬಂಧಪರಟ್ಟಿಬಹುದಾದರು ಹೊರರಾಜ್ಯವೊಂದರಲ್ಲಿ ನಿಂತು ಪರಿಭಾವಿಸುವಾಗ ಅವುಗಳನ್ನು ಒಟ್ಟಾರೆಯಾಗಿ ಆ ಇಡಿ ರಾಜ್ಯದ ಪ್ರಾದೇಶಿಕತೆಯೆಂದು ಪರಿಗಣಿಸಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ ನಾವು ತೆಲುಗು, ತಮಿಳು, ಮಲಯಾಳಂ ಮತ್ತು ತುಳು ಭಾಷೆಯ ಕಾದಂಬರಿಗಳಲ್ಲಿ ಅಭಿವ್ಯಕ್ತವಾಗಿರುವ ಆಂಧ್ರ, ತಮಿಳುನಾಡು, ಕೇರಳ ಹಾಗೂ ತುಳು ನಾಡುಗಳ ಪ್ರಾದೇಶಿಕತೆಯ ಸ್ವರೂಪವನ್ನು ಕಂಡುಕೊಳ್ಳಲು ಪ್ರಯತ್ನಿಸಬಹುದಾಗಿದೆ. ಮೊದಲಿಗೆ ಈ ಪ್ರಾದೇಶಿಕತೆಯ ಅಂಶಗಳು ಅಥವಾ ಲಕ್ಷಣಗಳು ಯಾವುವೆಂದು ತಿಳಿದುಕೊಳ್ಳುವುದು ಅವಶ್ಯವಾಗಿದೆ. ನಿರ್ದಿಷ್ಟ ರಾಜ್ಯದ ಜನಪದ ಮತ್ತು ಜಾನಪದಕ್ಕೆ ಸಂಬಂಧಪಟ್ಟ ಸಾಂಸ್ಕೃತಿಕ ವಿವರಗಳ ವ್ಯಾಪಕಾರ್ಥದಲ್ಲಿ ಅಲ್ಲಿನ ಪ್ರಾದೇಶಿಕತೆಯ ಅಂಶಗಳೆನ್ನಿಸುತ್ತವೆ.

ಅಂದರೆ ಜನತೆ ಅವರ ಆಚಾರ-ವಿಚಾರ, ನಂಬಿಕೆ-ನಡವಳಿಕೆ, ಆಟ-ವಿನೋದ, ಆಹಾರ-ವಿಹಾರ, ಉಡುಗೆ-ತೊಡುಗೆ, ಕುಟುಂಬಪದ್ಧತಿ, ಜೀವನಾವರ್ತನದ ಮತ್ತು ವಾರ್ಷಿಕಾವರ್ತನದ ಆಚರಣೆಗಳು - ಇತ್ಯಾದಿಗಳೆಲ್ಲ ನಿರ್ದಿಷ್ಟ ರಾಜ್ಯಕ್ಕೆ ಅನನ್ಯವೆಂಬಂತೆ ಒಂದು ಕೃತಿಯಲ್ಲಿ ಬಿಂಬಿತವಾಗಿದ್ದರೆ ಅವುಗಳನ್ನು ಅಲ್ಲಿನ ಪ್ರಾದೇಶಿಕತೆ ಎನ್ನುಬಹುದು ಇವುಗಳ ಜತೆಗೆ ಆ ರಾಜ್ಯದ ಐತಿಹಾಸಿಕ ಹಾಗೂ ಪಾರಂಪರಿಕ ಸಂಗತಿಗಳೂ ಬರುತ್ತವೆ. ಉಪಪ್ರಾದೇಶಿಕ ಭಾಷೆಯೂ ಇಲ್ಲಿ ಪ್ರಮುಖ ಸ್ಥಾನವನ್ನು ಪಡೆದುಕೊಳ್ಳುತ್ತದೆ. ಆದರೆ ಅನುವಾದಿತ ಕೃತಿಗಳ ಸಂದರ್ಭದಲ್ಲಿ ಮೂಲ ಕೃತಿಯ ಭಾಷಿಕ ಅನನ್ಯತೆಗಳನ್ನು ಗುರುತಿಸುವುದು ಕಷ್ಟಸಾಧ್ಯ ಒಂದು ವೇಳೆ ಭಾಷಾಂತರ ಸಾಮರ್ಥಕ್ಕೂ ದಕ್ಕದ ಮೂಲ ಭಾಷೆಯ ಸಾಂಸ್ಕೃತಿಕ ನುಡಿಗಟ್ಟು , ಪದಗುಚ್ಛ ಪರಿಭಾಷೆಗಳಿದ್ದರೆ ಅಂಥವುಗಳನ್ನಷ್ಟೇ ಇಲ್ಲಿ ಗುರುತಿಸಲು ಸಾಧ್ಯ.

೫.೧ ತಮಿಳು ಕಾದಂಬರಿಗಳಲ್ಲಿನ ಪ್ರಾದೇಶಿಕ ಅನನ್ಯತೆ

ರಾಜಂ ಅಯ್ಯರ್ ಅವರ ವಸಾಹತು ಕಾಲದ ತಮಿಳು ಕಾದಂಬರಿ 'ಕಮಲಂಬಾಳ್ ಚರಿತ್ರಂ' ಎಂಬ ಕೃತಿಯನ್ನು ಕೆ.ಸಂಪದ್ಗಿರಿರಾಯರು 'ಬಾಳಿನ ರಹಸ್ಯ' ಎಂಬ ಶೀರ್ಷಿಕೆಯಲ್ಲಿ ಕನ್ನಡಕ್ಕೆ ಅನುವಾದಿಸಿದ್ದಾರೆ. ಈ ಕಾದಂಬರಿಯಿಂದ ತಮಿಳು ನಾಡಿನ ಆ ಕಾಲದ ಸಾಂಸ್ಕೃತಿಕ ವಿವರಗಳನ್ನು ತಿಳಿದುಕೊಳ್ಳ ಬಹುದಾಗಿದೆ. ಮುನ್ನುಡಿಯಲ್ಲಿ ಲೇಖಕರು ಹೇಳುವ ಮಾತು :- 'ಕಮಲಾಂಬಾಳ್‌ಚರಿತ್ರಂ' ಎಂದರೆ ಕಮಲಾಂಬಾಳ ಎಂಬ ಹೆಂಗಸಿನ ಜೀವನ ಚರಿತ್ರೆಯಷ್ಟೆ ಅಲ್ಲ. ಆ ಕಾಲದಲ್ಲಿ ದಕ್ಷಿಣ ದೇಶದಲ್ಲಿ ನಮ್ಮೆಲ್ಲರಿಗೂ ಪರಿಚಿತವಾದ, ಅನುಭವಿಸಲಾರದ, ಸಾಮಾನ್ಯ ಸಂಘಟನೆಗಳ ವರ್ಣನೆ ಈ ಕಾದಂಬರಿಯಲ್ಲಿದೆ. (ಸಂಪದ್ಗಿರಿರಾಯರು ಎಸ್.ಕೆ.,೧೯೫೫ ,ಪುಟ -೨)

ಈ ರೀತಿ ಹೇಳುವಲ್ಲಿ ಕಾದಂಬರಿಯು ದಕ್ಷಿಣದ ತಮಿಳುನಾಡಿನ ಆ ಕಾಲದ ಸಾಮಾಜಿಕ ಸ್ಥಿತಿಗತಿಗಳ ಸುತ್ತ ಕೇಂದ್ರೀಕೃತವಾಗಿರುವ ಅಂಶ ವ್ಯಕ್ತವಾಗುತ್ತದೆ. ಈ ಕಾದಂಬರಿಗಳಲ್ಲಿ ಬರುವ ಪಾತ್ರಗಳ ಹೆಸರುಗಳೇ ಆ ಪ್ರದೇಶದ ಅನನ್ಯತೆಯನ್ನು ಸಾರುತ್ತವೆ. ಕಮಲಾಂಬಾಳ್, ಸುಬ್ರಮಣ್ಯ ಅಯ್ಯರ್, ಪೊನ್ನಮ್ಮಾಳ್, ಅಪ್ಪಯ್ಯದೀಕ್ಷಿತರು, ಅಮ್ಮಯಸಪ್ಪ ಪಿಳ್ಳೆ, ಪೇಯಾಂಡಿದೇವನ್, ಮುತ್ತುಸ್ವಾಮಿ ಅಯ್ಯರ್, ಶ್ರೀನಿವಾಸನ್, ಮೀನಾಕ್ಷಿಸುಂದರಂ, ನಟರಾಜನ್, ವಿಟ್ಟಲಭಟ್ಟರು - ಹೆಸರುಗಳೇ ಆ ಪ್ರದೇಶದಲ್ಲಿ ಪ್ರಚಲಿತವಿದ್ದ, ರೂಢೀಗತವಾದ ಸಂಪ್ರದಾಯವನ್ನು ತಿಳಿಸುತ್ತವೆ. ಹಾಗೆಯೇ ಹೆಸರುಗಳು ಅವರ ಸ್ಥಾನವನ್ನು ಗುರುತಿಸಿಕೊಳ್ಳುತ್ತವೆ. ಉದಾಹರಣೆಗೆ : ಪೇಯಾಂಡಿದೇವನು ಒಬ್ಬ ವ್ಯಾಪಾರಿ ಹಾಗೂ ಕಳ್ಳನೂ ಆಗಿರುತ್ತಾನೆ. ಸುಬ್ರಹ್ಮಣ್ಯ ಅಯ್ಯರ್ ಬ್ರಾಹ್ಮಣ ಕುಟುಂಬದ ಆದರ್ಶವ್ಯಕ್ತಿ.ಸ'ಅಯ್ಯರ್' ಮನೆತವನ್ನು ಸೂಚಿಸುತ್ತದೆ. ಅಪ್ಪಯ್ಯ ದೀಕ್ಷಿತರು ಪಾತ್ರವು ಶಾಸ್ತ್ರ ಪರಂಪರೆಯನ್ನು ಸೂಚಿಸುತ್ತದೆ. ಪೊನ್ನಮ್ಮಾಳ್ ಅಲ್ಲಿನ ಸಾಮಾನ್ಯ ಮಹಿಳೆಯರ ಪ್ರತಿನಿಧಿಯಾಗಿ ಕಾಣುತ್ತಾಳೆ.

ಕಮಲಾಂಬಾಳ್ ಕಾದಂಬರಿಯು ತಮಿಳು ನಾಡಿನ ಆ ಕಾಲದ ಸಾಮಾಜಿಕ ಸ್ಥಿತಿಗತಿ ಸಂಪ್ರದಾಯ, ಆಚರಣೆಗಳ ವಿವರಣೆಗಳನ್ನು ಒದಗಿಸುತ್ತದೆ. ತಮಿಳು ನಾಡಿನ ವಿಶಿಷ್ಟ ಆಚರಣೆಯಾದ 'ಜಲ್ಲಿಕಟ್ಟು' ಎನ್ನುವ ಜಾತ್ರೆಯ ವಿವರಣೆಯು 'ಬಾಳಿನ ರಹಸ್ಯ' ಕಾದಂಬರಿಯಲ್ಲಿ ವರ್ಣಿತವಾಗಿದೆ. ''ಮಧುರೆ, ತಿರುನಲ್ವೇಲಿ ಜಿಲ್ಲೆಗಳಲ್ಲಿ 'ಜಲ್ಲಿಕಟ್ಟು' ಎಂದು ಒಂದು ಉಂಟು. ಅದೇನೆಂದರೆ ಇನ್ನೂರು ಮೂನ್ನೂರು ದನಗಳನ್ನು ಒಂದು ಆವರಣದಲ್ಲಿ ಕೂಡಿಹಾಕಿ ಅವುಗಳ ಕತ್ತಿನಲ್ಲಿ ಒಂದು ಕುಣಿಕೆ ಹಾಕಿ ಒಂದೊಂದಾಗಿ ಹೊರಕ್ಕೆ ಬಿಟ್ಟು ಹಿಡಿಯುವುದು. ಅದು ಹಳ್ಳಿಯ ಜನರಿಗೆ ಒಂದು ದೊಡ್ಡ ಹಬ್ಬವಾದುದರಿಂದ ಸಾವಿರಗಟ್ಟಲೆಯ ಜನರು ಬಂದು ಸೇರುವರು. 'ಜಲ್ಲಿಕಟ್ಟು' ಎಂದು ಹೇಳಿದರೆ ಸಾಕು. ಅವರಿಗೆ ಆಗುವ ಉತ್ಸಾಹಕ್ಕೆ ಎಣೆಯೇ ಇಲ್ಲ. ಯಾವ ಕೆಲಸವಿದ್ದರೂ ಎಲ್ಲವನ್ನೂ ಒತ್ತಟ್ಟಿಗಿಟ್ಟು ಗಂಧವನ್ನು ಬಳಿದುಕೊಂಡು ವಾಸನೆ ಪಚ್ಚೆತೆನೆಯ ಹಾರಗಳನ್ನು ಧರಿಸಿಕೊಂಡು, ಬೆರಳುಗಳಿಗೆಲ್ಲ ಬೇಕಾದಷ್ಟು ಬೆಳ್ಳಿ ಉಂಗುರಗಳನ್ನು ಹಾಕಿಕೊಂಡು ಇಷ್ಟು ಸಂಭ್ರಮದಿಂದ ಸಣ್ಣ ಸಣ್ಣ ಗುಂಪುಗಳಾಗಿ ಕೈಯಲ್ಲಿ 'ಚೋಟಾದುಡಿ' ಗಳನ್ನು ಹಿಡಿದುಕೊಂಡು ಹೊರಟು ಬಂದು ಮರದ ರೆಂಬೆಗಳ ಮೇಲೆ ಗಾಡಿಗಳ ಗೂಡುಗಳಲ್ಲಿ, ಮನೆಗಳ ಛಾವಣಿಗಳ ಮೇಲೆ ಗೋಡೆಗಳ ಪಕ್ಕದಲ್ಲಿ, ದಾರಿಗಳಲ್ಲಿ ಎಲ್ಲೆಲ್ಲಿಯೂ ನಿಬಿಡವಾಗಿ ತುಂಬಿ ಬಿಡುವರು. ಗಂಡಸರು ಮಾತ್ರ ಈ ಉತ್ಸವದಲ್ಲಿ ಪಾಲ್ಗೊಳ್ಳದೆ- ಸ್ತ್ರೀಯರು ಸಹ ಮೂಗಿರುವ ಮನುಷ್ಯರನ್ನು ದನಿ ಹೋಗುವಷ್ಟು ದೂರ ಅಟ್ಟಬಲ್ಲ ಹಳದಿ ತೈಲ, ಬೇವಿನೆಣ್ಣೆ, ಮುಂತಾದ 'ವಾಸನೆ' ತೈಲಗಳನ್ನು ಬಳೆದು ಕೊಂಡು ಸೇವಂತಿಗೆ ಹೂವಿನ ಸರ, ಹೊಸಸೀರೆ, ಪಾಣಿಮಣಿ, ಬಿಚ್ಚೋಲೆ, ಮುಂತಾದ ಸರ್ವಾಭರಣ ಭೂಷಿತರಾಗಿ ಪುರಷರೊಡನೆ ಭೇದವಿಲ್ಲದೆ ಬಂದು ನಿಂತ ಬಿಡುವರು. ಹೊಳೆಯುವಂತೆ ಹಸನುಮಾಡಿದ, ತೈಲಗಳನ್ನು ಸವರಿರುವ, ಕೋಲುಗಳನ್ನು ಹಿಡಿದುಕೊಂಡು ಮೈಮೇಲೆಲ್ಲ ಬೇಕಾದಷ್ಟು ಹೂಮಾಲೆಗಳನ್ನು ಹಾಕಿಕೊಂಡು, ಕತ್ತಿನಲ್ಲಿ ವಸ್ತ್ರಧರಿಸಿ, ಗಂಭೀರವಾದ ನಡಿಗೆಯಿಂದಲೂ ಭಯಂಕರವಾದ ದೃಷ್ಟಿಯಿಂದಲೂ ನೋಡಿದವರು ವೃಷಭರಾಜರೆಂದು ಹೇಳಬಹುದಾದ ಉತ್ತಮ ರಾಸಿನ ಹೋರಿಗಳು ಆವರಣದಲ್ಲಿ ಗುಂಪು ಸೇರುವುದೂ, ಅಲ್ಲಿ ನಿಂತು ಕತ್ತಿನಲ್ಲಿ ಕುಣಿಕೆ ಹಾಕಿದ ಕೂಡಲೆ ಒಂದೇ ಓಟವಾಗಿ ಓಡುವುದೂ, ಕೆಲವು ಜನರು ತಮ್ಮ ಪ್ರಾಣವನ್ನೂ ಲೆಕ್ಕಿಸದೆ ಅವುಗಳ ಮೇಲೆ ಹಾಯುವುದೂ, ಹಿಡಿಯುವುದೂ,

ಕತ್ತಿನಲ್ಲಿ ಸುತ್ತಿದ್ದ ವಸ್ತ್ರವನ್ನು ಬಿಚ್ಚಿಕೊಂಡು 'ಹಾಯ್' ಎಂದು - ಆ ಜನರನ್ನು ಹೋರಿಗಳು ಎತ್ತಿಹಾಕಿ ಅಲಕ್ಷ್ಯವಾಗಿ ಓಡುವುದೂ, ಅದನ್ನು ಜನರು ನಿಂತು ನೋಡುತ್ತಿದ್ದರು. ಓಡದೆ ನಿಂತ ಹೋರಿಯನ್ನು ಎಲ್ಲರೂ 'ನಿಂತುಹಾಯುವ ಹೋರಿ' ಎಂದು ಹೇಳುವುದು ರೂಢಿಯಾಗಿತ್ತು. ಅಂತಹ ಹೋರಿಗಳನ್ನು ಓಡಿಸಲು ಹುರಿದುಂಬಿಸಲು ಅದಕ್ಕೆ 'ಡುರ್ರಿ ಡುರ್ರಿ' ಎಂದು ರೇಗಿಸಿ, ಕೆರಳಿಸಿ ವಿನೋದವನ್ನು ಅನುಭವಿಸುವರು (ಸಂಪದ್ಗಿರಿರಾಯರು .ಕೆ. ೧೯೫೫, ಪುಟ-೩೦).

ಕಾದಂಬರಿಯಲ್ಲಿ ವರ್ಣಿತವಾಗಿರುವ ಇದು ತಮಿಳು ನಾಡಿನಲ್ಲಿರುವ ಕೃಷಿ ಸಂಸ್ಕೃತಿಯನ್ನು ವಿವರಿಸುತ್ತದೆ. ಇದು ತಮಿಳುನಾಡಿನ ಕೃಷಿಯಲ್ಲಿ ಅಲ್ಲಿನ ವಿಶಿಷ್ಟವಾದ ಆಚರಣೆಯಾಗಿದೆ. ಇಂತಹ ಹಬ್ಬದ ಆಚರಣೆಯಲ್ಲಿ ಪುರುಷರು ಮತ್ತು ಸ್ತ್ರೀಯರು ಭೇದಭಾವವಿಲ್ಲದೆ ಪಾಲ್ಗೊಳ್ಳುತ್ತಾರೆ. ಸ್ತ್ರೀಯರು ಅದನ್ನು ನೋಡಿ ಆನಂದಿಸುತ್ತಾರೆ, 'ಜಲ್ಲಿಕಟ್ಟು' ಎನ್ನುವ ಹಬ್ಬದ ಆಚರಣೆಯು ಅಲ್ಲಿನ ವೈಶಿಷ್ಟವನ್ನು ಕಟ್ಟಿಕೊಡುತ್ತದೆ.

ಈ ಹಬ್ಬದ ಆಚರಣೆಯಲ್ಲಿ ಸ್ತ್ರೀಯರು - ಪುರುಷರು ಧರಿಸುವ ವೇಷಭೂಷಣಗಳ ಬಳಸುವ ಸುಗಂಧದ್ರವ್ಯಗಳು, ಆಭರಣಗಳು ಅಲ್ಲಿನ ವೈಶಿಷ್ಟ್ಯ ರೀತಿ ನೀತಿಗಳನ್ನು ವ್ಯಕ್ತಪಡಿಸುತ್ತವೆ. 'ಗಂಧ'ವನ್ನು ಹಚ್ಚಿಕೊಳ್ಳುವುದು, ಪಚ್ಚೆತೆನ ಸರಗಳು, ಪಾಶೀಮಣಿ, ಉರುಟುದಾರಗಳು ಅವರ ಪ್ರಾದೇಶಿಕ ಲಕ್ಷಣಗಳನ್ನು ಪ್ರತಿಬಿಂಬಿಸುತ್ತವೆ. ರುಮಾಲು ಮತ್ತು ಅಂಚಿನ ವಸ್ತ್ರಗಳು ಆ ಪ್ರಾದೇಶಿಕ ಜನರನ್ನು ಗುರುತಿಸಲು ಸಹಾಯವಾಗುತ್ತದೆ. ಅಲ್ಲಿನ ಉದ್ಯೋಗಸ್ಥರು ಧರಿಸುತ್ತಿದ್ದ ವಸ್ತ್ರವಿನ್ಯಾಸವು ಆ ಪ್ರದೇಶದ ಅನನ್ಯತೆ ಸಾರುತ್ತದೆ. ''ಒಳಗೆ ಷರ್ಟು' ಮೇಲೆ ಅಂಗಿ, ಕರವಸ್ತ್ರ, ಇಜಾರು, ಜೋಡು, ಛತ್ರಿ, ರುಮಾಲು, ಗಡಿಯಾರ ಮೊದಲಾದುವುಗಳು ಕಾದಂಬರಿಯಲ್ಲಿ ತಿಳಿದು ಬರುವಂತೆ ತಮಿಳುನಾಡಿನ ಆ ಕಾಲದ ಜನರ ವೇಷ ಭೂಷಣಗಳಾಗಿದ್ದವು.

ಅಲ್ಲಿನ ಬ್ರಾಹ್ಮಣ ಸಮುದಾಯದಲ್ಲಿ ಪುರಷರು ತಲೆಯಲ್ಲಿ ಜುಟ್ಟನ್ನು ಕಟ್ಟುತ್ತಿದ್ದರು ಎನ್ನುವುದು ಕಾದಂಬರಿಯಲ್ಲಿ ಬರುವ ವಿವರಣೆಗಳನ್ನು ಕಾಣಬಹುದು. 'ಮುತ್ತುಸ್ವಾಮಿ ಅಯ್ಯರ್ ಬಳಿ ಬಂದು 'ಕಾಸುಕೊಡಪ್ಪಾ' ಎಂದು ಅವರ ಬೆನ್ನಿಣ ಮೇಲೆ ಹತ್ತಿ ಅವರ 'ಕುಡುಮಿಯನ್ನು' (ತಲೆಯ ಗಂಟು ಜುಟ್ಟನ್ನು) ಎಳೆಯಲುಯತ್ನಿಸಿದ'' (ಸಂಪದ್ಗಿರಿರಾಯರು .ಕೆ, ೧೯೫೫, ೩೧) ಇಲ್ಲಿ ಬಳಕೆಯಲ್ಲಿ ಬಂದಿರುವ 'ಕುಡುಮಿ' ಪದವು ಅಲ್ಲಿನ ಪ್ರಾದೇಶಿಕತೆ ವಿವರಿಸುತ್ತದೆ. ತಲೆಯಲ್ಲಿ ಬಿಟ್ಟಿರುವ ಜುಟ್ಟನ್ನು ವಿವರಿಸುತ್ತದೆ. ಇದರಿಂದ ಅಲ್ಲಿನ ಪುರುಷರು ಜುಟ್ಟನ್ನು ಬಿಟ್ಟುಕೊಳ್ಳುತ್ತಾರೆ ಎನ್ನುವುದು ವ್ಯಕ್ತವಾಗುತ್ತದೆ.

ತಮಿಳುನಾಡಿನ ಧಾರ್ಮಿಕ ಆಚರಣೆಗಳಲ್ಲಿ 'ಆದ್ರ್ರಾದರ್ಶನ' ಕೂಡ ಒಂದು ಇದು ಅಲ್ಲಿನ ಧಾರ್ಮಿಕ ಆಚರಣೆಯ ವೈಶಿಷ್ಟತೆಯನ್ನು ತಿಳಿಸುತ್ತದೆ. 'ಆದ್ರ್ರಾದರ್ಶನ' ಆಚರಣೆಯಲ್ಲಿ ದೇವರ ಉತ್ಸವವನ್ನು ನೂಡುತ್ತಾರೆ ಆ ದಿನ ಊರಿನ ಜನರು ಬೀದಿಯಲ್ಲೆಲ್ಲ ರಂಗವಲ್ಲಿ ಹಾಕಿ ಅಲಂಕಾರಗಳನ್ನು ಮಾಡಿದ್ದರು. ಮನೆಗಳನ್ನು ಮಾವಿನ ತಳಿರು ತೋರಣಗಳಿಂದ ಅಲಂಕರಿಸಿದರು. ಪ್ರತಿಯೊಬ್ಬ ಹೆಂಗಸೂ ತಾನು ರತಿ ಎಂದು ಭಾವಿಸಿಕೊಂಡು ಉಲ್ಲಾಸವಾಗಿ ನಡೆದು ಹೋಗುತ್ತಿದ್ದಳು. ಗಂಡಸರೆಲ್ಲರೂ ಸ್ನಾನಮಾಡಿ ಪಚ್ಚೆನ್ನುಟ್ಟು ವಿಭೂತಿ ಧರಿಸಿ ಮನ್ಮಥಾಕಾರಗಳಾಗಿದ್ದರು. 'ನಟರಾಜ ದೇವರ' ಉತ್ಸವ ಮೇರವಣಿಗೆ ಮುಖಾಂತರ ನಡೆಯುತ್ತವೆ. ಸೇವಂತಿಗೆ ಹೂವಿನ ಮಾಲೆಗಳಿಂದ ಸಿಂಗರಿಸಲ್ಪಟ್ಟ ವಿಮಾನದಲ್ಲಿ, ಎರಡು ಪಕ್ಕಗಳಲ್ಲಿಯೂ ಇಬ್ಬರೂ ಚಾಮರವನ್ನು ಬೀಸುತ್ತಿರಲು, ನಾದಸ್ವರಗೋಷ್ಠಿ ಮುಂದೆ ಹೋಗುತ್ತಿರಲು ಭಾಗವತಗೋಷ್ಠಿ ಹಿಂದೆ ಬರುತ್ತಿರಲು ಕೈಯಲ್ಲಿ ಆಯುಧವನ್ನು ಧರಿಸಿ, ಜಟೆಯಲ್ಲಿ ಗಂಗೆಯನ್ನು ಹೊತ್ತು ಚಂದ್ರಮೌಳಿಯಾಗಿ, ನಂಜುಂಡ ಕಂಠದಿಂದ ಕೂಡಿದವನಾಗಿ, ಪಾರ್ವತಿಯನ್ನು ಅರ್ಧಾಂಗಿಯನ್ನಾಗಿ ಮಾಡಿಕೊಂಡು, ನೆಲವನ್ನು ನೋಡುವ ಕುಂಚಿತಪಾದನಾಗಿಯೂ, ಒಂದು ಕಾಲನ್ನು ಮೇಲೆತ್ತಿ ವರದ ಹಸ್ತವನ್ನು ತೋರಿಸುತ್ತ, ಚರ್ಮಾಂಬರವನ್ನು ಧರಿಸಿದವಾನಗಿಯೂ ತೇಜೋಮಯನಾಗಿಯೂ, ಬಡವರಲ್ಲಿ ಬಡವನಾಗಿಯೂ, ಸಾಕ್ಷತ್ ಕೈಲಾಸಪತಿಯು ಬಿಜಯ ಮಾಡುವಂತ್ತಿತ್ತು.

ಪಾಪವನ್ನುಗೆದ್ದು, ಮೋಹವನ್ನು ಪಡೆದ ಆತ್ಮಕ್ಕೆ ಅದರ ನೈಜ ಸ್ವರೂಪವನ್ನು ತೋರಿಸಿಕೊಟ್ಟು, ಜ್ಞಾನಿಗಳು ಅರ್ಥ ಮಾಡಿಕೊಳ್ಳುವಂತಹ ಒಂದು ವೈಖರಿಯಿಂದ ಕೂಡಿದ ನರ್ತನ ಭಂಗಿಯನ್ನು ತಾಳಿದ ಆ ದೃಶ್ಯವನ್ನು ಕಂಡು ಆ ಊರಿನವರೆಲ್ಲರೂ ಆನಂದ ಸಾಗರದಲ್ಲಿ ಮುಳುಗಿ, ಮೈಮರೆತು, ಪುಳಕಾಂಕಿತರಾಗಿ, ಆಡುತ್ತ, ಹಾಡುತ್ತ, ಓಡುತ್ತ, ಕುಣಿಯುತ್ತ, ''ಶಂಭೋ ಶಂಕರಾ, ದಯಾನಿಧೇ'' ಎಂಬ ಉದ್ಗಾರಗಳಿಂದ ಸ್ತುತಿಸಿ ಆನಂದ ತಾಂಡವವನ್ನು ಮಾಡುವರು.

ಈ ಒಂದು ಆಚರಣೆಯು ಅಲ್ಲಿನ ದೈವದ ನಂಬಿಕೆಯಾಗಿದೆ. ಹಾಗೆಯೇ ಇಲ್ಲಿನ ವಿವರಣೆಯು ಮಧುರೆಯ ಕಟ್ಟಿಶೆಟ್ಟಿ ಮಂಟಪದಲ್ಲಿ ನಮ್ಮ ವಿದ್ವಾಂಸರು ಕಂಬರಾಮಾಯಣದ ಸೀತಾಕಲ್ಯಾಣದ ಭಾಗವನ್ನು ತೆಗೆದು ಕೊಂಡ ಉಪನ್ಯಾಸ ಮಾಡುತ್ತಿದ್ದರು. 'ಕಂಬರಾಮಾಣಯವು' ಅಲ್ಲಿನ ಪ್ರಮುಖ ಗ್ರಂಥವಾಗಿರುವುದು ಕಂಡುಬರುತ್ತದೆ. ಈ ಕೃತಿಯಲ್ಲಿ ಕಂಬರಾಮಾಯಣದ ಪದ್ಯಗಳನ್ನು 'ಕಲ್ಯಾಣಿ' ಪ್ರತಿದಿನ ಹಾಡುತ್ತಿದ್ದಳು. ಇದು ಆ ನಾಡಿನಲ್ಲಿ ಸಂಸ್ಕೃತಿಯ ಭಾಗವಾಗಿದೆ ಎನ್ನುವುದನ್ನು ಸ್ಪಷ್ಟಪಡಿಸುತ್ತದೆ.

ಭೌಗೋಳಿಕತೆಯು ಮತ್ತು ಅಲ್ಲಿನ ಪ್ರದೇಶಗಳ ಹೆಸರುಗಳೇ ಆ ಪ್ರದೇಶದ ಅನನ್ಯತೆಯನ್ನು ಕಟ್ಟಿಕೊಡುತ್ತವೆ. ಕಾದಂಬರಿಯಲ್ಲಿ ವ್ಯಕ್ತಗೊಳ್ಳುವ ಗ್ರಾಮಗಳ, ಪಟ್ಟಣಗಳ ಹೆಸರುಗಳು ವಿಶಿಷ್ಟತೆಯಿಂದ ಕಂಡು ಬರುತ್ತವೆ. ಉದಾ : ಮಧುರೆ, ಶಿರುಕುಳ, ನೆಲ್ಲಿಕುಪ್ಪ, ಮೇಲೈಪಾಳಯಂ, ವೀರಪಾಂಡ್ಯಂ, ಆಡುಸಾಪಟ್ಟಿ, ಕಡುಗನೂರು, ಕುಳ್ಳಪುರಂ, ವಿರುದಕ್ಕಪಟ್ಟಿ, ಸೋರನೂರು, ತೆಂಗರೈ, ಮುಂತಾದ ಗ್ರಾಮಗಳ ಹೆಸರುಗಳು ಉಚ್ಚಾರಣೆಯೇ ವಿಶಿಷ್ಟವಾಗುತ್ತದೆ. ಇವು ಆ ಪ್ರದೇಶದ ಸರಾಗವಾಗಿ ಅವರ ಆಡುಮಾತಿನ ಭಾಷೆಯಲ್ಲಿ ಬಳಸಬಹುದಾದ ಪದಗಳಾಗುತ್ತವೆ. ಇವೆಲ್ಲಾ ಆ ನಾಡಿನ ವೈಶಿಷ್ಟತೆಯನ್ನು, ಪ್ರಾದೇಶಿಕ ಅನನ್ಯತೆಯನ್ನು ವ್ಯಕ್ತಪಡಿಸುತ್ತವೆ. ಅಂದರೆ ನಮ್ಮಲ್ಲಿ ಇಂತಹ ಪದಗಳು ಬಳಕೆಯಲ್ಲಿ ಇಲ್ಲ.

ತಮಿಳು ನಾಡಿಗೆ ವಿಶಿಷ್ಟವಾದ ಜಾತಿ ಸಮುದಾಯಗಳ ಉಲ್ಲೇಖಗಳು ಕಾದಂಬರಿಯಲ್ಲಿನ ವಿವರಗಳಿಂದ ತಿಳಿಯಬಹುದು. ಆ ಪ್ರದೇಶದಲ್ಲಿದ್ದ ಜನಾಂಗಗಳು, ಜಾತಿಯ ಅಲ್ಲಿನ ವಿಶಿಷ್ಟತೆಯನ್ನು ವ್ಯಕ್ತಪಡಿಸುತ್ತದೆ.''ಮುತ್ತುಸ್ವಾಮಿ ಅಯ್ಯರ್ ಇಷ್ಟಮಿತ್ರ ಬಂಧುಗಳು ಮಾತ್ರ ಅವರ ದುಃಖವನ್ನು ತಮ್ಮ ದುಃಖವೆಂದು ತಿಳಿದು ಅವಕಾಶವಿದ್ದಾಗಲೆಲ್ಲ , ಅವರ ಮಗು ಕಾಣದೆ ಹೋದ ಕಥೆಯನ್ನು ಹೇಳುತ್ತಿದರು. ಆದರೆ ಈ ಪ್ರಪಂಚ ಒಂದು ಕ್ಷಣವೂ ಬಿಡುವಿಲ್ಲದೆ ಸುತ್ತಿಕೊಂಡೇ ಇತ್ತು. ಹಜಾಮ ಮಾರಿಯಪ್ಪನು ಕ್ಷೌರ ಮಾಡುವುದೂ, ಅಗಸ ನಾಗನು ಬಟ್ಟೆ ಒಗೆಯುವುದೂ ಕುಂಬಾರ ಕುಟ್ಟಿಯನು ಮಡಿಕೆ ಮಾಡುವುದೂ, ವೇಂಬಪಿತ್ತನೆಂಬ ಅಕ್ಕಸಾಲಿಗನು ಬೆಳ್ಳಿ, ಚಿನ್ನವನ್ನು ತಟ್ಟುವುದೂ, ಮೂಕನು ದನ ಕಾಯುವುದೂ, ಶ್ಯಾನುಭಾಗ ಮುತ್ತುಪಿಳ್ಳೆ ಕಳ್ಳನಮಸ್ಕಾರ ಹಾಕುವುದೂ, ಶೇಷಶೆಟ್ಟಿ ಕಲ್ಲು ಸಕ್ಕರೆ ಮಾರುವುದೂ, ವೈದಿಕ ರಾಮಣ್ಣನು ಬ್ರಾಹ್ಮಣಾರ್ಥದ ಊಟಗಳನ್ನು ಮಾಡುವುದೂ, ವಕೀಲ್ ಶೇಷಯ್ಯ ಕೋರ್ಟಿನ ಮುಂಭಾಗದಲ್ಲಿಯೇ ಲೂಟಿ ಮಾಡುವುದೂ , ಈ ವಿವರಗಳೆಲ್ಲವೂ ಆ ಊರಿನ ಆ ಪ್ರದೇಶದಲ್ಲಿ ಜಾತಿಗಳನ್ನು ಅವರ ವ್ಯಕ್ತಿತ್ವಗಳನ್ನು ವ್ಯಕ್ತಪಡಿಸುತ್ತದೆ.

''ಶಿರುಕುಳದ ಪಕ್ಕದಲ್ಲಿ ಕಡುಗನೂರು, ಕುಳ್ಳಪುರಂ, ವಿರುದಕ್ಕಪಟ್ಟಿ ಸೋರನೂರು ಮುಂತಾದ ಪ್ರಬಲವಾದ ಗ್ರಾಮಗಳುಂಟು, ಅಲ್ಲಿನ ಮಹಾಜನಗಳ ಕಸಬು ಎಂದರೆ ಕಣಿ ಹೇಳುವುದು, ಪರಿಚಾರಿಕೆ ಮಾಡುವುದು, ಶ್ರಾದ್ಧದ ಊಟಮೂಡುವುದು, ಸುಳ್ಳುಸಾಕ್ಷಿ ಹೇಳುವುದು ಮುಂತಾದವು''. (ಅದೇ ಪುಟ : ೫೯)

ಈ ವಿವರಗಳಿಂದ ತಿಳಿಯುವಂತ ಸಂಗತಿಯೆಂದರೆ ಕೆಲವೊಂದು ಕೆಲಸಗಳಿಗೆ ಸಮುದಾಯಗಳ ಜನರು, ಗ್ರಾಮಗಳು ಸೀಮಿತವಾಗಿರುತ್ತವೆ. ಅವರು ಆ ಕೆಲಸಗಳಿಗೆ ನೇಮಿಸಲ್ಪಟ್ಟಿರುವ ವಿಶಿಷ್ಟತೆಯೂ ಕಂಡು ಬರುತ್ತದೆ. ಇದುವೇ ಆ ಸಮುದಾಯದ ಜನರ ಅವರು ಜೀವನ ವೃತ್ತಿಯಾಗಿರುತ್ತದೆ ಎನ್ನುವುದು ವ್ಯಕ್ತವಾಗುತ್ತದೆ.

ಈ ರೀತಿಯ ಸಮುದಾಯಗಳು ತಮಿಳುನಾಡಿನಲ್ಲಿ ಮಾತ್ರ ಸಿಗುತ್ತವೆ. ಆದಕ್ಕಾಗಿ ಇದು ಅಲ್ಲಿನ ಅನನ್ಯತೆಯ ಗುರುತಾಗಿ ಕಾಣಿಸಿಕೊಳ್ಳುತ್ತದೆ.

ಇಲ್ಲಿನ ಮತ್ತೊಂದು ವಿಶೇಷವೆಂದರೆ ಸತ್ತವರ ನೆನಪಿಗಾಗಿ ಆ ದಿನ ಶ್ರಾದ್ಧವೆಂಬ ಆಚರಣೆ ಜಾರಿಯಲ್ಲಿದೆ. ಈ ಶ್ರಾದ್ಧ ಮಾಡುವಾಗ ಅಲ್ಲಿನ ಶಾಸ್ತ್ರಿಗಳು ಹೋಗಿ ಊಟಮಾಡಿ ಬರುವವರೆಗೆ ಯಾರು ಊಟ ಮಾಡುವುದಿಲ್ಲ. ಇದರಿಂದ ಆ ಪ್ರದೇಶಗಳಲ್ಲಿ ಅಲ್ಲಿನ ಶಾಸ್ತ್ರಿ ಸಂಪ್ರದಾಯವು ಈ 'ಶ್ರಾದ್ಧ' ಆಚರಣೆಯನ್ನು ನೆಡೆಸಿ ಕೊಡುವುದರಿಂದಲೇ ಜೀವನ ಸಾಗಿಸುತ್ತಿರುವುದು ವಿಶಿಷ್ಟ ಸಂಗತಿ ಇದು ಆ ಕಾಲದ ಬ್ರಾಹ್ಮಣ ಸಮುದಾಯದ ಆಚಾರ ವಿಚಾರಗಳನ್ನು ಕಮಲಂಬಾಳ್ ಕಾದಂಬರಿಯು ಕಟ್ಟಿಕೊಡುತ್ತದೆ.

ಮದುವೆ ಸಂಪ್ರದಾಯ : ವಿವಾಹವು ಒಂದು ಪ್ರದೇಶದ, ನಾಡಿನ, ಜನರ ವಿಶಿಷ್ಟತೆಯನ್ನು ಆ ಪ್ರದೇಶದ ಲಕ್ಷಣವನ್ನು ವ್ಯಕ್ತಪಡಿಸುತ್ತದೆ.

ಮೊದಲು ತಂದೆ ತಾಯಿಗಳು ಹುಡುಗಿಯನ್ನು ನೋಡಿ ಅವಳ ಜಾತಕವನ್ನು ಮತ್ತು ಹುಡುಗನ ಜಾತಕವನ್ನು ತಾಳೆ ಹಾಕಿ ನೋಡಿ ಹೊಂದಾಣಿಕೆ ಬಂದರೆ ಅವರಿಗೆ ಮದುವೆ ಮಾಡುವ ನಿಶ್ಚಯ ಮಾಡುತ್ತಾರೆ. ಮದುವೆಗೆ ಮುಂಚೆ 'ನಿಶ್ಚಿತಾರ್ಥದ' ಆಚರಣೆ ನಡೆಯುತ್ತದೆ. ನಂತರ ಮದುವೆಯ ದಿನ ಗುರುತು ಮಾಡಿ ಮದುವೆ ನಡೆಯುತ್ತದೆ. ಈ ಮದುವೆಯ ಆಚರಣೆಯು ತುಂಬಾ ವಿಶಿಷ್ಟವಾಗಿ ನಡೆಯುತ್ತದೆ. 'ಹೋಮ ಮಾಡುವುದು' ರಾಮಣ್ಣ ಪುರೋಹಿತರು, ಎಲ್ಲಾ ಕಾರ್ಯಗಳನ್ನು ಮಾಡಿದರು ಲಕ್ಷ್ಮಿಯ ಕೊರಳಿಗೆ ಶ್ರೀನಿವಾಸನು ಮಾಂಗಲ್ಯವನ್ನು ಕಟ್ಟುತ್ತಾನೆ. ಈ ರೀತಿಯಲ್ಲಿ ಮದುವೆಯ ಕಾರ್ಯ ಮುಗಿಯುತ್ತದೆ.

ನಂತರ ಮದುವೆಯಲ್ಲಿ ನಡೆಸುವ ಸಂಭ್ರಮಗಳು, ಆಚರಣೆಗಳು, ಕೆಲವು ಆಟಗಳನ್ನು ನಡೆಯುತ್ತವೆ.

ಮಂಟಪದಲ್ಲಿ ಕೊಡ್ರಿಸಿ, ಅದರಲ್ಲಿ ಉರುಟಣೆಯೂ, ತೆಂಗಿನಕಾಯಿಯನ್ನು ಉರುಳಿಸಿ, ಹೂ ಚೆಂಡಿನಿಂದ್ಲ ಆಟವಾಡುವುದು ಬಹು ಚೆನ್ನಾಗಿರುತ್ತದೆ.

ಈ ಆಟವು ಅಲ್ಲಿನ ವಿಶಿಷ್ಟ ಸಂಪ್ರದಾಯವಾಗಿದೆ. ಮದುವೆಯಾದ ನಂತರ ಪಲ್ಲಕ್ಕಿಯ ಮೇಲೆ ಕೂಡಿಸಿ ಗ್ರಾಮ ಪ್ರದಕ್ಷಿಣೆ ಮಾಡುತ್ತಾ ಮೆರವಣಿಗೆ ಮಾಡುತ್ತಾರೆ. ಸುಬ್ಬರಾಯರು ಮದುವೆಗೆ ಮಾಡಿಸಿರುವ ಸಿದ್ಧತೆಗಳು, ಮನೋರಂಜನೆಗಳು ವಿಶಿಷ್ಟವಾಗಿತ್ತು. ''ಮೂರುಸಾವಿರ ರೂಪಾಯಿ ಮುಡಪಾಗಿ ಕಟ್ಟಿ ಇಟ್ಟಿದ್ದಾರಂತೆ ಮದುವೆಗಾಗಿ, ಕೀವಳೂರು ಕಂದನ್ ಅವರ ನಾದಸ್ವರವಂತೆ, ಹಾಡುವುದಕ್ಕೆ ರಾಘವಯ್ಯಾರ್ ಪೆರಿಯವೈದ್ಧಿ, ಮೃದಂಗಕ್ಕೆ ಗೋವಿಂದ ಸ್ವಾಮಿಯವರು ಆ ಮೇಲೆ ಪಿಟಿಲು ನುಡಿಸುವುದಕ್ಕೆ ನಟರಾಜ ಮುಂತಾದವರು - ಇದೆಲ್ಲ ಅಲ್ಲದೆ ತಿರುಚಾರೂರ್ ರಾಜಲಕ್ಷ್ಮೀಯನ್ನು ಕರೆತಂದಿದ್ದಾರೆ, ಮದುವೆಯ ಸಂಭ್ರಮವನ್ನು ಏರ್ಪಡಿಸಿದ್ದಾರೆ. ಇದು ಅಲ್ಲಿನ ಸಂಪ್ರದಾಯ ವಾಗಿದೆ.

೫.೨ ಮಲಯಾಳಂ ಕಾದಂಬರಿಗಳಲ್ಲಿ ಪ್ರಾದೇಶಿಕ ಅನನ್ಯತೆ

ವಸಾಹತು ಕಾಲಘಟ್ಟದಲ್ಲಿ ಬಂದಂತ ಕಾದಂಬರಿಗಳು ಆ ಕಾಲದಲ್ಲಿಯ ಆಧುನಿಕ ಬದಲಾವಣೆಗಳಿಗೆ ಸ್ಪಂದಿಸಿದವು. ಸಮಾಜ ಸುಧಾರಣೆಯು ಭಾರತದದ ಏಕಘಟಕವಾಗಿ ಕಂಡರೂ ಆಯಾ ಪ್ರದೇಶಗಳಲ್ಲಿ ಉದಯಿಸಿದ ಕಾದಂಬರಿಗಳು ತಮ್ಮ ಭಾಷೆಯ, ನಾಡಿನ ಸಾಂಸ್ಕೃತಿಕ ಅನನ್ಯತೆಗಳಿಂದ, ಭೌಗೋಳಿಕ ಹಿನ್ನೆಲೆಯಿಂದ, ಸಾಮಾಜಿಕ ಅನುಭವಗಳಿಂದಲೇ ರಚನೆಗೊಂಡಿವೆ. ಅದರಂತೆ ಮಲಯಾಳಂ ಕಾದಂಬರಿಗಳು ಕೇರಳದ ಸಾಂಸ್ಕೃತಿಕ ಅನನ್ಯತೆಯನ್ನು ವ್ಯಕ್ತಪಡಿಸುತ್ತವೆ. ಆ ಕಾದಂಬರಿಗಳಲ್ಲಿ ಬರುವ ಪಾತ್ರಗಳು, ಅವುಗಳ ಸಂಸ್ಕೃತಿ ಹಾಗೂ ಜೀವನ ಶೈಲಿಯು ಅಲ್ಲಿನ ಪ್ರಾದೇಶಿಕತೆಯನ್ನು ವಿವರಿಸುತ್ತವೆ.

ಈ ಹಿನ್ನಲೆಯಲ್ಲಿ ಮಲಯಾಳಂ ಕಾದಂಬರಿಗಳಾದ ಇಂದುಲೇಖಾ, ರಾಮರಾಜಬಹದ್ದೂರ್,ಸರಸ್ವತಿವಿಜಯಂ, ಸುಕುಮಾರಿ, ಕಾದಂಬರಿಗಳು ಕೇರಳದ ಪ್ರಾದೇಶಿಕ ವಿವರಗಳನ್ನು ಕಟ್ಟಿಕೊಡುತ್ತವೆ. ಇಂದುಲೇಖಾ ಮತ್ತು ರಾಮರಾಜ ಬಹದ್ದೂರ್ ಕಾದಂಬರಿಯಲ್ಲಿ ಕೇರಳದ ಮಹಿಳೆಯರ ಸುಧಾರಣೆಯ ಸಂಕಲ್ಪವಿದೆ. ಈ ಕಾದಂಬರಿಗಳು ಮಲಬಾರ್ ಮತ್ತು ತಿರುವಾಂಕೂರಿನ ಸಾಮಾಜಿಕ ವ್ಯವಸ್ಥೆಯನ್ನು ಭೌಗೋಳಿಕತೆ ಹಾಗೂ ಅಲ್ಲಿನ ಸಂಪ್ರದಾಯವನ್ನು ವಿವರಿಸಲಾಗಿದೆ. ಮಲಬಾರ್ ಪ್ರದೇಶವು ನೇರವಾಗಿ ಬ್ರಿಟಿಷ್ ಸರಕಾರದ ಆಡಳಿತದ ಕೈಕೆಳಗಿತ್ತು. ಮದರಾಸು ಪ್ರಾಂತದ ಉನ್ನತ ಅಧಿಕಾರಿ ಗವರ್ನರ್ ಆಗಿದ್ದರು. ತಿರುವಾಂಕೂರ ಸಂಸ್ಥಾನದ ಆಳ್ವಿಕೆಯ ಕಡಿವಾಣವು 'ಧರ್ಮೋsಸ್ಮದ್ ಕುಲ ದೈವತಂ' ಎನ್ನುವ ಆದರ್ಶಸಿದ್ಧಾಂತವನ್ನು ಹೊಂದಿದ ರಾಜವಂಶದ ಕೈಯಲ್ಲಿತ್ತು. ಸಂಸ್ಥಾನದ ಪ್ರಜೆಗಳು ರಾಜನನ್ನು ''ರಾಜನೇ ಪ್ರತ್ಯಕ್ಷ ದೇವರು'' ಎಂದು ನಂಬುತ್ತಿದ್ದರು. ಐತಿಹಾಸಿಕ ಕಾದಂಬರಿಯಾದ ರಾಮರಾಜಬಹದ್ದೂರ್ ಕೃತಿಯು ರಾಜ ಹಾಗೂ ಪ್ರಜೆಗಳ ಒಳಗಿನ ಪರಂಪರಾಗತವಾದ ಗಾಢ ಸಂಬಂಧವನ್ನು ವಿವರಿಸುತ್ತದೆ.

ರಾಜಭಕ್ತಿಯು ಲೇಖಕರ ನರನಾಡಿಗಳಲ್ಲಿ ತುಂಬಿ ಹರಿಯುತ್ತಿತ್ತು. ರಾಜ ಮನೆತನದ ಪ್ರಮುಖ ಪ್ರತಿನಿಧಿಗಳು ಅಥವಾ ತಿರುವಾಂಕೂರು ಅರಸು ಮನೆತನದ ಮೇಲಿನ ತಮ್ಮ ಅಚಲ ಭಕ್ತಿಯಿಂದಾಗಿ ಸ್ವತಃ ಪ್ರಾಮುಖ್ಯತೆ ಪಡೆದ ವ್ಯಕ್ತಿಗಳು ನಾಯಕರಾಗಿರುವ ತಮ್ಮ ಐತಿಹಾಸಿಕ ಕಾದಂಬರಿಗಳಲ್ಲಿ ಹಿಂದಿನ ರಾಜಮನೆತನದ ಮೋಹಕತೆ ಹಾಗೂ ವೈಭವಗಳನ್ನು ಪುನರ್ ನಿರ್ಮಿಸುವ ಪ್ರಯತ್ನ ಮಾಡಿದ್ದಾರೆ. ಹೀಗೆ ಐತಿಹಾಸಿಕ ಕಾದಂಬರಿಗಳು ಹಿಂದಿನ ರಾಜಮನೆತನಗಳ ಜೀವನವನ್ನು ಐತಿಹಾಸಿಕ ಘಟನಾವಳಿಗಳನ್ನು ಪುನರ್ ನಿರ್ಮಿಸುತ್ತವೆ. ಕೆಲವೊಮ್ಮೆ ಐತಿಹಾಸಿಕ ಘಟನಾವಳಿಗಳನ್ನು ಪುನರ್ ನಿರ್ಮಿಸುತ್ತಿವೆ. ಕೆಲವೊಮ್ಮೆ ಐತಿಹಾಸಿಕ ಘಟನಾವಳಿಗಳ ವೈಭವೀಕರಣವು ಇಂತಹ ಕಾದಂಬರಿಗಳಲ್ಲಿ ವ್ಯಕ್ತವಾಗುತ್ತವೆ. ಇವುಗಳ ಜೊತೆಗೆ ಅಲ್ಲಿನ ಪ್ರಾದೇಶಿಕ ಅಥವಾ ಭೌಗೋಳಿಕ ವೈಶಿಷ್ಟಗಳನ್ನು ಅವು ವಿವರಿಸುತ್ತವೆ.

ತಿರುವಾಂಕೂರನ್ನು ಕೇಂದ್ರವಾಗಿರಿಸಿಕೊಂಡು ಅದರ ಸುತ್ತ ಮುತ್ತ ಪ್ರದೇಶಗಳಲ್ಲಿ 'ರಾಮರಾಜ ಬಹದ್ದೂರ್' ಕತೆಯು ನಡೆಯುತ್ತದೆ. ಹಾಗೆಯೇ ಇಂದುಲೇಖಾ ಕಾದಂಬರಿಯು ಮಲಬಾರ್ ಪ್ರದೇಶದ ಒಂದು ಗ್ರಾಮವಾದ 'ಪೊವಳ್ಳಿ' ಸುತ್ತ ಕಥೆ ಬೆಳೆಯುತ್ತಾ ಕೇರಳದ ಸುತ್ತ ಮುತ್ತಣ ಪ್ರದೇಶಗಳ ಜನರ ಜೀವನ ಕ್ರಮವನ್ನು ಒಳಗೊಂಡು ಕಥೆ ನಡೆಯುತ್ತದೆ. ಇದು ಅಲ್ಲಿನ ನಂಬೂದಿರಿ ಮತ್ತು ನಾಯರ್ ಸಮುದಾಯಗಳ ಕಾದಂಬರಿಯು ಒಟ್ಟಾರೆ ಘಟನಾವಳಿ ಹೆಣೆದುಕೊಂಡಿವೆ. ಈ ಕಾದಂಬರಿಗಳಲ್ಲಿ ಬರುವ ಸ್ಥಳಗಳ ಪ್ರಾದೇಶಿಕ ವಿವರಗಳು ಕೇರಳದ ಅಂದಿನ ಭೌಗೋಳಿಕ ವೈಶಿಷ್ಟ್ಯಗಳನ್ನು ಕಟ್ಟಿಕೊಡುತ್ತದೆ.

ಉದಾಹರಣೆಗೆ: 'ರಾಮಾರಾಜ ಬಹದ್ದೂರ್' ಕಾದಂಬರಿಯಲ್ಲಿ ಬರುವ ವಿವರಣೆ ''ಈಗಿನ ತಿರುವನಂತಪುರ - ಕೊಲ್ಲಂ ರಸ್ತೆಯನ್ನು ಸೈನ್ಯ ಹೋಗುವುದಕ್ಕಾಗಿ ದಿವಾನ ಕೇಶವ ಪಿಳ್ಳೆ ನಿರ್ಮಿಸಿದ್ದು, ಅದು ಸಾಲು ಮರಗಳಿಂದ ಕೂಡಿತ್ತು ದಾರಿಯಲ್ಲಿ ಪಳಿಪ್ಪುರಂನಿಂದ ಆಟ್ಟಿಂಗಲ್‌ವರೆಗೆ ಇರುವ ಸ್ಥಳವನ್ನೂ, ಒಂದು ಹೊಳೆಯನ್ನೂ, ಒಂದು ಬಯಲನ್ನೂ ಬಿಟ್ಟು ಉಳಿದುದೆಲ್ಲವೂ ಪೂರ್ತಿ ಕಾಡಾಗಿತ್ತು.

ಇಲ್ಲಿ ಸದಾ ಕಾಲವೂ ನೀರಿರುವ ಒಂದು ತೋಡಿದೆ. ಉತ್ತರದ ಕಡೆ ಸಂಚರಿಸುವ ವ್ಯಕ್ತಿಯ ಬಲಭಾಗದಲ್ಲಿ ಕಾಣುವ ಬಯಲು ಪ್ರದೇಶ ಪೂರ್ತಿ ಕಾಡುಗಬ್ಬಗಳಿಂದ ಮುಚ್ಚಲ್ಪಟ್ಟಿತ್ತು. ಈ ಕಬ್ಬುಗಳ ಸಮೂಹದ ಎರಡೂ ಬದಿಗಳಲ್ಲಿ ಒತ್ತೊತ್ತಾದ ಮರಗಳಿಂದ ಆವರಿಸಲ್ಪಟ್ಟ ಎರಡೂ ಭೂ ಪ್ರದೇಶಗಳಿವೆ. ಇವುಗಳಲ್ಲಿ ಒಂದು ಮರುಳು ಪ್ರದೇಶ, ಇನ್ನೊಂದು ಹಸಿರು ಹಲ್ಲುಗಾವಲು ಪ್ರದೇಶ, ಇವುಗಳು ಸಂಚಾರಕ್ಕೆ ಅಸಾಧ್ಯವಾದ ಸ್ಥಿತಿಯಲ್ಲಿದ್ದವು. ಹೇರಳವಾದ ಕ್ರೂರ ಜಂತುಗಳು ಇಲ್ಲಿ ವಾಸಿಸುತ್ತಿದ್ದವು. (ಅನು : ಶ್ರೀ ಕೃಷ್ಣಭಟ್ ಅರ್ತಿಕಜೆ - ೨೦೦೦, ಪುಟ-೮೨) ಇವು ಮಲಬಾರಿನ ಭೌಗೋಳಿಕ ಸನ್ನಿವೇಶವನ್ನು ವರ್ಣಿಸುತ್ತಿವೆ.

ಈ ಕಾದಂಬರಿಯಲ್ಲಿ ಬರುವ ವಿವರಗಳಿಂದ ಅಲ್ಲಿ ಪ್ರಾಕೃತಿಕ ವರ್ಣನೆಗಳನ್ನು ಕಟ್ಟಿಕೊಡುತ್ತದೆ. ''ಪೆರಿಯಾರ್ ನದಿಯ ದಕ್ಷಿಣ ತೀರದಲ್ಲಿ ಕಾಲಟಿಯಿಂದ ಹೆಚ್ಚುದೂರವಿಲ್ಲದ ಫಲವತ್ತಾದ ಗುಡ್ಡ ಪ್ರದೇಶಗಳಿಂದ ಆವರಿಸಲ್ಪಟ್ಟಿತು''. (ಶ್ರೀ ಕೃಷ್ಣಭಟ್ ಅರ್ತಿಕಜೆ - ೨೦೦೦, ಅದೇ ಪುಟ) ಎನ್ನುವಲ್ಲಿ ಮಲಬಾರಿನ ಪ್ರಾಕೃತಿಕ ವಿವರಗಳನ್ನು ಕಟ್ಟಿಕೊಡುತ್ತವೆ.

ಕಾದಂಬರಿಗಳಲ್ಲಿ ಬಳಕೆಯಾಗಿರುವ ಪ್ರದೇಶಗಳ ಹೆಸರುಗಳನ್ನು ಅಲ್ಲಿನ ಭೌಗೋಳಿಕ ಹಿನ್ನೆಲೆಯನ್ನು ವಿವರಿಸುತ್ತದೆ. ಉದಹಾರಣೆಗೆ - ಕಲ್ಲಿಕೋಟೆ, ಚೆಂಬಾಯಿಯೋಟ್, ಪೂವಳ್ಳಿ, ಕಾಲಟಿ, ಪೆರಿಯಾರ್‌ನದಿ, ಮಾಂಗಾವಿಲ್, ಪೆರಿಂಜಕೋಡ್, ಕೊಲ್ಲಂ ಇತ್ಯಾದಿ ಹೀಗೆ ಕಾದಂಬರಿಗಳಲ್ಲಿ ಬರುವ ಪ್ರದೇಶಗಳ ಹೆಸರುಗಳು ವಿಶಿಷ್ಟ ರೀತಿಯಿಂದ ಕೂಡಿರುತ್ತವೆ. ಆ ಹೆಸರುಗಳೇ ಕೇರಳದ ಪ್ರಾದೇಶಿಕ ಅನನ್ಯತೆಯನ್ನು ವ್ಯಕ್ತಪಡಿಸುತ್ತವೆ.

ಭೌತಿಕ ಸಂಸ್ಕೃತಿ ಎಂದು ಗುರುತಿಸಿಕೊಳ್ಳುವಾಗ ಅಲ್ಲಿನ ಜನರ ಉಡುಗೆ - ತೊಡುಗೆ, ಅವರು ಧರಿಸುವ ಆಭರಣಗಳು, ಅವರು ಜೀವಿಸಲು ನಿರ್ಮಿಸಿಕೊಂಡಂತ ಮನೆಗಳು ಆ ಪ್ರದೇಶದ ಅನನ್ಯತೆಯನ್ನು ಪ್ರತಿನಿಧಿಸುತ್ತವೆ. ಮಲಯಾಳಂ ಪ್ರದೇಶದಲ್ಲಿನ ಮನೆಗಳನ್ನು ಗುರುತಿಸಿದರೆ ಅಲ್ಲಿನ ಮನೆಗಳಿಗೆ 'ಭವನ' ಎಂದು ಕರೆದಿದ್ದಾರೆ.

ಆಯಾ ಮನೆತನದ ಕುಟುಂಬದ ಒಡೆಯನ ಹೆಸರಿನಲ್ಲಿ ಅದನ್ನು ಕರೆದುಕೊಳ್ಳುತ್ತಾರೆ. ಇಂದುಲೇಖಾ ಮತ್ತು ರಾಮರಾಜ ಬಹದ್ದೂರ್ ಕಾದಂಬರಿಯಲ್ಲಿ ಬರುವ ವಿವರಗಳನ್ನು ಕಾಣಬಹುದು. 'ಮೂರ್ಕಿಲ್ಲಾತ ಸೂರಿ ನಂಬೂದಿರಿ ಪಾಡ ಭವನ' ಕೇಶವನ ನಂಬೂದಿರಿ ಭವನ, 'ಪೆರಿಂಜಕ್ಕೋಡು ಭವನ' - ಹೀಗೆ ಭವನಗಳೆಂದು ಕರೆದು ಕೊಂಡಿರುವುದು ಕಂಡು ಬರುತ್ತದೆ. ಹಾಗೆಯೇ ಅವರು ಸ್ನಾನದ ಕೊಠಡಿ, ಭೋಜನ ಕೊಠಡಿ, ಮಲಗುವ ಕೊಠಡಿ - ಹೀಗೆ ಪ್ರತಿಯೊಂದು ಪ್ರತ್ಯೇಕವಾಗಿದ್ದುವು ಎಂಬುದು ತಿಳಿದು ಬರುತ್ತದೆ. ತಲಬಾಗಿಲ ಮಹಡಿ, ತೆಂಕಮನೆ, ಈ ರೀತಿಯಾಗಿ ವಾಸಿಸುವ ಮನೆಯ ಸ್ವರೂಪವು ಅಲ್ಲಿನ ವೈಶಿಷ್ಟವನ್ನು ಕಾಣಬಹುದು.

ಜನರು ಧರಿಸುವ ಉಡುಗೆ - ತೊಡುಗೆಗಳು, ಆಭರಣಗಳು ಸಹ ಪ್ರಾದೇಶಿಕ ಹಿನ್ನೆಲೆಯಿಂದ ಕೂಡಿರುತ್ತವೆ. ಅವುಗಳೇ ಆ ಪ್ರದೇಶದ ವಿಶಿಷ್ಟತೆಯನ್ನು ಸಾಬೀತು ಪಡಿಸುತ್ತವೆ. ಉದಾಹರಣೆಗೆ : ''ಪೆರಿಂಜಕ್ಕೊಡನ ಹೆಂಡತಿ ದರಿಸಿದ ಉಡುಗೆಗಳು ಮಲಯಾಳಂ ಸ್ತ್ರೀಯರ ಉಡುಗೆಯ ವೈಶಿಷ್ಟವನ್ನು ವ್ಯಕ್ತಿ ಪಡಿಸುತ್ತವೆ.

''ಮುಂದುಗಡೆ ನೆರಿಗೆ ಮಾಡಿ ಹಿಂದಕ್ಕೆ ತಿರುವಿದ್ದ ಒಂದೇ ಒಂದು ವಸ್ತುವನ್ನು ಧರಿಸಿದ್ದಳು. ತಲೆಗೂದಲನ್ನು ಎಡಭಾಗದಲ್ಲಿ ಸಣ್ಣ ಚೆಂಡಿನಂತೆ ತುರುಬು ಕಟ್ಟಿಕೊಂಡಿದ್ದಳು. ಕಿವಿಯ ಒಲೆಗಳು ಉಯ್ಯಾಲೆಯಂತೆ ಓಲಾಡುತ್ತಿದ್ದವು. ಅವಳು ಗಂಧದ ಬೊಟ್ಟನ್ನು ಧರಿಸಿದ್ದಳು. ಕೈ ತುಂಬಾ ಬಳೆಗಳನ್ನು ಧರಿಸಿದ್ದಳು''. (ಶ್ರೀ ಕೃಷ್ಣಭಟ್ ಅರ್ತಿಕಜೆ - ೨೦೦೦, ಪುಟ) ಇಂದುಲೇಖಾ ಕಾದಂಬರಿಯಲ್ಲಿ ಬರುವ ಕಥಾ ನಾಯಕಿ ಧರಿಸುವ ವೇಷ ಭೂಷಣಗಳನ್ನು ಗಮನಿಸಬಹುದು.

''ಇಂದುಲೇಖಾ ದಿನನಿತ್ಯ ಅತ್ಯಂತ ಕಡಿಮೆ ಒಡವೆಗಳನ್ನು ಮಾತ್ರ ಬಳಸುತ್ತಿದ್ದಳು ಕಿವಿಯಲ್ಲಿ ಕೆತ್ತನೆಯ ಚೆಂಡೋಲೆ, ಉರುಟುದಾರದಲ್ಲಿ ಕಂಠಮಧ್ಯ ಚಿನ್ನದ ಪದಕವನ್ನು ದಾರದಲ್ಲಿ ಹಾಕುತ್ತಿದ್ದಳು.

ಪಚ್ಚೆ, ಕೆಂಪು, ರತ್ನಗಳು ಜೋಡಿಸಲ್ಪಟ್ಟ ಒಂದು ಪದಕ ಕೈಗಳಲ್ಲಿ ಮೂಡಣ ಸಂಪ್ರದಾಯದ ತಂಜಾವೂರು ಶೈಲಿಯ ಒಂದೊಂದು ಬೀಗ ಬಿಳೆ, ಕೈ ಬೆರಳುಗಳಲ್ಲಿ ಉಂಗುರಗಳು ಇವು ಅವಳ ದಿನ ನಿತ್ಯದ ಒಡವೆಗಳಾಗಿದ್ದವು''.

ಈ ರೀತಿಯ ಆಭರಣಗಳನ್ನು ಧರಿಸುತ್ತಿದ್ದರು ಅವುಗಳಲ್ಲಿ ಕೇರಳದ ವೈಶಿಷ್ಟವನ್ನು ಪ್ರಮುಖವಾಗಿ ಸಾರುವ ಆಭರಣಗಳು ಎಂದರೆ ''ಉರುಟುದಾರದಲ್ಲಿ ಚಿನ್ನದ ಪದಕವನ್ನು ಪೋಣಿಸಿ ಹಾಕಿಕೊಳ್ಳುವುದು, ಬೆಲೆ ಬಾಳುವ ವಜ್ರ'' ಇದು ಕೇರಳ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ.

ಕೇರಳೀಯರ ವಿಶಿಷ್ಟ ಉಡುಗೆಯನ್ನು ಅಲ್ಲಿನ ಕಾದಂಬರಿಗಳು ಪರಿಚಯಿಸುತ್ತವೆ. ''ವಿಶೇಷ ಎಳೆಜರಿ ಇರುವ ವೇಷ್ಟಿ ಮತ್ತು ಮೇಲುವಸ್ತ್ರ ಸಾನ್ನದ ಹೊತ್ತಿಗೆ ನಿತ್ಯಮುಡಿ, ಕುಚ ಪ್ರದೇಶವನ್ನು ಬಿಳಿಯೂದೊಂದು ಜರಿಯ ಮೇಲುವಸ್ತ್ರದಿಂದ ಸದಾಕಾಲ ಹೊದೆಯುತ್ತಿದ್ದಳು''. ಇದು ಇಂದುಲೇಖಾಳ ದಿನ ನಿತ್ಯದ ವೇಷವಿಧಾನವಾಗಿದೆ'' (ರಾಘವನ್ .ಸಿ - ೨೦೦೦, ಪು)

ಮಲಯಾಳಂ ಸಮಾಜವನ್ನು ಗುರುತಿಸುವಲ್ಲಿ 'ಗಂಧದಬೊಟ್ಟು' ಅಲ್ಲಿನ ವೈಶಿಷ್ಟ್ಯವನ್ನು ಸಾಭೀತು ಪಡಿಸುತ್ತದೆ. ಹಣೆಯ ಮೇಲೆ ಸ್ತ್ರೀಯರಾಗಲಿ ಪುರುಷರಾಗಲಿ, ಅಡ್ಡವಾಗಿ ಗಂಧದ ಬೊಟ್ಟನ್ನು ಇಟ್ಟುಕೊಳ್ಳುತ್ತಾರೆ. ಈ ಸಂಪ್ರದಾಯವು ಮಲಯಾಳಂ ಪ್ರದೇಶದ ಜನರ ವೈಶಿಷ್ಟವಾಗಿದೆ. ಹೆಚ್ಚಾಗಿ ಮಹಿಳೆಯರು ಸುಂದರವಾಗಿರುತ್ತಿದ್ದರು, ಅಲ್ಲಿನ ಸ್ತ್ರೀಯರು ಉದ್ದವಾದ ಕೂದಲನ್ನು ಹೊಂದಿರುತ್ತಾರೆ. ಇಂದುಲೇಖಾ ಹಾಕಿಕೊಳ್ಳುವ ಬಳೆಗಳು 'ಬೀಗ ಬಿಳೆಗಳು' ಕೇರಳದ ಸ್ತ್ರೀಯರು ವಿಶೇಷ ಆಭರಣವಾಗಿ ಕಾಣುತ್ತದೆ. ಇವು ಕೇರಳದ ಅನನ್ಯತೆಯನ್ನು ಪ್ರತಿಬಿಂಬಿಸುತ್ತವೆ. ಅಲ್ಲಿನ ಸ್ತ್ರೀಯರು ಮೇಲು ಹೊದಿಕೆಯಾಗಿ ಒಂದು ಬಿಳಿ ವಸ್ತ್ರವನ್ನು ಹಾಕುತ್ತಿದ್ದರು. ಶ್ರಿಮಂತರು ಜರಿ, ರೇಷ್ಮೆಯಿಂದ ಕೂಡಿದ ಮೇಲು ವಸ್ತ್ರಧರಿಸಿದರೆ ಬಡವರು, ಕೆಳವರ್ಗದವರು ಸಾಮಾನ್ಯವಾದ ವಸ್ತ್ರವನ್ನು ಧರಿಸುತ್ತಿದ್ದರು. ಹಾಗೆಯೇ ಅಲ್ಲಿನ ಪುರುಷರ ಉಡುಗೆ - ತೊಡುಗೆಗಳ ಬಗ್ಗೆ ತಿಳಿಯುವುದ್ದು ಅಗತ್ಯ.

ಉದಾಹರಣೆಗೆ : ''ಸೂರಿನಂಬೂದಿರಿ ಪಾಡರ ವಸ್ತ್ರ ವಿನ್ಯಾಸಗಳನ್ನು ಗಮನಿಸಬಹುದು''. ಉತ್ತಮ ತರದ ಜರಿದುಪ್ಪಟ್ಟಗಳು, ಜರಿ ಅಂಚಿನ ಪಟ್ಟೆಧೋತ್ರ, ಉಂಗುರುಗಳು, ನಿರವಧಿ, ಶುದ್ಧಗಟ್ಟಿ, ಬೆಳ್ಳಿಯಿಂದ ತಯಾರಿಸಿದ ಚಿನ್ನದ ಬೋದಿಗೆಗಳನ್ನು ಜೋಡಿಸಿದ ಅತಿ ವಿಶೇಷ ತಾಂಬೂಲಕೋಶ, ಚಿನ್ನದ ವೀಳ್ಯದೆಲೆ ಸುರುಳಿಗಳು, ಬೆಳ್ಳಿ ಹಿಡಿ ಜೋಡಿಸಲಾದ ಕವಳಿಗೆ, ಬೆಳ್ಳಿಯ ಕೈ ದೀಪ, ಬೆಳ್ಳಿಯ ಕರಂಡಕ, ಕಂಠಹಾಕಿದಂತೆ ಹಾಕಲಾಗುವ ಚಿನ್ನದ ಸಂಕೇತ ಇರುವ ಚಿನ್ನದ ಗಡಿಯಾರ, ಚಿನ್ನದ ಕಸೂತಿ ಮಾಡಲಾದ ಅಂಗಿಗಳು ಟೋಪಿಗಳೂ. ವಿಭೂತಿ, ಕುಂಕುಮಗಳ ಚಿನ್ನದ ಸಂಪುಟ, ಚಿನ್ನದ ಗೂಡಿರುವ ಕನ್ನಡಕ. ಚಿನ್ನದ ಗುಲಾಬಿದಾನಿಗಳು ಮುಂತಾದವು'' (ಚಂದುಮೇನೊನ್ ಒ ೨೦೦೦ ; ಪು. ೧೫೮)

ಇವು ಸೂರಿ ನಂಬೂದಿಯವರ ವೇಷಭೂಷಣಗಳಾಗಿವೆ. ಕಾದಂಬರಿಯಲ್ಲಿ ಬರುವ ಪಾತ್ರಗಳ ಹೆಸರುಗಳೇ ಆ ಪ್ರದೇಶದ ಅನನ್ಯತೆ ವ್ಯಕ್ತಪಡಿಸುತ್ತವೆ. ಉದಾಹರಣೆಗೆ : ಚೆಂಬಾಯಿಮೆಟ್ ಪೊವಳ್ಳಿಮನೆ ಪಂಜುಮೆನೋನ್, ಶಂಕರಮೇನೂನ್, ಪಾರ್ವತಿ ಅಮ್ಮ, ಮಾಧವನ್, ಇಂದುಲೇಖಾ, ಕುಮ್ಮಣಿ ಅಮ್ಮಳ ಮಗ, ಶೀನ್ನನ್, ಕುಮ್ಮಣಿ ಅಮ್ಮಳ ಮಗಳು, ಲಕ್ಷ್ಮಿಕುಟ್ಟಿ ಅಮ್ಮ, ಗೋವಿಂದನ್ ಕುಟ್ಟಿ ಮೇನೋನ್, ಲಕ್ಷ್ಮಿ ಕುಟ್ಟಿ, ಹಾಗೂ ಸೂರಿ ನಂಬೂದಿರಿ ಪಾಡರು, ಕುಂಚ್ಚೆ ಕುಟ್ಟಿ, ಚೆಂಬಕಶ್ಯೇರಿ, ಕಲ್ಲರಕ್ಕಲ್ ಪಿಳ್ಳೆ, ದೇವಕಿಯ, ಅಳಗನ್ ಪಿಳ್ಳೆ, ಕಳಕ್ಕೂಟ್ರ್, ಕೇಶವನ್ ನಂಬೂದಿರಿ ಗೋವಿಂದ ಪಣಿಕ್ಕರ್, ಚೆರುಶೇರಿ ನಂಬೂದಿರಿ, ನಾರಾಯಣನ್ ನಂಬೂದಿರಿ ಪಾಡ, ಮುಂತಾದವು ಈ ರೀತಿಯಾಗಿ ಕಾದಂಬರಿಯಲ್ಲಿ ಬರುವ ವ್ಯಕ್ತಿಗಳ ಮತ್ತು ಮನೆತನಗಳ ಹೆಸರುಗಳನ್ನು ಸೂಚಿಸುವುದರ ಜೊತೆಗೆ ಅಲ್ಲಿನ ಪ್ರಾದೇಶಿಕತೆಯನ್ನು ಬಿಂಬಿಸುತ್ತವೆ.

'ಮರು ಮಕ್ಕತ್ತಾಯ' ಪದ್ಧತಿಯು ಕೇರಳದ ವಿಶಿಷ್ಟ ಸಂಪ್ರದಾಯವಾಗಿ ಬೆಳೆದು ಬಂದಿದೆ. ಇದು ಅಲ್ಲಿನ ನಾಯರ್ ಹಾಗೂ ನಂಬೂದಿರಿ ಸಮುದಾಯದಲ್ಲಿ ಮುಖ್ಯವಾಗಿ ಕಂಡುಬರುತ್ತದೆ. ಇದರಲ್ಲಿ ಕುಟುಂಬದ ಹಿರಿಯ ಮಗ ಮಾತ್ರವೇ ಸ್ವಜಾತಿಯ ಕನ್ಯೆಯರನ್ನು ವಿವಾಹವಾಗಬಹುದು ಎಂಬ ನಿಯಮವಿದೆ.

ಕಿರಿಯ ಮಕ್ಕಳು ಅವರ ಜೀವನ ಪೂರ್ತಿ ಅವಿವಾಹಿತರಾಗಿರುತ್ತಾರೆ. ಇದರಿಂದಾಗಿ ಅವಿವಾಹಿತ ನಂಬೂದಿರಿ ಯುವಕರು ತಮ್ಮ ಪರಿಸರದ ನಾಯರ್ ಮನೆಗಳಲ್ಲಿ ಸ್ತ್ರೀಯರ ಜೊತೆ ಸಂಬಂಧವೇರ್ಪಡಿಸಿಕೊಳ್ಳುತ್ತಿದ್ದರು. ಹೀಗೆ 'ಸಂಬಂಧ' ಎಂಬ ವ್ಯವಸ್ಥೆ ಜಾರಿಗೆ ಬಂದಿದೆ. 'ಸಂಬಂಧ' ಎಂದರೆ ನಂಬೂದಿರಿಯುವಕರು ನಾಯರ್ ಹುಡುಗಿಯರೊಡನೆ ನಡೆಸುವ ಒಂದು ರೀತಿಯ 'ಕೂಡಿಕೆ' ಪದ್ಧತಿಯಾಗಿದೆ. ಒಬ್ಬ ನಂಬೂದಿರಿಯು ಅನೇಕ ನಾಯರ್ ಯುವತಿಯರೊಡನೆಯೂ 'ಸಂಬಂಧ' ಏರ್ಪಡಿಸಿಕೊಳ್ಳಬಹುದು. ಈ ರೀತಿಯ ಸಂಪ್ರದಾಯವು 'ಇಂದುಲೇಖಾ' ಕಾದಂಬರಿಯಲ್ಲಿ ಚಿತ್ರಿತವಾಗಿರುವುದನ್ನು ಕಾಣಬಹುದು.

ನಾಯರ್ ಸಮುದಾಯದ ಹೆಣ್ಣುಮಗಳಾದ 'ಇಂದುಲೇಖಾಳ' ಪಾತ್ರದ ಸುತ್ತ ಅಲ್ಲಿನ ಸಂಪ್ರದಾಯವನ್ನು ಲೇಖಕರು ವಿವರಿಸುತ್ತಾರೆ. ಇಂದುಲೇಖಾಳನ್ನು ಸೂರಿನಂಬೂದಿರಿಪಾಡರು 'ಸಂಬಂಧ'ವನ್ನು ಮಾಡಿಕೊಳ್ಳಲು ಬರುವ ಸನ್ನಿವೇಶವು ಅಲ್ಲಿನ ಪ್ರಾದೇಶಿಕ ಅನನ್ಯತೆಯ ಸಂಪ್ರದಾಯವನ್ನು ವಿವರಿಸುತ್ತದೆ.

ಈ ಸಂಪ್ರದಾಯವು ಮಾತೃ ಮೂಲೀಯ ವ್ಯವಸ್ಥೆಯನ್ನು ಒಳಗೊಂಡಿದೆ. ಈ ವ್ಯವಸ್ಥೆಯಲ್ಲಿ ತವರು ಮನೆಯ ಆಸ್ತಿಯ ಹಕ್ಕು ಅಲ್ಲಿ ಹೆಣ್ಣು ಮಕ್ಕಳಿಗೆ ಸೇರುತ್ತದೆ. ಇಲ್ಲಿ ಹೆಣ್ಣು ಮದುವೆಯಾಗಿ ಗಂಡನನ್ನು ತಾನಿರುವ ಮನೆಗೆ ಕರೆಸಿಕೊಳ್ಳುತ್ತಾಳೆ. ಇದರಿಂದ ಆಸ್ತಿಯ ಹಕ್ಕು ಹೆಣ್ಣಿನದಾಗುತ್ತದೆ. ಸಾಮಾನ್ಯವಾಗಿ ಹಿರಿಯ ಸಹೋದರ 'ಕಾರಣವರ್' ಆಸ್ತಿಯ ಒಡೆತನವನ್ನು ವಹಿಸಿಕೊಳ್ಳುತ್ತಾನೆ.

ಈ ಒಂದು ಸಂಪ್ರದಾಯವು ಕೇರಳದ ಅನನ್ಯ ಸಂಸ್ಕೃತಿಯ ಒಂದು ಭಾಗವೆನ್ನಬಹುದು.

ಅವಿಭಕ್ತ ಕುಟುಂಬ ವ್ಯವಸ್ಥೆಯು ಕೇರಳದ ಅನನ್ಯತೆಯನ್ನು ಮನಗಾಣಿಸುತ್ತದೆ. ಈ ಅವಿಭಕ್ತ ಕುಟುಂಬವು ಕೇರಳ ಸಂಪ್ರದಾಯದ ಮರುಮಕ್ಕತ್ತಾಯದೊಡನೆ ಸಂಬಂಧ ಹೊಂದಿರುವಂತದ್ದು. ಅವಿಭಕ್ತಕುಟುಂಬವು ಮಾತೃಮೂಲೀಯ ಕುಟುಂಬ ವ್ಯವಸ್ಥೆಗೆ ಸಂಬಂಧವಿರುತ್ತದೆ. ಇಲ್ಲಿ ತಾಯಿಯೇ ಕುಟುಂಬದ ಮೂಲ ವ್ಯಕ್ತಿಯಾಗುತ್ತಾಳೆ. ಹಾಗಾಗಿಯೇ ಇಲ್ಲಿ ಸಹೋದರಿಯ ಮಕ್ಕಳಿಗೇ ಹಕ್ಕನ್ನು ಕೊಡುವುದು.

ತಾಯಿಯ ಸಂತತಿ ಹಾಗೂ ಸಹೋದರಿ, ಸಹೋದರರು, ಸಹೋದರಿಯ ಕಡೆಯವರು ಎಲ್ಲರೂ ಒಂದೇ ಮನೆಯಲ್ಲಿ ವಾಸಿಸುತ್ತಾರೆ. ಕುಟುಂಬದಲ್ಲಿನ ಎಲ್ಲಾ ವಸ್ತುಗಳನ್ನು ಒಂದೇ ರೀತಿಯಲ್ಲಿ ಅನುಭವಿಸುವ ಹಕ್ಕುದಾರರು. ಮರುಮಕ್ಕಾತ್ತಾಯ ಕುಟುಂಬದ ಎಲ್ಲ ಸದಸ್ಯರೂ ಕುಟುಂಬದ ಆಸ್ತಿಯ ಪಾಲುದಾರಿಕೆಯ ಹಕ್ಕು ಅವರಿಗಿರುವುದಿಲ್ಲ. ಒಂದು ವೇಳೆ ಆ ರೀತಿ ಆಸ್ತಿಪಾಲು ಮಾಡಬೇಕು. ಎಂದಾದರೆ ಎಲ್ಲಾ ಸದಸ್ಯರ ಒಪ್ಪಿಗೆ ಬೇಕಾಗುತ್ತದೆ. ಅವಿಭಕ್ತ ಕುಟುಂಬದ ನಿಯಮದ ಪ್ರಕಾರ ಆಸ್ತಿಯೆಲ್ಲ ಸ್ತ್ರೀಯರ ಹೆಸರಲ್ಲಿದ್ದರೂ. ಅದರ ನಿರ್ವಹಣೆ ಸಾಮರ್ಥ್ಯ ಅವರಿಗಿರುವುದಿಲ್ಲ. ಆದಕ್ಕಾಗಿ ಕುಟುಂಬದ ಆಡಳಿತ ಜವಾಬ್ದಾರಿ 'ಕಾರಣವರ್'ಗೆ[೧] ಇರುತ್ತದೆ.

ಈ ರೀತಿಯ ಅವಿಭಕ್ತ ಕುಟುಂಬಕ್ಕೆ 'ಇಂದುಲೇಖಾ'ದ ತರವಾಡು ಮನೆತನವು ಒಂದು ಉದಾಹರಣೆಯಾಗಿದೆ. "ಚೆಂಬಾಯಿಯೋಟ್ ಪೂವಳ್ಳಿ ಮನೆ ಪಂಜುಮೇನೋನ್, ಪಂಜುಮೇನೋನ್, ಪಂಜುಮೇನೋನರ ಒಡಹುಟ್ಟಿದವಳ ಮಗಳು ಪಾರ್ವತಿಅಮ್ಮ, ಪಾರ್ವತಿಅಮ್ಮಳ ಮಗ ಮಾಧವನ್ ಬಿ. ಎ. ಬಿ. ಎಲ್, ಪಂಜುಮೇನೂನರ ಅಜ್ಜಿಯ ಸಹೋದರಿಯ ಮೊಮ್ಮಗಳು ಕುಮ್ಮಿಣಿ ಅಮ್ಮ, ಕುಮ್ಮಿಣಿ ಅಮ್ಮಳ ಮಗ ಚಾತ್ತರ ಮೇನೋನ್ ಕುಮ್ಮಿಣಿ ಅಮ್ಮಳ ಮಗ ಶಿನ್ನನ್, ಪಂಜುಮೇನೂನರ ಹೆಂಡತಿ ಕುಂಗೆಕುಟ್ಟಿ ಅಮ್ಮ, ಪಂಜಮೇನೋನರ ಮಗ ಗೋವಿಂದನ್ ಕುಟ್ಟಮೇನೋನ್, ಲಕ್ಷ್ಮಿಕುಟ್ಟಿ ಅಮ್ಮಳ ಮಗಳು ಹಾಗೂ ಪಂಜುಮೇನೋನರ ಮೊಮ್ಮಗಳು ಇಂದುಲೇಖಾ, ಇಂದುಲೇಖಾಳ ತಂದೆ ದಿ.ಕಿಳಿಮೆನೂರ ರಾಜರ ವಿಧವೆ ಲಕ್ಷ್ಮಿಕುಟ್ಟಿ ಅಮ್ಮಳ ಎರಡನೆಯ ಗಂಡ ಕೆಲಾವನ್ ನಂಬೂದಿರಿ, ಮಾಧವನ್ ತಂದೆ ಗೋವಿಂದ ಪಣಿಕ್ಕರ್"

ಈ ಒಂದು ಮನೆತನದ ಸದಸ್ಯರು ಅವಿಭಕ್ತಕುಟುಂಬ ಪದ್ಧತಿಗೆ ಉದಾಹರಣೆಯಾಗಿದೆ. ಇದು ಕೇರಳದ ಅವಿಭಕ್ತಕುಟುಂಬದ ಪದ್ಧತಿಯ ಅನ್ಯನ್ಯತೆಯನ್ನು ಕಾಣಬಹುದು. ಇಂದುಲೇಖಾಳ ಮನೆತನದ 'ಪಂಜುಮೇನೋನ್' ಕಾರಣವರ್ ಆಗಿ ಜವಾಬ್ದಾರಿಯನ್ನು ಹೊಂದಿರುತ್ತಾನೆ. ಅವಳ ತಾಯಿ ಲಕ್ಷ್ಮಿಕುಟ್ಟಿ ಅಮ್ಮ ಮನೆಯ ಆಸ್ತಿಯ ಹಕ್ಕುದಾರಳಾಗಿರುತ್ತಾಳೆ.

---

೧. ಕಾರಣವರ್: ಕುಡುಂಬದ ಒಡೆತನವನ್ನು ಹೊಂದಿರುವವನು

'ಸಂಬಂಧ' ಎನ್ನುವ ಸಂಪ್ರದಾಯ ನಂಬೂದಿರಿ ಮತ್ತು ನಾಯರ್ ಸಮುದಾಯಗಳಲ್ಲಿ ಸಾಮಾನ್ಯವಾಗಿತ್ತು. ಹಾಗೆಯೇ ಕೇರಳದಲ್ಲಿಯ ಸಾಮಾಜಿಕ ಆಚರಣೆಗಳು ಅಲ್ಲಿನ ಸಾಂಸ್ಕೃತಿಕ ಅನನ್ಯತೆಯನ್ನು ಬಿಂಬಿಸುತ್ತದೆ. ಇದರಿಂದಾಗಿ ಕೆಲವು ಸಮುದಾಯಗಳಲ್ಲಿ ಬಹುಪತ್ನಿತ್ವ ಮತ್ತು ಏಕ ಪತ್ನಿತ್ವಗಳು ಆಚರಣೆಯಲ್ಲಿದ್ದವು. ನಂಬೂದರಿಯರು, ಕ್ಷತ್ರಿಯರು ಮತ್ತಿತರ ಸಮುದಾಯದವರು ನಾಯರ್ ಸಮುದಾಯದ ಇತರ ಜಾತಿಗಳಲ್ಲಿ 'ಸಂಬಂಧ' ಏರ್ಪಡಿಸಿಕೊಳ್ಳತೊಡಗಿದ್ದರು. ನಾಯರ್ ಈಳವರು, ಕುರವರು, ಹೊಲಿಯರು ಮೊದಲಾದವರಲ್ಲಿ ಬಹುಪತ್ನಿತ್ವ ಅಸ್ತಿತ್ವದಲ್ಲಿತ್ತು.

'ಸಂಬಂಧ'[೧] ಎನ್ನುವ ಪದ್ಧತಿಯು ಕೇರಳದಲ್ಲಿ ಬಹುಪತ್ನಿತ್ವಕ್ಕೆ ದಾರಿ ಮಾಡಿ ಮಾಡಿಕೊಡುತ್ತಿತ್ತು. ಈ 'ಸಂಬಂಧ'ದ ಪ್ರಕಾರ ನಂಬೂದಿರಿ ಬ್ರಾಹ್ಮಣರಲ್ಲಿ ಹಿರಿಮಗ ಮಾತ್ರ ಸ್ವಜಾತಿ ಕನ್ಯೆಯನ್ನು ಮದುವೆಯಾಗಿ ಪುರೋಹಿತ್ಯದ ಕಾರ್ಯವನ್ನು ಮುಂದುವರಿಸಬೇಕು ಎಂಬ ನಿಯಮ ಜಾರಿಯಲ್ಲಿತ್ತು. ಉಳಿದವರು ನಾಯರ್ ಕನ್ಯೆಯರನ್ನು ಮದುವೆಯಾಗಬಹುದಿತ್ತು. ಈ ರೀತಿಯ 'ಸಂಬಂಧ' ಪದ್ದತಿಯಲ್ಲಿ ನಂಬೂದಿರಿ ಬ್ರಾಹ್ಮಣರಿಗೆ ವಯಸ್ಸಾಗಿದ್ದರೂ ನಾಯರ್ ಸಮುದಾಯದಲ್ಲಿ ಹೆತ್ತವರು ತಮ್ಮ ಹೆಣ್ಣುಮಕ್ಕಳನ್ನು ಅವರಿಗಾಗಿ ಕೊಡಲು ಕಾಯುತ್ತಿದ್ದರು. ತನ್ನ ಕಣ್ಣಮುಂದೆ ಬೆಳೆದ ಯುವತಿಯರನ್ನು ಮುದುಕನಾದ ನಂಬೂದಿರಿಯರು ಅನುಭೋಗಿಸುತ್ತಿದ್ದರು.

ಇಂತಹ 'ಸಂಬಂಧದ ಆಚರಣೆಯನ್ನು ಉದಾಹರಣೆಯಾಗಿ ಇಂದುಲೇಖಾ ಕಾದಂಬರಿಯಲ್ಲಿ ನೋಡಬಹುದು : ಸೂರಿ ನಂಬೂದಿರಿ ಪಾಡರ ಲಗ್ನ' ಎಂಬ ಭಾಗದಲ್ಲಿ ಕೇರಳದ ಸಂಸ್ಕೃತಿಯಲ್ಲಿ ಪ್ರಚಲಿತವಿದ್ದ ಈ ಪದ್ಧತಿಯ ವಿವರಣೆಯಿದೆ ಈ ತರವಾಡಿನಲ್ಲಿ ನಂಬೂರಿ ಪಾಡರ 'ಸಂಬಂಧ' ಎಂದರೆ ವಿಶಿಷ್ಟ ಗೌರವ, ಮರ್ಯಾದೆಯ ವಿಷಯ ಆದುದರಿಂದ ಇಂದು ಲೇಖಾಳ 'ಸಂಬಂಧ' ನಡೆಯದಿದ್ದರಿಂದ ಕಲ್ಯಾಣಿ ಕುಟ್ಟಿಯನ್ನು ಸೂರಿ ನಂಬೂದಿರಿ ಪಾಡರೊಂದಿಗೆ ಸಂಬಂಧ ನಡೆಸಿಕೊಡುತ್ತಾರೆ.

೧.ಎಂದರೆ ಮದುವೆ, ನಾಯರ ಮನೆತನಗಳಲ್ಲಿ ನಂಬೂದಿರಿಯರು ಮಾಡುವ 'ಸಂಬಂಧ' ವೆಂಬ ಒಂದು ತರಹದ ವಿವಾಹ ವ್ಯವಸ್ಥೆ. ಇಲ್ಲಿ ಒಬ್ಬ ನಂಬೂದಿರಿ ಯುವಕನಿಗೆ ಎಷ್ಟು ಮಂದಿ ನಾಯರ್ ಕನ್ಯೆಯರೊಡನೆ ಬೇಕಾದರೂ 'ಸಂಬಂಧ' ಏರ್ಪಡಿಸಬಹುದು.

ಅದರ ಆಚರಣೆಯು ವಿಶಿಷ್ಟ ರೀತಿಯಲ್ಲಿ ನಡೆಯುತ್ತದೆ. ''ಗೋವಿಂದನ್ - ಒಡೆಯರು ಸ್ನಾನ ಮುಗಿಸಿ ಬಂದ ಕೂಡ್ಲೆ ಮಠದಲ್ಲಿ ಬ್ರಾಹ್ಮಣರಿಗೆ ದಕ್ಷಿಣ ಕೊಟ್ಟು ಬಿಟ್ಟರಾಯ್ತು, ಅದರ ಪ್ರಕಾರ ಸೂರಿ ನಂಬೂದಿರಿಪಾಡರು ಕೂಡಲೆ ಸ್ನಾನ ಮುಗಿಸಿ ಬ್ರಾಹ್ಮಣರನ್ನು ಮಠಕ್ಕೆ ಕರೆದು ದಕ್ಷಿಣೆಕೊಟ್ಟ ಕೂಡಲೆ ಜನರು ಅವರವರ ದಾರಿ ಹಿಡಿದರು. ನಂತರ ಪೂವಳ್ಳಿ ಮನೆಗೆ ತೆರಳಿದರು. ಸಾಮಾನ್ಯವಾಗಿ ಸಂಪ್ರದಾಯದಂತೆ ಸೂರಿ ನಂಬೂದಿರಿಪಾಡರು ಕಾಲು ತೊಳೆದು ಒಳಗೆ ಪ್ರವೇಶಿಸಿ, ನಡುಮನೆಯಲ್ಲಿ ಅತಿ ವಿಶೇಷವಾಗಿ ಹರಡಿದ ಹೊಂಬಟ್ಟೆ ಹಾಸಿಗೆಯಲ್ಲಿ ಮಲಗಿದರು. ಆ ಕೋಣೆಯ ಮೂಡಣದ ಬಾಗಿಲನ್ನು ಮುಚ್ಚಿದರು. ಆಗ ಮನೆಯ ಹೆಂಗಸರೆಲ್ಲ ಸೇರಿ ನೂಕುನುಗ್ಗಲುಗಳೊಂದಿಗೆ ನಡುಮನೆಯ ಪಡುವಣ ಬಾಗಿಲಿಂದ ಪಾಪ ಕಲ್ಯಾಣಿ ಕುಟ್ಟಿಯನ್ನು ಹಿಡಿದು ಕೋಣೆಯೊಳಕ್ಕೆ ತಳ್ಳಿಹಾಕಿ ಆ ಬಾಗಿಲನ್ನು ಬಂಧಿಸಿದರು. ಜೀವದ ಒಂದು ಹಂದಿ ಅಥವಾ ಬೇರೆ ಯಾವುದೋ ಪ್ರಾಣಿಯನ್ನು ಹಿಡಿದು ಕೂಡಿಸಿಲಿಕ್ಕೆ ಹಾಕುವಂತೆ 'ಸಂಬಂಧ'ವೂ ಕಳೆಯಿತು. ನಂತರ ಹುಡುಗಿಯನ್ನು ಒಂದು ಪಲ್ಲಕ್ಕಿಯೊಳಗೆ ಕೂಡ್ರಿಸಿ, ಸೂರಿ ನಂಬೂದಿರಿಪಾಡರು ಒಂದು ಪಲ್ಲಕ್ಕಿಯಲ್ಲಿ ಏರಿದರು. ಉಳಿದವರು 'ಮೇನೆ'ಯನ್ನು ಏರಿದರು. ಸೇವಕ ವೃಂದ ಸಮೇತ ಮೆರವಣಿಗೆ ಮಾಡಿಕೊಂಡು ತಮ್ಮ ಊರಿಗೆ ಹೋಗುತ್ತಾರೆ.'' (ಅದೇ; ಪು. ೧೭೫)

ಈ ರೀತಿ ಕೇರಳದ ನಂಬೂದಿರಿ ಮತ್ತು ನಾಯರ್ ಸಮಾಜಗಳೊಳಗೆ ನಡೆಯುವ 'ಸಂಬಂಧ' ಎಂಬ ವಿಶಿಷ್ಟ ರೀತಿಯ ವೈವಾಹಿಕ ಸಂಬಂಧವನ್ನು ಇಂದುಲೇಖಾ ಕಾದಂಬರಿಯು ಮನೋಜ್ಞವಾಗಿ ಕಟ್ಟಿಕೊಡುತ್ತದೆ.

'ರಾಮರಾಜ ಬಹೂದ್ದೂರ್' ಕಾದಂಬರಿಯಲ್ಲಿ ಬರುವ ಮದುವೆಯ ಆಚರಣೆಯು ಕೇರಳಕ್ಕೇ ವಿಶಿಷ್ಟವಾದುದಾಗಿದೆ. ಸಾವಿತ್ರಿಯ ಮದುವೆಯ ಸಂದರ್ಭವನ್ನು ಇದಕ್ಕೆ ಉದಾಹರಣೆಯಾಗಿ ಗಮನಿಸಬಹುದು. ಮದುಮಗನನ್ನು ನದಿಯಲ್ಲಿ ಸ್ನಾನ ಮಾಡಿಸಿ ಅವನನ್ನು ಪಲ್ಲಕ್ಕಿಯಲ್ಲಿ ಕೂಡ್ರಿಸಿಕೊಂಡು ಮುಂದೆ ಕೆಲವು ಜನರು ಪದ್ಧತಿಯಂತೆ ಘೋಷಿಣೆಯನ್ನು ಕೂಗಿ ಪಲ್ಲಕ್ಕಿಯನ್ನು ಎತ್ತಿಕೊಂಡು ಮದುವೆ ನಡೆಯುವ ಸ್ಥಳಕ್ಕೆ ಕರೆದುಕೊಂಡು ಹೋಗುತ್ತಾರೆ. ಈ ರೀತಿ ಮೆರವಣಿಗೆಯನ್ನು ಮಾಡುತ್ತಾ ಹಾಡುತ್ತಾ ಕುಣಿಯುತ್ತಾ ಹಾಗೆಯೇ ಕಥಕನ್ನಳಿಯ ಹಾಡನ್ನು ಹಾಡುತ್ತಿದ್ದರು. ಈ ಬಗೆಯಲ್ಲಿ ಮದುವೆಯ ಸಂಭ್ರಮವನ್ನು ನಡೆಸುತ್ತಾರೆ. ಅಲ್ಲಿ ಪಲ್ಲಕ್ಕಿಯ ಮೆರವಣಿಗೆ ಹಾಗೂ ನದಿಸ್ನಾನ, ಇವುಗಳು ವಿಶಿಷ್ಟತೆಯಿಂದ ಕೂಡಿದವುಗಳಾಗಿವೆ.

ದೈವದ ಕುರಿತಾದ ನಂಬಿಕೆಯ ಬಗೆಗಳು ಅಲ್ಲಿನ ಜನಪದದ ಅನನ್ಯತೆಯನ್ನು ಪ್ರತಿಬಿಂಬಿಸುತ್ತವೆ. ಈ ರೀತಿಯ ಜನಪದ ಅಂಶಗಳನ್ನು ಕಾದಂಬರಿಗಳಲ್ಲಿ ಬರುವ ವಿವರಗಳಲ್ಲಿ ಗಮನಿಸಬಹುದು. ಉದಾಹರಣೆಗೆ : ರಾಮರಾಜ ಬಹದ್ದೂರನಲ್ಲಿ ಬರುವ ವಿವರಣೆ : ''ಇಬ್ಬರು ಸ್ತ್ರೀಯರು ಅತಿ ಸುಂದರಿಯರಾಗಿದ್ದರು. ಆದರೆ ಅವರಿಗೆ ಮಕ್ಕಳಿರಲಿಲ್ಲ, ಹಲವಾರು ಧಾರ್ಮಿಕ ಕ್ರಿಯೆಗಳನ್ನು ನಡೆಸಿ, ಹರಕೆಗಳನ್ನು ಹೊತ್ತರೂ ಫಲವುಂಟಾಗಲಿಲ್ಲ. ಧಾರ್ಮಿಕ ಕ್ರಿಯೆಗಳನ್ನು ನಡೆಸುವುದಕ್ಕಾಗಿ ಉತ್ತರ ಭಾರತದಲ್ಲಿ ಸಂಚಾರಮಾಡಿ ಆಳಲೆಕಾಯಿ ಪಂಡಿತನಾಗಿದ್ದ ಯಜ್ಞೋಪವೀತ ಧರಿಸಿದ ಒಬ್ಬನು ಕೊನೆಗೆ ಬಂದ. ಮಾಂಗಾವಿಲ್ ಮಠದ ಕಟ್ಟಡದಲ್ಲಿ ಈತನಿಗೆ ಒಂದು ಆಶ್ರಮ ಪೀಠವನ್ನು ಸ್ಥಾಪಿಸಿಕೊಡಲಾಯಿತು. ಇದರಿಂದ ಒಬ್ಬ ಸ್ತ್ರೀ ಗರ್ಭಧರಿಸಿದ್ದು ಅಲ್ಲಿಯೇ ಒಂದು ಹೆಣ್ಣುಮಗುವನ್ನು ಹೆತ್ತಳು'' (ಶ್ರೀ ಕೃಷ್ಣಭಟ್ ಅರ್ತಿಕೆಟ್ - ೨೦೦೦, ಪು ೯೫) ಇಲ್ಲಿನ ದೈವದ ನಂಬಿಕೆಗಳನ್ನು ವ್ಯಕ್ತಪಡಿಸುತ್ತದೆ.

ಇಂದುಲೇಖಾ ಕಾದಂಬರಿಯಲ್ಲಿ ಬರುವ ಇಂದುಲೇಖಾಳ ಮಡಿ, ಸ್ನಾನಗಳು, ಕಂಠಸ್ನಾನ, ನಿತ್ಯಮಡಿ ದೇವಸ್ಥಾನಕ್ಕೆ ಹೋಗಿ ಬರುವುದು ಪ್ರತಿಯೊಬ್ಬ ಕೇರಳದ ಮಹಿಳೆಯ ದೈವ ನಂಬಿಕೆ, ಆಚರಣೆಗಳ ಪ್ರತಿಬಿಂಬಿತವಾಗಿವೆ.

'ರಾಮರಾಜ ಬಹದ್ದೂರ್' ಕಾದಂಬರಿಯಲ್ಲಿ ಬರುವ ಸನ್ನಿವೇಶವೊಂದರ ಪ್ರಕಾರ "ಜನರು ಕೊಡಂತನನ್ನು ಹುಡುಕುತ್ತಾ ಅವನ ಮನೆಗೆ ಹೋದರು ಜನರು ಬರುವ ಸದ್ದು ಕೇಳಿದೊಡನೆಯೇ ಕೊಡಂತ ಆಶನ್ ಬೇರಿ, ಹಳ್ಳಿ, ಹೊಂಡ ಮುಂತಾದವುಗಳನ್ನು ಹಾರಿ ಓಡಿ ಕಾಡಿನೊಳಗೆ ಮರೆಯಾದ, ಜನ ಕೂಗಾಟ ಕೇಳಿ ಕೊಡಂತನ ಮನೆಯೊಳಗಿದ್ದವರು ದನ, ಕೇಳಿ ಮೊದಲಾದ ಜೀವಿಗಳು ಬೊಬ್ಬಿಟ್ಟವು . ಕೂಗಾಟ ಗಲಾಟೆ ಪ್ರತಿಯೊಂದು ಮನೆಗೂ ಹಬ್ಬಿ ಎಲ್ಲಾ ದಿಕ್ಕುಗಳಿಗೂ ವ್ಯಾಪಿದವು. ಇದು ನಾಯರ್ ಮನೆಗಳ ಗಲಾಟೆ ಕೇಳಿ ಪ್ರಮುಖರಾದವರು ಸತ್ತರೆಂದು ಭಾವಿಸಿ ಹೊಲೆಯರು, ಕೊರಗರು, ಮುಂತಾದವರೂ ಆ ಧ್ವನಿಗೆ ತಮ್ಮ ಕೂಗನ್ನು ಸೇರಿಸಿದರು" (ಶ್ರೀಕೃಷ್ಣ ಆರ್ತಿಕಜೆ - ೨೦೦೦, ಪುಟ)

ಈ ಸನ್ನಿವೇಶ ವರ್ಣನೆಯಿಂದ ಅಲ್ಲಿನ ಪ್ರಾದೇಶಿಕ ವಿಶಿಷ್ಟತೆ ತಿಳಿದು ಬರುತ್ತದೆ. ಅಂದರೆ ಆ ಸಮುದಾಯದಲ್ಲಿ ಯಾರಾದರೂ ಮರಣ ಹೊಂದಿದರೆ ಅವರಿಗೆ ಅಧೀನ ಸಮುದಾಯದವರು ಆ ದುಃಖದಲ್ಲಿ. ಭಾಗಿಗಳಾಗುತ್ತಾರೆ. ಎಂದು ವ್ಯಕ್ತಪಡಿಸುತ್ತದೆ. ಈ ರೀತಿ ಬೊಬ್ಬೆ ಹಾಕುವುದು ಒಂದು ವೈಶಿಷ್ಟ್ಯವಾಗಿ ಕಾಣುತ್ತದೆ.

ಮಾಧವ ಮತ್ತು ಇಂದುಲೇಖಾ ಸಂಭಾಷಣೆಯಲ್ಲಿ ಮಾಧವನ್ ಹೇಳುವ ಮಾತುಗಳ ಸ್ತ್ರೀಯರ ಸ್ವಾತಂತ್ರ್ಯವು ಅಲ್ಲಿನ ವೈಶಿಷ್ಟ್ಯವನ್ನು ಪ್ರತಿಸಾದಿಸುವಂತಾಗಿದೆ. "ಮಾಧವನ್ - ಕೇರಳದಲ್ಲಾದ್ರೆ, ಹೆಣ್ಣು ಮಕ್ಕಳಿಗೆ ಅತಿಯಾದ ಸ್ವಾತಂತ್ರ್ಯ ಗಂಡಸ್ರನ್ನು ಕಾಡೋದಕ್ಕೆ ಸಾಕಷ್ಟು ಅವಕಾಶ ಇರೋದ್ರಿಂದ ಇಲ್ಲಿನ ಗಂಡಸ್ರು ಈ ನೋವನ್ನು ತಿನ್ನೋದಲ್ಲದೇ ಗತ್ಯಂತರವಿಲ್ಲ.

ಕೇರಳದ ಸ್ತ್ರೀಯರು ಅನ್ಯದೇಶಗಳ ಸ್ತ್ರೀಯರಂತೆ ಪಾತಿವ್ರತ್ಯ ಧರ್ಮವನ್ನು ಆಚರಿಸೋದಿಲ್ಲ ಗಂಡಂದ್ರನ್ನು ಸ್ವೀಕರಿಸೋ ವಿಷಯದಲ್ಲಿ ಲಂಗಿಲ್ಲ, ಲಗಾಮಿಲ್ಲ - ಇಷ್ಟ ಬಂದಂತೆ ಸ್ವೀಕರಿಸೋದು ಬಿಡೋದು. ಇದು ಅವರ ಪರಿಪಾಠ, ಇನ್ನೂ ಹೆಚ್ಚಿನ ಸ್ವಾತಂತ್ರ್ಯ ಇವೆ. ಹಾಗೆಯೇ ಮಲಯಾಳದ ಸ್ತ್ರೀಯರಿಗೆ ಅಹಂಕಾರ ವಿಪರೀತ'' (ರಾಘವನ್ .ಸಿ - ೧೯೯೫. ಪುಟ - ೨೫)

ಈ ಮಾತುಗಳಲ್ಲಿ ಕೇರಳದ ಸ್ತ್ರೀಯರಿಗೆ ಇದ್ದ ಸ್ವಾತಂತ್ರ್ಯದ ವೈಶಿಷ್ಯವನ್ನು ಅವಳಿಗೆ ನೀಡಿದ ಸ್ಥಾನ. ವೈವಾಹಿಕದಲ್ಲಿನ ಸ್ವಾತಂತ್ರ್ಯ ವಿಶಿಷ್ಠ ರೀತಿಯಿಂದ ಕೂಡಿದವುಗಳಾಗಿವೆ. ಇದು ಕೇರಳ ಸಮಾಜದ ಅನನ್ಯತೆಯ ಗುರುತಾಗಿದೆ.

ಜಾತಿ ಸಂಪ್ರದಾಯಗಳು ಭಾರತದಲ್ಲಿರುವಂತೆ ಕೇರಳದಲ್ಲಿಯೂ ಅನೇಕ ಜಾತಿಗಳು ಇರುವುದು ಕಂಡು ಬರುತ್ತದೆ. ಶ್ರೇಣೀಕರಣ ವ್ಯವಸ್ಥೆಯಲ್ಲಿ ನಂಬೂದರಿ ಬ್ರಾಹ್ಮಣರು ಸಮಾಜದ ಉನ್ನತ ಸ್ಥಾನದಲ್ಲಿದ್ದರು. ಮತೀಯ ವಿಚಾರ ಹಾಗೂ ಧಾರ್ಮಿಕ ವಿಚಾರಗಳಲ್ಲಿ ನಂಬೂದಿರಿ ಬ್ರಾಹ್ಮಣರಿಗೆ ಮುಖ್ಯ ಸ್ಥಾನವಿತ್ತು. ಹಾಗೆಯೇ 'ನಾಯರ್' ಜಾತಿಯು ಕೇರಳ ಸಮಾಜದಲ್ಲಿ ಉನ್ನತ ಸ್ಥಾನವಿದೆ. ಕ್ಷತ್ರಿಯರು , ಇಳವ, ಪುಲಯ, ಕೊರವರು, ಹೊಲೆಯರು - ಮುಂತಾದ ಸಮುದಾಯದವರು ವಾಸಿಸುತ್ತಿದ್ದರು. 'ರಾಮರಾಜ ಬಹದ್ದೂರ್ ಕಾದಂಬರಿಯಲ್ಲಿ ಬರುವ ಜನಪದ ಕಥೆಯೊಂದರಲ್ಲಿ ಹರಿಜನರ ಬಗ್ಗೆ ಕಟ್ಟಿದಂತ ಕಥೆಯಾಗಿದೆ. '' ವಿಲ್ಲಿ ಎನ್ನುವ ಹರಿಜನ, ನಾಯಕನು ನೆಲ್ಲಿಕ್ಕಾಡಿನ ಪಡಿಪ್ಪುರಕ್ಕಲ್‌ಗೆ ಹೋಗಿ 'ರಾಜಕುಮಾರೀ ಒಂದೊ ದೊನ್ನೆ ಗಂಜಿಕೊಡಿ' ಎಂದು ಕೇಳಿದ, ರಾಜಕುಮಾರಿ ಹೇಳಿದಳು ನನ್ನ ಅಣ್ಣನೂ ಮಾವನೂ ಸತ್ತು ಹೋದರು. ಸತ್ತವರ ಬಂಧುಗಳ ದುಃಖವನ್ನು ತಿಳಿಯಲಾಗದ ನೀನು ಗಂಜಿ ತಾ ತವುಡು ತಾ ಎಂದು ಕೇಳುತ್ತಿರುವೆಯಲ್ಲ? ಯಾರಲ್ಲಿ? ಇವನ ಚರ್ಮ ಸುಲಿಯಿರಿ . ಈ ಒಂದು ಕಥೆಯು ಅಲ್ಲಿನ ಸಮುದಾಯದ ಜನರು ಬಲಿಷ್ಟವಾಗಿದ್ದರು ಎನ್ನುವುದನ್ನು ವ್ಯಕ್ತಪಡಿಸುತ್ತದೆ. ಮುಂತಾದ ಸಮುದಾಯದವರು ವಾಸಿಸುತ್ತಿದ್ದರು. ಇದು ಕೇರಳಕ್ಕೆ ವಿಶಿಷ್ಟವಾದ ಈ ಜಾತಿ ಸಮುದಾಯಗಳ ವಿವರ ಉಲ್ಲೇಖಗಳು ಆರಂಭ ಘಟ್ಟದ ಕಾದಂಬರಿ ಮುಖ್ಯವಾಗಿ ಕೇರಳದ ನಂಬೂದಿರಿ ಮತ್ತು ನಾಯರ್ ಸಮುದಾಯದ ಒಳಗಿನ ಅಂತರ್ ಸಂಬಂಧವನ್ನು ವಿವರಿಸುತ್ತದೆ.

ಎರಡು ವಿಶಿಷ್ಟ ಸಮುದಾಯಗಳ ಆಚಾರ ವಿಚಾರಗಳ ವಿವರಗಳು ಇಲ್ಲಿವೆ. ಜೊತೆಗೆ ಕೇರಳದಲ್ಲಿನ ಇಳವ, ಪುಲಯ, ಹೊಲೆಯ, ಕೊರವರು, ಮುಂತಾದ ಸಮುದಾಯ ಬುಡಕಟ್ಟುಗಳ ಉಲ್ಲೇಖಗಳು ಅಲ್ಲವೆ, ಪೊತ್ತೇರಿ ಕುಞ ಂಬು. ಅವರ ಸರಸ್ವತಿ ವಿಜಯಂ ಕಾದಂಬರಿಯು ಕೇರಳದ ಕೆಳವರ್ಗದ ವಿಶೇಷವಾಗಿ ಪುಲಯನ್ ಸಮಾಜದ ಸುತ್ತ ಕೇಂದ್ರೀಕೃತವಾಗಿದೆ.

ಆ ಕಾಲದಲ್ಲಿ ಆರಂಭಘಟ್ಟದ ಕೊನೆಯ ಅವಧಿಯಲ್ಲಿ ಸಮಾಜದ ಜಾತಿಯ ಸಾಂಸ್ಕೃತಿಕ ವಿವರಗಳು ಅಲ್ಲದೇ ಆ ಸಮುದಾಯದ ಸಾಂಸ್ಕೃತಿಕ ಸಮಾಜದ ಸ್ಥಿತಿಗತಿಗಳ ಜೊತೆಗೆ ಶಿಕ್ಷಣ, ಸುಧಾರಣೆಯ ಕುರಿತಾದ ಪ್ರಜ್ಞೆ ಕೂಡ ಅವರಲ್ಲಿ ಆ ಕಾಲಕ್ಕಾಗಲೇ ಮೂಡ ತೊಡಗಿತ್ತು ಎಂಬ ಅಂಶವು ಈ ಕಾದಂಬರಿಯಿಂದ ವ್ಯಕ್ತವಾಗುತ್ತದೆ.

ಹೀಗೆ ಮಲಯಾಳಂನ ಆರಂಭಘಟ್ಟದ ಕಾದಂಬರಿಗಳಲ್ಲಿ ಕೇರಳದ ಆ ಕಾಲದ ವಿಶಿಷ್ಟ ಸಾಮಾಜಿಕ, ಧಾರ್ಮಿಕ, ಆಚರಣೆಗಳು, ಕುಟುಂಬ ಪದ್ಧತಿ, ಸಮಾಜದಲ್ಲಿನ ಶ್ರೇಣೀಕರಣ ವ್ಯವಸ್ಥೆ, ಸಾಮಾಜಿಕ ಪಾಲ್ಗೊಳ್ಳುವಿಕೆ, ನಂಬಿಕೆ - ನಡವಳಿಕೆ ಇತ್ಯಾದಿಗಳ ವಿವರಗಳು ಸಿಗುತ್ತವೆ. ಇವೆಲ್ಲ ಮದುವೆಯ ಸಂದರ್ಭದ ಆಚಾರ ವಿಚಾರಗಳನ್ನು ತಿಳಿಸುತ್ತವೆ. ತಮಿಳು ನಾಡಿನ ಆ ಕಾಲದ ನಂಬಿಕೆ ಬಗ್ಗೆ ಕಾದಂಬರಿಯು ಉಲ್ಲೇಖಿಸುತ್ತವೆ. ತಮಿಳು ನಾಡಿನ ಆ ಕಾಲದ ನಂಬಿಕೆಗಳು ಪ್ರದೇಶದ ಅಗತ್ಯಕ್ಕೆ ತಕ್ಕಂತೆ ಅಲ್ಲಿನ ಜನರಲ್ಲಿ ವ್ಯಕ್ತಗೊಳ್ಳುತ್ತವೆ. ಆ ಪ್ರದೇಶದ ಜನರ ದೇವರ ಆರಾಧನೆಯು ಅಲ್ಲಿನ ಜನರ ಧಾರ್ಮಿಕ ವಿಧಿವಿಧಾನಗಳು ಆ ಪ್ರಾದೇಶಿಕತೆಯ ವಿಶಿಷ್ಟ ಲಕ್ಷಣವನ್ನು ಹೇಳುತ್ತವೆ. ಸುಬ್ರಮಣ್ಯ, ಮಧುರೆಯ 'ಮೀನಾಕ್ಷಿ' ದೇವರು, ನಟರಾಜನ್ ದೇವರು, ವನದೇವತೆ, ಕಾಳಿದೇವಾಲಯಗಳ ಪೂಜೆಯು, ಉತ್ಸವಗಳು, ನಡೆಯುತ್ತವೆ. ಸುಬ್ರಮಣ್ಯ ಮತ್ತು ಮೀನಾಕ್ಷಿಯೇ ಆ ಪ್ರದೇಶದ ವಿಶಿಷ್ಟ ಆರಾಧ್ಯ ದೈವವಾಗಿದೆ.

ಮುತ್ತುಸ್ವಾಮಿಯವರು ಮಗಳ ಮತ್ತು ಅಳಿಯನ ಜಾತಕ ಹೊಂದಾಣಿಕೆಯಾದರೂ ಅದರ ಬಗ್ಗೆ ಸಂಶಯವೇತಕ್ಕೆ ಅವರ ಬಾಳು ಸುಖಮಯವಾಗಿರಬೇಕೆಂದು ತಿಳಿದು ದೈವದ ಮೊರೆ ಹೋಗುತ್ತಾರೆ.

''ಹೂವನ್ನು ಇಟ್ಟು ನೋಡೋಣ ಶಕುನವನ್ನು ನೋಡೋಣ, ಮನಸ್ಸಿನಲ್ಲಿ ಸಂಶಯ ವೇತಕ್ಕೆ ನಮಗೇನು ಹೆಣ್ಣು ಇಲ್ಲವೇ ಎಂದು ಅಂದು ರಾತ್ರಿ ಗುಡಿಗೆ ಹೋಗಿ ಮೀನಾಕ್ಷಿ ಅಮ್ಮನವರ ಸಮ್ಮತಿ ಕೇಳೋಣ''. ಅಂದು ರಾತ್ರಿ ಮೀನಾಕ್ಷಿ ಅಮ್ಮನ ಗುಡಿಗೆ ಹೋಗಿ ಹೂವನ್ನು ಇಟ್ಟು ನೋಡಲು ಬಿಳಿಯ ಹೂ ಕೈಗೆ ಬಂದುದು ಮಾತ್ರವಲ್ಲದೆ ಅಮ್ಮನವರ ಸನ್ನಿಧಿಯಲ್ಲಿ ಗರ್ಭಗುಡಿಯಲ್ಲಿ ಬೆಳಗಿಸಿದ್ದ ದೀಪದಿಂದ ಹೂಗಳಂತೆ ಕಿಡಿಗಳುದು ಉದುರಿದುವು''. ಇದನ್ನು ಕಂಡು ಆನಂದದಿಂದ ಮನೆಗೆ ಹಿಂತಿರುಗಿದರು. ಇವು ತಮಿಳುನಾಡಿನ ಮಧುರೈ ಸುತ್ತಮುತ್ತಲಿತವಿದ್ದ ಆ ಕಾಲದ ಧಾರ್ಮಿಕ ನಂಬಿಕೆಗಳಾಗಿವೆ. (ಸಂಪದ್ಗಿರಿಯರು .ಕೆ ೧೯೫೫, ಪು.೯೬) ಹೀಗೆಯೇ ಮುತ್ತುಸ್ವಾಮಿ ಅಯ್ಯರ್ ಮಗನ ಬಲಿಯಾದಾಗ ಅವರ ಬಗ್ಗೆ ಜ್ಯೋತಿಷ್ಯ, ನೋಡಲು ಕರೆಯಿಸಿ ಕೋಳ್ಯೋಣ ಎನ್ನುವಲ್ಲಿ ಆ ಊರಿನ ಬುಡ ಬುಡಕಿಗೆ ಹೇಳಕಳುಹಿಸುವುದು. ಅವನು ಅದಕ್ಕೆ ಮಂತ್ರವಾದಿಯೇ ನರಬಲಿ ಮಾಡಿರುವನೆಂದು ಹೇಳುವುದು ಅದನ್ನು ಜನರು ನಂಬುವುದು. ಜೀವನದ ಭಾಗವಾಗಿ ಬಂದಿರುವ ನಂಬಿಕೆಯಾಗಿವೆ. ತಮಿಳು ನಾಡಿನ ಅಂದಿನ ಆಹಾರ ಪದ್ಧತಿಯು ಕಾದಂಬರಿಯಲ್ಲಿ ವಿವರಿಸುತ್ತದೆ. ''ಮೀಳಾಚ್ಚೇರಿಯಿಂದ ಹಲಸಿನ ಹಣ್ಣು, ಶಾಮಗಡ್ಡೆ ಹಾಕಿ ಮಜ್ಜಿಗೆ ಹುಳಿ, ತೆಂಗಿನಕಾಯಿ, ಕೋಸುಂಬರಿ, ಹಲಸಿನಕಾಯಿ ಪಲ್ಯ, ಬದನೆಕಾಯಿ ಹುರಿಯ ಹಾಕಿದ ಕೋಟು ಗೆಣಸು ಪಲ್ಯ ಹಾಗೆಯೇ ತೆಂಗೊಳಲು, ಎಳ್ಳುಂಡೆ, ಮೊದಲಾದ ಹಪ್ಪಳ ಮುಂತಾದವುಗಳು ಕಾದಂಬರಿಯಿಂದ ವ್ಯಕ್ತವಾಗುವಂತೆ ಅಲ್ಲಿನ ಆಹಾರ ಪದ್ಧತಿಗಳೆಂದು ಹೇಳಬಹುದು. ಇ ರೀತಿಯಲ್ಲಿ ತಮಿಳಿನ ಪ್ರಾದೇಶಿಕ ಅನನ್ಯ'ತೆಯ ವಿವರಗಳು ಕಾದಂಬರಿಯಲ್ಲಿ ಬರುವ ವಿವರಣೆಗಳಿಂದ ಗುರುತಿಸಬಹುದಾಗಿದೆ.

೫.೩ ತುಳು ಕಾದಂಬರಿಗಳಲ್ಲಿನ ಪ್ರಾದೇಶಿಕ ಅನನ್ಯತೆ

ತುಳು ನಾಡು ಪ್ರಾದೇಶಿಕವಾಗಿ ತನ್ನದೇ ಆದ ಅನೇಕ ವಿಶಿಷ್ಟ ಲಕ್ಷಣಗಳಿಂದ ಕೂಡಿದೆ. ತುಳುವಿನ ಮೊತ್ತ ಮೊದಲ ಕಾದಂಬರಿಯಾದ ಸತೀಕಮಲೆ ಮತ್ತು ನಂತರದ ಕಾದಂಬರಿಯಾದ ಮಿತ್ಯ ನಾರಾಯಣಕತೆ - ಈ ಎರಡು ಕಾದಂಬರಿಗಳ ವಿವರಣೆಯ ಮೂಲಕ ತುಳು ನಾಡಿನ ಪ್ರಾದೇಶಿಕ ಅನನ್ಯತೆಯನ್ನು ಇಲ್ಲಿ ಗುರುತಿಸಬಹುದಾಗಿದೆ.

ಒಂದು ಪ್ರದೇಶದ ಭೌತಿಕತೆಯು ಆ ಪ್ರದೇಶದ ಅನನ್ಯತೆಯನ್ನು ಸಾರುತ್ತದೆ. ಮನುಷ್ಯ ಒಂದು ಕಡೆ ನೆಲೆನಿಂತು ಜೀವನ ನಡೆಸಬೇಕಾಗುತ್ತದೆ. ಈ ರೀತಿಯಲ್ಲಿ ಜೀವನ ನಡೆಸಲು ವಾಸಮಾಡಲು, ನಿರ್ದಿಷ್ಟ ಸ್ಥಳದಲ್ಲಿ ಒಂದು ಮನೆಯನ್ನು ನಿರ್ಮಿಸಿಕೊಂಡಿರುತ್ತಾರೆ. ಆ ಮನೆಗಳು ಅಲ್ಲಿನ ಪ್ರಾಕೃತಿಕ ಲಕ್ಷಣಗಳಿಗೆ ಅನುಗುಣವಾಗಿ ನಿರ್ಮಿತವಾಗಿರುತ್ತವೆ. ಅಂತಹ ಒಂದು ಉದಾಹರಣೆಯನ್ನು ತುಳು ಕಾದಂಬರಿಯಾದ 'ಸತೀಕಮಲೆ' ಯಲ್ಲಿ ಕಾಣಬಹುದು. ''ಸಮುದ್ರ ತೀರದಲ್ಲಿ ಒಂದು ತೋಟ, ಆದರಲ್ಲಿ ಅನೇಕ ವಿಧದ ಮರಗಳೂ ಕಸಿಗಿಡಗಳೂ ಇವೆ. ಸಂಜೆ ಪಶ್ಚಿಮದಿಂದ ಸೂರ್ಯ ಕಿರಣಗಳು ಅದರ ಮೇಲೆ ಬಿದ್ದಾಗ ಸುಂದರವಾಗಿ ಕಾಣಿಸುತ್ತದೆ. ಮನಸ್ಸಿಗೆ ಆತ್ಯಾನಂದವಾಗುತ್ತದೆ. ಆ ತೋಟದ ನಡುವಿನಲ್ಲಿ ಮೂರು ಉಪ್ಪರಿಗೆಯ ಮನೆ'' (ಪಣಿಯಾಡಿ ಎಸ್.ಯು - ೨೦೦೦, ೩೦) ಈ ವಿವರಣೆಯನ್ನು ಗಮನಿಸಿದಾಗ ತುಳು ನಾಡಿನ ಮನೆಗಳು ಸ್ವತಂತ್ರವಾಗಿರುತ್ತವೆ. ಒಂದು ಮನೆ ಅದರ ಸುತ್ತ ತೋಟದಿಂದ ಮರಗಿಡಗಳಿಂದ ಆವರಿಸಲ್ಪಟ್ಟಿರುತ್ತದೆ. ಆ ಪ್ರಕೃತಿಯ ಜೊತೆ ಜೀವನ ನಡೆಸುವಂತದ್ದು ಸುಂದರವಾಗಿರುತ್ತದೆ. ಇದು ತುಳುನಾಡಿನ ಗ್ರಾಮಗಳ ಮತ್ತು ಮನೆಗಳ ನಿರ್ಮಾಣದ ವೈಶಿಷ್ಟ್ಯವನ್ನು ತಿಳಿಸುತ್ತದೆ. ಅಲ್ಲಿನ ಜನರ ಜೀವನದ ರೀತಿಯನ್ನು ಪ್ರತಿಬಿಂಬಿತವಾಗುತ್ತದೆ.

ಕಾದಂಬರಿಗಳಲ್ಲಿ ಬರುವ ಪಾತ್ರಗಳೂ ಸಹ ಆ ಪ್ರದೇಶದ ಅನನ್ಯತೆಯನ್ನು ವ್ಯಕ್ತಪಡಿಸುತ್ತವೆ. ಅವುಗಳು : ನಾರಾಯಣ, ಕೃಷ್ಣಶಾಸ್ತ್ರಿ, ಭಟ್ಟರು, ಬೀರ, ಶ್ರೀದೇವಿ , ಸುಬ್ರಾಯಾಚಾರಿ, ಶಾಮಾಶಾಸ್ತ್ರಿ, ಸಂಕ್ರಯಾಚಾರಿ, ವೆಂಕಮ್ಮ, ಲಿಂಗಮ್ಮ, ಸುಬ್ಬು ಮುಂತಾದವು ಆ ಪ್ರದೇಶದಲ್ಲಿ ಚಾಲ್ತಿಯಲ್ಲಿದ್ದ ಹೆಸರುಗಳಾಗಿವೆ.

ಕಾದಂಬರಿಗಳಲ್ಲಿ ಬರುವ ಸ್ಥಳಗಳ, ಹೆಸರುಗಳು ಕೂಡ ಪ್ರಾದೇಶಿಕ ಅನನ್ಯತೆಯನ್ನು ಬಿಂಬಿಸುತ್ತವೆ . ಡೊಂಗರಕೇರಿ, ಮಂಗಳೂರು, ಪೋದನೂರು, ಪೊಳಲಿ, ಆಮುನಂಚೆ ಕಣಿಯೂರ ಜುಮಾದಿ, ಸಂಗೆಬೆಟ್ಟು, ಕುಳವೂರು, ಕೊಂಡೇಲಿ, ಪಲ್ಲಿಪಾಡಿ, ಅಡ್ಡೂರು, ಮುಂತಾದವು. ಮದುವೆಯ ರೀತಿಯ ಸಂಪ್ರದಾಯಗಳ ಬಗ್ಗೆ ಬರುವ ವಿವರಣೆಗಳನ್ನು ಗಮನಿಸಿದಾಗ ಆ ಪ್ರದೇಶದ ವಿವಾಹ ಕ್ರಮದ ಅನನ್ಯತೆ ಸ್ಪಷ್ಟವಾಗುತ್ತದೆ. ''ಭಟ್ಟರು ಮದುವೆಯಲ್ಲಿ ಎಂಟು ವಿಧ ಎಂದು ಹಿಂದಿನಿಂದಲೇ ಇದೆ. ಅಲ್ಲದೇ ಈ ತಲನಾಡಿಯಲ್ಲಿ ನಾಗಬ್ರಹ್ಮರ ಕಟ್ಟಿನಂತೆ ಹೆಣ್ಣು ತಾನುಬಲಿದವರನ್ನೇ ಮದುವೆಯಾಗುವುದು. ಅವನನ್ನು ತನ್ನ ಮನೆಯಲ್ಲಿ ಇರಿಸಿಕೊಳ್ಳುವುದು (ಬಾಲಕೃಷ್ಣ ಶೆಟ್ಟಿ ಪೋಳಲಿ; ೧೯೩೫; ಪು.೩೯) ಎಂಬ ಮಾತನ್ನು ಹೇಳುತ್ತಾರೆ.

ಇದು ತುಳು ನಾಡಿನಲ್ಲಿರುವ ಮದುವೆ ಸಂಪ್ರದಾಯದ ವಿವಾಹ ಕ್ರಮದ ವಿಶಿಷ್ಟತೆಯನ್ನು ವ್ಯಕ್ತಪಡಿಸುತ್ತದೆ. ತುಳುನಾಡಿನಲ್ಲಿ ಪ್ರಚಲಿತವಿದ್ದ 'ನಾಗಬೊಜ್ಜ'[೧] ವೆಂಬ ಉತ್ತರ ಕ್ರಿಯೆಗೆ ಸಂಬಂಧಪಟ್ಟ ವಿಶಿಷ್ಟ ವಿಧಿಯೊಂದನ್ನು 'ಮಿಥ್ಯನಾರಾಯಣ' ಕಾದಂಬರಿಯು ಉಲ್ಲೇಖಿಸುತ್ತದೆ. ''ಭಟ್ಟರು : ನಾಗ ಎಂದರೆ ಸರ್ಪ ಸರ್ಪದ ಹೆಣ ನೋಡಲು ಸಿಕ್ಕಿದರೆ ಅದನ್ನು ಸುಟ್ಟು ಸಂಬಂಧಿಕರು ಸತ್ತಾಗ ಮಾಡುವಂತೆ ಕ್ರಿಯೆ ಹಿಡಿದು ಬೊಜ್ಜ ಮಾಡಬೇಕು. ಈ ತುಳುನಾಡಿನಲ್ಲಿ ಇರುವ ತುಳುವರೆಲ್ಲರೂ ನಾಗ ಸಂತಾನವೇ ಆದುದರಿಂದ ನಾಗ ಸತ್ತರೆ ನಮಗೆ ಸೂತಕ ಇದೆ. ಇದಕ್ಕಾಗಿ ಬೊಜ್ಜ ಮಾಡುವುದು.

---

೧) ನಾಗಬೊಜ್ಜ : ಎಂದರೆ ಒಂದು ರೀತಿಯ ಶ್ರಾದ್ಧ. ನಾಗರ ಹಾವಿಗೆ ಅಂತ್ಯಕ್ರೀಯೆ ಮಾಡುವ ಸಂಪ್ರದಾಯ

ತುಳುವರಿಗೆ ಕುಲದೈವ 'ನಾಗ'ವಾಗಿದೆ. ಈಗಲೂ 'ಇಂದಮುಗ' ಇಂದಗ ಎಂಬುದರ ಅರ್ಥವೇ 'ಇಂದನಾಗ' ಎಂದು ಆದುದರಿಂದ ನಾಗನಿಗೆ ಬೊಜ್ಜ ಮಾಡುವುದು ಇಲ್ಲಿಯ ನಾಗಕಟ್ಟು.

ಈ ರೀತಿಯಲ್ಲಿ ಅಲ್ಲಿನ ವಿಶಿಷ್ಟ ಆಚರಣೆಯನ್ನು ವ್ಯಕ್ತಪಡಿಸುತ್ತದೆ. ತುಳು ನಾಡನ್ನು ಕಟ್ಟಿಕೊಳ್ಳುವ ವಿಶಿಷ್ಟ ರೀತಿಯನ್ನು ಗಮನಿಸಬಹುದು. ''ತುಳು ಮಲಯಾಳ ಎಂಬ ರಾಜ್ಯ ಹಿಂದಿನಿಂದಲೂ ಸ್ತ್ರೀರಾಜ್ಯ ಎಂದು ಪುರಾಣಗಳಲ್ಲಿ ಹೇಳುತ್ತಾರೆ. ಇಲ್ಲಿಯ ಜನರಿಗೆ ಭಾಷೆ, ದೇವರು ಮತ್ತು ಭೂಮಿ ಈ ಮೂರು ಕೂಡಾ ಹೆಣ್ಣು. ಆದ್ದರಿಂದಲೇ ಇದು ಸ್ತ್ರೀ ರಾಜ್ಯ ಇಲ್ಲಿ ಈಗಲು ಮರಿಮಕ್ಕತ್ತಾಯ[1] ಕಟ್ಟನ್ನು ಆಚರಿಸುತ್ತಾರೆ. ಮರಿ ಎಂದರೆ ಸರ್ಪ, ಮಕ್ಕ ಎಂದರೆ ಮಕ್ಕಳು ನಾಗಕಟ್ಟು ಎಂದರೆ ಈ ನಾಗನೇ ಇಲ್ಲಿಯ ದೇವರು ಮತ್ತು ರಾಜ ಇದು ಅವನ ಕಟ್ಟೇ ಇಲ್ಲಿದೆ. ಒಂದು ಕಾಲದಲ್ಲಿ ದೇವತೆಗಳ ಸಕಲ ಸಂಪತ್ತು ಸಮುದ್ರದಲ್ಲಿ ಮುಳುಗಿ ಹೋಯಿತು. ಅದನ್ನು ಮೇಲೆ ತರಲು ದೇವತೆಗಳೂ, ರಕ್ಕಸರೂ, ಒಟ್ಟಾಗಿ ಕಡಲನ್ನು ಕಡೆಯಲು ನಿಶ್ಚಯಿಸಿದರು. ಅದಕ್ಕಾಗಿ ವಾಸುಕಿ ಎಂಬ ನಾಗರಾಜನನ್ನು ಪ್ರಾರ್ಥಿಸಿದರು ಅವನು ಕಷ್ಟಪಟ್ಟು ಇವರ ಎಲ್ಲ ಸಂಪತ್ತು ಮರಳಿ ಪಡೆಯಲು ನೆರವಾದನು. ಆದರೆ ಬಳಲಿ ಕಡಲ ತೀರದಲ್ಲಿ ಸಾವಿರದ ಇನ್ನೂರ ಹರಿದಾರಿ ಉದ್ದ ಮತ್ತು ಆರುವತ್ತು ಹರಿದಾರಿ ಅಗಲದಲ್ಲಿ ಮಲಗಿ ವಿಶ್ರಮಿಸಿದನು. ಅವನ ಕಷ್ಟವೇನೆಂದು ದೇವತೆಗಳಾಗಲಿ ರಕ್ಕಸರಾಗಲಿ ವಿಚಾರಿಸಲಿಲ್ಲ. ಅವನು ತುಂಬ ಸಂಕಷ್ಟದಿಂದ ನರಳುವಾಗ ಅವನ ತಾಯಿ ಲೆಕ್ಕಿಸಿರಿಯೂ ತಂಗಿಯವರಾದ ಮಲೆಸಿರಿ ಮತ್ತು ತಲಸಿರಿ ಎಂಬುವರೂ ಅವರ ಮಕ್ಕಳು ಬಂದು ಅವನನ್ನು ಉಪಚರಿಸಿದರು. ಅವನ ಸಂಕಟ ದೂರವಾಯ್ತು.

---

೨) ಮರಿಮಕ್ಕತ್ತಾಯ : ಸಾಮಾನ್ಯವಾಗಿ ಕೇರಳದಲ್ಲಿ ಪ್ರಚಲಿತವಿರುವ ಮರುಮಕ್ಕತ್ತಾಯ ಸಂಪ್ರದಾಯವನ್ನು ತುಳುನಾಡಿನ ಅಳಿಯ ಸಂತಾನಕಟ್ಟಿಗೆ ಸಂವಾದಿ ಎಂದು ತಿಳಿಯಲಾಗುತ್ತದೆ. ಮಲಯಾಳಂನ ಮರುಮಗನ್ ಎಂದರೆ ಅಳಿಯ ಎಂಬ ಅರ್ಥವೂ ಇದೆ. ಆದರೆ ಇಲ್ಲಿ ''ಮರು'' ಎಂಬದಿಕ್ಕಿರುವ ನಾಗ ಅಥವಾ ಸರ್ಪ ಎಂಬ ಅರ್ಥ ಅನ್ವಯಿಸಿ ನಾಗಕಟ್ಟು ಎಂಬ ವಿಶಿಷ್ಟ ಸಂಪ್ರದಾವೊಂದರ ಪ್ರಸ್ತಾಪವನ್ನು ಮಾಡಲಾಗಿದೆ.

ಅವನು ಮತ್ತೆ ಸಮುದ್ರಕ್ಕೆ ಮರುಳುವಾಗ ಮಲೆಸಿರಿಯ ನಲವತ್ತು ಮಕ್ಕಳನ್ನು ಮಲೆಯಾಳ ರಾಜ್ಯಕ್ಕೂ ತಲಸಿರಿಯ ಅರುವತ್ತು ಮಕ್ಕಳನ್ನು ತಲನಾಡಿಗೂ ರಾಜ್ಯದ ಆಡಳಿತ ನೋಡಿಕೊಳ್ಳಲು ಕಳುಹಿಸಿಕೊಟ್ಟನು. 'ನೀವು ನನ್ನ ತಾಯಿ ಲೆಕ್ಕಸಿರಿಯ ಹೆಸರಿನಲ್ಲಿ ಆಡಳಿತ ಮಾಡಬೇಕು. ತಾಯಿಯೊಡನೆ ಕೇಳದೆ ಏನನ್ನೂ ಮಾಡಕೂಡದು. ಇಂದಿನಿಂದ ಈ ರಾಜ್ಯವು ಹೆಂಗಸರ ಸಂತತಿಯ ಪ್ರಕಾರ ನಡೆಯಬೇಕು. ನಾಗ, ಬ್ರಹ್ಮ, ಲೆಕ್ಕೆಸಾರಿ, ಅಬ್ಬುರಂದಾಯ, ಎಂಬುವರನ್ನು ನಂಬಿ ಕೆಲಸ ಮಾಡಬೇಕು. ಹೆಣ್ಣುಮಕ್ಕಳನ್ನೂ ಇಲ್ಲೇ ಇದ್ದು ಆಡಳಿತ ಮಾಡಬೇಕಲ್ಲದೆ ಈ ರಾಜ್ಯ ಬಿಟ್ಟು ಹೋಗ ಕೂಡದು' ಎಂಬ ನಿಯಮ ಮಾಡಿದನಂತೆ, ತಲಸಿರಿಯ ಅರುವತ್ತು ಮಕ್ಕಳನ್ನು ಅನಂತವೆಂಬ ಹುಡುಗನಿಗೆ ಮದುವೆ ಮಾಡಿಕೊಟ್ಟು ಅವನನ್ನು ಕಾಪಾಡುವಂತ ಲೆಕ್ಕಸಿರಿಯನ್ನು ತಲನಾಡಿನಲ್ಲಿ ಸ್ಥಾಪಿಸಿದನಂತೆ, ಈ ಅರವತ್ತು ಹೆಣ್ಣುಮಕ್ಕಳು ಅರವತ್ತು ಬನಗಳಲ್ಲಿ ವಾಸವಾಗಿ ಅಲ್ಲಲ್ಲಿ ನಂಬಿದವರಿಗೆ ಮದುವೆಗೆ ಬೇಕಾದ ಒಡವೆ ವಸ್ತುಗಳನ್ನು ಕೊಟ್ಟು ಸುಖದುಃಖದಲ್ಲಿ ನೆರವಾಗುತ್ತ ಇದ್ದರಂತೆ, ಒಂದು ತೆಂಗಿನಕಾಯಿ, ಒಂದು ತಂಬಿಗೆ ಹಾಲು ಕೊಂಡು ಹೋಗಿ ಈ ಬನದಲ್ಲಿ ಸಂಜೆ ಇಟ್ಟು ಕೈ ಮುಗಿದು ಬಂದರೆ ಮರುದಿನ ಬೆಳಿಗ್ಗೆ ಒಂದು ಹರಿವಾಣ ಚಿನ್ನ ಕೊಡುತ್ತಾರಂತೆ. ಮದುವೆ ಮುಗಿದ ಮೇಲೆ ಹಾಗೆಯೇ ಮರಳಿ ಒಪ್ಪಿಸಬೇಕಂತೆ ಇದು ಇಂದಿನವರೆಗೂ ತಪ್ಪದೆ ನಡೆಯುತ್ತ ಬಂದಿದೆ'' (ಅದೆ; ಪು.೧೦೩)

ಹೀಗೆ ಕಾದಂಬರಿಯಲ್ಲಿ ತುಳುನಾಡಿಗೆ ವಿಶಿಷ್ಟವಾದ ಆಚರಣೆಗಳಿಗೆ, ನಂಬಿಕೆ ಸಂಬಂಧ ಪಟ್ಟ ಪುರಾಣವನ್ನೇ 'ಭಟ್ಟರು' ಪಾತ್ರದ ಮೂಲಕ ಕಾದಂಬರಿಕಾರರು ಹೇಳುತ್ತಾರೆ. ತುಳುನಾಡಿನ ವಿಶಿಷ್ಟ ಜನಪದ ನಂಬಿಕೆಗಳನ್ನು ಕಾದಂಬರಿಯ ಈ ಭಾಗದಲ್ಲಿ ಉಲ್ಲೇಖಿಸಲಾಗಿದೆ. ''ತುಳುನಾಡಿನ ಮಧ್ಯಭಾಗದಲ್ಲಿ ಮಂಗಳೂರಿನಿಂದ ಮೂರು ಹರಿದಾರಿ ಗುರುಪುರದಲ್ಲಿ ವರ್ಷಕ್ಕೊಮ್ಮೆ ಮೀನಮಾಸ ಬರುವ ಸಂಕ್ರಮಣದಂದು ಧ್ವಜಾರೋಹಣವಾಗಿ ಒಂದು ತಿಂಗಳ ಜಾತ್ರೆ ನಡೆಯುತ್ತದೆ. ಪರಮೇಶ್ವರಿ, ಉಳ್ಳಾಲ್ತಿ ಎಂಬ ರಾಜ ರಾಜೇಶ್ವರಿ, ದುರ್ಗಾಪರಮೇಶ್ವರಿ ದೇವರು, ಭದ್ರಮಹಾಂಕಾಳಿ, ಸುಬ್ರಮ್ಮಣ್ಯ ಎಂಬ ನಾಗದೇವರು ಗಣಪತಿ ಕ್ಷೇತ್ರಪಾಲ ಎಂಬ ಸ್ಥಳದ ದೇವರೂ ಇಲ್ಲಿದ್ದಾರೆ.

ಇಲ್ಲಿಯ ದೇವರಿಗೆ ಹೆಂಗಸರಲ್ಲಿ ಒಲವು ಹೆಚ್ಚು ಇಲ್ಲಿಗೆ ಬರುವ ಹರಕೆಯಲ್ಲೂ ಹೆಚ್ಚು ಪಾಲು ಹೆಂಗಸರಿಂದಲೇ, ಕುಂಕುಮ, ಕರಿಮಣಿ, ಹಣ ಸೀರೆ, ಚಿನ್ನಾಭರಣಗಳು, ರಾಶಿರಾಶಿ, ಬರುತ್ತವೆ. ಇಲ್ಲಿ ಸುತ್ತಪ್ರೇತ, ಪಿಶಾಚಿ, ಬ್ರಹ್ಮರಾಕ್ಷಸ, ಗಂದರ್ವ, ಜಲಕನ್ಯೆ, ನಾಗಕನ್ಯೆ, ಮೈಯಲ್ಲಿ ಬರುವುದು, ಹೊಟ್ಟೆ ತಳಮಳಗೊಳ್ಳುವುದು, ಹೊಟ್ಟೆನೋವು, ಗರ್ಭಪಾತವಾಗುವುದು, ಹೆತ್ತಮಕ್ಕಳು ಸಾಯುವುದು. ಈ ರೀತಿಯ ಬಗೆ ಬಗೆಯ ಸಂಕಟಗಳಿಗೆಲ್ಲ. ಈ ಸ್ಥಳಕ್ಕೆ ಬಂದು ಶುದ್ಧದಲ್ಲಿದ್ದು ಒಂದು ಮಂಡಲ (48 ದಿನ) ತೀರ್ಥಸ್ನಾನ ಮಾಡಿ ತಾಯಿತ ಕಟ್ಟಿಸಿದರೆ ಖಂಡಿತ ಪರಿಹಾರ ಸಿಗುತ್ತದೆ''(ಅದೇ;ಪು.೯೬)

ಮನುಷ್ಯನು ತನ್ನ ಅಸಾಹಾಯಕ ಸ್ಥಿತಿಯಲ್ಲಿ ದೈವದ ಮೊರೆ ಹೋಗುವುದು ಸರ್ವೇಸಾಮಾನ್ಯ ಅಂತಹ ಜನಪದ ನಂಬಿಕೆಗಳು ಆಯಾ ಪ್ರದೇಶಕ್ಕೆ ಅಗತ್ಯಕ್ಕೆ ತಕ್ಕಂತೆ ಬೇರು ಬಿಟ್ಟಿರುತ್ತವೆ. ತುಳು ನಾಡಿಗೆ ಸಂಬಂಧಪಟ್ಟ ಬಳಸುವ ನಂಬಿಕೆಯ ಅಂತಹ ಒಂದು ವಿವರಣೆಯನ್ನು ಮಿಥ್ಯನಾರಾಯಣ ಕಾದಂಬರಿಯಲ್ಲಿ ಕಾಣಬಹುದು.

''ಸ್ವಾಮಿ ದೇವರೇ ನಮ್ಮಿಂದ ಏನು ಹೆಚ್ಚು ಕಡಿಮೆ ಆಗಿದ್ದರೂ ಪೊಳಲಿಯ ಉಳ್ಳಾಲ್ದಿ ಮತ್ತು ಈ ಸೋಮನಾಥ ದೇವರು ಕ್ಷಮಿಸಬೇಕು. ನಾಳೆ ಬೆಳಿಗ್ಗೆಯ ಪೂಜೆಗೆ ಇಲ್ಲಿ ಒಂದು 'ಕಾರ್ತಿಪೂಜೆ' ಮಾಡಿಸುತ್ತೇವೆ. ಪೊಳಲಿಗೆ ಹೋಗಿ ನೀರು ಮುಟ್ಟುವ ಮೊದಲು ಉಳ್ಳಾಲ್ದಿಗೆ ಒಂದು ಚೆಂಡು ಹೂ ಹರಕೆ ಒಪ್ಪಿಸುತ್ತೇವೆ. ಮತ್ತೇನಾದರೂ ತೊಂದರೆ ಇದ್ದರೂ ''ಬಲ್ಮೆ'' ಯಲ್ಲಿ ಕೇಳಿ ಅದಕ್ಕೆ ಪರಿಹಾರ ಮಾಡಿಸುತ್ತೇವೆ. (ಅದೆ; ಪು.೮೩) ಈ ರೀತಿಯಾಗಿ ದೇವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಾ ಅಲ್ಲಿ 'ಬಲ್ಮೆ' ಎಂದರೆ ಜ್ಯೋತಿಷ್ಯ ಶಾಸ್ತ್ರವನ್ನು ನೋಡುವುದು. ಅದಕ್ಕೆ 'ಪಂಜುರ್ಲಿ ಮತ್ತು ಕಲ್ಲುರ್ಟಿ ಕೋಲ ಕೇಳುತ್ತಾರೆ'. ಜುಮಾದಿಯ ಮನಸ್ಸು ಸರಿ ಇಲ್ಲ. ದೇವರೇ ಅವನೂ ಕೋಲ ಬೇಕೆನ್ನುತ್ತಾನೆ.

ಜಾಗದ ದೈವಗಳಿಗೆ ಕೋಲ ಮಾಡಿಸಿದರೆ ಎಲ್ಲ ಸಂಕಟಗಳೂ ವಾಸಿಯಾಗುತ್ತವೆ. ಇಂದೇ ಒಂದು ನಾಣ್ಯ ತೆಗೆದಿಡಿರಿ ದೇವರೇ ಎಲ್ಲ ಗುಣವಾಗುತ್ತದೆ ಎಂದನು''. (ಬಾಲಕೃಷ್ಣಶೆಟ್ಟಿ ಪೊಳಲಿ, ೧೯೩೫) ಈ ರೀತಿಯಲ್ಲಿ ಪಂಜರ್ಲಿ ಮತ್ತು ಕಲ್ಲುರ್ಟಿಗಳಿಗೆ ಪೂಜೆ ಮಾಡುವ ವಿಧಾನವು ಅಲ್ಲಿಯ ಅನನ್ಯತೆಯ ಗುರುತಾಗಿದೆ.

''ಮಂಗಳವಾರ ಭಟ್ಟರಿಗೆ ಬಲಿ ತೆಗೆಯಲು ಬೇಕಾದ ವ್ಯವಸ್ಥೆ ಮಾಡುತ್ತಿದ್ದರು. ಮಧ್ಯಾಹ್ನ ತಿರುಗುವ್ವಾಗ ಮಂತ್ರವಾದಿ ಮೃಂಢಮ್ಯೊಲಿ ಬಂದನು, ಅಂಗಳಕ್ಕೆ ಸಗಣ ಬಳಿದು ಶುದ್ಧ ಮಾಡಿಸಿದನು ತೆಂಗಿನಸಿರಿ ತುಂಡುಮಾಡಿ ಬಾಳೆದಿಂಡುಗಳಿಗೆ ಬಲಿಕಟ್ಟಲು ಪ್ರಾರಂಭಿಸಿದನು. ಐದು, ಆರು ಮೂಲೆಗಳ ಬಲಿಗಳನ್ನು ಕಟ್ಟಿ ಸಿರ ಕುತ್ತಿ ಇಟ್ಟನು. ಆ ಮೇಲೆ ಕೆಂಪು, ಹಳದಿ, ಬಿಳಿ, ಕಪ್ಪು ಹುಡಿಗಳಿಂದ ದೊಡ್ಡ ಮಂಡಲ ಬಿಡಿಸಿದನು, ಅದರಲ್ಲಿ ದೊಡ್ಡ ರಕ್ಕಸನಂಥ ಗುಳಿಗನ ರೂಪ ಬರೆದನು,ಮೂಲೆ ಮೂಲೆಯಲ್ಲಿ ಅಕ್ಕಿ, ತೆಂಗಿನಕಾಯಿ, ವೀಳ್ಯ, ಅಡಿಕೆ, ಬಾಳೆಹಣ್ಣು, ಹೂ ,ಹಿಂಗಾರ, ಸೀಯಾಳ, ಬೆಲ್ಲ ಅವಲಕ್ಕಿಗಳನ್ನು ಕುಡಿ ಎಲೆಯಲ್ಲಿ ಬರೆಸಿದನು. ನಡುವಿನಲ್ಲಿ ಒಂದು ತಂಬಿಗೆಯಲ್ಲಿ ನೀರಿಟ್ಟು ಮಾವಿನ ಮತ್ತು ಹಲಸಿನ ಎಲೆಗಳ ಮೇಲೆ ತೆಂಗಿನ ಕಾಯಿಯಿಟ್ಟು ಕಲಶ ಸ್ಥಾಪಿಸಿದನು. ಅಲ್ಲಲ್ಲಿ ಚರ್ವ ಬಡಿಸಿ 'ನೀರು ಇಟ್ಟು ಕೊಟ್ಟು ಬತ್ತಿಗಳನ್ನು ಕುತ್ತಿದ್ದನು. ದೊಡ್ಡ ಬಲಿಗೆ ಚರ್ವಇಟ್ಟು ಕುರಿ ನೀರು ಚಿಮುಕಿಸಿ ಮುದ್ರೆ, ಒತ್ತಿ ಇಟ್ಟನು.

ಪೂಜೆ, ಬಲಿ ಮುಗಿಸಿ ಎಲ್ಲ ಭಟ್ಟುಗಳೂ ಅಲ್ಲಿ ಕೂಡಿದರು. ಕುಡಿ ಎಲೆಗಳಲ್ಲಿ ಅರಳು, ಅಕ್ಕಿ ಕಾಯಿಗಳನ್ನು ಬಿಡಿಸಿ, ಕಟ್ಟಿಗೆ ತುಂಡುಗಳನ್ನು ಚೌಕಕ್ಕೆ ಲೂರಿ ಹೋಮ ಇಟ್ಟು ಮಂತ್ರ ಹೇಳಿದನು. ಭದ್ರನ್ನು ಕರೆದುಕೊಂಡು ಬಂದು ಒಂದು ಮಣೆಯಲ್ಲಿ ಕೂರಿಸಿದರು. ಒಬ್ಬನು ಬೆನ್ನಿನಲ್ಲಿ ಹಿಡಿದುಕೊಂಡ ಮಂತ್ರವಾದಿಯು ಒಂದು ಹಿಡಿ ಅಕ್ಕಿ ಹಿಡಿದುಕೊಂಡು ಮಂತ್ರ ಹೇಳಿ ಏಳುಬಾರಿ ತಲೆಗೆ ಬಲಿ ತೆಗೆದು ಕುರಿನೀರಿಗೆ ಹಾಕಿದನು ಆ ಮೇಲೆ ಹನದ ನಾಣ್ಯವನ್ನು ನೀರಿನಲ್ಲಿ ತೊಳೆದು ಕುರಿಗೆ ಹಾಕಲು ಹೇಳಿದನು.

ಎಲ್ಲ ಕೊಲು ಪತ್ರಿಗಳನ್ನು ಉರಿಸಿ ಕೈಯಲ್ಲಿ ಅರಳು ಹೊತ್ತಿಸಿ ದೊಡ್ಡ ಸ್ವರದಲ್ಲಿ ''ಓಮು ಬಡ್ಗ ರಾಮಾಣಾಯ ಸರ್ವಪೀಠ ಸಹನಾಯ, ಓಮು ಕಾಳರಾತ್ರಿ ಸುವಾ'' ಎಂದು 108 ಸಲ ಮಂತ್ರ ಹೇಳಿಯು ಇತ್ಯಾದಿ ಹಲವಾರು ಮಂತ್ರಗಳನ್ನು ಹೇಳಿ ಕೇಳಗಿದ ನೀರು ಚಮುಕಿಸಿ ಬಲಿ ತೆಗೆದು ಒಂದು ದೊಡ್ಡ ಹೊಸ ಬುಟ್ಟಿಯಲ್ಲಿ ತುಂಬಿಸಿ ಭಟ್ಟರನ್ನು ಏಳಲೂ ಹೇಳಿದನು, ಅವರ ಕೈಯಲ್ಲಿ ಒಂದು ಹಿಡಿ ಅಕ್ಕಿಕೊಟ್ಟು ಅದಕ್ಕೆ ಸ್ವಲ್ಪ ನೀರು ಹಾಕಿ ಒದ್ದೆ ಮಾಡಿ ಬಲಿಗೆ ಬಿಸಾಡಿ ಒಳಗೆ ಹೋಗಲು ಹೇಳಿ ಬಲಿ ಹಿಡಿದು ಕೊಂಡು ಹೊರಟನು'' (ಬಾಲಕೃಷ್ಣಶೆಟ್ಟಿ ಪೊಳಲಿ, ೧೯೩೫, ಪುಟ ೭೫, ೭೮) ಈ ರೀತಿಯಲ್ಲಿ ಅಲ್ಲಿನ ಪಂಚಾಬಿನ ಕೋಲಗಳಿಗೆ ಬಲಿ ನೀಡುವ ಪದ್ದತಿ ವಿಶಿಷ್ಟವಾಗಿದೆ.

ಇಂತಹ ನಂಬಿಕೆಗಳಿಂದ ಆ ಪ್ರದೇಶದ ಜನರ ಜೀವನ ರೀತಿ ನೀತಿಗಳು ಅಲ್ಲಿನ ವಿಶಿಷ್ಟತೆ ತಿಳಿದುಬರುತ್ತದೆ. ತುಳುನಾಡಿನ ದೇವಾಲಯಗಳಲ್ಲಿ ನಡೆಯುವ ಜಾತ್ರೆಯ ಸಂದರ್ಭದಲ್ಲಿ ಬಳಸುವ ವಿವಿಧಆಚರಣೆಗಳು ಸಾಮಾಜಿಕ ಪಾಲ್ಗೊಳ್ಳುವಿಕೆ, ಜಾತ್ರೆಯ ಸಂದರ್ಭದಲ್ಲಿ ಬಳಸುವ ವಿವಿಧ ವಾದ್ಯ, ಪರಿಕರಗಳು, ಪ್ರದಕ್ಷಿಣೆಯ ವಿಧಾನ, ಇತ್ಯಾದಿಗಳನ್ನೆಲ್ಲಾ ಕಾದಂಬರಿಯು ವಿವರಿಸುತ್ತದೆ. ಸೋಮನಾಥ ದೇವರಿಗೆ 'ಬಲಿ' ಪೂಜೆ ಮಾಡುವ ಸಂದರ್ಭ 'ಸಂಪ್ರದಾಯದಂತೆ ಒಂದು ಪರಿವಾಣದಲ್ಲಿ ಬೆಳಿಗ್ಗೆ ಅಕ್ಕಿ, ತೆಂಗಿನಕಾಯಿ, ವೀಳ್ಯ, ಅಡಿಕೆ, ಬಾಳೆಹಣ್ಣು, ಬೆಲ್ಲ, ಬೆಳ್ಳಿ = ಮೂರು ಆಣೆ ಬೆಳ್ಳಿ, ದೀಪಗಳೆಲ್ಲವನ್ನೂ ತಂದು ಪದಾರ್ತಿ ಈಶ್ವರನು ಅಷ್ಟೇ ಮಂಗಲ ಇಟ್ಟು ಪಾನ್ತೆ ಜಾರಿಸತೊಡಗಿದನು ಆಗ ಭಟ್ಟರು ಪೀಠ ಪೂಜೆ ಮಾಡಿದರು ಬಲಿ ಹೊರಟಿತು. ಆಗ ಮುಂದೆ ನೋಡಿ ಕೈ ಬಟ್ಟಲು ಹಿಡಿದು ತಂತ್ರಿಗಳ ಹಿಂದೆ 'ದೇಗುಲದ ಸುತ್ತಲೂ ಇರುವ ಬಲಿಕಲ್ಲಿನಲ್ಲಿ ಆಲಾಸವಿದ್ದ ದೇವತೆಗಳ ಪೂಜೆಯನ್ನು ತಂತ್ರಿಗಳು ಬಲಿಯ ಜೊತೆ ಹೋಗಿ ಮಾಡುತ್ತಾರೆ . ಪೂಜೆಗೆ ಬೆಳ್ತಿಗೆಅಕ್ಕಿ ಮತ್ತು ಕುಂಟಾಲದ ಎಲೆ ದ್ರವ್ಯಗಳು ಈ ದ್ರವ್ಯಗಳನ್ನು ಒಂದು ಬುಟ್ಟಿಯಲ್ಲಿಟ್ಟುಕೊಂಡು ಸ್ಥಾರ್ನಿಕನು ತಂತ್ರಿಗಳ ಹಿಂದಿನಿಂದ ಹೋಗಬೇಕು.

ಇದಕ್ಕೆ ಉಪಯೋಗವಾಗುವ ಎಲೆ (ಪಲ್ಲವೆ)ಲೇ ಪಾಲ್ಯ ವಂದಿರಬೇಕೆಂದು ತೋರುತ್ತದೆ (ಪಾಲ್ಯ : ಪಲ್ಲವ ಎಲೆ ಪಾಲ್ಯ ಹಿಸಿಯುವವರು ಹೊರಟರು) ದೇವರು ಹೋರಟಾಗ ದೇವಟಿಗೆ ಉರಿಸಿ ಎಂಟು ದಿಕ್ಕುಗಳಲ್ಲಿರುವ ಅಷ್ಟ ದಿಕ್ಪಾಲಕರಿಗೆ ಪೂಜೇ ಸಲ್ಲಿಸಿದರು. ಎರಡನೆ ಸುತ್ತಿನಲ್ಲಿ ಅಮ್ಮನವರಿಗೆ ಮತ್ತು ಗುರು ಗಣಪತಿ ಡಂಸೇಶ್ವರರಿಗೆ ಪೂಜೆ ಮಾಡಿ ಬಲಿ ಹೊರಸುತ್ತಿಗೆ ಬಂತು ಪದಾರ್ತಿ ಪಕ್ಕೆಯನನ್ನು ದೀವಟಿಗೆಯವರೆಲ್ಲರ ಮುಂದೆ ಬಂದು ಪಾನೆ ಮಾಡವಾಗ ತಂತ್ರಿಯವರೂ ಪಾಲ್ಯದವರು ವಾಲಗದಲ್ಲಿ ಹೊರಟರು ಅಂಬೇಲದಲ್ಲಿ ಬಲಿಕೊಟ್ಟು ಕೋಡಿ ಮರದ ಹತ್ತಿರ ಬರುವಾಗ ದೇವರನ್ನು ಹೊತ್ತವರು ಸನ್ನಿದಾನಕ್ಕೆ ಬಂದರು ದೊಡ್ಡ ಬಲಿಯಾಗುವಾಗ ದೇವರನ್ನು ಪಟ ಗಂಟೆ ದೋಲು ದೀವಟಿಗೆ ಉರಿಸಿ ದಿಕ್ಕುಗಳನ್ನು ಕಾಯುವ ದೇವರಿಗೆ ಪೂಜೆ ಮಾಡಿದರು ಪಂಚದಿವಟಿಗೆ ಉರಿಸಿ. ಸತ್ತಿಗೆ ಚಾಮರ ಕೋಲು ಪಕ್ಕ ನಿಶಾನೆಗಳೊಂದಿಗೆ ಗುತ್ತು ಬಾಳಿಕೆಯವರ ಸರ್ವ ಬಿರುದಾವಳಿ ಸಹಿತ ಬಲಿ ಬಂದರು . ನಾಲ್ಕನೆಯ ಸುತ್ತಿನಲ್ಲಿ ಉಡ್ಕು, ತಿಮಿತಿ, ವತಾರಿ, ಶ್ರುತಿ ಕಯ್ಮಣಿಯಲ್ಲಿ ನಾಗಕನ್ನಿಕೆಯನ್ನು ಹೊತ್ತು ನಾಗಸುತ್ತು ಬಂದರು.

ಆದರ ಬೆನ್ನಿಗೆ ಸೂರ್ಯವಾದ್ಯ ಈರಣ ಬಡಿದುಕೊಂಡು ಈರಣ ಸುತ್ತು ಬಂತು. ಆರನೇ ಸುತ್ತಿಗೆ ಸರ್ವೆ ವಾದ್ಯದಲ್ಲಿ ಕಾಲು ಸುತ್ತು ಹೊರಟಿತು. ಇಷ್ಟಾಗುವಾಗ ನಾಲ್ಕು ಸುತ್ತಿನಿಂದಲೂ ಜನರು ಅಂಗನ ಪ್ರವೇಶಿಸಿದರು. ಆಗ ಪದಾರ್ತಿಗಳು ಅಂಬೆಲದಲ್ಲಿ ಚೆಂಡೆಗಳನ್ನು ಬಿಗಿದು ಬಾರಿಸುವ ಸ್ವರ ಕೇಳಿ ದೂರ ಇದ್ದವರು ಹತ್ತಿರ ಹತ್ತಿರ ಬಂದರು ಒಬ್ಬರನ್ನೊಬ್ಬರು ಮುಂದೆ ಮುಂದೆ ದೂಡತ್ತ ಹಿಂಡುಕಟ್ಟಿ ಬಂದರು ಆಗ ಭೂತದ ಪಾತ್ರಿಗಳು ಅವುಗಳ ಬಿರುದಾವಳಿ ಹಿಡಿಸಿಕೊಂಡು ವೆಭವದಿಂದ ದೇವರ ಸನ್ನಿದಾನಕ್ಕೆ ಬಂದು ದರ್ಶನಕ್ಕೆ ತೊಡಗಿದರು. ಆಗ ಚೆಂಡೆ ಬಾರಿಸುವುದರಲ್ಲಿಪ್ರಸಿದ್ಧರಾದ ನಾಲ್ಕೆಂಟು ಜನಪದಾರ್ತಿಗಳು ಬಾರಿಸುವ ಕೊಂಬು, ಬಾಂಕಿ, ನಗಾರಿ, ಡಿಡುಂಬು, ಕಾಳಡೋಲು ದಿಕುಂಬೋಡಿ ಮೊದಲಾದ ವಾದ್ಯಗಳ ಭಾರೀ ಗೌಜಿಯ ಬಲಿ ಸುತ್ತು ಬಂತು. ಎಳೆಯ ತರುಣರು ಕಂಡವರಿಗೆಲ್ಲ ಚಾಲಿ ಪೋರಿ ಮಾಡಿಕೊಂಡು ಕುಶಾಲ ಮಾತನಾಡಿಕೊಂಡು ಬಲಿ[೧] ಸುತ್ತು ಬರುತ್ತಿದರು'' (ಅದೆ- ಪುಟ೬೧, ೬೨)

---

೧) ತುಳು ಭಾಷೆಯಲ್ಲಿ 'ಬಲಿ' ಬರುವುದು ಎಂದರೇ ದೇವರಿಗೆ ಪ್ರದಕ್ಷಿಣೆ ಹಾಕುವುದು ಎಂದರ್ಥ.

ಈ ಬಗೆಯಾಗಿ ಧಾರ್ಮಿಕ ಪೂಜೆಯು ವಿಶಿಷ್ಟ ರೀತಿಯಿಂದ ಕೂಡಿರುವುದು ವ್ಯಕ್ತವಾಗುತ್ತದೆ. ತುಳುನಾಡ್ಡಿನ ಕೃಷಿ ಸಂಪ್ರದಾಯಲ್ಲಿದ್ದ ವಿಶಿಷ್ಟವಾದ ಆಚರಣೆಯಾಗಿರುತ್ತದೆ.

''ಒಂದು ಗದ್ದೆಯಲ್ಲಿ 'ನೇಜಿ' ಕೀಳಲು ತಳಿಯ ಆಳುಗಳು ಇಳಿದರು ಗುತ್ತಿನಾರ್ ಕಂಬಳಿ ಹೊದ್ದುಕೊಂಡು ಉಳುವ ಗದ್ದೆಯ ನೀರನ್ನು ಹದಗೊಳಿಸುತ್ತಾರೆ. ಉಳುವವರನ್ನು ಕರೆದು ಕೋಣಗಳನ್ನು ಕೊನೆಯವರೆಗೆ ಕೊಂಡು ಹೋಗಿರಿ, ಅಡ್ಡ ತಿರುಗಿಸಬೇಡಿ, ಸಪುರಸಾಲು ಮಾಡಿ ಸಾಲು ಬಿಡಬೇಡಿ'' ಎಂದು ಜೋರಾದ ಸ್ವರದಲ್ಲಿ ಅಪ್ಪಣೆ ಮಾಡುತ್ತ ಗದ್ದೆಯಲ್ಲಿ ಬದುವಿನಲ್ಲಿ ವೀಳ್ಯ ತಿನ್ನಲು ಕುಳಿತಿದ್ದಾರೆ. ಮೇಲೆ ಕೆಳಗೆ ಎಲ್ಲ ಬಯಲು ಗದ್ದೆಗಳಲ್ಲೂ ಕೋಣ ಕಟ್ಟಿ ಉಳುತ್ತಿದ್ದಾರೆ. ಆದರೆ ಗುತ್ತಿನ ಗದ್ದೆಯಲ್ಲಿ ಗಾಡಿಗೆ ಕಟ್ಟುವ ಅಮೃತ ತಳಿಯ ಹೋರಿ ಮೊದಲಲ್ಲಿ, ಆದರ ಹಿಂದೆ ಕಂಬಳದ ಕೋಣಗಳು ಮತ್ತು ಹದಿನಾರು ಜತೆ ಕೋಣ ಎತ್ತುಗಳು ಇವು ಒಂದು ಸುತ್ತು ಬರುವಾಗಲೇ ಒಮ್ಮೆ ಉತ್ತ ಹಾಗೆ ಆಗುತ್ತಿತ್ತು. ಒಂದು ಕಡೆ ಕಿತ್ತು ಹಾಕಿದ ನೇಜಿಯನ್ನು ಬುಟ್ಟಿಯಲ್ಲಿ ತುಂಬಿಸಿ ಉತ್ತ ಗದ್ದೆಗಳಲ್ಲಿ ಹರಡುತ್ತಾರೆ. ಉಳುವಾಗ ಕೋಣಗಳು. ಬೇಗ ಬೇಗ ನಡೆಯಲೆಂದು ಹಿಡಿಯಲ್ಲಿರುವ ಬೆತ್ತವನ್ನು ಮೆಲ್ಲ ಮೆಲ್ಲ ಬೆನ್ನಿಗೆ ಮುಟ್ಟಿಸಿ ...... ನೇಡುವ ಗದ್ದೆಯಲ್ಲಿ ನಲವತ್ತು. ಐವತ್ತು ಹೆಂಗಸರು ನೇಜಿ ನೆಡುವಾಗ ''ಓ ಬೇಲೆ, ಓಬೇಲೆ ಬೆಲೆ ಪಯ್ಯೋ'' ಎಂದು ಹಾಡುತ್ತಾರೆ''. (ಅದೇ; ಪುಟ.೩)

ಈ ವಿಧವಾಗಿ ತುಳುನಾಡಿನ ಕೃಷಿಸಂಸ್ಕೃತಿಯ ಅನನ್ಯ ಅಂಶಗಳು ಇಲ್ಲಿ ವ್ಯಕ್ತವಾಗುತ್ತವೆ. ಅಲ್ಲಿ ನೇಜಿ ನೆಡುವಾಗ ಅನುಸರಿಸುವ ವಿಧಾನಗಳು, ಶ್ರಮ ಪರಿಹಾರಕ್ಕಾಗಿ ಹಾಡುವ ''ಓ ಬೇಲೆ'' ಪದ, ಕೋಣಗಳನ್ನು ಕಟ್ಟಿ ಗದ್ದೆ ಉಳುವ ಸಂಪ್ರದಾಯ ಇತ್ಯಾದಿ ವಿವರಗಳು ಕಾದಂಬರಿಯಲ್ಲಿ ಕಾಣಸಿಗುತ್ತವೆ. ಗದ್ದೆ ಊಳುವುದಕ್ಕೆ ಕೋಣಗಳನ್ನು ಬಳಸುವ ಸಂಪ್ರದಾಯವು ತುಳುನಾಡಿಗೆ ವಿಶಿಷ್ಟವಾದುದೆಂದು ತಿಳಿಯಬಹುದು.

'ಹೊಸ ಅಕ್ಕಿ ಊಟ' ವು ತುಳುನಾಡಿನ ಕೃಷಿ ಸಂಸ್ಕೃತಿಯಲ್ಲಿ ಮಹತ್ವದ ಸ್ಥಾನವಿದೆ. 'ಪುದ್ವರ್' ಎಂದು ಕರೆಯಲಾಗುವ ಈ ಹೊಸ ಅಕ್ಕಿ ಊಟದ ವಿವರವನ್ನು ಮಿತ್ಯ ನಾರಾಯಣಕತೆ ಕಾದಂಬರಿಯು ವಿವರಿಸುತ್ತದೆ.

ಸೋಣ (ಸಿಂಹಮಾಸ) ಸಂಕ್ರಮಣದಂದು ಅಮುಂಜ ಗುತ್ತಿನವರ ಮತ್ತು ನಟ್ಟೋಜರ ಹಣ್ಣುಕಾಯಿ ಆಗದೆ ಬೇರೆಯವರ ಹಣ್ಣುಕಾಯಿ ಒಪ್ಪಿಸಕೂಡದು. ಒಳ್ಳೆಯ ದಿನ ನೋಡಿ ದೇವಸ್ಥಾನದಲ್ಲಿ ಭತ್ತದ ತೆನೆ ಕಟ್ಟಿ 'ಪುದ್ವರ್' (ಹೊಸ ಅಕ್ಕಿಯ ಅನ್ನ ಊಟ ಮಾಡುವುದು) ಮಾಡುತ್ತಾರೆ. ಆ ದಿನವೇ ಈ ಸೀಮೆಯ ಎಲ್ಲ ಕಡೆಗೆ ತೆನೆಯನ್ನು ಇಲ್ಲಿಂದಲೇ ಕೊಂಡು ಹೋಗಿ ಅವರವರ ಮನೆಯಲ್ಲಿ ಕಟ್ಟಿ ''ಪುದ್ದರ್'' ಮಾಡುವುದು ಸಂಪ್ರದಾಯ. ಆ ದಿನಕ್ಕೆ ಬೇಕಾದಷ್ಟು ತೆನೆಗಳನ್ನು ಮುಕಾಯಿ ಕೋಡಿಯಲ್ಲಿ 'ಪುದ್ದರ್‌ದಕಪ್ಪ' ದಿಂದ ನೀರು ಹರಿದು ಹೋಗುವ ಗದ್ದೆಗಳಿಂದ ತೆಗೆದು ತರುತ್ತಾರೆ. ಚೌತಿಯಂದು ಸೀಮೆಯವರೆಲ್ಲ ಕೂಡಿ, ತಪ್ಪಂಗಾಯಿ ತೆಂಗಿನಕಾಯಿ ಎಲೆ ಹಾಕಿ ಸಂಜೆ ಗಣಪತಿ ಪೂಜೆ ನಡೆಯುತ್ತದೆ. ಪೂಜೆಗೆ ಬಂದವರಿಗೆ ಅಪ್ಪ, ಪಂಚಕಜ್ಜಾಯ, ಒಂದೊಂದು ಕೋಲು ಕಬ್ಬು ಕೊಡಬೇಕು. ಗುತ್ತಿನ ಮನೆಯವರಿಗೆ ಐದು ಕೋಲು ಕಬ್ಬು, ಒಂದು ಕಟ್ಟು, ಅಪ್ಪ ಮತ್ತು ಪಂಚಕಜ್ಜಾಯ ಕೊಡಬೇಕು'' (ವಿಷ್ಣುಭಟ್ಟ ಪಾದೆಕಲ್ಲು ;೧೯೩೫, ೧೬) ಸಮೃದ್ಧಿಯ ಆಶಯ ವಿರಿಸಿ ಕೊಂಡು ತುಳುನಾಡಿನ ಕೃಷಿ - ಸಂಸ್ಕೃತಿಯಲ್ಲಿ ನಡೆಸಲಾಗುವ ಮನೆತುಂಬಿಸುವುದು, ಹೊಸ ಅಕ್ಕಿಊಟ, ಅವುಗಳಿಗೆ ಇರುವ ಧಾರ್ಮಿಕ ಮಹತ್ವ ಇತ್ಯಾದಿಗಳನ್ನು ಇಲ್ಲಿ ವಿವರಿಸಲಾಗಿದೆ.

ಈ ಕೆಳಗಿನ ವಿವರಣೆಯು ತುಳು ನಾಡಿನಲ್ಲಿರುವ ಧಾರ್ಮಿಕ ಆಚರಣೆಯ ವಿಶಿಷ್ಟ ವಿಧಿಗಳನ್ನು ತಿಳಿಸುತ್ತದೆ. ವರ್ಷಕ್ಕೊಮ್ಮೆ ಕ್ಷೇತ್ರಪಾಲನಿಗೆ ಕೋಣ ಕಡಿದು ಬಲಿ ಕೊಡುವ ಕ್ರಮ ಇತ್ತು. ಈ ಬಲಿ ಉತ್ಸವಕ್ಕೆ ಅಕ್ಕ ಪಕ್ಕದ ಊರುಗಳಿಂದ ಭಂಡಾರ ಬರುತ್ತದೆ. ''ಧ್ವಜಾರೋಹಣದ ದಿನ ನಾಲ್ಕು ರಾಜದೈವಗಳ ಭಂಡಾರ ಇಲ್ಲಿಗೆ ಬರಲಿಕ್ಕಿದೆ.

ಇಪ್ಪತ್ತನೇ ದಂಡಮಾಲೆಯಂದು ಮೂರು ಮಂತ್ರಿ ದೈವಗಳ ಐದು ಭಂಡಾರಗಳು ಬರಬೇಕು. ಇಪ್ಪತ್ತನೇ ದಂಡಮಾಲೆಯ ಅನಂತರ ಒಂಬತ್ತು ಭೂತದ ಪಾತ್ರೆಗಳು ಉತ್ಸವದ ಬಲಿಯಲ್ಲಿ ದೇವರ ಎದುರು ಸುತ್ತು ಬರಲಿಕ್ಕದೆ. ಸುಜೇರಿನಿಂದ ಮುಂಡತ್ತಾಯ, ಆರ್ಕುಳದಿಂದ ಮಗ್ರರಿತಾಯ ಉಳಿಪಾಡಿಯಿಂದ ಕೊಡಮಣ್ತಾಯ, ಅಡ್ಡೂರಿನಿಂದ ಜಾರಂದಾಯ ಎಂಬ ಭೂತಗಳ ಭಂಡಾರ ಬಂದ ಮೇಲೆ ಇಲ್ಲಿ ಧ್ವಜ ಏರುತ್ತದೆ. ಆ ಮೇಲೆ ಬೆಳಗ್ಗಿನವರೆಗೂ ''ಬಲಿ ಉತ್ತವ ಸಂಭ್ರಮ'' (ಅದೇ; ಪು. ೩೦) ತುಳು ನಾಡಿನ ದೇವತಾರಾಧನೆಯಲ್ಲಿ ಹಿಂದೆ ಪ್ರಚಲಿತವಿದ್ದ ಪ್ರಾಣ ಬಲಿ, ಹಾಗೂ ಇತರ ಧಾರ್ಮಿಕ ಆಚರಣೆಗಳ ವಿವರಗಳನ್ನು ಕಾದಂಬರಿಯ ಈ ಭಾಗದಲ್ಲಿ ಕಟ್ಟಿಕೊಡುತ್ತದೆ.

ಆರಂಭ ಘಟ್ಟದ ತುಳು ಕಾದಂಬರಿಗಳಲ್ಲಿ ತುಳುವಿಗೆ ವಿಶಿಷ್ಟವಾದ ಅನೇಕ ಗಾದೆ ಮಾತುಗಳು ಬಳಕೆಯಾಗಿವೆ. ಈ ಗಾದೆಗಳು ಅಲ್ಲಿನ ವೈಶಿಷ್ಟವನ್ನು ವ್ಯಕ್ತಪಡಿಸುತ್ತವೆ

ನಾಲಿಗೆ ಇದ್ದರೆ ಮಗ ಬದುಕುತ್ತಾನೆ.

'ಸತ್ಯಬತ್ತಲೆ, ಮಿತ್ಯಲೆ'

'ಅಕ್ಕಿ ಬತ್ತ ಇದ್ದಲ್ಲಿ ಇಲ್ಲಿ ಹೆಗ್ಗಣಕ್ಕೆ ಕೊರತೆಯೇ'

'ಏನೂ ಇಲ್ಲದಕ್ಕೆ ಸೊಕ್ಕು ಹೆಚ್ಚಂತೆ, ಸ್ವಲ್ಪ ಪದಾರ್ಥಕ್ಕೆ ಉಪ್ಪು ಹೆಚ್ಚಂತೆ?'

'ಗ್ರಹಚಾರ ಬಂದಾಗ ಉಗ್ಗಾಚಾರಿ ಇದಿರಾದನಂತೆ'

'ತಾಯಿ ಒಳ್ಳೆಯದಾದರೆ ಮಗು ಒಳ್ಳೆಯದು,

ಅಂಗಳ ಒಳ್ಳೆಯದಾದರೆ ಅಕ್ಕಿ ಒಳ್ಳೆಯದು!'

'ನುಡಿಯಲು ಅರಿಯದವಳಿಗೆ ನಿನ್ನಿ ಆಡಲು ಅರಿಯದವಳಿಗೆ ಮನ್ನಿ'

'ಕುಪ್ಪನನ್ನು ನಂಬಿ ಕೊಳಕೆ ಸಾಗುವಳಿ ಮಾಡಿದಂತ'

'ಆಚಾರಿಗೆ ಆಯನದ ಹುಚ್ಚು'

ಒಟ್ಟಾರೆಯಾಗಿ ಮಿತ್ಯನಾರಾಯಣ ಕಾದಂಬರಿಯು ಕತೆಗಿಂತಲೂ ತುಳುನಾಡಿನ ಸಾಂಸ್ಕೃತಿಕ ವಿವರಗಳನ್ನು ಪ್ರತಿಪಾದಿಸುವತ್ತ ವಿಶೇಷಗಮನ ಹರಿಸಿದಂತಿದೆ.

ಆರಂಭಘಟ್ಟದ ದಕ್ಷಿಣ ಭಾರತದ ಕಾದಂಬರಿಗಳು ಆಯಾ ಪ್ರದೇಶಗಳ ಸಾಂಸ್ಕೃತಿಕ ವಿವರಗಳನ್ನು ಹೇಗೆ ಕಟ್ಟಿಕೊಡುತ್ತಿದ್ದವು ಎಂಬುದಕ್ಕೆ ಈ ಕಾದಂಬರಿಯ ಸೂಕ್ತ ಉದಾಹರಣೆಯಾಗಿ ನಿಲ್ಲುತ್ತದೆ.

ತುಳುನಾಡಿನ ವಿವಿಧ ಸಮುದಾಯಗಳ ಕುರಿತು ಹೇಳುವ ಭಾಗದಲ್ಲಿ ಆ ಸಮುದಾಯಗಳಿಗೆ ಅಲ್ಲಿನ ದೇವಾಲಯದ ಧಾರ್ಮಿಕ ಚಟುವಟಿಕೆಗಳೊಂದಿಗೆ ಇರುವ ಸಂಬಂಧ, ಸಾಮಾಜಿಕ ಪಾಲ್ಗೊಳ್ಳುವಿಕೆ, ಇತ್ಯಾದಿ ಸಂಗತಿಗಳು ವರ್ಣಿತವಾಗಿವೆ. ''ಈ ದೇವಸ್ಥಾನದಲ್ಲಿ ತಂತ್ರಿ, ಭಟ್ಟ ಮಯ್ಯ, ನಟ್ಟೋಜರೆಂದು ನಾಲ್ಕು ಜನ ಮುಖ್ಯಸ್ಥರು ಬೇರೆ ಬೇರೆ ಮುವತ್ತೇಳು ಸೇವಕರು ಬಿಟ್ಟು ೧೫೦ಜ ಇದ್ದಾರೆ. ತಂತ್ರಿಯವರು, ಮಯ್ಯರು, ಭಟ್ಟರು, ನಟ್ಟೋಜರು, ಕೀಲು ಶಾಂತಿ ಭಟ್ಟರು , ಮುಟ್ಟುಶಾಂತಿ ಭಟ್ಟರು, ವೇದ ಓದುವ ಭಟ್ಟರು, ದೇವೀ ಮಹಾತ್ಮ್ಯೆ ಪಾರಾಯಣ ಮಾಡುವ ಭಟ್ಟರು ಪುರಾಣ ಹೇಳುವ ಭಟ್ಟರು, ಸಹಸ್ರನಾಯ ಹೇಳುವ ಭಟ್ಟರು, ಊಚಾಳಿ, ದೇವಕಾರ್ಯ, ಮಾಲೆಚಾರಿ, ಡೋಲು ಗಂಟೆಯ ಪದಾರ್ತಿ, ತಿಮಿತಿಯ ಪಾದಾರ್ತಿ, ಮೇಳದವರು ಗುಡಿಸುವ ಮೊಯ್ಲಿ, ಹೊರಗುಡಿಸುವ ಮೊಯ್ಲಿ, ಊಳಿಗದ ಬೀರ, ಬಸವಸಾಕಣೆಗೆ ಇಬ್ಬರು, ಕೊಂಬಿನವರು, ಐವರು, ವಾದ್ಯದವರು ಐದುಜನ, ಕಟ್ಟಿಗೆ ಕೋಲಿನ ಎರಡು, ಕುಂಟದ ಎರಡು, ಬಾಂಕಿಯವನು, ಅಲೆಕಾರಿ, ದೂಪ ಹಿಡಿಯುವವನು, ದೇವರ ಪಾಲಿಕೆಯ ನಾಲ್ಕುಜನ, ಪಾರುಪತ್ಯಗಾರ, ಪಂಚದೀವಟಿಗೆಯ ಇಬ್ಬರು, ಉಪ್ಪರ್ ಸತ್ತಿಗೆಯವ, ಹಿಲಾಲು, ಹಿಡಿಯುವ ಮೂಲ್ಯರು (ಕುಂಬಾರರು) ಪಕ್ಕೆ ನಿಶಾನೆ ಹಿಡಿಯುವ ಪತ್ವಣದವರು ಬಿಂಬಿತ್ತು ಮಂದಿ ಭೂತದ ಪಾತ್ರಗಳು, ಇಬ್ಬರು ಕಡವಿನ ದಫೇದಾರರು ಎಂದು ವಲಯದವರಿಗೆ ಪಂಚ ಪರ್ವಗಳಲ್ಲಿ ಮರ್ಯಾದೆ ಸಲ್ಲಬೇಕು, ಇವರೆಲ್ಲ ಸಂತಾನ ಪಾರಂಪರ್ಯವಾಗಿ ಕೆಲಸ ಮಾಡುವರು, ಅವರು ವಂಶ ಪಾರಂಪರ್ಯವಾಗಿ ಪಾಡುತ್ತಾ ಬಂದ ಕೆಲಸವಾಗಿದೆ ''(ಅದೇ; ಪು, ೨೭)

ಪ್ರಾದೇಶಿಕತೆಗನುಗುಣವಾಗಿ ಆಹಾರ ಪದ್ಧತಿಯ ಕ್ರಮವು ಒಳಗೊಂಡಿರುತ್ತದೆ. ಆಹಾರ ಕ್ರಮದ ಬಗ್ಗೆ ಕಾದಂಬರಿಯಲ್ಲಿ ಬಿಂಬಿತವಾಗಿರುವುದು ಕಾಣಬಹುದು.

"ಸೌತೆಗೆ ಹಲಸಿನ ಬೀಜ ಮತ್ತು ದೊಡ್ಡ ಹೆಸರು ಹಾಕಿ 'ಕೊದ್ದೆಲು' ಮಾಡುವುದು, ಹೀರೇಪಲ್ಯ, ಬದನೆಗುಳಿ, ಗದ್ದೆ ಒಂದೆಲಿಗ ಪಸ್ಸಂಗಿ, ಅದ್ನಬಾಳಿ, ಕಾಡಹೀರೆ ಹಪ್ಪಳ, ಸಂಡಿಗೆ, ನೀರುದೋಸೆ, ಕಾಯಿಯ ಹಾಲು, ಅಕ್ಕಿಯ 'ಅಡ್ಯೆ', ತೊಂದೊರಡ್ಯ, 'ಮುಷ್ಟಿಕಡುಬು', ಹೂಬಾಳಿ, ಸೀಕರಣೆ, ಗಂಜಿ - ಮುಂತಾದವು ಆ ಪ್ರದೇಶದ ಆಹಾರ ಪದ್ಧತಿಯ ಕ್ರಮ ವ್ಯಕ್ತವಾಗುತ್ತದೆ. ಹೀಗೆ ತುಳುನಾಡಿನ ಪ್ರಾದೇಶಿಕ ಅನನ್ಯತೆ ತಿಳಿದುಕೊಳ್ಳಲಾಗಿದೆ.[೧]

ದಕ್ಷಿಣ ಭಾರತದ ಆರಂಭಘಟ್ಟದ ಕಾದಂಬರಿಗಳು ಕಟ್ಟಿಗೊಡುವ ಇಂತಹ ಪ್ರಾದೇಶಿಕ ಅನನ್ಯತೆ ಅಂಶಗಳು ಸಾಂಸ್ಕೃತಿಕವಾಗಿ ಮಹತ್ವವನ್ನು ಪಡೆದುಕೊಳ್ಳುತ್ತದೆ. ಕೇರಳದ ಮರುಮಕ್ಕತ್ತಾಯ, 'ಸಂಬಂಧ' ಅದೇ ರೀತಿ ತರವಾಡು ಮನೆಗಳ ವಿವರಗಳು - ತಮಿಳು ನಾಡಿನ ಕೃಷಿ ಸಂಸ್ಕೃತಿಯಲ್ಲಿರುವ 'ಜಲ್ಲಿಕಟ್ಟು' ವಿಶಿಷ್ಟ ಆಚರಣೆ - ನಾಗರಖಂಡವೆಂದು ಪ್ರತೀತಿ ಇರುವ ತುಳುನಾಡಿನ ವಿಶಿಷ್ಟ - ಆಚರಣೆಯೆಂದು ನಾಗಬೊಜ್ಜ, ಬಲಿಉತ್ಸವ, ದೀಪೋತ್ಸವ, ಇತ್ಯಾದಿಗಳ ವಿವರಗಳು - ಆಯಾ ಕಾದಂಬರಿಗಳಿಗೆ ಪ್ರಾದೇಶಿಕತೆಯ ಸೊಗಡನ್ನು ತಂದುಕೊಟ್ಟಿವೆ. ಅನುವಾದಗಳ ಮೂಲಕ ಆಯಾ ಪ್ರದೇಶಗಳ ಸಾಂಸ್ಕೃತಿಕ ಸಂಗತಿಗಳನ್ನು ಅಧಿಕೃತವಾಗಿ ಪರಿಪೂರ್ಣವಾಗಿ ಕಟ್ಟಿಕೊಡುವುದು ಕಷ್ಟಸಾಧ್ಯವಾದರೂ, ಅನ್ಯ ಭಾಷಿಕರಿಗೆ ಅವುಗಳನ್ನು ತಿಳಿಯ ಪಡಿಸುವ ದೃಷ್ಟಿಯಿಂದ ಅನುವಾದಗಳು ಇಲ್ಲಿ ಮಹತ್ವದ ಪಾತ್ರವಹಿಸಿವೆ. ಬಹುಪಾಲು ಭಾಷಾಂತರಕಾರರು ಮೂಲ ಪ್ರದೇಶಗಳ ಸಾಂಸ್ಕೃತಿಕ ವಿವರಗಳನ್ನು ಕನ್ನಡ ಪ್ರದೇಶಕ್ಕೆ ಅನ್ವಯಿಸಿ ಭಾಷಾಂತರಿಸದೆ,

---

೧. ಅಧ್ಯಯನಕ್ಕಾಗಿ ಪರಿಗಣಿಸಿರುವ ಅನುವಾದಿತ ತೆಲುಗು ಕಾದಂಬರಿಗಳಲ್ಲಿ ಕಾಲಘಟ್ಟಕ್ಕೆ ವಿಶಿಷ್ಟವಾದ ಅಂಶಗಳೇ ಹೆಚ್ಚಿನ ಪ್ರಮಾಣದಲ್ಲಿದ್ದು ಆಂಧ್ರದ ಪ್ರಾದೇಶಿಕ ಅನನ್ಯತೆಗಳು ಅಷ್ಟಾಗಿ ಕಂಡುಬರುತ್ತಿಲ್ಲ. ಸತ್ಯರಾಜ ಪೂರ್ವದೇಶ ಯಾತ್ರೆ, ಎಂಬ ಕೃತಿಯಲ್ಲಿ ಆಂಧ್ರಕ್ಕಿಂತಲೂ ಹೆಚ್ಚಾಗಿ ಕೇರಳದ ವೈಶಿಷ್ಟ್ಯಗಳನ್ನೇ ನಿರೂಪಿಸಲಾಗಿದೆ. 'ಆರಂಭಘಟ್ಟದ' ಕನ್ನಡ ಕಾದಂಬರಿಗಳಲ್ಲೂ ಕನ್ನಡ ನಾಡಿಗೆ ಸಂಬಂಧಪಟ್ಟ ಪ್ರಾದೇಶಿಕ ಅನನ್ಯತೆಗಳು ಅಷ್ಟಾಗಿ ಚಿತ್ರಿತವಾಗಿಲ್ಲ. ಹಾಗಾಗಿ ಮಲಯಾಳಂ ತಮಿಳು ಮತ್ತು ತುಳು ಕಾದಂಬರಿಗಳಲ್ಲಿ ಅಭಿವ್ಯಕ್ತವಾಗಿರುವ ಆಯಾ ಪ್ರದೇಶಗಳ ಸಾಂಸ್ಕೃತಿಕ ಅನನ್ಯತೆಗಳನ್ನಷ್ಟೆ ಗುರುತಿಸಲಾಗಿದೆ.

ಅಲ್ಲಿನ ಸಾಂಸ್ಕೃತಿಕ ಸಂಗತಿಗಳ ಅಭಿವ್ಯಕ್ತಿ ಏನು ಕುಂದಾಗಿಲ್ಲ. ಹಾಗಾಗಿ ದಕ್ಷಿಣ ಭಾರತದ ಅನುವಾದಿತ ಕಾದಂಬರಿಗಳ ಮೂಲಕ ಆಯಾ ಪ್ರದೇಶಗಳ ನಿರ್ದಿಷ್ಟ ಕಾಲಘಟ್ಟದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಶೈಕ್ಷಣಿಕ, ಸ್ಥಿತಿಗತಿಗಳ ಜೊತೆಗೆ ಅಲ್ಲಿನ ಪ್ರಾದೇಶಿಕ ಅನನ್ಯತೆಗಳನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.

ಅಧ್ಯಾಯ-೬

ಸಮಾಪನ

ಸಮಾಪನ

ಇದುವರೆಗೆ ದಕ್ಷಿಣ ಭಾರತದ ಆರಂಭಘಟ್ಟದ ಕೆಲವು ಕಾದಂಬರಿಗಳನ್ನು ತೌಲನಿಕ ಅಧ್ಯಯನಕ್ಕೊಳಪಡಿಸಿ ಮಹತ್ವದ ಅಂಶಗಳನ್ನು ಕಂಡು ಕೊಳ್ಳಲಾಗಿದೆ. ಅದರಂತೆ ಅಧ್ಯಯನದ ಒಟ್ಟಾರೆ ಫಲಿತಗಳನ್ನು ಈ ಕೆಳಗಿನಂತೆ ಕ್ರೋಢೀಕರಿಸಬಹುದಾಗಿದೆ.

- ಆಧುನಿಕ ಸಾಹಿತ್ಯದ 'ಆರಂಭಘಟ್ಟ' ಎನ್ನುವುದು ದಕ್ಷಿಣ ಭಾರತದ ಎಲ್ಲಾ ಭಾಷೆಗಳಿಗೂ ಹೆಚ್ಚು ಕಡಿಮೆ[೧] ಒಂದೇ ರೀತಿಯಾಗಿ ಅನ್ವಯವಾಗುತ್ತದೆ.
- ಕಾದಂಬರಿ ಪ್ರಕಾರಕ್ಕೆ ಸಂಬಂಧಪಟ್ಟಂತೆಯೂ ಈ ಮಾತು ಸತ್ಯವೆನಿಸುತ್ತದೆ. ಕಾದಂಬರಿ ಪ್ರಕಾರವು ಸಾಹಿತ್ಯ ಕ್ಷೇತ್ರದಲ್ಲಿ ವಿಸ್ತಾರವಾದ ವ್ಯಾಪ್ತಿಯನ್ನು ಹೊಂದಿದೆ. ಆದ್ದರಿಂದ ಈ ಪ್ರಕಾರವು ಅಧ್ಯಯನಕ್ಕೆ ಸಾಕಷ್ಟು ಅವಕಾಶವನ್ನು ಹೊಂದಿದೆ. ಜಾಗತಿಕ ಮಟ್ಟದಲ್ಲಿ ಕಾಣಿಸಿಕೊಂಡದ್ದು ಮೊದಲು 'ಫ್ರೆಂಚ' ಭಾಷೆಯಲ್ಲಿ ನಂತರ ಇತರ ಪಾಶ್ಚಾತ್ಯ ಭಾಷೆಗಳಲ್ಲಿ ಕಾಣಿಸಿಕೊಂಡಿದೆ. ಈ ರೀತಿ ಪಾಶ್ಚಾತ್ಯ , ಭಾರತೀಯ ಹಾಗೂ ದಕ್ಷಿಣ ಭಾರತೀಯ ಭಾಷೆಗಳ ಕಾದಂಬರಿಯ ರೂಪ ಒಂದೇಯಾಗಿದೆ. ಪಾಶ್ಚಾತ್ಯರಲ್ಲಿ 'ನಾವೆಲ್' ಎಂದು ಕರೆದರೆ, ದಕ್ಷಿಣ ಭಾರತೀಯ ಭಾಷೆಗಳಲ್ಲಿ 'ಕಾದಂಬರಿ' 'ನವಲ' ಎಂದುತೆಲುಗಿನಲಿ, ಮಲಯಾಳಂ, ತಮಿಳಿನಲ್ಲಿ ನಾವೆಲ್ ಎಂದು ಕರೆಯಲಾಯಿತು. ಕಥಾ ಪ್ರಕಾರವು ಹಿಂದೆಯೇ ಇದ್ದರೂ ಕಾದಂಬರಿ ಪ್ರಕಾರವು ಭಾರತೀಯರಲ್ಲಿ ಮತ್ತು ದಕ್ಷಿಣ ಭಾರತದಲ್ಲಿ ಪ್ರಸಿದ್ಧವಾದುದು ಪಾಶ್ಚಾತ್ಯರ ಪ್ರಭಾವದಿಂದ ಎನ್ನುವುದು ಗಮನಾರ್ಹವಾಗಿದೆ.

---

೧. ಇಲ್ಲಿ ಹೆಚ್ಚು ಕಡಿಮೆ ಎನ್ನುವ ಪದ ಬಳಕೆಗೆ ವಿಶೇಷ ಅರ್ಥವಿದೆ. ಅದರಂತೆ ದಕ್ಷಿಣ ಭಾರತದ ಎಲ್ಲಾ ಭಾಷೆಗಳಲ್ಲೂ ಏಕ ಕಾಲಕ್ಕೆ ಆಧುನಿಕ ಸಾಹಿತ್ಯದ ಕಥಾ ಕಾದಂಬರಿ ಪ್ರಕಾರದ ಉಗಮವಾಗಿಲ್ಲ ಎಂಬಂಶವನ್ನು ನಾವು ತಿಳಿದಿರಬೇಕಾಗಿರುತ್ತದೆ. ತುಳುವಿನ ಮಟ್ಟಿಗೆ ಹೇಳುವುದಾದರೆ ಅಲ್ಲಿ ಇತರ ದಕ್ಷಿಣ ಭಾರತೀಯ ಭಾಷೆಗಳಗಿಂತಲೂ ತಡವಾಗಿ ಆಧುನಿಕ ಸಾಹಿತ್ಯ ಕಾದಂಬರಿ ಪ್ರಕಾರದ ಉದಯವಾದ ಸಂಗತಿ ನಮ್ಮ ಕಣ್ಣೆದುರಿಗಿದೆ. ಒಟ್ಟಿನಲ್ಲಿ ಹೇಳುವುದಾದರೆ ಸರಿಸುಮಾರು ೧೯ನೆಯ ಶತಮಾನದ ಕೊನೆಯ ೨೦ನೆಯ ಶತಮಾನದ ಪ್ರಾರಂಭದ ಕಾಲಘಟ್ಟ. ಇಲ್ಲಿ ಎಲ್ಲಾ ದಕ್ಷಿಣ ಭಾರತೀಯ ಸಾಹಿತ್ಯಗಳಿಗೂ ಅನ್ವಯವಾಗಿರುವ ''ಆರಂಭಘಟ್ಟ'' ಎಂದು ತಿಳಿಯಬಹುದಾಗಿದೆ.

- ಮೊದಲು ಪಾಶ್ಚಾತ್ಯರ ಕಾದಂಬರಿಗಳ ಅನುವಾದದಿಂದಲೂ, ಅನಂತರ ಇತರ ಭಾಷೆಗಳ ಅನುವಾದದಿಂದಲೂ ಕಾಣಿಸಿಕೊಂಡವು. ಕ್ರಮೇಣ ಸ್ವತಂತ್ರ ಕಾದಂಬರಿಗಳು ದಕ್ಷಿಣ ಭಾರತದಲ್ಲಿ ರಚನೆಯಾದವು. ಕಾವ್ಯ ಮತ್ತುಕತೆಗಳ ನಡುವಿನ ಕಾಲಘಟ್ಟದಲ್ಲಿ ಕಾದಂಬರಿ ಪ್ರಕಾರ ತನ್ನ ಅಸ್ತಿತ್ವವನ್ನು ಪಡೆಯಿತು. ಈ ಕಾಲಘಟ್ಟದಲ್ಲಿ ರಚನೆಯಾದ ಕಾದಂಬರಿಗಳನ್ನು ಐತಿಹಾಸಿಕ, ಪೌರಾಣಿಕ, ಸಾಮಾಜಿಕ ಕಾದಂಬರಿಗಳೆಂದು ವಿಂಗಡಿಸಬಹುದಾಗಿದೆ. ಇವುಗಳಲ್ಲಿ ಹೆಚ್ಚಿನವುಗಳ ಶೀರ್ಷಿಕೆ ಸ್ತ್ರೀಯರ ಹೆಸರಾಗಿರುವುದು ವಿಶಿಷ್ಟ ಅಂಶವಾಗಿದೆ.
- ಆ ಕಾಲ ಘಟ್ಟದ ಕನ್ನಡ ಕಾದಂಬರಿಗಳನ್ನು ಅವುಗಳ ಬಗೆಗೆ ನಡೆದಿರುವ ಅಧ್ಯಯನಗಳನ್ನು ಮಾದರಿಯಾಗಿಟ್ಟು ಕೊಂಡು ದಕ್ಷಿಣ ಭಾರತದ ಇತರ ಭಾಷೆಗಳ ಕಾದಂಬರಿಗಳನ್ನೂ ಅಧ್ಯಯನ ಮಾಡಲು ಸಾಧ್ಯವಾಗಿದೆ.
- ಹಾಗೆ ಅಧ್ಯಯನ ನಡೆಸಿದಾಗ 'ಕಾಲಘಟ್ಟದ ಸಂವೇದನೆ' ಎಂಬುದು ಬಹುಮಟ್ಟಿಗೆ ಎಲ್ಲಾ ದಕ್ಷಿಣ ಭಾರತೀಯ ಕಾದಂಬರಿಗಳಲ್ಲೂ ಸಮನವಾಗಿ ಪ್ರತಿಪಾದಿತವಾಗಿರುವುದು ಕಂಡುಬರುತ್ತದೆ.
- ವಸಹಾತುಶಾಹಿ ಆಡಳಿತದ ಪ್ರಭಾವ ಪರಿಣಾಮಗಳು ಆಧುನಿಕತೆಯ ಪ್ರವೇಶ ಅದರಿಂದಾದ ಸಾಂಸ್ಕೃತಿಕ ಕ್ರಾಂತಿ , ಸಂಘರ್ಷ, ಶೈಕ್ಷಣಿಕ , ಔದ್ಯೋಗಿಕ , ಸಾಮಾಜಿಕ ಕ್ಷೇತ್ರದಲ್ಲಾದ ಬದಲಾವಣೆ, ಸುಧಾರಣೆ ಪಾರತಂತ್ರ್ಯದ ಅನುಭವ ದೇಶಾಭಿಮಾನ- ರಾಷ್ಟ್ರಿಯ ಪ್ರಜ್ಞೆ ಇತ್ಯಾದಿ ಸಂಗತಿಗಳು ಆ ಕಾಲದ ಬಹುಪಾಲು ದಕ್ಷಿಣ ಭಾರತೀಯ ಕಾದಂಬರಿಗಳಲ್ಲಿ ಚಿತ್ರಿತವಾಗಿವೆ.
- ಸಾರ್ವತ್ರಿಕ ಶಿಕ್ಷಣ, ಸ್ತ್ರೀಶಿಕ್ಷಣ, ಸಂಪ್ರದಾಯ ಮತ್ತು ಆದರ್ಶದ ಪ್ರತಿಪಾದನೆಗಳು ವಿಧವಾ ವಿವಾಹದ ಪ್ರತಿಪಾದನೆಗಳು ಸುಧಾರಣಾವಾದಿ ನಿಲುವು ಅಂದಿನ ದಕ್ಷಿಣ ಭಾರತೀಯ ಕಾದಂಬರಿಗಳಲ್ಲಿ ಸಾಮಾನ್ಯವೆಂಬಂತೆ ನಿರೂಪಿತವಾಗಿವೆ.
- ಕನ್ನಡದ ಇಂದಿರಾಬಾಯಿ, ಇಂದಿರಾ, ವಾಗ್ದೇವಿ ಇತ್ಯಾದಿ ಕಾದಂಬರಿಗಳಂತೆ ಇತರ ದಕ್ಷಿಣ ಭಾರತೀಯ ಭಾಷೆಗಳಲ್ಲೂ ಸ್ತ್ರೀಯರ ಹೆಸರುಗಳನ್ನೇ ಶೀರ್ಷಿಕೆಯಾಗುಳ್ಳ, ಸ್ತ್ರೀ ಪಾತ್ರಗಳನ್ನೇ ಕೇಂದ್ರೀಕರಿಸುವ ಕಾದಂಬರಿಗಳು ಆ ಕಾಲಘಟ್ಟದಲ್ಲಿ ಹುಟ್ಟಿಕೊಂಡಿವೆ.

- ತಮಿಳಿನ ಕಮಲಾಂಬಳ್ ಚರಿತಂ........ ತೆಲುಗಿನ ಸತ್ಯವತಿ ಚರಿತ್ರೆ ಚಂದ್ರಮತಿ, ಮಲಯಾಳಂನ ಇಂದುಲೇಖ, ಶಾರದಾ, ಸುಕುಮಾರಿ; ಸರಸ್ವತಿ ವಿಜಯಂ ತುಳುವಿನ ಸತೀಕಮಲೆ; ಇತ್ಯಾದಿ ಕಾದಂಬರಿಗಳನ್ನು ಇಲ್ಲಿ ಉಲ್ಲೇಖಿಸಬಹುದು.
- ಒಂದು ರೀತಿಯಲ್ಲಿ ''ಫ್ಯಾಂಟಸಿ ಎನ್ನಬಹುದಾದ ಅದ್ಭುತ ರಮ್ಯ ಕಾಲ್ಪನಿಕ ಲೋಕದ ಚಿತ್ರಣವುಳ್ಳ ಕಾದಂಬರಿಗಳು ಆ ಕಾಲದಲ್ಲಿ ರಚನೆಯಾಗಿವೆ.
- ತೆಲುಗಿನ 'ಸತ್ಯರಾಜ ಪೂರ್ವದೇಶ ಯಾತ್ರೆಗಳು, ತುಳುವಿನ ಮಿತ್ಯನಾರಾಯಣ ಕತೆ' ಗಳಂತಹ ಕಾದಂಬರಿಗಳನ್ನು ಈ ಸಾಲಿಗೆ ಸೇರಿಸಬಹುದು.
- ಕಾದಂಬರಿಯು ಸಾಮಾಜಿಕ ಘಟನಾವಳಿ - ವಿದ್ಯಾಮಾನಗಳ ಚಿತ್ರಣಕ್ಕೆ ಸೂಕ್ತವಾದ ಪ್ರಕಾರವೆಂಬ ತಿಳುವಳಿಕೆಯಿದ್ದುದರಿಂದಲೇ ಏನೋ : ಐತಿಹಾಸಿಕ, ಪೌರಾಣಿಕ ಕಾದಂಬರಿಗಳು ಆ ಕಾಲ ಘಟ್ಟದಲ್ಲಿ ಅಷ್ಟಾಗಿ ಹುಟ್ಟಿಕೊಳ್ಳಲಿಲ್ಲ.
- ಇದ್ದಾಗಲೂ ತೆಲಗು, ಮಲಯಾಳಂ ತಮಿಳು, ಭಾಷೆಗಳಲ್ಲಿ ಪೌರಾಣಿಕ ಮತ್ತು ಐತಿಹಾಸಿಕ ಕಾದಂಬರಿಗಳು ಆ ಕಾಲಘಟ್ಟದಲ್ಲಿ ರಚನೆಯಾಗಿರುವುದನ್ನು ಗಮನಿಸಬಹುದು.

  ಉದಾ : ತೆಲುಗಿನ ಕಾದಂಬರಿ ಚಂದ್ರಮತಿ, ತೆಲುಗಿನ ಸತ್ಯರಾಜ ಪೂರ್ವ ದೇಶಯಾತ್ರೆಗಳು , ಕಾಲ್ಪನಿಕಕಥನ. ಮಲಯಾಳಂನ 'ರಾಮರಾಜ ಬಹದ್ದೂರ' ಐತಿಹಾಸಿಕ ಕಾದಂಬರಿಗೆ ಉದಾಹರಣೆಯಾಗಿದೆ.ತಮಿಳಿನ ಪ್ರತಾಪಮುದಲಿಯರ್ ಇತ್ಯಾದಿ ಕಾದಂಬರಿಗಳು. ಇನ್ನೂ ಹೆಚ್ಚಿನ ವಿಭಿನ್ನ ರೀತಿಯ ಕಾದಂಬರಿಗಳು ಆ ಕಾಲಘಟ್ಟದಲ್ಲಿ ಅಷ್ಟಾಗಿ ಹುಟ್ಟಿಕೊಳ್ಳಲಿಲ್ಲ.
- ನಿರೂಪಣಾ ತಂತ್ರದ ದೃಷ್ಟಿಯಿಂದ ಆ ಕಾಲದ ಕಾದಂಬರಿಗಳು ನಮ್ಮ ಮೌಖಿಕ ಕಥನ ಪರಂಪರೆಯನ್ನು ಅನುಸರಿಸಿದಂತೆ ಕಂಡು ಬರುತ್ತದೆ....

  ಉದಾಹರಣೆ : ಕನ್ನಡದ ಇಂದಿರಾಬಾಯಿ ಕಾದಂಬರಿಯು ಹೀಗೆ ಪ್ರಾರಂಭವಾಗುವಾಗುತ್ತದೆ. ''ವಿದ್ಯಾಚಲದ ದಕ್ಷಿಣ ಪ್ರಾಂತ್ಯದಲ್ಲಿ ರೋಹಿಣಿ ನದಿ ತೀರದಲ್ಲಿ ಕಮಲಾಪುರವೆಂಬ ಒಂದು ವಿಸ್ತಾರವಾದ ನಗರ ವಿರುವುದು ....''.

ಅದೇ ರೀತಿ ತೆಲುಗಿನ ವೀರೇಶಲಿಂಗಂ ಪಂತುಲು ಅವರ 'ಚಂದ್ರಮತಿ' ಕಾದಂಬರಿಯಲ್ಲಿ ಕತೆ ಪ್ರಾರಂಭವಾಗುವುದು ಹೀಗೆ -

''ಪೂರ್ವ ಕಾಲದಲ್ಲಿ ಚೇದಿ ದೇಶಕ್ಕೆ ಪ್ರತಿಷ್ಠಾನವೆಂಬ ನಗರವು ರಾಜಧಾನಿ ಯಾಗಿದ್ದಿತು. ಅದನ್ನು ಉಶೀನರನೆಂಬ ರಾಜನು ಪರಿಪಾಲಿಸುತ್ತಿದ್ದನು. ಈತನಿಗೆ ಸುನಂದೆಯೆಂಬ ನಾರೀಮಣಿಯು ಪತ್ನಿಯಾಗಿದ್ದಳು ....'' (ಶ್ರೀಕಂಠಶಾಸ್ತ್ರಿ ೧೯೧೦, ಪುಟ - ೨)

ಈ ರೀತಿಯಲ್ಲಿ ನಿರೂಪಣಾ ವಿಧಾನವನ್ನು ಕಾಣಬಹುದು. ಹಾಗೆಯೇ 'ಸತ್ಯರಾಜ ಪೂರ್ವದೇಶಯಾತ್ರೆಗಳು' ಎಂಬ ಕಾದಂಬರಿ ''ಸ್ತ್ರೀಮಲೆಯಾಳದಲ್ಲಿ ನನಗೆ ಸಿದ್ಧನು ಅನುಗ್ರಹಿಸಿದ ಹಸುರಿನ ಮಹಿಮೆಯಿಂದ ಕಲ್ದಾರಿಯಿಂದ ನಡೆಯ ಬೇಕಾದ ಪ್ರಯಾಸವಿಲ್ಲದೆ ಮನೋವೇಗದಿಂದ ಗಗನ ಮಾರ್ಗವಾಗಿ ಹೋಗಿ ಕ್ಷಣಕಾಲದಲ್ಲಿ ನಾನು ಲಂಕಾದ್ವೀಪದಲ್ಲಿ ಇಳಿದೆನೆಂದು ......''

ತಮಿಳು ಕಾದಂಬರಿ (ಕಮಲಂಬಾಳ್ ಚರಿತ್ರಮ್) 'ಬಾಳಿನ ರಹಸ್ಯದಲ್ಲಿ ಈ ರೀತಿಯಾಗಿ ಪ್ರಾರಂಭವಾಗುತ್ತದೆ.

''ಮಧುರೆ ಜಿಲ್ಲೆಯಲ್ಲಿ ಶಿರುಕುಳಂ ಎಂದು ಒಂದು ಗ್ರಾಮವಿದೆ. ಆ ಗ್ರಾಮದ ನಡುಬೀದಿಯ ಮಧ್ಯೆ ''ದೊಡ್ಡಮನೆ'' ಎಂಬ ಹೆಸರುಳ್ಳ ಒಂದು ಮನೆ ಇದೆ'' (ಸಂಪದ್ಗಿರಿರಾಯರು ೧೯೫೯, ಪುಟ-೧)

- ಆ ಕಾಲದ ತಮಿಳು, ಮಲಯಾಳಂ, ಮತ್ತು ತುಳು ಕಾದಂಬರಿಗಳಲ್ಲಿ ಕ್ರಮವಾಗಿ ತಮಿಳು ಸಂಸ್ಕೃತಿ, ಕೈರಳಿ ಸಂಸ್ಕೃತಿ ಮತ್ತು ತೌವಳದ ಸಂಸ್ಕೃತಿಗಳು ಹಾಸುಹೊಕ್ಕಾಗಿರುವುದನ್ನು ಕಾಣಬಹುದಾಗಿದೆ.

ತಮಿಳಿನ 'ಬಾಳಿನ ರಹಸ್ಯ' ಕಾದಂಬರಿಯಲ್ಲಿ ಚಿತ್ರಿತವಾಗಿರುವ 'ಜಲ್ಲಿಕಟ್ಟು', 'ಆರುದ್ರದರ್ಶನ' ಇತ್ಯಾದಿ ಹಬ್ಬ ಆಚರಣೆಗಳ ವಿವರಗಳು ತಮಿಳು ನಾಡಿನ ವಿಶಿಷ್ಟ ಸಾಂಸ್ಕೃತಿಕ ಸಂತಿಗಳನ್ನು ಬಿಂಬಿಸುತ್ತವೆ.

- ಮಲಯಾಳಂನ ಇಂದುಲೇಖ ಕಾದಂಬರಿಯು ಕೇರಳಕ್ಕೆ ವಿಶಿಷ್ಟವಾದ, ವಿವಿಧ ಸಮುದಾಯಗಳ ಸಂಪ್ರದಾಯ, ನಡವಳಿಕೆಗಳನ್ನು ಚಿತ್ರಿಸುತ್ತದೆ. ನಂಬೂದಿರಿ, ನಾಯರ್ ಸಮುದಾಯಗಳಲ್ಲಿರುವ ಒಂದು 'ಮರುಮಕ್ಕಾತ್ತಾಯ' ಪದ್ಧತಿ. 'ಸಂಬಂಧ' ಎಂಬ ವಿಶಿಷ್ಟ ರೀತಿಯ ಮದುವೆ ಪದ್ಧತಿ, ಅವಿಭಕ್ತ ಕುಟುಂಬ ಪದ್ಧತಿ ಇತ್ಯಾದಿ ವಿವರಗಳನ್ನು ಕಾದಂಬರಿಯು ಒದಗಿಸುತ್ತದೆ.

- ತುಳುವಿನ ಸತೀಕಮಲೆ ಮತ್ತು ಮಿತ್ಯನಾರಾಯಣ ಕಥೆ ಎಂಬ ಕಾದಂಬರಿಗಳು ತುಳು ನಾಡಿಗೆ ವಿಶಿಷ್ಟವಾದ ನಾಗಬೊಜ್ಜ, ಪುದ್ವರ್ ಹಾಗೂ ಅಲ್ಲಿನ ಕೃಷಿ ಸಂಸ್ಕೃತಿಯ ಇತರೆ ಆಚರಣೆಗಳನ್ನು ವಿವರಿಸುತ್ತವೆ.

- ಸಾಮಾಜಿಕ ಹಿನ್ನೆಲೆಯ ದೃಷ್ಟಿಯಿಂದ ಆ ಕಾಲದ ಕಾದಂಬರಿಕಾರರನ್ನು ಗಮನಿಸುವುದಾದರೆ ಇಲ್ಲಿನ ಬಹುಪಾಲು ಬರಹಗಾರರು ಮೇಲ್ಜಾತಿ ಅಥವಾ ಮೇಲ್ವರ್ಗದ ಸಮುದಾಯಗಳಿಗೆ ಸೇರಿದವರಾಗಿದ್ದಾರೆ. ಆದರೆ ಮಲಯಾಳಂನ 'ಸರಸ್ವತಿ ವಿಜಯಂ' ಕಾದಂಬರಿಯ ಕರ್ತೃಗಳಾದ ಪೋತ್ತೇರಿ ಕುಂಜಬು ಅವರು ಮಾತ್ರ ಹಿಂದುಳಿದ 'ಈಳವ' ಸಮುದಾಯದವರಾಗಿದ್ದುದು ಒಂದು ವಿಶೇಷವೆನ್ನಬಹುದು. ಹಾಗೆಯೇ ಕಾದಂಬರಿಯು ಕೂಡ 'ಈಳವ' ಸಮಾಜದ ಸುತ್ತ ಕೇಂದ್ರೀಕೃತವಾಗಿದೆ. ಆಧುನಿಕ ಸಾಹಿತ್ಯವು ಅಷ್ಟಾಗಿ ಬೆಳೆಯದಿದ್ದ ತುಳುವಿನಲ್ಲೂ ವಿಶಿಷ್ಟ ಸಂವೇದನೆ ಅನನ್ಯತೆಗಳುಳ್ಳ ಎರಡು ಕಿರು ಕಾದಂಬರಿಗಳು ಆ ಕಾಲಕ್ಕಾಗಲೇ ರಚನೆಯಾಗಿದ್ದುದು ಒಂದು ವಿಶೇಷವೆನ್ನಬೇಕು.

ಹೀಗೆ ಅಧ್ಯಯನದ ಫಲಶ್ರುತಿಯನ್ನು ವಿವರಿಸುತ್ತಾ ಹೋಗಬಹುದು, ಆದರೆ ಇದು ಪ್ರಸ್ತುತ ಕ್ಷೇತ್ರಕ್ಕೆ ಸಂಬಂಧಪಟ್ಟ ಅಂತಿಮ ಅಥವಾ ಪರಿಪೂರ್ಣ ಅಧ್ಯಯನ ವೇನೆಲ್ಲ. ಇಲ್ಲಿ ಮುಖ್ಯವಾಗಿ ಕನ್ನಡದ ಕಾದಂಬರಿಗಳ ಹಾಗೂ ಅವುಗಳ ಕುರಿತು ನಡೆದಿರುವ ಅಧ್ಯಯನಗಳ ಮೂಲಕ ಇತರ ದಕ್ಷಿಣ ಭಾರತೀಯ ಕಾದಂಬರಿಗಳನ್ನು ಅವಲೋಕಿಸಲಾಗಿದೆ. ಒಂದರ್ಥದಲ್ಲಿ ಕನ್ನಡದ ಕಣ್ಣಿಂದ ತಮಿಳು, ತೆಲುಗು, ಮಲಯಾಳ ಹಾಗೂ ತುಳು ಕಾದಂಬರಿಗಳನ್ನು ಪರಿಭಾವಿಸುವ ಪ್ರಯತ್ನವಿದು. ಆ ಪ್ರಯತ್ನಕ್ಕೆ ಆಕರಗಳು ಕೂಡ ಕನ್ನಡಕ್ಕೆ ಅನುವಾದಗೊಂಡಿರುವ 'ದಕ್ಷಿಣ ಭಾರತೀಯ ಕಾದಂಬರಿಗಳೇ'. ಇದು ಒಂದು ಅಧ್ಯಯನ ವಿಧಾನವಾಗಿರುವಂತೆ ಅಧ್ಯಯನದ ಮಿತಿಯೂ ಆಗಬಹುದು ಐದು ಭಾಷೆಗಳಲ್ಲೂ ಪರಿಣತಿ ಉಳ್ಳವರು ಇಂತಹ ಅಧ್ಯಯನವೊಂದನ್ನು ನಡೆಸುವಂತಾದರೆ ಅದು ಇನ್ನಷ್ಟು ಮೌಲಿಕವೆನಿಸಬಹುದು. ಅದೇ ರೀತಿ ತಮಿಳಿನ, ಮಲಯಾಳಂನ ಹಾಗೂ ತುಳುವಿನ ಕಣ್ಣುಗಳಿಂದ ಪ್ರತ್ಯೇಕವಾಗಿ ಇತರ ದಕ್ಷಿಣ ಭಾರತೀಯ ಕಾದಂಬರಿಗಳನ್ನು ಅಭ್ಯಸಿಸಲು ಸಾಧ್ಯವಾದರೆ ಅದುಕೂಡ ಮಹತ್ವದ ಫಲಶ್ರುತಿಯನ್ನು ನೀಡಬಹುದು.

ಸಾಹಿತ್ಯಕವಾಗಿಯೂ, ಸಾಂಸ್ಕೃತಿಕವಾಗಿಯೂ ಮಹತ್ವವನ್ನು ಪಡೆದು ಕೊಂಡಿದ್ದ ಕಾಲಘಟ್ಟವೊಂದರ ಕಾದಂಬರಿಗಳ ತೌಲನಿಕವಾದ ಅಧ್ಯಯನವಿದು. ಇದೇ ರೀತಿ ಇತರ ಕಾಲಘಟ್ಟಗಳೂ ಬೇರೆ ಬೇರೆ ಕಾರಣಗಳಿಗೂ ಮಹತ್ವವನ್ನು ಪಡೆದಿಕೊಂಡಿರಬಹುದು. ಹಾಗಾಗಿ ಉಳಿದ ಕಾಲಘಟ್ಟಗಳ ಕಾದಂಬರಿಗಳನ್ನಾಗಲಿ ಇತರ ಪ್ರಕಾರಗಳನ್ನಾಗಲಿ, ಒಟ್ಟಾರೆ ಸಾಹಿತ್ಯವನ್ನಾಗಲಿ ತೌಲನಿಕ ಅಧ್ಯಯನಕ್ಕೊಳಪಡಿಸಬಹುದು. ಪ್ರಸ್ತುತ ಆರಂಭ ಘಟ್ಟದ ಕಾದಂಬರಿಗಳಂತೆ ಕಾವ್ಯದಂತಹ ಇತರ ಪ್ರಕಾರಗಳೂ ಅಧ್ಯಯನ ಯೋಗ್ಯವಾಗಿದೆ. ಈ ಅಧ್ಯಯನವು ಇಂತಹ ವಿಸ್ತೃತ ಹಾಗೂ ಪರಿಪೂರ್ಣ ಅಧ್ಯಯನಗಳಿಗೆ ಪ್ರೇರಕವಾಗಬಲ್ಲುದೆಂಬ ನಿರೀಕ್ಷೆಯನ್ನು ಇಟ್ಟು ಕೊಳ್ಳಲಾಗಿದೆ.

ಅನುಬಂಧ

ಅ) ಪ್ರಧಾನ ಆಕರಗಳು

೧. ಕನ್ನಡ ಕೃತಿಗಳು

೨. ತೆಲುಗು ಕೃತಿಗಳು

೩. ಇಂಗ್ಲೀಷ್ ಕೃತಿಗಳು

ಆ) ಆನುಷಂಗಿಕ ಆಕರಗಳು

೧. ಕನ್ನಡ ಕೃತಿಗಳು

೨. ಇಂಗ್ಲೀಷ್ ಕೃತಿಗಳು

ಅ) ಪ್ರಧಾನ ಆಕರಗಳು

ಅನುವಾದಿತ ಕನ್ನಡ ಕೃತಿಗಳು-೧

೧ ಬಾಬುರಾವ್ ಬೋಳಾರ;೧೮೯೫; ವಾಗ್ದೇವಿ: ಸಾಹಿತ್ಯಪ್ರಪಂಚ ಪ್ರಕಾಶ ಕರು ಮಂಗಳೂರು

೨ ಬಾಲಕೃಷ್ಣಶೆಟ್ಟಿ ಕೊಳಲಿ (ಅನು); ೧೯೯೦: **ಮಿತ್ಯನಾರಾಯಣ ಕತೆ** (ತುಳು ಮೂಲ ಶೀನಪ್ಪ ಹೆಗಡೆ .ಎಸ್.ಎ, ೧೯೩೫) : ಕರಾವಳಿ ಪ್ರಕಾಶನ ವಿಜಯನಗರ, ಬೆಂಗಳೂರು

೩ ಪಾದೇಕಲ್ಲು ವಿಷ್ಣುಭಟ್ಟ (ಅನು); ೧೯೯೭ : **ಸತೀಕಮಲೆ** (ತುಳುಮೂಲ:ಪಣಿಯಾಡಿ .ಎಸ್.ಯು. ೧೯೩೬) ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ ಉಡುಪಿ

೪ ರಾಘವನ್.ಸಿ (ಅನು); ೧೯೯೫ : **ಇಂದುಲೇಖಾ** (ಮಲಯಾಳಂ ಮೂಲ : ಚಂದುಮೇನೋನ್ : ೧೮೮೭) ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ ನವದೆಹಲಿ

೫ ರಾಮರಾವ್ ಬೆನಗಲ್ (ಅನು); ೧೯೦೩; **ಸತ್ಯರಾಜಾಪೂರ್ವದೇಶ ಯಾತ್ರೆಗಳು ಭಾಗ-೧** : (ತೆಲಗುಮೂಲ ; ಕಂದಕೂರಿ ವೀರೇಶಲಿಂಗಂ ಪಂತುಲು ; ೧೮೯೯ ಜೆ.ಟಿ.ಎ. ಪ್ರೆಸ್, ಮೈಸೂರು

೬ ರಾಮರಾವ್ ಬೆನಗಲ್ (ಅನು); ೧೯೦೩; **ಸತ್ಯರಾಜಾಪೂರ್ವದೇಶ ಯಾತ್ರೆಗಳು ಭಾಗ-೨** : (ತೆಲಗುಮೂಲ : ವೀರೇಶಲಿಂಗಂ ಪಂತುಲು೧೮೯೯) ಜೆ.ಟಿ.ಎ. ಪ್ರೆಸ್, ಮೈಸೂರು

೭ ವಾಸುದೇವಾಚಾರ್ ಕೆರೂರು :೧೯೨೨ ; **ಇಂದಿರಾ** : ಉಷಾ ಸಾಹಿತ್ಯ ಮಾಲೆ, ಮೈಸೂರು

೮ ವೆಂಕಟರಾವ್ ಗುಲ್ವಾಡಿ; ೧೮೮೯;**ಇಂದಿರಾಬಾಯಿ** : ಕನ್ನಡ ಪ್ರಪಂಚ ಪ್ರಕಾಶ, ಮಂಗಳೂರು

೯ ಸಂಪದ್ಗಿರಿರಾಯ.ಕೆ (ಅನು) : ೧೯೫೯ : **ಬಾಳಿನ ರಹಸ್ಯ** : (ತಮಿಳು ಮೂಲ : ಬಿ.ಆರ್. ರಾಜು ಅಯ್ಯರ್ : ೧೮೯೩ ಕಮಲಾಂಬಾಳ್ ಚರಿತ್ರಂ) ಸಾಹಿತ್ಯ ಪ್ರಕಾಶನ, ರಾಯಚೂರು

೧೦ ಶ್ರೀಕಂಠಶಾಸ್ತ್ರಿ ನಂ : (ಅನು) ೧೯೧೦ : **ಚಂದ್ರಮತಿ** : (ತೆಲುಗುಮೂಲ : ವೀರೇಶಲಿಂಗಂ ಪಂತುಲು,೧೮೯೧;) ಮೈಸೂರು ಜೆ.ಟಿ.ಎ. ಪ್ರಿಂಟಿಂಗ್ ವರ್ಕ್ಸ್

೧೧ ಶ್ರೀಕಂಠಶಾಸ್ತ್ರಿ ನಂ : (ಅನು) ೧೯೧೧ : **ಪ್ರಹಸನ ತೆರಂಗಂ**, ಜೆ.ಟಿ.ಎ. ಪ್ರೆಸ್ಸ್ ಮೈಸೂರು (ತೆಲುಗುಮೂಲ : ವೀರೇಶಲಿಂಗ ಪಂತುಲು;೧೮೯೧;)

೧೨ ಶ್ರೀಕೃಷ್ಣಭಟ್ ಅರ್ತಿಕಜೆ (ಅನು) ೨೦೦೦ : **ರಾಮರಾಜ ಬಹದ್ದೂರ್**, (ಮಲಯಾಳಂ ಮೂಲ : ಸಿ.ವಿ ರಾಮನ್‌ಪಿಳ್ಳೆ ; ೧೯೧೮) ಇಂಡಿಯಾ

೨ ತೆಲುಗು ಕೃತಿಗಳು

೧. ವೀರೇಶಲಿಂಗಂ ಪಂತುಲು : ೧೮೭೮ : **ರಾಜಶೇಖರ ಚರಿತ್ರೆ** : ಕ್ಯಾಕ್ಸಟನ್ ಪ್ರೆಸ್, ಹೈದರಾಬಾದ್

೩ ಇಂಗ್ಲೀಷ್ ಕೃತಿಗಳು ಅನುವಾದಿತ

೧. Dilip .M : Menon (Tra) : **Saraswati Vijayam** : (Malayalam Origin : Potheru Kun hambu : 1893) Literary Trust New Delhi

ಅ) ಆನುಷಂಗಿಕ ಆಕರಗಳು

೧. ಕನ್ನಡ ಕೃತಿಗಳು

೧ ಅನಂತನಾರಾಯಣ .ಎಸ್.;೨೦೦೦; **ಹೊಸಗನ್ನಡ ಕವಿತೆಯ ಮೇಲೆ ಇಂಗ್ಲೀಷ್ ಕಾವ್ಯದ** : ಡಿ.ವಿ.ಕೆ.ಮೂರ್ತಿ ಮೈಸೂರು

೨ ಅನಂತಮೂರ್ತಿ ಯು. ಆರ್,;೧೯೯೨ ;**ಸಮಕ್ಷಮ** : ಅಕ್ಷರ ಪ್ರಕಾಶನ ಹೆಗ್ಗೋಡು, ಸಾಗರ

೩ ಅನಂತರಂಗಾಚಾರ್ .ಎನ್.;೧೯೩೦; **ಸಾಹಿತ್ಯಭಾರತೀ**; ಮೈಸೂರು ವಿಶ್ವವಿದ್ಯಾಲಯ, ಮೈಸೂರು

೪ ಅಶೋಕ ಟಿ.ಪಿ.,;೧೯೯೧; **ಸಾಹಿತ್ಯ ಸಂದರ್ಭ**; ಅಕ್ಷರ ಪ್ರಕಾಶನ, ಸಾಗರ,

೫ ಅಶೋಕ ಟಿ.ಪಿ : ೧೯೯೩; **ಪುಸ್ತಕ ಪ್ರೀತಿ**; ಅಕ್ಷರ ಪ್ರಕಾಶನ, ಸಾಗರ

೬ ಆಮೂರ .ಜಿ. ಎಸ್. ;೧೯೮೩;**ಕನ್ನಡ ಕಾದಂಬರಿಯ ಬೆಳವಣಿಗೆ**; ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೭ ಆಮೂರ .ಜಿ. ಎಸ್., ;೧೯೮೮;**ಅರ್ಥಲೋಕ** : ಸ್ನೇಹ ಪ್ರಕಾಶನ, ಬೆಂಗಳೂರು

೮ ಆಮೂರ .ಜಿ. ಎಸ್., ;೧೯೯೧;**ಸೀಮೋಲ್ಲಂಘನ**: ಪ್ರಿಯದರ್ಶಿನಿ ಪ್ರಕಾಶನ ಹೆಗ್ಗೋಡು, ಸಾಗರ

೯ ಆಮೂರು .ಜಿ. ಎಸ್., ;೧೯೯೫;**ಕನ್ನಡ ಕಥನ ಸಾಹಿತ್ಯ : ಕಾದಂಬರಿ** : ಶ್ರೀ ಹರಿ ಪ್ರಕಾಶನ , ಧಾರವಾಡ,

೧೦ ಉಪಾದ್ಯ .ಜಿ.ಎನ್.;೨೦೦೦; **ವ್ಯಾಖ್ಯಾನಭಾಸ್ಕರ ಮತ್ತೂರು ಕೃಷ್ಣಮೂರ್ತಿ** : ಸಾಹಿತ್ಯ ಬಳಗ, ಮುಂಬಯಿ

೧೧ ಎಕ್ರಮ್ ಡಿಸೋಜಾ ;೨೦೦೧;**ಕನ್ನಡ ಮತ್ತು ಮಲಯಾಳದ ಮೊದಲ ಘಟ್ಟದ ಕಾದಂಬರಿಗಳು ಒಂದು ತೌಲನಿಕ ಅಧ್ಯಯನ** (ಕಣ್ಣೂರು ವಿಶ್ವ ವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಎಂ.ಫಿಲ್. ನಿಂಬಧ)

೧೨ ಕುರ್ತಕೋಟಿ ಕೀರ್ತಿನಾಥ, ;೧೯೮೨ : **ವಿಮರ್ಶೆಯ ವಿನಯ - ಕಾದಂಬರಿ** : ಮನೋಹರ ಗ್ರಂಥ ಮಾಲಾ, ಧಾರವಾಡ

೧೩ ಕುರ್ತಕೋಟಿ, ಕೀರ್ತಿನಾಥ:೧೯೮೨; **ಯುಗಧರ್ಮ ಹಾಗೂ ಸಾಹಿತ್ಯ ದರ್ಶನ** : ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು,

೧೪ ಕೃಷ್ಣಮೂರ್ತಿ ಎಂ.ಜಿ.;೧೯೩೦; **ಆಧುನಿಕ ಭಾರತೀಯ ಸಾಹಿತ್ಯ ಮತ್ತು ಇತರ ಲೇಖನಗಳು** : ಅಕ್ಷರ ಪ್ರಕಾಶನ, ಸಾಗರ

೧೫ ಕೃಷ್ಣಕುಮಾರ ಸಿ.ಪಿ :೧೯೯೮ ; **ಸಾಹಿತ್ಯ ಪ್ರವೇಶಿಕೆ** ; ಚೇತನ ಬುಕ್‌ಹೌಸ್, ಬೆಂಗಳೂರು

೧೬ ಕೋದಂಡ ರಾಮ ಎಸ್.ಕೆ : ೧೯೯೬ ;**ಕನ್ನಡ ಕಥಾ ಸಾಹಿತ್ಯದಲ್ಲಿ ಸಾಂಸ್ಕೃತಿಕ ಸಂಘರ್ಷ**; ಗಾಯಿತ್ರಿ ಸ್ಮಾರಕ ಗ್ರಂಥ ಮಾಲೆ , ಮೈಸೂರು

೧೭ ಗಿರಿಜಾಶಾಸ್ತ್ರಿ : ೨೦೦೦;**ಕಥಾ ಮಾನಸಿ**; ಸಾಹಿತ್ಯ ಪ್ರಕಾಶನ, ಮುಂಬಯಿ

೧೮ ಚಂದ್ರಶೇಖರ್ .ಎಸ್, ;೧೯೯೯;**ಸಾಹಿತ್ಯ ಮತ್ತು ಚರಿತ್ರೆ**; ನಮ್ಮ ಪ್ರಕಾಶನ, ತಿಪಟೂರು

೧೯ ಜಯದೇವ ಹು.ಕಾ : ೧೯೯೯; **ಅರೋಣದಯ ನವೋದಯ ನಂತರ**; ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

೨೦ ಧಾರವಾಡಕರ ರಾ. ಯ., ;೧೯೩೫;**ಹೊಸಗನ್ನಡ ಸಾಹಿತ್ಯದ ಉದಯಕಾಲ**: ಕರ್ನಾಟಕ ವಿಶ್ವವಿದ್ಯಾಲಯ , ಧಾರವಾಡ

೨೧ ನಾಗಣ್ಣ .ಸಿ (ಅನು) ;೨೦೦೧;**ದಕ್ಷಿಣಭಾರತ ವಸಾಹತುಶಾಹಿ ರಾಷ್ಟ್ರೀಯತೆ ಮತ್ತು ಸಂಘರ್ಷ** (ಮೂಲ) ಚಂದ್ರಶೇಖರ್ .ಎಸ್. : ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ,ಹಂಪಿ

೨೨ ನಾಯಕ, ಹಾ.ಮಾ (ಸಂ);೧೯೭೫; **ಬಿಡುಗಡೆ ಬೆಳ್ಳಿ** : ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು

೨೩ ನಾಯಕ .ಜಿ. ಎಚ್. ;೧೯೮೪;**ನಿರಪೇಕ್ಷ** : ಅಕ್ಷರ ಪ್ರಕಾಶನ, ಸಾಗರ

೨೪ ನಾಯಕ ಜಿ. ಎಸ್,;೧೯೮೮ ; **ನಿಜದನಿ**: ಅಕ್ಷರ ಪ್ರಕಾಶನ, ಸಾಗರ

೨೫ ನಾರಾಯಣ .ಕೆ.ವಿ., ;೨೦೦೧;**ಬೇರುಕಾಂಡ ಚಿಗುರು**; ವಿವೇಕ ಪ್ರಕಾಶನ, ವಿಚಾರ ವೇದಿಕೆ, ಬೆಂಗಳೂರು

೨೬ ನಾವಡ ಎ.ವಿ ಮತ್ತು ಇತರರು (ಸಂ) : ೨೦೦೭;**ತುಳುಸಾಹಿತ್ಯ ಚರಿತ್ರೆ**; ಪ್ರಸಾರಾಂಗ ಕನ್ನಡವಿಶ್ವವಿದ್ಯಾಲಯ 'ಹಂಪಿ

೨೭ ಪ್ರಭುಶಂಕರ್ : ೧೯೬೬;**ಕನ್ನಡದಲ್ಲಿ ಭಾವಗೀತೆ** : ಡಿ.ವಿ.ಕೆ.ಮೂರ್ತಿ, ಮೈಸೂರು

೨೮ ಬಸವರಾಜ ಸಬರದ : ೧೯೯೦; **ಹೊಸ ದಿಕ್ಕು**; ಪಲ್ಲವಿ ಪ್ರಕಾಶನ, ಬೀದರ್

೨೯ ಬಸವರಾಜ ಸಬರದ : ೧೯೯೪ ;**ಸಾಹಿತ್ಯ ಸಂಗಾತಿ** ;ಪಲ್ಲವಿ ಪ್ರಕಾಶನ, ಗುಲ್ಬರ್ಗಾ

೩೦ ಬಸವರಾಜ ಸಾದರ (ಸಂ) ;೨೦೦೨;**ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯ ಘಟ್ಟಗಳು** : ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

೩೧ ಬೆಳಗಲಿ, ದು.ನಿಂ.,;೧೯೮೫; **ಕನ್ನಡದಲ್ಲಿ ಕಾದಂಬರಿ ಸಾಹಿತ್ಯ**. : ಕರ್ನಾಟಕ ವಿಶ್ವವಿದ್ಯಾಲಯ ಉಪನ್ಯಾಸ ಗ್ರಂಥಮಾಲೆ, ಧಾರವಾಡ,

೩೨ ಭೀಮಸೇನರಾವ್ .ಡಿ.ಕೆ :೨೦೦೦; **ಅವಲೋಕನ - ಸಂಶೋಧನೆ** : ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

೩೩ ಮಂದಾಕಿನಿ ಪುರೋಹಿತ, ;೨೦೦೦;**ಸಾಹಿತ್ಯಬಿಲ್ವ** : ಶ್ರೀ ರಾಘವೇಂದ್ರ ಪ್ರಕಾಶನ ಅಂಕೋಲಾ ಉ.ಕ

೩೪ ಮಹೇಶ್ವರಿ .ಯು,;೨೦೦೧; **ಇದು ಮಾನುಷಿಯ ಓದು** : ಶಿವರಾಮಕಾರಂತ ಅಧ್ಯಯನ ಕೇಂದ್ರ ಪುತ್ತೂರು

೩೫ ಮುಗಳಿ ರಂ.ಶ್ರೀ., ;೧೯೯೪;**ಕನ್ನಡ ಸಾಹಿತ್ಯ ಚರಿತ್ರೆ** : ಉಷಾ ಸಾಹಿತ್ಯ ಮಾಲೆ ,ಮೈಸೂರು

೩೬ ಮುರಿಗಾರಾಧ್ಯ ಗುಬ್ಬಿ .ಸೊ, ;೧೯೯೬;**ಶೃಂಗಾರಚಾತುರ್ಯೋಲ್ಲಾಸಿನಿ** : ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು

೩೭ ಮೂರ್ತಿ ಡಿ.ವಿ.ಕೆ : ೧೯೯೫; **ಜೀವನ ಮೌಲ್ಯಗಳು ಮತ್ತು ಸಾಹಿತ್ಯ**; ಕೃಷ್ಣಮೂರ್ತಿ ಪುರಂ, ಮೈಸೂರು

೩೮ ಮ್ಯಾಗೇರಿ . ಐ. ಜಿ. ;೨೦೦೧; **ವಸಾಹುತಶಾಹಿ ಅನುಭವ ಮತ್ತು ಕನ್ನಡ ಕಾದಂಬರಿಗಳು** (ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಪಿಎಚ್.ಡಿ. ಅಪ್ರಕಟಿತ ಮಹಾ ಪ್ರಬಂಧ ಪ್ರಬಂಧ), ಕನ್ನಡ ವಿಶ್ವ ವಿದ್ಯಾಲಯ, ಹಂಪಿ

೩೯ ಮೋಹನ ಕುಂಟಾರ್ ;೨೦೦೬;**ಕೇರಳಕಥನ**; ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ

೪೦ ರಾಘವೇಂದ್ರರಾವ್ ಹೆಚ್. ಎಸ್ : ೧೯೯೫ ;**ಹಾಡೆ ಹಾದಿಯ ತೋರಿತು** ;ಕನ್ನಡ ಸಂಘ ,ಬೆಂಗಳೂರು

೪೧ ರಾಮಯ್ಯ ಬಾಡಾಲ (ಅನು) ; ೧೯೭೩;**ವಿರೇಶಲಿಂಗಂ** : (ತೆಲುಗು ಮೂಲ : ವಿ. ಆರ್. ನಾರ್ಲ) ಸಾಹಿತ್ಯ ಅಕಾಡೆಮಿ, ಹೊಸದೆಹಲಿ,

೪೨ ವರದರಾಜನ್ ಎಂ.ಯು. ;೧೯೮೮;**ತಮಿಳು ಸಾಹಿತ್ಯ ಚರಿತ್ರೆ** : ಸಾಹಿತ್ಯ ಅಕಾಡೆಮಿ, ಬೆಂಗಳೂರು

೪೩ ವಾಸುದೇವಚಾರ್ಯ ಕೆರೂರು ;೨೦೦೭;**(ಸಂ.೨) ಸಮಗ್ರ ಕಾದಂಬರಿ**; ಮನೋಹರ ಗ್ರಂಥಮಾಲಾ,ಧಾರವಾಡ

೪೪ ವಿವೇಕ ರೈ.ಬಿ.ಎ. (ಸಂ);೧೯೮೭; **ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು** : ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು

೪೫ ವಿಶ್ವನಾಥ ಕಾರ್ನಾಡ್ : ೨೦೦೪ ;**ಸಮಚಿತ್ತ**;ಶ್ರೀ ರಾಘವೇಂದ್ರ ಪ್ರಕಾಶನ, ಅಂಕೋಲ

೪೬ ಶಂಕರ ಮೊಕಾಶಿ ಪುಣೇಕರ್ : ೧೯೮೧; **ಸಾಹಿತ್ಯ ಮತ್ತು ಅಭಿರುಚಿ** , ಮೈಸೂರು

೪೭ ಶಾಂತಿನಾಥ ದೇಸಾಯಿ ;೧೯೬೯;**ಕನ್ನಡ ಕಾದಂಬರಿ ನಡೆದುಬಂದ ರೀತಿ** : ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ,

೪೮ ಶಾಸ್ತ್ರಿ ಪಿ.ವ್ಹಿ : ೧೯೯೧ **ಸಾಹಿತ್ಯದ ಪ್ರಕಾರಗಳು** : ಪ್ರತಿಭಾ ಗ್ರಂಥಾಲಯ, ಧಾರವಾಡ

೪೯ ಶಿವರುದ್ರಪ್ಪ ಜಿ.ಎಸ್ (ಸಂ);೧೯೭೦; **ಭಾರತೀಯ ಸಾಹಿತ್ಯ ಸಮೀಕ್ಷೆ**; ಕರ್ನಾಟಕ ಸಾಹಿತ್ಯ ಆಕಾಡೆಮಿ ಬೆಂಗಳೂರು

೫೦ ಶಿವರುದ್ರಪ್ಪ ಜಿ. ಎಸ್ (ಸಂ) ;೧೯೭೭; **ಸಾಹಿತ್ಯ ಮತ್ತು ಸಾಮಾನ್ಯ ಮನುಷ್ಯ** ; ಜ್ಞಾನಭಾರತಿ ಬೆಂಗಳೂರು, ವಿಶ್ವವಿದ್ಯಾಲಯ

೫೧ ಶಿವರುದ್ರಪ್ಪ ಜಿ.ಎಸ್. (ಸಂ) ಸಂ. ;೧೯೯೧;**ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ**; ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೫೨ ಶಿವರುದ್ರಪ್ಪ ಜಿ.ಎಸ್; ೧೯೯೫ ; **ವಿಸ್ತರಣ**; ಪ್ರೇಮಸಾಯಿ ಪ್ರಕಾಶನ , ಬೆಂಗಳೂರು

೫೩ ಶಿವರಾಮ ಪಡಿಕ್ಕಲ್ ;೨೦೦೧;**ನಾಡುನುಡಿಯ ರೂಪಕ**, : ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾಲಯ ,ಮಂಗಳ ಗಂಗೋತ್ರಿ

೫೪ ಶ್ರೀನಿವಾಸ ಹಾವನೂರ :೧೯೮೨; **ಕನ್ನಡದಲ್ಲಿ ಕ್ರೈಸ್ತ ಸಾಹಿತ್ಯ ಹನಿಗತೆ ಕಂಪ್ಯೂಟರ್ ಇತ್ಯಾದಿ** : ಅನನ್ಯ ಪ್ರಕಾಶನ ,ಮೈಸೂರು

೫೫ ಶ್ರೀನಿವಾಸ ಹಾವನೂರ ;೨೦೦೦; **ಹೊಸಗನ್ನಡದ ಅರುಣೋದಯ**: ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು

೫೬ ಶ್ರೀಕೃಷ್ಣ ಭಟ್ ಅರ್ತಿಕಜೆ : ೨೦೦೪; **ಸಾಹಿತ್ಯ ಸಂಬಂಧ**; ಸಿ.ವಿ.ಜಿ. ಪಬ್ಲಿಕೇಷನ್, ಬೆಂಗಳೂರು

೫೭ ಶೇಷಗಿರಿರಾವ್ ಎಲ್.ಎಸ್ ;೧೯೫೭; **ಕಾದಂಬರಿ ಸಾಮಾನ್ಯ ಮನುಷ್ಯ** : ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೫೮ ಶೇಷಗಿರಿರಾವ್ ಎಲ್. ಎಸ್ : ೧೯೮೯ ; **ದಶವಾರ್ಷಿಕ ಸಾಹಿತ್ಯ ವಿಮರ್ಶೆ**; ಬೆಂಗಳೂರು

೫೯ ಶೇಷಗಿರಿರಾವ್ ಎಲ್. ಎಸ್ ;೨೦೦೩; **ಹೊಸಗನ್ನಡ ಸಾಹಿತ್ಯ ಚರಿತ್ರೆ** : ಅಂಕಿತ ಪ್ರಕಾಶನ ಬೆಂಗಳೂರು

೬೦ ಸೀತಾರಾಮ ಎಂ.ವಿ : ೨೦೦೧; **ಆಧುನಿಕ ಸಾಹಿತ್ಯ ಸಮೀಕ್ಷೆ** ;ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು

೬೧ ಸುಂದರಂ ಆರ್ವಿಯಸ್ : ೧೯೮೨; **ತೆಲುಗು ಭಾಷೆ ಮತ್ತು ಸಾಹಿತ್ಯ** : ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ

೬೨ ಹರಿಕೃಷ್ಣ ಭರಣ್ಯ : ಹೊಸಗನ್ನಡದ ಸಾಹಿತ್ಯದ ಉಗಮ ಮತ್ತು ವಿಕಾಸ,1980, ಮದ್ರಾಸು ವಿಶ್ವ ವಿದ್ಯಾಲಯ

೬೩ ಹೊನ್ನಯ್ಯ .ಸಿ.ಬಿ ಕನ್ನಡ ಸಣ್ಣ ಕತೆಗಳಲ್ಲಿ ದಲಿತ ಸಂಸ್ಕೃತಿ ಕೆ. ಎಸ್. ಮುದ್ದಪ್ಪ ಸ್ಮಾರಕ ಟ್ರಸ್ಟ್, ಬೆಂಗಳೊರು

೬೩ ಹೊನ್ನಯ್ಯ .ಸಿ.ಬಿ :೨೦೦೫; **ಕನ್ನಡ ಸಾಹಿತ್ಯ ಸಂಸ್ಕೃತಿ ಮೀಮಾಂಸೆ**; ಜೈಭೀಮ್ ಪ್ರಕಾಶನ, ಬೆಂಗಳೂರು

೨) ಇಂಗ್ಲೀಷ್ ಕೃತಿಗಳು

೧ George K.M.,;1998; **Western Influence on Malayalam Language and Literature**: Sahitya Akademi, New Dehli

೨ Giriprakash T.S : 1999 **Novel in Dravidian Literature** : Madurai Kamaraj University

೩ Meenakshi Mukherjee (Ed) : 2001 **Early Novels in India** : Sahitya Akademi New Dehli